# ಭಾರತದ ಲೆಕ್ಕನಿಯಂತ್ರಕರು
# ಮತ್ತು ಮಹಾಲೆಕ್ಕಪರಿಶೋಧಕರ ವರದಿ
# ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು
# 31 ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷ

**ಕರ್ನಾಟಕ ಸರ್ಕಾರ**

**2018ರ ವರದಿ ಸಂಖ್ಯೆ – 1**

# ಭಾರತದ ಲೆಕ್ಕ ನಿಯಂತ್ರಕರು ಮತ್ತು
# ಮಹಾಲೆಕ್ಕಪರಿಶೋಧಕರ ವರದಿ
# ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು

## 31 ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷ

## ಕರ್ನಾಟಕ ಸರ್ಕಾರ

## 2018ರ ವರದಿ ಸಂಖ್ಯೆ – 1

# ಪರಿವಿಡಿ


| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ಮುನ್ನುಡಿ | | ix |
| ಕಾರ್ಯನಿರ್ವಹಣಾ ಸಾರಾಂಶ | | xi |
| **ಅಧ್ಯಾಯ–I** | | |
| **ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು** | | |
| ಪೀಠಿಕೆ | 1.1 | 2 |
| 2016–17ರಲ್ಲಿನ ವಿತ್ತ ವ್ಯವಹಾರಗಳ ಸಾರಾಂಶ | 1.1.1 | 2 |
| ವಿತ್ತೀಯ ಸ್ಥಿತಿಯ ಸಮೀಕ್ಷೆ | 1.1.2 | 3 |
| ಪ್ರಮುಖ ವಿತ್ತೀಯ ವ್ಯತ್ಯಯಗಳು | 1.1.3 | 7 |
| ಆಯವ್ಯಯ ಅಂದಾಜುಗಳು ಮತ್ತು ವಾಸ್ತವಗಳು 2016–17 | 1.1.4 | 7 |
| ಮಹಿಳಾ ಉದ್ದೇಶಿತ ಆಯವ್ಯಯ | 1.1.5 | 9 |
| 2016–17ನೇ ಸಾಲಿನ ಆಯವ್ಯಯದ ಪ್ರಮುಖ ಕಾರ್ಯನೀತಿ ಉಪಕ್ರಮಣಗಳು | 1.1.6 | 12 |
| ರಾಜ್ಯದ ಸಂಪನ್ಮೂಲಗಳು | 1.2 | 13 |
| ವಾರ್ಷಿಕ ಹಣಕಾಸಿನ ಲೆಕ್ಕಗಳ ಪ್ರಕಾರ ರಾಜ್ಯದ ಸಂಪನ್ಮೂಲಗಳು | 1.2.1 | 13 |
| ರಾಜ್ಯದಲ್ಲಿನ ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ಕೇಂದ್ರ ಯೋಜನಾ ನಿಧಿಗಳ ನೇರ ವರ್ಗಾವಣೆ (ರಾಜ್ಯ ಆಯವ್ಯಯದ ಹೊರಗಿನ ಮಾರ್ಗದ ಮೂಲಕ) | 1.2.2 | 15 |
| ರಾಜಸ್ವ ಸ್ವೀಕೃತಿಗಳು | 1.3 | 16 |
| ರಾಜ್ಯದ ಸ್ವಂತ ಸಂಪನ್ಮೂಲಗಳು | 1.3.1 | 20 |
| ತೆರಿಗೆ ಆದಾಯ | 1.3.1.1 | 20 |
| ತೆರಿಗೆಯೇತರ ಆದಾಯ | 1.3.1.2 | 22 |
| ಕೇಂದ್ರ ಸರ್ಕಾರದಿಂದ ಸಹಾಯಾನುದಾನ | 1.3.2 | 24 |
| ಕೇಂದ್ರ ತೆರಿಗೆ ವರ್ಗಾವಣೆಗಳು | 1.3.3 | 25 |
| ಹದಿನಾಲ್ಕನೇ ಹಣಕಾಸು ಆಯೋಗದ ಅನುದಾನಗಳ ಸಮರ್ಪಕ ಬಳಕೆ | 1.3.4 | 27 |
| ಪೀಠಿಕೆ | 1.3.4.1 | 27 |
| ಅನುದಾನಗಳ ಬಿಡುಗಡೆ | 1.3.4.2 | 27 |
| ಇತರೆ ಶಿಫಾರಸುಗಳು | 1.3.4.3 | 28 |
| ಬಿಟ್ಟುಕೊಡಲ್ಪಟ್ಟ ಆದಾಯಗಳು | 1.3.5 | 31 |
| ಬಂಡವಾಳ ಸ್ವೀಕೃತಿಗಳು | 1.4 | 32 |
| ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು | 1.5 | 33 |
| ಸಂಪನ್ಮೂಲಗಳ ಅನ್ವಯ | 1.6 | 34 |
| ವೆಚ್ಚದ ವೃದ್ಧಿ ಮತ್ತು ಸಂಯೋಜನೆ | 1.6.1 | 34 |
| ರಾಜಸ್ವ ವೆಚ್ಚ | 1.6.2 | 36 |
| ಬದ್ಧ ವೆಚ್ಚಗಳು | 1.6.3 | 37 |
| ಸ್ಥಳೀಯ ಸಂಸ್ಥೆಗಳಿಗೆ ಮತ್ತು ಇತರ ಸಂಸ್ಥೆಗಳಿಗೆ ಹಣಕಾಸು ಸಹಾಯ | 1.6.4 | 43 |
| ವೆಚ್ಚದ ಗುಣಮಟ್ಟ | 1.7 | 45 |
| ಸಾರ್ವಜನಿಕ ವೆಚ್ಚದ ಪರ್ಯಾಪ್ತತೆ | 1.7.1 | 45 |

# ಪರಿವಿಡಿ


| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ವೆಚ್ಚದ ದಕ್ಷತೆ | 1.7.2 | 46 |
| ರಾಜ್ಯ ಸರ್ಕಾರದ ವೆಚ್ಚ ಮತ್ತು ಹೂಡಿಕೆಗಳ ಆರ್ಥಿಕ ವಿಶ್ಲೇಷಣೆ | 1.8 | 48 |
| ಅಪೂರ್ಣ ಕಾಮಗಾರಿಗಳು | 1.8.1 | 48 |
| ಹೂಡಿಕೆಗಳು ಮತ್ತು ಪ್ರತಿಫಲಗಳು | 1.8.2 | 48 |
| ಸಾರ್ವಜನಿಕ ಖಾಸಗಿ ಪಾಲುದಾರಿಕೆ (ಪಿಪಿಪಿ) ಯೋಜನೆಗಳಲ್ಲಿ ಹೂಡಿಕೆಗಳು | 1.8.3 | 50 |
| ಇಲಾಖಾ ಉದ್ದಿಮೆಗಳು | 1.8.4 | 51 |
| ರಾಜ್ಯ ಸರ್ಕಾರ ನೀಡಿದ ಸಾಲಗಳು ಮತ್ತು ಮುಂಗಡಗಳು | 1.8.5 | 51 |
| ನಗದು ಶಿಲ್ಕುಗಳು ಮತ್ತು ನಗದು ಶಿಲ್ಕುಗಳ ಹೂಡಿಕೆ | 1.8.6 | 53 |
| ಆಸ್ತಿಗಳು ಮತ್ತು ಜವಾಬ್ದಾರಿಗಳು | 1.9 | 54 |
| ಆಸ್ತಿಗಳು ಮತ್ತು ಜವಾಬ್ದಾರಿಗಳ ವೃದ್ಧಿ ಮತ್ತು ಸಂಯೋಜನೆ | 1.9.1 | 54 |
| ವಿತ್ತೀಯ ಜವಾಬ್ದಾರಿಗಳು | 1.9.2 | 56 |
| ಆಯವ್ಯಯದ ಹೊರಗಿನ ಸಾಲಗಳು | 1.9.3 | 57 |
| ಮೀಸಲು ನಿಧಿಯ ವ್ಯವಹಾರಗಳು | 1.9.4 | 58 |
| ಸಾಂದರ್ಭಿಕ ಜವಾಬ್ದಾರಿಗಳು | 1.9.5 | 62 |
| ಖಾತರಿಗಳ ಸ್ಥಿತಿ | 1.9.5.1 | 62 |
| ಖಾತರಿಗಳ ಬಗೆಗಿನ ಬಹಿರಂಗಪಡಿಸುವಿಕೆಯಲ್ಲಿನ ಪರ್ಯಾಪ್ತತೆ | 1.9.5.2 | 63 |
| ಋಣ ನಿರ್ವಹಣೆ | 1.10 | 63 |
| ಋಣ ಚಿತ್ರಣ | 1.10.1 | 63 |
| ಋಣ ಸಹಿಷ್ಣುತೆ | 1.10.2 | 64 |
| ಋಣ ಸ್ಥಿರತೆ | 1.10.3 | 65 |
| ವೃದ್ಧಿತ ಋಣೇತರ ಸ್ವೀಕೃತಿಗಳ ಪರ್ಯಾಪ್ತತೆ | 1.10.4 | 65 |
| ಸಾಲಗಳ ಮೂಲಕ ಪಡೆದ ಮೊತ್ತಗಳ ನಿವ್ವಳ ಲಭ್ಯತೆ | 1.10.5 | 66 |
| ಹದಿಮೂರನೇ ಹಣಕಾಸು ಆಯೋಗದಲ್ಲಿ ನೀಡಿರುವ ಎನ್‌ಎಸ್‌ಎಸ್‌ಎಫ್ ಸಾಲಗಳ ಮೇಲಿನ ಬಡ್ಡಿ ಪರಿಹಾರದ ಕಡಿಮೆ ಸ್ವೀಕೃತಿ – ₹192.42 ಕೋಟಿ | 1.10.5.1 | 66 |
| ವಿತ್ತೀಯ ಅಸಮತೆಗಳು | 1.11 | 67 |
| ಕೊರತೆಗಳ ಪ್ರವೃತ್ತಿಗಳು | 1.11.1 | 68 |
| ವಿತ್ತೀಯ ಕೊರತೆಯ ಸಂಯೋಜನೆ ಮತ್ತು ಅದರ ಪೂರೈಕೆಯ ವಿಧಾನ | 1.11.2 | 71 |
| ಹೆಚ್ಚಳ/ಕೊರತೆಗಳ ಗುಣಮಟ್ಟ | 1.11.3 | 72 |
| ಅನುಸರಣೆ | 1.12 | 73 |
| ಸಮಾಪನ ಅಭಿಪ್ರಾಯಗಳು ಮತ್ತು ಶಿಫಾರಸ್ಸುಗಳು | 1.13 | 73 |
| **ಅಧ್ಯಾಯ–II** | | |
| **ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ನಿಯಂತ್ರಣ** | | |
| ಪೀಠಿಕೆ | 2.1 | 79 |
| ಧನವಿನಿಯೋಗ ಲೆಕ್ಕಗಳ ಸಾರಾಂಶ | 2.2 | 79 |
| ಅಧಿಕ ವೆಚ್ಚಗಳು | 2.3 | 83 |
| ಸಕ್ರಮಬದ್ಧಗೊಳಿಸಬೇಕಾಗಿರುವ ಹಿಂದಿನ ವರ್ಷಗಳ ಅಧಿಕವೆಚ್ಚಗಳು | 2.3.1 | 83 |
| 2016–17ರಲ್ಲಿ ಅವಕಾಶಗಳಿಗಿಂತ ಅಧಿಕ ವೆಚ್ಚಗಳು | 2.3.2 | 84 |
| ಹೊಸ ಸೇವೆ/ ಹೊಸ ಸೇವೆಗಳ ಸಾಧನ | 2.3.3 | 85 |

# ಪರಿವಿಡಿ


| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| **2016–17ನೇ ವರ್ಷದ ಆಯವ್ಯಯ ಅಂದಾಜು ಮತ್ತು ಪೂರಕ ಅಂದಾಜುಗಳ ಪರಿಶೀಲನೆ** | **2.4** | 86 |
| ಆಯವ್ಯಯದ ದೋಷಗಳು | 2.4.1 | 86 |
| ರಾಜಸ್ವ ಮತ್ತು ಬಂಡವಾಳಗಳ ನಡುವಿನ ವರ್ಗೀಕರಣ ದೋಷಗಳು | 2.4.1.1 | 86 |
| ಆಯವ್ಯಯದಲ್ಲಿ ಪುರಸ್ಕೃತ ಮತ್ತು ಪ್ರಭೃತ ವಿಭಾಗಗಳಲ್ಲಿ ದೋಷಪೂರಿತ ವರ್ಗೀಕರಣ | 2.4.1.2 | 87 |
| ಆಯವ್ಯಯದಲ್ಲಿ ಮಾರುಕಟ್ಟೆ ಶುಲ್ಕ/ ಪರವಾನಗಿ ಶುಲ್ಕಗಳಿಗೆ ಅವಕಾಶ ಒದಗಿಸದೆ ಉಂಟಾದ ದೋಷಗಳು. | 2.4.1.3 | 88 |
| ಪ್ರಧಾನ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಅಸಮರ್ಪಕ ಅವಕಾಶ | 2.4.1.4 | 88 |
| ಒಳಶೀರ್ಷಿಕೆ ಮಟ್ಟದಲ್ಲಿ ದೋಷಪೂರಿತ ವರ್ಗೀಕರಣ | 2.4.1.5 | 90 |
| ವರ್ಗೀಕರಣದಲ್ಲಿನ ದೋಷಗಳು | 2.4.1.6 | 90 |
| ತಪ್ಪಾದ ಆಯವ್ಯಯ ನಿರ್ವಹಣೆ | 2.4.1.7 | 91 |
| ಖಾತರೀ ಮೀಸಲು ನಿಧಿಗೆ ಖಾತರಿ ಹೊಂದಾಣಿಕೆಗೆ ಸಂಬಂಧಿಸಿದ ದೋಷಪೂರಿತ ಅವಕಾಶಗಳು | 2.4.1.8 | 91 |
| **ನಿಧಿ ಲೆಕ್ಕಗಳಡಿಯ ಆಯವ್ಯಯದ ದೋಷಗಳು** | **2.5** | **92** |
| **ಬಹು ಉದ್ದೇಶ ಶೀರ್ಷಿಕೆ 059– ಇತರೆ ವೆಚ್ಚಗಳಡಿ ಅವಕಾಶ ಕಲ್ಪಿಸುವಲ್ಲಿ–ಆಯವ್ಯಯ ನಿರ್ವಹಣೆಯಲ್ಲಿ ಪಾರದರ್ಶಕತೆ ಇಲ್ಲದಿರುವುದು** | **2.6** | **93** |
| **ಹಣಕಾಸು ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ** | **2.7** | **93** |
| ಧನವಿನಿಯೋಗಕ್ಕೆ ಪ್ರತಿಯಾಗಿ ಹಂಚಿಕೆಯ ಆದ್ಯತೆಗಳು | 2.7.1 | 93 |
| ಸತತವಾಗಿ ಬಳಕೆಯಾಗದೆ ಉಳಿದ ಅವಕಾಶಗಳು | 2.7.2 | 98 |
| ಪೂರಕ ಅವಕಾಶಗಳು | 2.7.3 | 98 |
| ಅಸಮರ್ಪಕ ಪೂರಕ ಅವಕಾಶಗಳು | 2.7.4 | 99 |
| ಅನಗತ್ಯ ಪೂರಕ ಅವಕಾಶಗಳು | 2.7.5 | 99 |
| ಅಧಿಕವಾದ ಪೂರಕ ಅವಕಾಶಗಳು | 2.7.6 | 100 |
| ಅಪರ್ಯಾಪ್ತ ಪೂರಕ ಅವಕಾಶಗಳು | 2.7.7 | 100 |
| ಮೊತ್ತಗಳ ಪುನರ್ವಿನಿಯೋಗಗಳು | 2.7.8 | 100 |
| ತಡವಾಗಿ ತಲುಪಿದ ಪುನರ್ವಿನಿಯೋಗ ಮತ್ತು ಅಧ್ಯರ್ಪಣ ಆದೇಶಗಳು | 2.7.9 | 100 |
| ಅನವಶ್ಯಕ/ ಅಧಿಕತಮ/ ಅಪರ್ಯಾಪ್ತ ಮೊತ್ತದ ಪುನರ್ವಿನಿಯೋಗಗಳು | 2.7.10 | 101 |
| ದೋಷಪೂರ್ಣ ಪುನರ್ವಿನಿಯೋಗಗಳು | 2.7.11 | 101 |
| ಬಳಕೆಯಾಗದ ಅವಕಾಶಗಳ ಅಧ್ಯರ್ಪಣೆ | 2.7.12 | 102 |
| ಗಣನೀಯ ಅಧ್ಯರ್ಪಣೆಗಳು | 2.7.13 | 102 |
| **ಸಾದಿಲ್ವಾರು ನಿಧಿ** | **2.8** | 103 |
| **ಆಯ್ದ ಅನುದಾನಗಳ ಸಮೀಕ್ಷೆಯ ಅಂಶಗಳು** | **2.9** | 103 |
| ಅನುದಾನ ಸಂಖ್ಯೆ 11–ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 2.9.1 | 103 |
| ಅನುದಾನ ಸಂಖ್ಯೆ 20–ಲೋಕೋಪಯೋಗಿ ಕಾಮಗಾರಿಗಳು | 2.9.2 | 109 |
| **ಕುಟುಂಬ ಪಿಂಚಣಿಯ ಹೆಚ್ಚುವರಿ ಪಾವತಿ** | **2.10** | 114 |
| **ಸಮಾಪನ** | **2.11** | 115 |
| **ಸಲಹೆಗಳು** | **2.12** | 116 |

# ಪರಿವಿಡಿ


| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| **ಅಧ್ಯಾಯ–III** | | |
| **ಆರ್ಥಿಕ ನಿರೂಪಣೆ** | | |
| ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದಿರುವಿಕೆ | 3.1 | 119 |
| ಸರ್ಕಾರದಿಂದ ಗಣನಾರ್ಹವಾಗಿ ಆರ್ಥಿಕ ಬೆಂಬಲ ಪಡೆದ ಸಂಸ್ಥೆಗಳಿಂದ ಸಂಬಂಧಿಸಿದ ಮಾಹಿತಿ ಬಾರದಿರುವಿಕೆ | 3.2 | 120 |
| ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆಯ ಮತ್ತು ರಾಜ್ಯ ಶಾಸಕಾಂಗದ ಮುಂದೆ ಲೆಕ್ಕ ಪರಿಶೋಧನಾ ವರದಿಗಳನ್ನು ಮಂಡಿಸುವಿಕೆಯ ಸ್ಥಿತಿ | 3.3 | 120 |
| ಇಲಾಖಾ ವಾಣಿಜ್ಯ ಉದ್ದಿಮೆಗಳು | 3.4 | 120 |
| ಹಣ ದುರುಪಯೋಗಗಳು, ನಷ್ಟಗಳು, ಇತ್ಯಾದಿ | 3.5 | 121 |
| ಉಗ್ರಾಣ ಮತ್ತು ದಾಸ್ತಾನು ಲೆಕ್ಕಪತ್ರಗಳು ಬಾರದಿರುವುದು | 3.6 | 121 |
| ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು | 3.7 | 122 |
| ವೈಯಕ್ತಿಕ ಠೇವಣಿ ಲೆಕ್ಕಗಳು | 3.8 | 123 |
| ವೈಯಕ್ತಿಕ ಠೇವಣಿ ಲೆಕ್ಕಗಳಲ್ಲಿ ಇಟ್ಟಿರುವ ಮೊತ್ತಗಳು | 3.8.1 | 123 |
| ವೈಯಕ್ತಿಕ ಠೇವಣಿಗಳಲ್ಲಿ ನಿಲುಗಡೆಯಾದ ನಿಧಿಗಳು | 3.8.2 | 123 |
| ವೈಯಕ್ತಿಕ ಠೇವಣಿ ಲೆಕ್ಕಗಳ ಹೊಂದಾಣಿಕೆ | 3.8.3 | 124 |
| ವೆಚ್ಚಗಳ ಮತ್ತು ಸ್ವೀಕೃತಿಗಳ ಹೊಂದಾಣಿಕೆ | 3.9 | 124 |
| ಲೆಕ್ಕಪತ್ರಗಳ ಮೇಲಿನ ವ್ಯಾಖ್ಯಾನಗಳು | 3.10 | 125 |
| ದೋಷಪೂರಿತ ಆಯವ್ಯಯದಿಂದ ಅಭಿಯಾಚನೆ ಕ್ರಮಾಂಕ 29–ಋಣ ಸೇವೆಗಳು–ಬದ್ಧ ವೆಚ್ಚಗಳ ಅಡಿಯಲ್ಲಿ ಅಧಿಕ ವೆಚ್ಚ ಉಂಟಾಗಿರುವುದು. | 3.10.1 | 125 |
| ಯೋಜನೆಯ ಹಣವನ್ನು ಅಕ್ರಮವಾಗಿ ಉಳಿಸಿಕೊಂಡಿರುವುದು | 3.10.2 | 126 |
| ನ್ಯಾಶನಲ್ ಥರ್ಮಲ್ ಪವರ್ ಕಾರ್ಪೋರೇಶನ್(ಎನ್.ಟಿ.ಪಿ.ಸಿ.)ಗೆ ಪಾವತಿಸದೆ ಉಳಿಸಬಹುದಾಗಿದ್ದ ₹7 ಕೋಟಿ ಬಡ್ಡಿ ಪಾವತಿ | 3.10.3 | 127 |
| ಸರ್ಕಾರದ ಹಣವನ್ನು ಆಯವ್ಯಯ ಅವಕಾಶವು ತಪ್ಪಿಸಿಕೊಳ್ಳುವುದಕ್ಕಾಗಿ ಸರ್ಕಾರಿ ಲೆಕ್ಕದಿಂದ ಹೊರತಾಗಿ ಇಡುವಿಕೆ | 3.10.4 | 128 |
| ಲೆಕ್ಕಗಳಲ್ಲಿನ ಪಾರದರ್ಶಕತೆ | 3.11 | 129 |
| ಸಂಯುಕ್ತ ಶೀರ್ಷಿಕೆ–911 ಅಡಿಯಲ್ಲಿ ಮುಂಗಡ ಅಂದಾಜು/ಪೂರಕ ಅಂದಾಜುಗಳಲ್ಲಿ ದೋಷಪೂರಿತ ಅವಕಾಶ ಮಾಡಿರುವುದು | 3.11.1 | 129 |
| ಚಾಲ್ತಿಯಲ್ಲಿಲ್ಲದ ಉದ್ದೇಶ ಶೀರ್ಷಿಕೆಗಳಡಿಯಲ್ಲಿ ಅವಕಾಶ/ವೆಚ್ಚ ಮಾಡಿರುವುದು | 3.11.2 | 129 |
| ಲೆಕ್ಕಗಳ ನಿಖರತೆಯ ಮೇಲೆ ಪರಿಣಾಮ ಬೀರುವ ಮುಖ್ಯ ಅಂಶಗಳು | 3.12 | 130 |
| ಸಮಾಪನ | 3.13 | 132 |
| ಸಲಹೆಗಳು | 3.14 | 133 |

# ಪರಿವಿಡಿ


| ಅನುಬಂಧಗಳ ಪಟ್ಟಿ | ವಿಷಯ | ಪುಟ ಸಂಖ್ಯೆ |
|---|---|---|
| 1.1 | ರಾಜ್ಯ ಚಿತ್ರಣ | 137 |
| 1.2 | ಸರ್ಕಾರಿ ಲೆಕ್ಕಗಳ ಸ್ವರೂಪ | 139 |
| 1.3 | ಸ್ವೀಕೃತಿಗಳು ಮತ್ತು ಬಟವಾಡೆಗಳ ಸಾರಾಂಶ | 140 |
| 1.4 | ರಾಜ್ಯ ಸರ್ಕಾರದ ಹಣಕಾಸಿನ ಕಾಲ ಸರಣಿ ದತ್ತಾಂಶಗಳು | 144 |
| 1.5 | ಪರೋಕ್ಷ ಸಹಾಯಧನಗಳು | 148 |
| 1.6 | ಇಲಾಖಾ ನಿರ್ವಹಣಾ ವಾಣಿಜ್ಯ/ಅರೆ ವಾಣಿಜ್ಯ ಉದ್ಯಮಗಳ ಹಣಕಾಸಿನ ಸಂಕ್ಷಿಪ್ತ ವಿವರಣಾ ಪಟ್ಟಿ | 149 |
| 1.7 | ಮಹಾಲೇಖಾಪಾಲರ ಕಚೇರಿಯಲ್ಲಿ ನಿರ್ವಹಿಸಲ್ಪಟ್ಟಿರುವ ಸವಿವರ ಸಾಲ ಲೆಕ್ಕಗಳು | 150 |
| 1.8 | 31 ಮಾರ್ಚ್ 2017ರಲ್ಲಿದ್ದಂತೆ ಕರ್ನಾಟಕ ಸರ್ಕಾರದ ಸಂಕ್ಷಿಪ್ತ ಹಣಕಾಸು ಸ್ಥಿತಿ | 151 |
| 2.1 | ಆಯವ್ಯಯದಲ್ಲಿ ಅವಕಾಶ ಕಲ್ಪಿಸದೆ ಕಾರ್ಯಕಾರಿ ಆದೇಶಗಳ ಮುಖಾಂತರ ಬಿಡುಗಡೆ ಮಾಡಲಾದ ಹೆಚ್ಚುವರಿ ಅವಕಾಶಗಳು | 152 |
| 2.2 | ಪ್ರಧಾನ ಲೆಕ್ಕಶೀರ್ಷಿಕೆಗಳಲ್ಲಿನ ₹25 ಕೋಟಿಗೂ ಮೀರಿದ ಅಧಿಕ ವೆಚ್ಚದ ಪ್ರಕರಣಗಳು | 153 |
| 2.3 | ಉದ್ದೇಶ ಶೀರ್ಷಿಕೆ '059 – ಇತರೆ ಖರ್ಚುಗಳು' ಅಡಿ ತಪ್ಪು ವರ್ಗೀಕರಣಗಳ ವಿವರಗಳು | 155 |
| 2.4 | ₹25 ಕೋಟಿಗೂ ಹೆಚ್ಚು ಮೊತ್ತ ಬಳಕೆಯಾಗದ ಅವಕಾಶಗಳು ಸಂಭವಿಸಿದ ಪ್ರಧಾನ ಲೆಕ್ಕಶೀರ್ಷಿಕೆಗಳು | 156 |
| 2.5 | ಅನಗತ್ಯ ಪೂರಕ ಅಂದಾಜುಗಳು | 158 |
| 2.6 | ಅಧಿಕವಾದ ಪೂರಕ ಅನುದಾನಗಳು | 160 |
| 2.7 | ಸಾಕಷ್ಟಿಲ್ಲದ ಪೂರಕ ಅನುದಾನಗಳು | 161 |
| 2.8 | ಅನವಶ್ಯಕ/ಅಧಿಕತವ/ಅಸಮರ್ಪಕ ಪುನರ್ವಿನಿಯೋಗ | 162 |
| 2.9 | ದೋಷಪೂರಿತ ಪುನರ್ವಿನಿಯೋಗ ಆದೇಶಗಳು | 165 |
| 2.10 | ಅವಕಾಶಗಳು ಬಳಕೆಯಾಗದೆ ಉಳಿದು ಅದರ ಯಾವುದೇ ಭಾಗವನ್ನು ಅಧ್ಯರ್ಪಣೆ ಮಾಡದಿರುವ ವಿವಿಧ ಅನುದಾನಗಳು/ವಿನಿಯೋಗಗಳು | 168 |
| 2.11 | ಬಳಕೆಯಾಗದೆ ಉಳಿದ ಅವಕಾಶಗಳು ಭಾಗಶಃ ಅಧ್ಯರ್ಪಣೆ | 170 |
| 2.12 | ಮಾರ್ಚಿ 30 ಮತ್ತು 31, 2017ರಂದು ಅಧ್ಯರ್ಪಣೆ ಮಾಡಲಾದ ₹ಐದು ಕೋಟಿಗೂ ಮೀರಿದ ಅವಕಾಶ | 173 |
| 2.13 | ಪ್ರಸಕ್ತ ವರ್ಷದಲ್ಲಿ ಗಣನೀಯ ಅಧ್ಯರ್ಪಣೆಗಳ ಸಮೀಕ್ಷೆಯ ಫಲಿತಾಂಶಗಳು | 174 |
| 2.14 | ವೆಚ್ಚದ ಒತ್ತಡ– ಅನುದಾನ ಸಂಖ್ಯೆ 11 | 176 |
| 2.15 | ಕುಟುಂಬ ಪಿಂಚಣಿಯ ಅಧಿಕ ಪಾವತಿ | 177 |
| 2.16 | ಕುಟುಂಬ ಪಿಂಚಣಿಯ ಮುಂದುವರೆದ ಅಧಿಕ ಪಾವತಿ | 178 |
| 2.17 | ತಪ್ಪಿಸಬಹುದಾಗಿದ್ದ ಬಡ್ಡಿಯ ನಷ್ಟ | 179 |
| 3.1 | ಪ್ರಧಾನ ಶೀರ್ಷಿಕೆವಾರು ಇಲಾಖಾವಾರು ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳ ವಿವರಗಳು | 180 |
| 3.2 | ಸರ್ಕಾರದಿಂದ ಗಣನೀಯವಾಗಿ ಹಣ ಸಹಾಯ ಪಡೆದ ಸಂಸ್ಥೆಗಳಿಂದ ಮಾಹಿತಿ ಬಾರದಿರುವುದು | 181 |
| 3.3 | ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆ ಮತ್ತು ರಾಜ್ಯ ವಿಧಾನಮಂಡಲದಲ್ಲಿ ಸ್ವಾಯತ್ತ ಸಂಸ್ಥೆಗಳ ಲೆಕ್ಕಪರಿಶೋಧನಾ ವರದಿಗಳ ಮಂಡನೆಯ ಸ್ಥಿತಿ | 182 |

# ಪರಿವಿಡಿ


| ಅನುಬಂಧಗಳ ಪಟ್ಟಿ | ವಿಷಯ | ಪುಟ ಸಂಖ್ಯೆ |
|---|---|---|
| **3.4** | ಬಾಕಿ ಇರುವ ಇಲಾಖಾ ನಿರ್ವಹಣೆಯ ವಾಣಿಜ್ಯ ಮತ್ತು ಅರೆ ವಾಣಿಜ್ಯ ಉದ್ದಿಮೆಗಳ ಪ್ರಪತ್ರ ಲೆಕ್ಕಗಳ ವಿವರಗಳು | **183** |
| **3.5** | ಹಣ ದುರುಪಯೋಗ, ದುರ್ಬಳಕೆ ಇತ್ಯಾದಿ ಪ್ರಕರಣಗಳ ಇಲಾಖಾವಾರು/ ಅವಧಿವಾರು ವಿವರಗಳು | **185** |
| **3.6** | ಕಳವು/ದುರುಪಯೋಗ ಪ್ರಕರಣಗಳ ಇಲಾಖಾವಾರು ವಿವರಗಳು | **186** |
| **3.7** | ಉಗ್ರಾಣ ಮತ್ತು ದಾಸ್ತಾನಿನ ಲೆಕ್ಕಪತ್ರಗಳನ್ನು ಸಲ್ಲಿಸದಿರುವ ಇಲಾಖಾವಾರು ವಿವರಗಳು | **187** |
| **3.8** | ನಿಷ್ಕ್ರಿಯ ಠೇವಣಿ ಲೆಕ್ಕಗಳಲ್ಲಿ ಉಳಿದಿರುವ ಶಿಲ್ಕುಗಳು | **190** |
| **3.9** | ಒಳಶೀರ್ಷಿಕೆ 902/911ರ ಅಡಿಯಲ್ಲಿ ಪಮಚಾಯತ್ ರಾಜ್ ಸಂಸ್ಥೆಗಳ ಹೆಚ್ಚುವರಿ ಪಾವತಿಯ ವಸೂಲಾತಿಯನ್ನು ಕಡಿಮೆಗೊಳಿಸಿರುವಿಕೆ | **191** |
| | **ಪಾರಿಭಾಷಿಕ ಪದಗಳು** | **192** |

# ಮುನ್ನುಡಿ

1. ಈ ವರದಿಯನ್ನು ಸಂವಿಧಾನದ ಅನುಚ್ಛೇದ 151ರ ಅನ್ವಯ ರಾಜ್ಯಪಾಲರಿಗೆ ಕರ್ನಾಟಕ ವಿಧಾನಮಂಡಲದಲ್ಲಿ ಸಲ್ಲಿಸಲು ತಯಾರಿಸಲಾಗಿದೆ.

2. ಈ ವರದಿಯ ಅಧ್ಯಾಯ–I ಮತ್ತು II ಕ್ರಮವಾಗಿ, ರಾಜ್ಯ ಸರ್ಕಾರದ 31 ಮಾರ್ಚ್ 2017ಕ್ಕೆ ಅಂತ್ಯಗೊಂಡ ವರ್ಷದ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳ ಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಹೊಂದಿವೆ. ಅಗತ್ಯವಿದ್ದ ಕಡೆ ರಾಜ್ಯ ಸರ್ಕಾರದಿಂದಲೂ ಮಾಹಿತಿಯನ್ನು ಪಡೆಯಲಾಗಿದೆ.

3. 'ಆರ್ಥಿಕ ನಿರೂಪಣೆ'ಗೆ ಸಂಬಂಧಿಸಿದ ಅಧ್ಯಾಯ–III, 2016–17ನೇ ವರ್ಷದಲ್ಲಿ ರಾಜ್ಯ ಸರ್ಕಾರದ ಹಣಕಾಸು ನಿಯಮಗಳು, ಕಾರ್ಯವಿಧಾನಗಳು ಮತ್ತು ನಿರ್ದೇಶನಗಳ ಸ್ಥೂಲ ಸಮೀಕ್ಷೆಯೊಂದಿಗೆ ಅನುಪಾಲನೆಯ ಸ್ಥಿತಿಯನ್ನು ನಿರೂಪಿಸುತ್ತದೆ.

4. 31.3.2010ಕ್ಕೆ ಕೊನೆಗೊಂಡ ವರ್ಷದ ರಾಜ್ಯ ಹಣಕಾಸಿನ ವ್ಯವಹಾರಗಳ ವರದಿಗೆ, ಸಾರ್ವಜನಿಕ ಲೆಕ್ಕ ಸಮಿತಿಯ ಶಿಫಾರಸ್ಸಿನ ಮೇಲೆ (ಹದಿಮೂರನೇ ವರದಿ – ಡಿಸೆಂಬರ್ 2011) ಸರ್ಕಾರವು ತೆಗೆದುಕೊಂಡ ಕ್ರಮದ ವರದಿಯ ಮೇಲಿನ ಸಾರ್ವಜನಿಕ ಲೆಕ್ಕ ಸಮಿತಿಯ ಶಿಫಾರಸ್ಸುಗಳನ್ನು (ಐದನೇ ವರದಿ – ಜುಲೈ 2015) ಗಣನೆಗೆ ತೆಗೆದುಕೊಂಡು ವರದಿಯನ್ನು ತಯಾರಿಸಲಾಗಿದೆ.

5. ಕಾರ್ಯನಿರ್ವಹಣಾ ಲೆಕ್ಕ ಪರಿಶೋಧನೆಯ ಮತ್ತು ವಿವಿಧ ಇಲಾಖೆಗಳ ವಹಿವಾಟುಗಳ ಲೆಕ್ಕಪರಿಶೋಧನಾ ಫಲಿತಾಂಶಗಳ, ಸರ್ಕಾರದ ಕಂಪನಿಗಳ, ಶಾಸನಬದ್ಧ ನಿಗಮಗಳ, ಮಂಡಳಿಗಳ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಭಿಪ್ರಾಯಗಳು ಮತ್ತು ರಾಜಸ್ವ ಸ್ವೀಕೃತಿಗಳ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳನ್ನು ಒಳಗೊಂಡ ವರದಿಗಳನ್ನು ಪ್ರತ್ಯೇಕವಾಗಿ ಮಂಡಿಸಲಾಗಿದೆ.

6. ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ, ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

# ಕಾರ್ಯನಿರ್ವಹಣಾ ಸಾರಾಂಶ

## ಹಿನ್ನೆಲೆ

ಕರ್ನಾಟಕದಲ್ಲಿ ಹನ್ನೊಂದನೆ ಹಣಕಾಸು ಆಯೋಗವು ರೂಪಿಸಿದ ಸ್ಥೂಲ ಪ್ರಮಿತಿಗಳನ್ನು ಆಧಾರವಾಗಿಟ್ಟುಕೊಂಡು ಸರ್ಕಾರವು 2000–2005ರ ಅವಧಿಯ ಮೊದಲ ಮಧ್ಯಂತರ ವಿತ್ತೀಯ ಯೋಜನೆ (ಎಂಟಿಎಫ್‌ಪಿ) ರೂಪಿಸುವುದರ ಮೂಲಕ ಹಣಕಾಸು ಸುಧಾರಣೆ ಮತ್ತು ಕ್ರೋಢೀಕರಣಗಳನ್ನು ಮುಂಚೂಣಿಗೆ ತರಲಾಯಿತು. ಮಧ್ಯಂತರ ವಿತ್ತೀಯ ಯೋಜನೆಯು ನಿರಂತರ ವಾರ್ಷಿಕ ದಾಖಲೆಯಾಗುವುದಲ್ಲದೆ, ಮಧ್ಯಂತರ ವಿತ್ತೀಯ ಯೋಜನೆಗಳಲ್ಲಿ ನಿಗದಿಪಡಿಸಿದ ವಿತ್ತೀಯ ಗುರಿಗಳು ಮತ್ತು ಕಾರ್ಯನೀತಿಗಳು ವಾರ್ಷಿಕ ಆಯವ್ಯಯ ತಯಾರಿಕೆಗೆ ಮತ್ತು ಯೋಜನೆಗಳ ಪುನರ್ವ್ಯವಸ್ಥೆಗೆ ಪೂರಕವಾಗುತ್ತವೆ. ಕರ್ನಾಟಕವು ಮಧ್ಯಂತರ ವಿತ್ತೀಯ ಯೋಜನೆಗೆ ಶಾಸನಬದ್ಧ ಆಧಾರವನ್ನು ಒದಗಿಸಲು ವಿತ್ತೀಯ ಜವಾಬ್ದಾರಿ ಕಾಯಿದೆಯನ್ನು ಜಾರಿಗೆ ತಂದ ಮೊದಲ ರಾಜ್ಯವಾಗಿದೆ (ಸೆಪ್ಟೆಂಬರ್ 2002). ಈ ಕಾಯಿದೆಯು ರಾಜಸ್ವ ಹೆಚ್ಚಳ, ವಿತ್ತೀಯ ಕೊರತೆಯಲ್ಲಿ ಇಳಿಕೆ, ಹಣಕಾಸು ನೀತಿಯ ಪರಿಣಾಮಕಾರಿ ಜಾರಿಯಲ್ಲಿನ ಅಡಚಣೆಗಳ ನಿವಾರಣೆ, ಮತ್ತು ಸಾಲ, ಋಣ ಮತ್ತು ಕೊರತೆಗಳಲ್ಲಿ ಮಿತಿ ಸಾಧನೆಯ ಮೂಲಕ ವಿವೇಚನಾಯುಕ್ತ ಋಣ ನಿರ್ವಹಣೆ, ಮಧ್ಯಂತರ ವಿತ್ತೀಯ ಚೌಕಟ್ಟಿನ ಮೂಲಕ ಹಣಕಾಸು ನಿರ್ವಹಣೆಯಲ್ಲಿ ಅಧಿಕ ಪಾರದರ್ಶಕತ್ವವನ್ನು ಸಾಧಿಸಿ ವಿತ್ತೀಯ ಸ್ಥಿರತೆ ಮತ್ತು ಸಮರ್ಥತೆಗಳನ್ನು ಖಚಿತ ಪಡಿಸುವ, ಸಾಮಾಜಿಕ ಹಾಗೂ ಭೌತಿಕ ಮತ್ತು ಮಾನವ ಸಂಪನ್ಮೂಲಗಳ ವೃದ್ಧಿಯನ್ನು ಸಾಧಿಸುವ ಗುರಿಯನ್ನು ಹೊಂದಿದೆ.

## ವರದಿ

ಈ ವರದಿಯು ರಾಜ್ಯ ಸರ್ಕಾರದ 31 ಮಾರ್ಚ್ 2017ರ ಅಂತ್ಯದ ಪರಿಶೋಧಿತ ಲೆಕ್ಕಪತ್ರಗಳನ್ನು ಆಧರಿಸಿ ವಾರ್ಷಿಕ ಲೆಕ್ಕಗಳ ವಿಶ್ಲೇಷಣಾತ್ಮಕ ಸಮೀಕ್ಷೆಯನ್ನು ನೀಡುತ್ತದೆ. ರಾಜ್ಯದ ಹಣಕಾಸಿನ ನಿರ್ವಹಣೆಯನ್ನು ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ, ಆಯವ್ಯಯ ದಾಖಲೆಗಳು, ಹದಿನಾಲ್ಕನೇ ಹಣಕಾಸು ಆಯೋಗದ ವರದಿ ಮತ್ತು ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಿಂದ ಪಡೆದುಕೊಂಡ ಹಣಕಾಸು ದತ್ತಾಂಶಗಳನ್ನು ಆಧರಿಸಿ ತುಲನೆ ಮಾಡಲಾಗಿದೆ. ಈ ವರದಿಯು ಮೂರು ಅಧ್ಯಾಯಗಳನ್ನು ಹೊಂದಿದೆ.

**ಅಧ್ಯಾಯ–I** ಈ ಅಧ್ಯಾಯವು ರಾಜ್ಯ ಸರ್ಕಾರದ ಹಣಕಾಸು ಲೆಕ್ಕಗಳ ಪರಿಶೋಧನೆಯನ್ನು ಆಧರಿಸಿದ್ದು, 31 ಮಾರ್ಚ್ 2017ರಲ್ಲಿದ್ದಂತೆ ಕರ್ನಾಟಕ ರಾಜ್ಯಸರ್ಕಾರದ ವಿತ್ತ ಸ್ಥಿತಿಯನ್ನು ಮಾಪನ ಮಾಡುತ್ತದೆ. ಜೊತೆಗೆ ಈ ವರದಿಯು, ಬದ್ಧವೆಚ್ಚಗಳ ಪ್ರವೃತ್ತಿ, ಸಾಲವಿಧಾನಗಳ ವಿತ್ತೀಯ ಪ್ರಮಿತಿಗಳ ಮೇಲೆ ಪರಿಣಾಮ ಬೀರುವ ಕೆಲವು ಲೆಕ್ಕ ಹೊಂದಾಣಿಕೆಗಳ ಒಳನೋಟವನ್ನು ನೀಡುತ್ತವೆ.

**ಅಧ್ಯಾಯ–II** ಈ ಅಧ್ಯಾಯವು ಧನವಿನಿಯೋಗ ಲೆಕ್ಕಗಳನ್ನು ಆಧರಿಸಿದ್ದು, ಧನವಿನಿಯೋಗ ವಿವರಗಳನ್ನು ಮತ್ತು ಸೇವೆಗಳನ್ನು ಒದಗಿಸುವ ಇಲಾಖೆಗಳು, ಹಂಚಿಕೆಯಾದ ಸಂಪನ್ಮೂಲಗಳನ್ನು ಹೇಗೆ ನಿರ್ವಹಿಸಿವೆ ಎಂಬ ವಿವರಗಳನ್ನು ನೀಡುತ್ತದೆ. ವ್ಯವಹಾರಗಳ ಪಾರದರ್ಶಕತೆಯನ್ನು ಬಾಧಿಸುವ ಆಯವ್ಯಯದ ಅಂಶಗಳನ್ನೂ ಸಹ ಈ ಅಧ್ಯಾಯದಲ್ಲಿ ಸೇರಿಸಲಾಗಿದೆ.

**ಅಧ್ಯಾಯ–III** ಈ ಅಧ್ಯಾಯವು ಕರ್ನಾಟಕ ಸರ್ಕಾರದ ವಿವಿಧ ವರದಿ ಸಲ್ಲಿಕಾ ಅಗತ್ಯಗಳು ಮತ್ತು ಹಣಕಾಸು ನಿಯಮಗಳ ಪಾಲನೆಯ ವಿವರಗಳನ್ನು ನೀಡುತ್ತದೆ.

ಈ ವರದಿಯು, ಲೆಕ್ಕಪರಿಶೋಧನಾ ಅಂಶಗಳ ಸಮರ್ಥನೆಗೆ ವಿವಿಧ ಮೂಲಗಳಿಂದ ಸಂಗ್ರಹಿಸಿದ ಹೆಚ್ಚುವರಿ ದತ್ತಾಂಶಗಳ ಅನುಬಂಧಗಳನ್ನೂ ಸಹ ಒಳಗೊಂಡಿದೆ. ಆಯ್ದ ಪಾರಿಭಾಷಿಕ ಪದಗಳ ಪಟ್ಟಿಯನ್ನು ವರದಿಯ ಕೊನೆಯಲ್ಲಿ ನೀಡಲಾಗಿದೆ.

## ಲೆಕ್ಕಪರಿಶೋಧನೆಯ ಆವಿಷ್ಕಾರಗಳು ಮತ್ತು ಶಿಫಾರಸ್ಸುಗಳು

### ಆರ್ಥಿಕ ಸ್ಥಿತಿ

2012–13ರಿಂದ 2016–17ರ ನಡುವೆ ರಾಜ್ಯ ಸರ್ಕಾರವು ರಾಜಸ್ವ ಹೆಚ್ಚಳವನ್ನು ಮುಂದುವರೆಸಿದೆ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಾಪೇಕ್ಷವಾಗಿ ವಿತ್ತೀಯ ಕೊರತೆಯನ್ನು ವಿತ್ತೀಯ ಜವಾಬ್ದಾರಿ ಕಾಯಿದೆಯಡಿ ಕಾಲಕಾಲಕ್ಕೆ ತಿದ್ದುಪಡಿಯಾದ ಮಿತಿಯ ಒಳಗಡೆ ನಿರ್ವಹಿಸಿದೆ. 2016–17ರಲ್ಲಿ ರಾಜ್ಯವು ₹1,293 ಕೋಟಿಗಳ ರಾಜಸ್ವ ಹೆಚ್ಚಳವನ್ನು ಹೊಂದಿದ್ದು, ಹಿಂದಿನ ವರ್ಷಕ್ಕಿಂತ ₹496 ಕೋಟಿಗಳಷ್ಟು ಇಳಿಕೆಯಾಗಿದೆ. ರಾಜಸ್ವ ವೆಚ್ಚಗಳಲ್ಲಿ ಕಳೆದ ವರ್ಷಕ್ಕಿಂತ ಶೇಕಡ 13ರಷ್ಟು ಹೆಚ್ಚಳ ಉಂಟಾಗಿದ್ದರೆ ರಾಜಸ್ವ ಸ್ವೀಕೃತಿಗಳ ವೃದ್ಧಿಯ ದರವು ಸಹ ಶೇಕಡ 12ರಷ್ಟಿದೆ.

ವಿತ್ತೀಯ ಕೊರತೆಯು 2016–17ರಲ್ಲಿ ₹28,664 ಕೋಟಿಗಳಿದ್ದು 2015–16ರಲ್ಲಿ ಇದ್ದ ₹19,169 ಕೋಟಿಗಿಂತ ₹9,495 ಕೋಟಿಯಷ್ಟು (ಮೊತ್ತದ ಲೆಕ್ಕದಲ್ಲಿ ಶೇಕಡ 50) ಹೆಚ್ಚಳವಾಗಿದೆ. ಈ ವರ್ಷ ಪ್ರಾಥಮಿಕ ಕೊರತೆಯು ₹15,814 ಕೋಟಿಗಳಿದ್ದು ಕಳೆದ ಸಾಲಿಗಿಂತ ₹7,988 ಕೋಟಿಗಳಷ್ಟು ಹೆಚ್ಚಳವಾಗಿದೆ. ವೃದ್ಧಿತ ಋಣೇತರ ಸ್ವೀಕೃತಿಯು ₹14,112 ಕೋಟಿಗಳಿದ್ದು, ಇದು ವೃದ್ಧಿತ ಪ್ರಾಥಮಿಕ ವೆಚ್ಚ ₹22,101 ಕೋಟಿಗಿಂತ ಕಡಿಮೆ ಇದೆ.

### ರಾಜ್ಯದ ಸ್ವಂತ ಸಂಪನ್ಮೂಲಗಳು

2012–13 ರಿಂದ 2016–17ರ ಅವಧಿಯಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ರಾಜ್ಯದ ತೆರಿಗೆ ಆದಾಯದ ಅನುಪಾತವು ಶೇಕಡಾ 7.3 ರಿಂದ 7.8ರ ನಡುವೆಯಿದ್ದಿತು. ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ, ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ಪೊಲೀಸ್ ವಸತಿ ನಿಗಮಗಳಿಂದ ಬರಬೇಕಾದ ಖಾತರಿ ಶುಲ್ಕ (₹52.91 ಕೋಟಿ) ಮತ್ತು ಸಾರಿಗೆ ನಿಗಮಗಳಿಂದ ಬಾಕಿಯಿದ್ದ ಮೋಟಾರು ವಾಹನ ತೆರಿಗೆ ಬಾಕಿಗಳನ್ನು ಸಹಾಯಧನವೆಂದು ಹೊಂದಾಣಿಕೆ ಮಾಡಿದ್ದು (₹291.39 ಕೋಟಿ), ಒಟ್ಟು ₹344.30 ಕೋಟಿಗಳ ಪುಸ್ತಕ ಹೊಂದಾಣಿಕೆಯಿಂದ, ರಾಜಸ್ವ ಸ್ವೀಕೃತಿಗಳನ್ನು ಕೃತಕವಾಗಿ ಹೆಚ್ಚಿಸಿದವು.

ರಾಜಸ್ವ ಸ್ವೀಕೃತಿಗಳಿಗೆ ತೆರಿಗೆಯೇತರ ಆದಾಯದ ಅನುಪಾತವು 2012–13ರಲ್ಲಿದ್ದ, ಶೇಕಡ 5.07ರಿಂದ ಈ ವರ್ಷ ಶೇಕಡ 4.35ಕ್ಕೆ ಗಣನೀಯವಾಗಿ ಇಳಿದಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (₹11,17,334 ಕೋಟಿ) ತೆರಿಗೆಯೇತರ ಆದಾಯದ ಅನುಪಾತವು (2016–17ರಲ್ಲಿ ಶೇಕಡಾ 0.52) ನಗಣ್ಯವಾಗಿದ್ದು, ಮುಂಬರುವ ವರ್ಷಗಳಲ್ಲಿ ವೆಚ್ಚ ಸುಧಾರಣಾ ಸಮಿತಿಯು ಶಿಫಾರಸ್ಸು ಮಾಡಿದಂತೆ ಬಳಕೆದಾರರ ಕರದ ಪರಿಷ್ಕರಣೆಯ ಮೂಲಕ ತೆರಿಗೆಯೇತರ ಆದಾಯವನ್ನು ಹೆಚ್ಚಿಸುವ ಅಗತ್ಯವಿದೆ.

### ಹದಿನಾಲ್ಕನೆಯ ಹಣಕಾಸು ಆಯೋಗದ ಅನುದಾನಗಳ ಬಳಕೆ

2016–17ನೇ ಸಾಲಿನಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮೂಲ ಅನುದಾನದಡಿ ₹20.41 ಕೋಟಿಗಳಷ್ಟು ಬಿಡುಗಡೆಯಾಗಿದ್ದವು. ಸಂಸತ್ತಿನಲ್ಲಿ ಜಿಎಸ್‌ಟಿ ಬಿಲ್ಲಿನ ಅನುಮೋದನೆಯು ಬಾಕಿಯಿರುವಂತೆಯೇ, ವಿಪತ್ತು ಪರಿಹಾರದಡಿಯ ಮೇಲಿನ ಅನುದಾನವು XIIIನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ 75:25 ಅನುಪಾತದಲ್ಲಿಯೇ ಮುಂದುವರಿದಿದ್ದವು. ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಕಾರ್ಯನಿರ್ವಹಣಾ ಅನುದಾನಗಳ ಬಿಡುಗಡೆಯು 2016–17ರಿಂದ ಪ್ರಾರಂಭಗೊಂಡವು. ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಕಾರ್ಯ ನಿರ್ವಹಣಾ ಅನುದಾನದಡಿ ₹2.70 ಕೋಟಿಗಳಷ್ಟು ಕಡಿಮೆ ಬಿಡುಗಡೆಯಾಗಿದ್ದವು. ಹದಿನಾಲ್ಕನೇ ಹಣಕಾಸು ಆಯೋಗವು ವಿಶೇಷವಾಗಿ ವೃತ್ತಿ ತೆರಿಗೆ ಹಾಗೂ ಜಲನಿಯಂತ್ರಣ ಪ್ರಾಧಿಕಾರ ಮತ್ತು ರಾಜ್ಯ ವಿದ್ಯುತ್ ನಿಯಂತ್ರಣ ಪ್ರಾಧಿಕಾರ ನಿಧಿಯ ಸ್ಥಾಪನೆಯಂತಹ ಇನ್ನಿತರ ಶಿಫಾರಸ್ಸುಗಳನ್ನು ಮಾಡಿತು.

## ರಾಜಸ್ವ ವೆಚ್ಚ

ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ವಿಭಾಗದಡಿ ವೆಚ್ಚವು ಹಿಂದಿನ ವರ್ಷಕ್ಕಿಂತ ಶೇಕಡ 18 ಮತ್ತು ಶೇಕಡ 19ರಷ್ಟು ವೃದ್ಧಿಯಾಗಿದ್ದರೆ ಅದು ಸಾಮಾನ್ಯ ಸೇವೆಗಳಡಿ ಶೇಕಡ 2ರಷ್ಟು ವೃದ್ಧಿಯಾಗಿತ್ತು. ಒಟ್ಟು ರಾಜಸ್ವ ವೆಚ್ಚದಲ್ಲಿ ಯೋಜನಾ ವೆಚ್ಚದ ಪಾಲು 2015–16ರಲ್ಲಿದ್ದ ₹40,009 ಕೋಟಿಗಳಿಂದ 2016–17ರಲ್ಲಿ ₹47,962 ಕೋಟಿಗಳಿಗೆ ಹೆಚ್ಚಿದೆ. ಶೇಕಡ 80ರಷ್ಟು ರಾಜಸ್ವ ವೆಚ್ಚವು ಸಂಬಳ, ನಿವೃತ್ತಿ ವೇತನ, ಬಡ್ಡಿ ಪಾವತಿ ಮತ್ತು ಸಹಾಯಧನಗಳು, ಆಡಳಿತ ವೆಚ್ಚ, ಸಹಾಯಾನುದಾನ ಮತ್ತು ಆರ್ಥಿಕ ಬೆಂಬಲ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆಗಳ ಬದ್ಧ ವೆಚ್ಚಕ್ಕೆ ವಿನಿಯೋಗವಾಗಿದೆ. ಬದ್ಧ ವೆಚ್ಚಗಳು ರಾಜಸ್ವ ಸ್ವೀಕೃತಿಗಳ ಶೇಕಡ 79ರಷ್ಟಿದೆ. ನೇರ ಸಹಾಯಧನವು 2015–16ರಲ್ಲಿ ₹13,149 ಕೋಟಿಯಿದ್ದು, ಪ್ರಸಕ್ತ ವರ್ಷದಲ್ಲಿ ₹14,387 ಕೋಟಿಗೆ ಏರಿದೆ. ಅವ್ಯಕ್ತ ಸಹಾಯಧನವು 2015–16ರಲ್ಲಿ ₹3,913 ಕೋಟಿಗಳಿದ್ದು ಈ ವರ್ಷ ₹3,714 ಕೋಟಿಗೆ ಇಳಿದಿದೆ. ಹನ್ನೆರಡನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ, ಪಾರದರ್ಶಕತೆ ತರಲು ಪರೋಕ್ಷ ಸಹಾಯಧನಗಳ ವೆಚ್ಚಗಳನ್ನು ಹಣಕಾಸು ಲೆಕ್ಕಗಳಲ್ಲಿ ಸೇರಿಸಬೇಕಾಗಿದೆ. ಆದರೆ ಇದನ್ನು ಪಾಲಿಸಲಾಗಿಲ್ಲ.

## ವೆಚ್ಚದ ಗುಣಮಟ್ಟ

2016–17ನೇ ವರ್ಷದಲ್ಲಿ ಬಂಡವಾಳ ವೆಚ್ಚದ ಪಾಲು ಒಟ್ಟು ವೆಚ್ಚದ ಶೇಕಡ 19ರಷ್ಟಿದ್ದು, (₹28,150 ಕೋಟಿ). ಇದು ಕಳೆದ ವರ್ಷದಲ್ಲಿ ಶೇಕಡ 15ರಷ್ಟಿತ್ತು (₹20,316 ಕೋಟಿ). 2016–17ರ ಅಂತ್ಯದಲ್ಲಿದ್ದಂತೆ ಅಪೂರ್ಣ ಕಾಮಗಾರಿಗಳಲ್ಲಿ ₹2,027 ಕೋಟಿಗಳನ್ನು ತೊಡಗಿಸಿದ್ದು ಈ ಮೊತ್ತವು ನಿರ್ಬಂಧಿತವಾಗಿದೆ. 31 ಮಾರ್ಚ್ 2017ರ ಅಂತ್ಯಕ್ಕೆ ಕಂಪೆನಿಗಳಲ್ಲಿ/ನಿಗಮಗಳಲ್ಲಿ ಹೂಡಿರುವ ₹63,115 ಕೋಟಿಗಳಿಂದ ಬಂದ ಪ್ರತಿಫಲವು ನಗಣ್ಯವಾಗಿದೆ (₹82.50 ಕೋಟಿ). ಹೂಡಿಕೆಯು ಸತತವಾಗಿ ನಷ್ಟದಲ್ಲಿರುವ ಕಂಪೆನಿಗಳು/ ನಿಗಮಗಳಲ್ಲಿ ಹೂಡಿರುವ ₹24,474 ಕೋಟಿಗಳನ್ನು (ಶೇಕಡ 39) ಒಳಗೊಂಡಿದೆ. ಪ್ರಸಕ್ತ ಸಾಲಿನಲ್ಲಿ ಸರ್ಕಾರವು ₹123 ಕೋಟಿಗಳನ್ನು ಸತತವಾಗಿ ನಷ್ಟದಲ್ಲಿರುವ ಕಂಪೆನಿಗಳಲ್ಲಿ/ನಿಗಮಗಳಲ್ಲಿ ಹೂಡಿದ್ದು ಈ ಕಂಪನಿಗಳ ಸಂಚಿತ ನಷ್ಟವು ₹45 ಕೋಟಿಗಳಷ್ಟು ಇಳಿದಿದೆ.

## ನಿಧಿಗಳು ಮತ್ತು ಇತರ ಜವಾಬ್ದಾರಿಗಳು

ವ್ಯವಹಾರವು ಸರ್ಕಾರದ ಲೆಕ್ಕ ಪುಸ್ತಕಗಳ ಮೂಲಕ ಹಾದು ಹೋಗಿಲ್ಲವಾದ್ದರಿಂದ ಸಂಚಿತ ಋಣ ಪರಿಹಾರ ನಿಧಿಯಿಂದ ಮಾಡಿದ್ದ ₹2,070 ಕೋಟಿಗಳ ಹೂಡಿಕೆಯ ಮೇಲೆ ಸಂಚಯವಾದ ₹317.45 ಕೋಟಿಗಳಷ್ಟು ಬಡ್ಡಿಯು ರಾಜ್ಯ ಸರ್ಕಾರದ ಆಸ್ತಿಯ ಭಾಗವಾಗಿರಲಿಲ್ಲ. ಹಸಿರು ತೆರಿಗೆ ಉಪಕರದ ₹57.89 ಕೋಟಿಗಳನ್ನು ಹಾಗೂ ತತ್ಸಂಬಧವಾದ ವೆಚ್ಚವನ್ನು ಹಸಿರು ತೆರಿಗೆ ನಿಧಿಗೆ ವರ್ಗಾಯಿಸಿರಲಿಲ್ಲ. ಸಂಚಿತ ನಿಧಿಯಿಂದ ಸಾರ್ವಜನಿಕ ಲೆಕ್ಕಗಳಲ್ಲಿನ ಮೂಲ ಸೌಕರ್ಯ ಉಪಕ್ರಮಣ ನಿಧಿಗೆ (ಐಐಎಫ್) ಬಿಎಮ್‌ಆರ್‌ಸಿಎಲ್ ಮತ್ತು ಸಿಎಮ್‌ಆರ್‌ಆರ್‌ಡಿ ನಿಧಿಗೆ ₹4,621.53 ಕೋಟಿಗಳ ವರ್ಗಾವಣೆ, ಜಿಲ್ಲಾ ಪಂಚಾಯತ್ ನಿಧಿ–II ಮತ್ತು ತಾಲ್ಲೂಕು ಪಂಚಾಯತ್ ನಿಧಿ ಶಿಲ್ಕುಗಳು (₹1,086.28 ಕೋಟಿ) ಹಿಂಬರೆಯುವಿಕೆಯು ಬಂಡವಾಳ/ರಾಜಸ್ವ ವೆಚ್ಚವನ್ನು ಕೃತಕವಾಗಿ ಹಿಗ್ಗಿಸಿದ್ದವು. ಖಾತರಿ ವಿಮೋಚನಾ ನಿಧಿಯನ್ನು ಪುನಶ್ಚೇತನಗೊಳಿಸಿರಲಿಲ್ಲ.

## ಋಣ ಸಹಿಷ್ಣುತೆ

ರಾಜ್ಯದ ಒಟ್ಟು ವಿತ್ತೀಯ ಜವಾಬ್ದಾರಿಗಳಲ್ಲಿ ಮುಕ್ತ ಮಾರುಕಟ್ಟೆ ಸಾಲಗಳ ಪ್ರಮಾಣವು ಗಣನೀಯವಾಗಿತ್ತು (ಶೇಕಡಾ 49). 2016–17ಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಅನುಪಾತವು ಶೇಕಡ 19.81ಗಳಷ್ಟಿದ್ದು, ಇದು ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ 2002 ನಿಗದಿತ ಶೇಕಡ 25ರ ಮಿತಿಯಲ್ಲಿದೆ. ಬಾಕಿ ಇರುವ ಋಣ ರಾಜ್ಯಕ್ಕೆ ಲಭ್ಯವಿದ್ದ ನಿವ್ವಳ ಋಣವು ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ಪ್ರಸಕ್ತ ವರ್ಷ 2016–17ರಲ್ಲಿ (₹23,736 ಕೋಟಿ) ಶೇಕಡ 40ರಷ್ಟು ಏರಿಕೆಯಾಗಿತ್ತು.

ಹದಿಮೂರನೇ ಹಣಕಾಸು ಆಯೋಗವು ಶಿಫಾರಸ್ಸು ಮಾಡಿದಂತೆ ಎನ್‌ಎಸ್‌ಎಸ್‌ಎಫ್ ಸಾಲಗಳ ಮೇಲಿನ ₹192.42 ಕೋಟಿ ಬಡ್ಡಿ ಪರಿಹಾರವನ್ನು ಬಿಡುಗಡೆ ಮಾಡಲಿಲ್ಲ.

## ಹಣಕಾಸು ನಿರ್ವಹಣೆ ಮತ್ತು ಆಯುವ್ಯಯ ನಿಯಂತ್ರಣ

2016–17ರಲ್ಲಿ ಒಟ್ಟು ಆಯವ್ಯಯ ಅವಕಾಶ ₹1,86,052 ಕೋಟಿಗಳಿಗೆ ಪ್ರತಿಯಾಗಿ ವೆಚ್ಚವು ₹1,73,045 ಕೋಟಿಗಳಷ್ಟಿದ್ದು ₹13,007 ಕೋಟಿ ಬಳಕೆಯಾಗದೇ ಉಳಿದಿತ್ತು. (ಶೇಕಡ ಏಳು). ಅನುಷ್ಠಾನಾಧಿಕಾರಿಗಳಿಗೆ ಸಂಚಿತ ನಿಧಿಯಿಂದ ಬಿಡುಗಡೆಯಾಗುವ ಮೊತ್ತವು ಅಗತ್ಯವನ್ನು ಆಧರಿಸಿರಬೇಕೇ ಹೊರತು ಆಯವ್ಯಯ ಅವಕಾಶ ತಪ್ಪಿಹೋಗುವುದನ್ನು ತಪ್ಪಿಸಲು ಆಗಬಾರದು. ವೆಚ್ಚವನ್ನು ₹5,898 ಕೋಟಿಗಳಷ್ಟು ಅಧಿಕವಾಗಿ ತೋರಿಸಿದ್ದು, ಇದು ಪ್ರಮುಖವಾಗಿ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತಿಗಳಿಗೆ ಬಿಡುಗಡೆ ಮಾಡಿದ ಮೊತ್ತಗಳಲ್ಲಿ ₹1,381 ಕೋಟಿ ಬಳಕೆಯಾಗದಿರುವುದು, ₹4,622 ಕೋಟಿಗಳ ಸ್ವೀಕೃತಿಗಳನ್ನು ಮಾತ್ರ ನಿಧಿ ಲೆಕ್ಕಕ್ಕೆ ವರ್ಗಾವಣೆ ಮಾಡಿರುವುದು, ಅಲ್ಪಸಂಖ್ಯಾತರ ನಿರ್ದೇಶನಾಲಯಕ್ಕೆ ಬಿಡುಗಡೆ ಮಾಡಿದ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ₹260 ಕೋಟಿಗಳನ್ನು ವೈಯಕ್ತಿಕ ಠೇವಣಿಯಲ್ಲಿ ಇಟ್ಟಿರುವುದು, ಮುಂತಾದವುಗಳಿಂದಾಗಿದೆ ಎಂಬುದನ್ನು ಗಮನಿಸಲಾಗಿದೆ. ₹1,085.41 ಕೋಟಿಗಳ ಹೆಚ್ಚುವರಿ ವೆಚ್ಚವು (ಅನುದಾನ ಸಂಖ್ಯೆ 1ರ ಅಡಿ, ₹176.75 ಕೋಟಿ, ಅನುದಾನ ಸಂಖ್ಯೆ 5ರ ಅಡಿ ₹55.37 ಕೋಟಿ, ಅನುದಾನ ಸಂಖ್ಯೆ 14ರ ಅಡಿ ₹632.06 ಕೋಟಿ, ಅನುದಾನ ಸಂಖ್ಯೆ 20ರ ಅಡಿ ₹59.81 ಕೋಟಿ ಮತ್ತು ಅನುದಾನ ಸಂಖ್ಯೆ 29ರ ಅಡಿ ₹161.42 ಕೋಟಿ) 2016–17ನೇ ವರ್ಷದಲ್ಲಿ ಸಂವಿಧಾನದ ಅನುಚ್ಛೇದ 205ರ ಅನ್ವಯ ಸಕ್ರಮಗೊಳಿಸಬೇಕಾಗಿದೆ. 26 ಪ್ರಕರಣಗಳಲ್ಲಿ ಪಡೆದ ಪೂರಕ ಅಂದಾಜುಗಳ ಮೊತ್ತ ₹2,047.40 ಕೋಟಿಗಳು ಅನಗತ್ಯವಾಗಿದ್ದು, 62 ಪ್ರಕರಣಗಳಲ್ಲಿ ಪುನರ್ವಿನಿಯೋಗವು ಅನುಚಿತವಾಗಿದ್ದು ಅವಕಾಶದ ಬಳಕೆಯಾಗದಿರುವುದು ಅಥವಾ ಅವಕಾಶಕ್ಕಿಂತ ಹೆಚ್ಚು ವೆಚ್ಚವಾಗಿದೆ. 15 ಅನುದಾನಗಳಲ್ಲಿ ₹5 ಕೋಟಿಗಿಂತಲೂ ಹೆಚ್ಚಿನ ಉಳಿತಾಯವಾಗಿದ್ದ ಒಟ್ಟು ₹1,789.36 ಕೋಟಿಗಳ ಮೊತ್ತವು ಆರ್ಥಿಕ ವರ್ಷದ ಕೊನೆಯ ಎರಡು ಕೆಲಸದ ದಿನಗಳಲ್ಲಿ ಅಧ್ಯರ್ಪಣೆಯಾಗಿದೆ.

ಮೂರು ಅನುದಾನಗಳಡಿಯ ನಾಲ್ಕು ಪ್ರಕರಣಗಳಲ್ಲಿ ಆಯವ್ಯಯದಲ್ಲಿ ಅವಕಾಶವಿಲ್ಲದ ₹1.03 ಕೋಟಿಗಳ ಮೊತ್ತದ ವೆಚ್ಚಕ್ಕೆ ಕಾರ್ಯಕಾರೀ ಆದೇಶಗಳನ್ನು 'ಹೆಚ್ಚುವರಿ' ಎಂದು ಬಿಡುಗಡೆ ಮಾಡಲಾಗಿದ್ದು, ನಂತರ ಪೂರಕ ಅಂದಾಜುಗಳ ಮೂಲಕ ಸಕ್ರಮಗೊಂಡಿಲ್ಲದಿರುವುದರಿಂದ ಅಂತಿಮವಾಗಿ ₹0.44 ಕೋಟಿಗಳ ಹೆಚ್ಚುವರಿ ವೆಚ್ಚದಲ್ಲಿ ಫಲಿತವಾಗಿದೆ.

ಐದು ಅನುದಾನಗಳ ಐದು ಪ್ರಕರಣಗಳಲ್ಲಿ, ₹124 ಕೋಟಿಗಳ ಹೆಚ್ಚುವರಿ ವೆಚ್ಚವು ಹೊಸ ಸೇವೆ/ಹೊಸ ಸೇವಾಸಾಧನ ಎಂದು ಪರಿಗಣಿಸಬೇಕಿದ್ದು, ಶಾಸಕಾಂಗದ ಅನುಮೋದನೆ ಇಲ್ಲದೇ ವೆಚ್ಚ ಮಾಡಲಾಗಿದೆ.

ಬಂಡವಾಳ/ರಾಜಸ್ವ ವೆಚ್ಚಗಳ ನಡುವೆ ₹45.69 ಕೋಟಿಗಳು ತಪ್ಪು ವರ್ಗೀಕರಣಗೊಂಡಿದ್ದು, ವಿತ್ತೀಯ ಸೂಚಕಗಳ ಮೇಲೆ ಪರಿಣಾಮ ಬೀರಿದೆ. ಸಂಯುಕ್ತ ಉದ್ದೇಶ ಶೀರ್ಷಿಕೆ 059–ಇತರೆ ವೆಚ್ಚಗಳ ಅಡಿಯ ವೆಚ್ಚವು ಕನಿಷ್ಠವಾಗಿರಬೇಕಿದ್ದು ಅದು ₹1,265.77 ಕೋಟಿಗಳಷ್ಟಿತ್ತು.

ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮದಲ್ಲಿ ಹೇಳಿರುವಂತೆ ಪ್ರಸಕ್ತ ವರ್ಷದ ಆಯವ್ಯಯ ಗುರಿಗಳಿಗೆ ಸಂಬಂಧಿಸಿದಂತೆ ಪೂರಕ ಅನುದಾನಗಳ ಪರಿಣಾಮವನ್ನು ಪೂರ್ತಿಯಾಗಿ ನಿವಾರಿಸಲು ವೆಚ್ಚಗಳ ಕಡಿತ/ಆದಾಯದ ಶೇಖರಣೆಯನ್ನು ಸೂಚಿಸುವ ವಿವರಣಾಪಟ್ಟಿಯೊಂದನ್ನು ನೀಡುವಲ್ಲಿ ವಿಫಲವಾದ್ದರಿಂದ ಪೂರಕ ಅನುದಾನಗಳನ್ನು ವಿತ್ತೀಯವಾಗಿ ತಟಸ್ಥವಾಗಿದ್ದವೆಂದು ನಿರ್ಧಾರಣೆ ಮಾಡಲಾಗಲಿಲ್ಲ.

151 ಪ್ರಕರಣಗಳಲ್ಲಿ ₹1.39 ಕೋಟಿಗಳಷ್ಟು ಕುಟುಂಬ ಪಿಂಚಣಿಯು ಅಧಿಕವಾಗಿ ಪಾವತಿಯಾಗಿದ್ದು, 79 ಪ್ರಕರಣಗಳಲ್ಲಿ ₹1.23 ಕೋಟಿ ಕುಟುಂಬ ಪಿಂಚಣಿಯ ಪಾವತಿಯು ಪುನರಾವರ್ತನೆಯಾಗಿದ್ದು, ಅಧಿಕ ಕುಟುಂಬ ಪಿಂಚಣಿ ಪಾವತಿಯು ಮುಂದುವರೆದಿತ್ತು.

ಅನೇಕ ಅನುದಾನಗಳಲ್ಲಿ ಭಾರಿ ಪ್ರಮಾಣದ ಅವಕಾಶಗಳು ಬಳಕೆಯಾಗದೆ ಉಳಿದಿರುವುದು ಕಂಡುಬಂದಿದ್ದು, ಅವಕಾಶಗಳು ಬಳಕೆಯಾಗದೆ ಉಳಿದಿರುವುದನ್ನು ತಪ್ಪಿಸಲು ಎಲ್ಲಾ ಇಲಾಖೆಗಳಲ್ಲೂ ಆಯವ್ಯಯ ನಿಯಂತ್ರಣವನ್ನು ಬಲಪಡಿಸಬೇಕಾಗಿದೆ. ಸತತವಾಗಿ ಭಾರಿ ಪ್ರಮಾಣದ ಆಯವ್ಯಯ ಅವಕಾಶಗಳು ಬಳಕೆಯಾಗದಿರುವುದು, ಅಧಿಕ ವೆಚ್ಚವಾಗಿರುವುದು ಕಂಡು ಬಂದಿರುವುದರಿಂದ, ಆಯವ್ಯಯ ಕಸರತ್ತು ಹೆಚ್ಚು ವಾಸ್ತವಿಕವಾಗಿರಬೇಕಾಗಿದ್ದು, ಸತತ ಉಳಿಕೆಗಳು, ಅಧಿಕವೆಚ್ಚವನ್ನು ತಪ್ಪಿಸಬೇಕಾಗಿದೆ.

ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನಗಳ ಬಿಡುಗಡೆ ಮತ್ತು ಲೆಕ್ಕವಿಧಾನದಲ್ಲಿ ತಪ್ಪಾದ ಆಯವ್ಯಯ ಮಾರ್ಗಗಳನ್ನು ಅನುಸರಿಸಿರುವುದರಿಂದ ಆಯವ್ಯಯ ವೆಚ್ಚಗಳು ನ್ಯೂನತೆಗೊಳಗಾಗಿದೆ. ನಗರ ಸ್ಥಳೀಯ ಸಂಸ್ಥೆಗಳ ವಿಭಾಗದ ಆಯವ್ಯಯ ವೆಚ್ಚಗಳನ್ನು ಹೊಂದಿಸಲು ನಿಖರವಾದ ಶೀರ್ಷಿಕೆಗಳನ್ನು ತೆರೆಯಬೇಕಾಗಿದ್ದು, ಇವು ಬಿಡುಗಡೆಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನಗಳು ಎಂದು ಮಾತ್ರ ಸೂಚಿಸಬೇಕು. ನಗರ ಸ್ಥಳೀಯ ಸಂಸ್ಥೆಗಳ (ವೆಚ್ಚ ವರ್ಗೀಕರಣವು ರಾಜ್ಯ ಆಯವ್ಯಯದಲ್ಲಿ ಸೇರಿಕೊಳ್ಳುವ ಸಾಧ್ಯತೆಯನ್ನು ತಪ್ಪಿಸಲು) ಹಂಚಿಕೆಯ ಆಯವ್ಯಯ ದಾಖಲೆಗಳನ್ನು ಪರಿಶೀಲಿಸುವ ಅಗತ್ಯವಿದೆ.

## ಆರ್ಥಿಕ ನಿರೂಪಣೆ

ಶಾಸಕಾಂಗದ ಹಣಕಾಸು ನಿಯಂತ್ರಣದ ತತ್ವಗಳಿಗೆ ವ್ಯತಿರಿಕ್ತವಾಗಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಿಗೆ ಸವಿವರ ಸಾದಿಲ್ವಾರು ಬಿಲ್ಲುಗಳ ಸಲ್ಲಿಕೆಯು ದೀರ್ಘಕಾಲದಿಂದ ಬಾಕಿ ಉಳಿದಿದೆ ಮತ್ತು ದೊಡ್ಡ ಪ್ರಮಾಣದ ಮೊತ್ತಗಳನ್ನು ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಉಳಿಸಿಕೊಳ್ಳಲಾಗಿದೆ. ವೆಚ್ಚ ಮತ್ತು ಸ್ವೀಕೃತಿಗಳ ಹೊಂದಾಣಿಕೆಯಾಗದಿರುವುದು ಕ್ರಮವಾಗಿ ಒಟ್ಟು ವೆಚ್ಚದ ಶೇಕಡ 19ರಷ್ಟಿದೆ. ಕೆಲವು ಋಣ, ಠೇವಣಿ ಮತ್ತು ಇರಸಾಲು ಶೀರ್ಷಿಕೆಗಳಲ್ಲಿ ವ್ಯತಿರಿಕ್ತ ಶಿಲ್ಕುಗಳಿದ್ದು ಅವುಗಳನ್ನು ಬಗೆಹರಿಸಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಅಮಾನತ್ತು ಲೆಕ್ಕಗಳು ಸರ್ಕಾರದ ನಗದು ಶಿಲ್ಕುಗಳ ಮೇಲೆ ಪರಿಣಾಮ ಹೊಂದಿರುವುದರಿಂದ ಅವುಗಳ ತೀರುವಳಿಗೆ ಸಂಬಂಧಿತ ಪ್ರಾಧಿಕಾರಗಳೊಂದಿಗೆ ಶೀಘ್ರವಾಗಿ ಕ್ರಮ ಕೈಗೊಳ್ಳಬೇಕಾಗಿದೆ. ಸರ್ಕಾರಿ ಲೆಕ್ಕಗಳಲ್ಲಿನ ವ್ಯವಹಾರಗಳು ವೆಚ್ಚದ ಸ್ವಭಾವವನ್ನು ಸರಿಯಾಗಿ ಬಿಂಬಿಸುವ ಮೂಲಕ ಪಾರದರ್ಶಕವಾಗಿರಬೇಕು. ಆದರೆ, ಚಾಲ್ತಿಯಲ್ಲಿದ ಉದ್ದೇಶ ಲೆಕ್ಕಶೀರ್ಷಿಕೆಗಳಡಿ ಅವಕಾಶ/ವೆಚ್ಚವನ್ನು ಮಾಡಿದ ಪ್ರಕರಣಗಳಿದ್ದವು. ಕೆಲವು ಪ್ರಕರಣಗಳಲ್ಲಿ ಹಣವನ್ನು ಸೆಳೆದು ಅನುಷ್ಠಾನಗೊಳಿಸುವ ಏಜೆನ್ಸಿಗಳ ಪಿಡಿ ಖಾತೆ/ಬ್ಯಾಂಕ್ ಖಾತೆಗಳಲ್ಲಿ ಠೇವಣಿ ಮಾಡಿದ್ದನ್ನು ಗಮನಿಸಿದ್ದು, ಸಂಚಿತ ನಿಧಿಯಿಂದ ಹಣ ಸೆಳೆಯುವುದನ್ನು ತಪ್ಪಿಸಬೇಕು.

# ಅಧ್ಯಾಯ - I

# ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು

# ಅಧ್ಯಾಯ – 1

## 1 ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು

### ರಾಜ್ಯದ ಚಿತ್ರಣ

ಕರ್ನಾಟಕವು ಭೌಗೋಳಿಕ ವಿಸ್ತೀರ್ಣದಲ್ಲಿ ಭಾರತದ ಏಳನೆಯ ಅತಿದೊಡ್ಡ ರಾಜ್ಯವಾಗಿದ್ದು (1,91,791 ಚ.ಕಿ.ಮೀ) ಜನಸಂಖ್ಯೆಯಲ್ಲಿ ಎಂಟನೆಯ ಸ್ಥಾನದಲ್ಲಿದೆ. ರಾಜ್ಯದ ಜನಸಂಖ್ಯೆಯು 2001ರಲ್ಲಿದ್ದ 5.28 ಕೋಟಿಯಿಂದ 2011ರಲ್ಲಿ 6.11 ಕೋಟಿಗೆ ಏರಿ ದಶಕದಲ್ಲಿ ಶೇಕಡ 16ರಷ್ಟು ಹೆಚ್ಚಳವನ್ನು ದಾಖಲಿಸಿದೆ. 2011–12ರಲ್ಲಿ ಬಡತನ ರೇಖೆಯ ಕೆಳಗಿರುವ ಜನಸಂಖ್ಯೆಯು ಭಾರತದ ಸರಾಸರಿ 21.90 ಶತಾಂಶಕ್ಕೆ ಹೋಲಿಸಿದರೆ ರಾಜ್ಯದಲ್ಲಿ ಇದು 20.90ರಷ್ಟಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು (ರಾಒಆಂಉ) 2016–17ರಲ್ಲಿ ಮಾರುಕಟ್ಟೆ ಬೆಲೆಗಳಲ್ಲಿ ₹11,17,334 ಕೋಟಿಗಳಷ್ಟಿದೆ. ರಾಜ್ಯದ ಸಾಕ್ಷರತೆಯ ದರವು 2001ರಲ್ಲಿದ್ದ ಶೇಕಡ 66.60ರಿಂದ 2011ರಲ್ಲಿ ಶೇಕಡ 75.40ಕ್ಕೆ ಹೆಚ್ಚಿದೆ. ರಾಜ್ಯದ ತಲಾದಾಯವು ₹1,59,893 ಗಳಷ್ಟಿದ್ದು, ರಾಷ್ಟ್ರದ ಸರಾಸರಿಯು ₹1,03,818 ರಷ್ಟಿದೆ (ಕರ್ನಾಟಕ ಸರ್ಕಾರದ ಆರ್ಥಿಕ ಸಮೀಕ್ಷೆ 2016–17–ಮಾರ್ಚ್ 2017 ರಲ್ಲಿದ್ದಂತೆ). ರಾಜ್ಯಕ್ಕೆ ಸಂಬಂಧಿಸಿದಂತೆ ಸಾಮಾನ್ಯ ದತ್ತಾಂಶಗಳನ್ನು **ಅನುಬಂಧ 1.1**ರಲ್ಲಿ ನೀಡಲಾಗಿದೆ.

### ರಾಜ್ಯದ ಒಟ್ಟು ಆಂತರಿಕ ಉತ್ಪನ್ನ

ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಒಂದು ನಿರ್ದಿಷ್ಟ ಅವಧಿಯಲ್ಲಿ ರಾಜ್ಯದ ಒಳಗೆ ಉತ್ಪಾದಿಸಲಾಗಿರುವ ಹಾಗೂ ಅಧಿಕೃತವಾಗಿ ಅಂಗೀಕರಿಸಲ್ಪಟ್ಟಿರುವ ಅಂತಿಮ ಸರಕುಗಳ ಮತ್ತು ಸೇವೆಗಳ ಮೌಲ್ಯವಾಗಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿಯು ರಾಜ್ಯದ ಜನತೆಯ ಜೀವನ ಮಟ್ಟವನ್ನು ಸೂಚಿಸುವುದರಿಂದ ಅದು ರಾಜ್ಯದ ಆರ್ಥಿಕ ಸ್ಥಿತಿಯ ಪ್ರಮುಖ ಸೂಚಕವಾಗಿದೆ. ಪ್ರಸಕ್ತ ದರಗಳಲ್ಲಿ ಭಾರತದ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿನ ವೃದ್ಧಿಯ ಪ್ರವೃತ್ತಿಯನ್ನು ಕೆಳಗಿನ **ಕೋಷ್ಟಕ 1.1**ರಲ್ಲಿ ತೋರಿಸಲಾಗಿದೆ:

**ಕೋಷ್ಟಕ 1.1: ಪ್ರಸಕ್ತ ದರಗಳಲ್ಲಿ ಭಾರತದ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಾರ್ಷಿಕ ವೃದ್ಧಿಯ ದರ**

| ವರ್ಷ | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ಭಾರತದ ಒಆಂಉ @ (ಕೋಟಿ ರೂಪಾಯಿಗಳಲ್ಲಿ) | 99,44,013 | 112,33,522 | 124,45,128 | 136,82,035 | 151,83,709 |
| ಒಆಂಉದ ವೃದ್ಧಿಯ ದರ (ಶೇಕಡಾವಾರು) | 13.82 | 12.97 | 10.79 | 9.94 | 10.98 |
| ರಾಒಆಂಉ# (ಕೋಟಿ ರೂಪಾಯಿಗಳಲ್ಲಿ) | 6,91,700 | 8,17,886 | 9,21,788 | 10,27,068 | 11,17,334 |
| ರಾಒಆಂಉದ ವೃದ್ಧಿಯದರ (ಶೇಕಡವಾರು) | 14.56 | 18.24 | 12.70 | 11.42 | 8.79 |

*@ ಅಖಿಲ ಭಾರತ ಒಟ್ಟು ಆಂತರಿಕ ಉತ್ಪನ್ನದ ಅಂಕಿಗಳು ಅಂಕಿ ಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು ದಿನಾಂಕ 01–08–2017ರಂದು ಹೊರಡಿಸಿದ ಪತ್ರಿಕಾ ಪ್ರಕಟಣೆಯಲ್ಲಿದ್ದಂತೆ.*

*# 2012–13ರಿಂದ 2015–16 ರವರೆಗಿನ ರಾಒಆಂಉದ ಅಂಕಿಗಳನ್ನು ಕರ್ನಾಟಕ ಆರ್ಥಿಕ ಸಮೀಕ್ಷೆ 2016–17ರಿಂದ ಪಡೆಯಲಾಗಿದ್ದು, ಇದಕ್ಕೆ 2011–12ನ್ನು ಆಧಾರ ವರ್ಷವಾಗಿ ತೆಗೆದುಕೊಳ್ಳಲಾಗಿದೆ ಮತ್ತು 2016–17ಕ್ಕೆ ಹಣಕಾಸು ಸಚಿವಾಲಯವು ಪತ್ರ ದಿನಾಂಕ 29 ಮಾರ್ಚ್ 2016ರಲ್ಲಿ ತಿಳಿಸಿದಂತೆ ಇದ್ದು ಇದಕ್ಕೆ 2011–12 ಆಧಾರ ವರ್ಷವಾಗಿದೆ.*

## 1.1 ಪೀಠಿಕೆ

ಈ ಅಧ್ಯಾಯವು ಕರ್ನಾಟಕ ರಾಜ್ಯ ಸರ್ಕಾರದ 2016–17ರಲ್ಲಿನ ಹಣಕಾಸಿನ ವ್ಯವಹಾರಗಳ ಯಥಾದೃಷ್ಟಿಯ ಸ್ಥೂಲ ಚಿತ್ರಣವನ್ನು ಒದಗಿಸುತ್ತದೆ. ಅದು, ಕಳೆದ ಐದು ವರ್ಷಗಳಲ್ಲಿನ ಒಟ್ಟಾರೆ ಪ್ರವೃತ್ತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹಿಂದಿನ ವರ್ಷಕ್ಕೆ ಹೋಲಿಸಿದಂತೆ ಹಣಕಾಸಿನ ಸೂಚಕಗಳಲ್ಲಿನ ಪ್ರಮುಖ ಬದಲಾವಣೆಗಳನ್ನು ವಿಶ್ಲೇಷಿಸುತ್ತದೆ. ಈ ವಿಶ್ಲೇಷಣೆಯು ಹಣಕಾಸು ಲೆಕ್ಕಗಳು ಹಾಗೂ ರಾಜ್ಯಸರ್ಕಾರದಿಂದ ಪಡೆದ ಮಾಹಿತಿಗಳನ್ನು ಆಧರಿಸಿದೆ. ಸರ್ಕಾರದ ಲೆಕ್ಕಗಳ ವಿನ್ಯಾಸ ಹಾಗೂ ಹಣಕಾಸು ಲೆಕ್ಕಗಳ ರೂಪುರೇಖೆಗಳನ್ನು **ಅನುಬಂಧ 1.2**ರಲ್ಲಿ ವಿವರಿಸಲಾಗಿದೆ.

### 1.1.1 2016–17ರಲ್ಲಿನ ವಿತ್ತ ವ್ಯವಹಾರಗಳ ಸಾರಾಂಶ

**ಕೋಷ್ಟಕ 1.2** ಮತ್ತು **ಅನುಬಂಧ 1.3**ರಲ್ಲಿ ರಾಜ್ಯ ಸರ್ಕಾರದ ಪ್ರಸಕ್ತ ವರ್ಷದ (2016–17) ವಿತ್ತ ವ್ಯವಹಾರಗಳ ಸಂಕ್ಷಿಪ್ತ ಸಾರಾಂಶವನ್ನು ಹಿಂದಿನ ವರ್ಷಕ್ಕೆ (2015–16) ಹೋಲಿಸಿದಂತೆ ನೀಡಲಾಗಿದ್ದು, **ಅನುಬಂಧ 1.4**ರಲ್ಲಿ ಸ್ವೀಕೃತಿಗಳ ಮತ್ತು ಬಟವಾಡೆಗಳ ವಿವರಗಳೊಂದಿಗೆ ಕಳೆದ ನಾಲ್ಕು ವರ್ಷಗಳಲ್ಲಿನ ಒಟ್ಟಾರೆ ವಿತ್ತೀಯ ಸ್ಥಿತಿಯನ್ನು ಸೂಚಿಸಲಾಗಿದೆ.

**ಕೋಷ್ಟಕ 1.2: 2016–17 ರಲ್ಲಿ ವಿತ್ತ ವ್ಯವಹಾರಗಳ ಸಾರಾಂಶ**

**(ಕೋಟಿ ರೂಪಾಯಿಗಳಲ್ಲಿ)**

| ಸ್ವೀಕೃತಿಗಳು | | | ಬಟವಾಡೆಗಳು | | | | |
|---|---|---|---|---|---|---|---|
| | 2015–16 | 2016–17 | | 2015–16 | 2016–17 | | |
| **ಭಾಗ–ಎ ರಾಜಸ್ವ** | | | | **ಒಟ್ಟು** | **ಯೋಜನೇತರ** | **ಯೋಜನೆ** | **ಒಟ್ಟು** |
| **ರಾಜಸ್ವ ಸ್ವೀಕೃತಿಗಳು** | **1,18,817.31** | **1,33,213.79** | **ರಾಜಸ್ವ ವೆಚ್ಚ** | **1,17,028.58** | **83,958.99** | **47,961.76** | **1,31,920.75** |
| ತೆರಿಗೆ ಆದಾಯ | 75,550.18 | 82,956.13 | ಸಾಮಾನ್ಯ ಸೇವೆಗಳು | 30,799.28 | 31,152.93 | 111.63 | 31,264.56 |
| ತೆರಿಗೆಯೇತರ ರಾಜಸ್ವ | 5,355.04 | 5,794.53 | ಸಾಮಾಜಿಕ ಸೇವೆಗಳು | 46,307.08 | 24,653.32 | 29,895.92 | 54,549.24 |
| ಕೇಂದ್ರ ತೆರಿಗೆಗಳು/ಸುಂಕಗಳಲ್ಲಿನ ಪಾಲು | 23,983.34 | 28,759.94 | ಆರ್ಥಿಕ ಸೇವೆಗಳು | 33,846.17 | 23,840.45 | 16,580.92 | 40,421.37 |
| ಭಾರತ ಸರ್ಕಾರದಿಂದ ಪಡೆದ ಸಹಾಯಾನುದಾನಗಳು ಮತ್ತು ವಂತಿಗೆಗಳು | 13,928.75 | 15,703.19 | ಸಹಾಯಾನುದಾನ ಗಳು ಮತ್ತು ವಂತಿಗೆಗಳು | 6,076.05 | 4,312.29 | 1,373.29 | 5,685.58 |
| **ಭಾಗ–ಬಿ: ಬಂಡವಾಳ ಮತ್ತು ಇತರೆ** | | | | | | | |
| **ಇತರೆ ಬಂಡವಾಳ ಸ್ವೀಕೃತಿಗಳು** | **352.30** | **26.96** | **ಬಂಡವಾಳ ವೆಚ್ಚ** | **20,713.03** | **466.08** | **27,684.35** | **28,150.43** |
| | | | ಸಾಮಾನ್ಯ ಸೇವೆಗಳು | 991.41 | 33.42 | 1,026.97 | 1,060.39 |
| | | | ಸಾಮಾಜಿಕ ಸೇವೆಗಳು | 5,313.91 | 213.80 | 6,683.04 | 6,896.84 |
| | | | ಆರ್ಥಿಕ ಸೇವೆಗಳು | 14,407.71 | 218.86 | 19,974.34 | 20,193.20 |
| **ಸಾಲಗಳ ಮತ್ತು ಮುಂಗಡಗಳ ವಸೂಲಿಗಳು** | **59.68** | **99.84** | **ಸಾಲಗಳ ಮತ್ತು ಮುಂಗಡಗಳ ಬಟವಾಡೆ** | **656.41** | **5.31** | **1,929.07** | **1,934.38** |
| **ಸಾರ್ವಜನಿಕ ಋಣ ಸ್ವೀಕೃತಿಗಳು**** | **21,072.33** | **31,155.92** | **ಸಾರ್ವಜನಿಕ ಋಣ ಮರುಪಾವತಿ**** | **4,110.20** | **7,420.24** | -- | **7,420.24** |
| **ಸಾದಿಲ್ವಾರು ನಿಧಿ** | -- | -- | **ಸಾದಿಲ್ವಾರು ನಿಧಿ** | -- | -- | -- | -- |
| **ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು** | **1,60,518.76** | **1,79,318.45** | **ಸಾರ್ವಜನಿಕ ಲೆಕ್ಕ ಬಟವಾಡೆಗಳು** | **1,55,094.83** | -- | -- | **1,67,153.81** |
| **ಪ್ರಾರಂಭಿಕ ಶಿಲ್ಕು** | **23,900.90** | **27,118.23** | **ಅಂತಿಮ ನಗದು ಶಿಲ್ಕು** | **27,118.23** | -- | -- | **34,353.58** |
| **ಒಟ್ಟು** | **3,24,721.28** | **3,70,933.19** | **ಒಟ್ಟು** | **3,24,721.28** | -- | -- | **3,70,933.19** |

*ಆಕರ: ಹಣಕಾಸು ಲೆಕ್ಕಗಳು 2016–17.*

** ಅರ್ಥೋಪಾಯ ಮುಂಗಡಗಳು ಮತ್ತು ಓವರ್‌ಡ್ರಾಫ್ಟ್‌ಗಳ ನಿವ್ವಳ ವ್ಯವಹಾರಗಳನ್ನು ಹೊರತುಪಡಿಸಿ.

ಹಿಂದಿನ ಸಾಲಿಗೆ ಹೋಲಿಸಿದಲ್ಲಿ 2016–17ರಲ್ಲಿನ ಗಮನಾರ್ಹ ಬದಲಾವಣೆಗಳು ಈ ಕೆಳಗಿನಂತಿವೆ:

- ರಾಜಸ್ವ ಸ್ವೀಕೃತಿಗಳು ₹14,396.48 ಕೋಟಿಗಳಷ್ಟು (ಶೇಕಡ 12) ಹೆಚ್ಚಾಗಿದ್ದು, ಇದು ಕೇಂದ್ರ ತೆರಿಗೆ/ಸುಂಕಗಳಲ್ಲಿನ ರಾಜ್ಯದ ಪಾಲು (₹4,776.60 ಕೋಟಿ), ಸ್ವಂತ ತೆರಿಗೆ ಆದಾಯ (₹7,405.95 ಕೋಟಿ) ಮತ್ತು ತೆರಿಗೆಯೇತರ ಆದಾಯ (₹439.49 ಕೋಟಿ), ಭಾರತ ಸರ್ಕಾರದಿಂದ ಸಹಾಯಾನುದಾನಗಳು ಮತ್ತು ವಂತಿಗೆಗಳಿಂದಾಗಿದೆ (₹1,774.44 ಕೋಟಿ). 2016–17ನೇ ಸಾಲಿಗೆ ರಾಜಸ್ವ ಸ್ವೀಕೃತಿಗಳು 2013–17ರ ಮಧ್ಯಮಾವಧಿಯ ವಿತ್ತ ಯೋಜನೆಯಲ್ಲಿ ಪ್ರಕ್ಷೇಪಿಸಿದ್ದಕ್ಕಿಂತ ₹17,061 ಕೋಟಿಗಳಷ್ಟು ಕಡಿಮೆಯಿದೆ.

- ರಾಜಸ್ವ ವೆಚ್ಚವು ₹14,892.17 ಕೋಟಿಗಳಷ್ಟು (ಶೇಕಡ 13) ಹೆಚ್ಚಾಗಿದೆ. ಹೆಚ್ಚಳವು ಸಾಮಾಜಿಕ ಸೇವೆಗಳ ವಿಭಾಗದಲ್ಲಿ (₹8,242.16 ಕೋಟಿ), ಆರ್ಥಿಕ ಸೇವೆಗಳ ವಿಭಾಗದಲ್ಲಿ (₹6,575.20 ಕೋಟಿ) ಸಾಮಾನ್ಯ ಸೇವೆಗಳ ವಿಭಾಗದಲ್ಲಿ (₹465.28 ಕೋಟಿ) ಉಂಟಾಗಿದ್ದು, ಸಹಾಯಾನುದಾನಗಳು ಮತ್ತು ವಂತಿಗೆಗಳಲ್ಲಿನ (₹390.47 ಕೋಟಿ ಇಳಿಕೆಯಿಂದ ಉತ್ತಾರವಾಗಿದೆ. 2016–17ರ ರಾಜಸ್ವ ವೆಚ್ಚವು ಮಧ್ಯಮಾವಧಿ ವಿತ್ತಯೋಜನೆಯ (2013–17) ಪ್ರಕ್ಷೇಪಣೆಗಿಂತ ₹4,689 ಕೋಟಿಗಳಷ್ಟು ಕಡಿಮೆಯಿದೆ.

- ಬಂಡವಾಳ ವೆಚ್ಚವು ₹7,437.40 ಕೋಟಿಗಳಷ್ಟು (ಶೇಕಡ 36) ಹೆಚ್ಚಾಗಿದೆ. ಹೆಚ್ಚಳವು ಪ್ರಮುಖವಾಗಿ ಆರ್ಥಿಕ ಸೇವೆಗಳ ವಿಭಾಗದಲ್ಲಿ (₹5,785.49 ಕೋಟಿ) ಮತ್ತು ಸಾಮಾಜಿಕ ಸೇವೆಗಳ ವಿಭಾಗದಲ್ಲಿ (₹1,582.93 ಕೋಟಿ) ಮತ್ತು ಸಾಮಾನ್ಯ ಸೇವೆಗಳ ವಿಭಾಗದಲ್ಲಿ (₹68.98 ಕೋಟಿ) ಉಂಟಾಗಿತ್ತು.

- ಸಾಲ ಮತ್ತು ಮುಂಗಡಗಳ ವಸೂಲಾತಿಯಲ್ಲಿ ₹40.16 ಕೋಟಿ (ಶೇಕಡ 67) ಗಳಷ್ಟು ಹೆಚ್ಚಿದ್ದು ಸಾಲ ಮತ್ತು ಮುಂಗಡಗಳ ವಿತರಣೆಯಲ್ಲಿ ₹1,277.97 ಕೋಟಿಗಳಷ್ಟು (ಶೇಕಡ 195) ಹೆಚ್ಚಾಗಿದೆ.

- ಸಾರ್ವಜನಿಕ ಋಣ ಸ್ವೀಕೃತಿಗಳು (ಅರ್ಥೋಪಾಯ ಮುಂಗಡಗಳನ್ನು ಹೊರತುಪಡಿಸಿ) ಮತ್ತು ಮರುಪಾವತಿಯು ಕ್ರಮವಾಗಿ ₹10,083.59 ಕೋಟಿ (ಶೇಕಡ 48) ಮತ್ತು ₹3,310.04 ಕೋಟಿ (ಶೇಕಡ 81) ಗಳಷ್ಟು ಹೆಚ್ಚಾಗಿದೆ.

- ಸಾರ್ವಜನಿಕ ಲೆಕ್ಕಗಳ ಸ್ವೀಕೃತಿಗಳು ಹಾಗೂ ಬಟವಾಡೆಗಳು ಕ್ರಮವಾಗಿ ₹18,799.69 ಕೋಟಿ (ಶೇಕಡ 12) ಮತ್ತು ₹12,058.98 ಕೋಟಿ (ಶೇಕಡ 8) ಗಳಷ್ಟು ಹೆಚ್ಚಳಗೊಂಡಿದ್ದವು.

- ರಾಜ್ಯ ಸರ್ಕಾರದ ನಗದು ಶಿಲ್ಕು ಹಿಂದಿನ ವರ್ಷಕ್ಕಿಂತ ₹7,235.35 ಕೋಟಿಗಳಷ್ಟು (ಶೇಕಡ 27) ಹೆಚ್ಚಾಗಿತ್ತು.

### 1.1.2 ವಿತ್ತೀಯ ಸ್ಥಿತಿಯ ಸಮೀಕ್ಷೆ

ಹನ್ನೊಂದನೇ ಹಣಕಾಸು ಆಯೋಗವು ನಿಗದಿಪಡಿಸಿದ್ದ ವಿತ್ತೀಯ ತಿದ್ದುಪಡಿ ಪಥದ ಸ್ಥೂಲ ಪ್ರಮಿತಿಗಳ ಆಧಾರದ ಮೇರೆಗೆ ಕರ್ನಾಟಕದಲ್ಲಿ, ರಾಜ್ಯ ಸರ್ಕಾರವು ಮೊದಲ ಮಧ್ಯಮಾವಧಿಯ ವಿತ್ತೀಯ ಯೋಜನೆಯನ್ನು 2000–05 ಅವಧಿಗೆ ನಿರೂಪಿಸಿರುವುದರೊಂದಿಗೆ ವಿತ್ತೀಯ ಸುಧಾರಣೆಗಳು ಹಾಗೂ ಕ್ರೋಢೀಕರಣಗಳನ್ನು ಮುಂಚೂಣಿಗೆ ತಂದಿದ್ದಲ್ಲದೆ ಕಾಯಿದೆಯ ಮೂಲಕ ಜಾರಿಗೆ ತಂದಿತು (ಸೆಪ್ಟೆಂಬರ್ 2002). ವಿತ್ತೀಯ ಜವಾಬ್ದಾರಿ ಅಧಿನಿಯಮವು 1 ಏಪ್ರಿಲ್ 2003ರಿಂದ ಕಾರ್ಯಗತವಾಗಿ ಇದು ಮಧ್ಯಮಾವಧಿಯ ವಿತ್ತೀಯ ಯೋಜನೆಗೆ ಶಾಸನಬದ್ಧ ಬೆಂಬಲವನ್ನು ಒದಗಿಸಿತು.

ರಾಜ್ಯ ಸರ್ಕಾರವು ವಿತ್ತೀಯ ಜವಾಬ್ದಾರಿ ಅಧಿನಿಯಮದ ಜಾರಿಯಾದಾಗಿನಿಂದ ವಿತ್ತೀಯ ಕ್ರೋಢೀಕರಣ ಪಥದಲ್ಲಿದೆ ಮತ್ತು ಖಾತರಿಗಳನ್ನು 'ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಪರಿಮಿತಿ ಅಧಿನಿಯಮ, 1999'ರಲ್ಲಿ ನಿಗದಿಪಡಿಸಿದ ಮಿತಿಯೊಳಗೆ ನಿರ್ವಹಿಸಿದೆ. ಸರ್ಕಾರವು 2004–

05ರಿಂದಲೂ ರಾಜಸ್ವ ಹೆಚ್ಚಳವನ್ನು ದಾಖಲಿಸಿಕೊಂಡು ಬಂದಿದೆ. ವಿತ್ತೀಯ ಕೊರತೆಯು ಅಧಿನಿಯಮದಲ್ಲಿ ನಿಗದಿಪಡಿಸಿರುವಂತೆ ರಾ಼ಆಂಉದ ಶೇಕಡ ಮೂರರ ಮಿತಿಯಲ್ಲಿದೆ. ಆದರೆ, 2008–09 ಹಾಗೂ 2009–10ರಲ್ಲಿ, ಭಾರತ ಸರ್ಕಾರದ ನಿರ್ದೇಶನದಂತೆ, ರಾಜ್ಯವು ವಿತ್ತೀಯ ಕ್ರೋಢೀಕರಣ ಪಥದಿಂದ ವಿಮುಖವಾಗಿ ಆರ್ಥಿಕ ವಿಲಂಬನವನ್ನು ನಿಭಾಯಿಸುವುದಕ್ಕಾಗಿ ಅಧಿನಿಯಮವನ್ನು ತಿದ್ದುಪಡಿ ಮಾಡಿ ಸಾರ್ವಜನಿಕ ವೆಚ್ಚಕ್ಕಾಗಿ ಹೆಚ್ಚಿನ ಸಾಲಗಳನ್ನು ಪಡೆಯಿತು.

ಫೆಬ್ರವರಿ 2014ರಲ್ಲಿ ಕಾಯಿದೆಗೆ ತಿದ್ದುಪಡಿ ತರುವುದರ ಮೂಲಕ ಪರಿಚ್ಛೇದ 2(ಜಿ) ಅಡಿಯಲ್ಲಿ ಸೂಚಿಸಿರುವ ಸಾರ್ವಜನಿಕ ವಿಭಾಗದ ಉದ್ದಿಮೆಗಳು ಮತ್ತು ವಿಶೇಷ ಉದ್ದೇಶ ಸಾಧನಗಳು ಮತ್ತು ಇತರ ಸಮಾನ ಸಾಧನಗಳು ಮಾಡುವ ಸಾಲಗಳ ಅಸಲು ಮತ್ತು ಬಡ್ಡಿಗಳ ಒಟ್ಟು ಜವಾಬ್ದಾರಿಗಳ ವ್ಯಾಪ್ತಿಯನ್ನು ರಾಜ್ಯದ ಆಯವ್ಯಯದ ಮೂಲಕವೇ ಭರಿಸುವಂತೆ ಹಿಗ್ಗಿಸಲಾಯಿತು. ಉತ್ತರೋತ್ತರ ಹಣಕಾಸು ಆಯೋಗಗಳು ವಿಧಿಸಿರುವ ಪ್ರಮಿತಿಗಳನ್ನು ಗಮನದಲ್ಲಿರಿಸಿ ರಾಜ್ಯ ಸರ್ಕಾರವು ತನ್ನ ವಿತ್ತೀಯ ಜವಾಬ್ದಾರಿ ಅಧಿನಿಯಮವನ್ನು ಕಾಲಕಾಲಕ್ಕೆ ತಿದ್ದುಪಡಿ ಮಾಡಿತು.

ಹದಿನಾಲ್ಕನೇ ಹಣಕಾಸು ಆಯೋಗವು ವಿತ್ತೀಯ ಕೊರತೆಗಳ ಗುರಿಗಳು ಮತ್ತು ವಾರ್ಷಿಕ ಸಾಲಮಿತಿಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ಶಿಫಾರಸ್ಸು ಮಾಡಿದೆ. ಸಾಲಗಳ ಮಿತಿಯನ್ನು ನಿಗದಿಗೊಳಿಸಬೇಕಾದ ಯಾವುದೇ ವರ್ಷಕ್ಕೆ ಹಿಂದಿನ ವರ್ಷದಲ್ಲಿ ಋಣ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತವು ಶೇಕಡ 25 ಅಥವಾ ಕಡಿಮೆಯಿದ್ದಲ್ಲಿ, ರಾಜ್ಯಕ್ಕೆ ವಿತ್ತೀಯ ಕೊರತೆಯ ಮೇಲೆ ಶೇಕಡ 0.25ರಷ್ಟು ಹೆಚ್ಚು/ಕಡಿಮೆ ಮಾಡಿಕೊಳ್ಳುವ ಅವಕಾಶವಿರುತ್ತದೆ ಮತ್ತು ಸಾಲಗಳ ಮಿತಿಯನ್ನು ನಿಗದಿಗೊಳಿಸಬೇಕಾದ ಯಾವುದೇ ವರ್ಷದ ಹಿಂದಿನ ವರ್ಷದಲ್ಲಿ ಬಡ್ಡಿ ಪಾವತಿಗಳು ರಾಜಸ್ವ ಸ್ವೀಕೃತಿಗಳ ಶೇಕಡ 10 ಸಮನಾಗಿ ಅಥವಾ ಕಡಿಮೆಯಿದ್ದಲ್ಲಿ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ 0.25ರಷ್ಟು ಹೆಚ್ಚುವರಿ ಸಾಲ ಮಾಡುವ ಅವಕಾಶವಿರುತ್ತದೆ. ಈ ಮೇಲೆ ಹೇಳಿದ ಅವಕಾಶಗಳನ್ನು ಪ್ರತ್ಯೇಕವಾಗಿ ಅಥವಾ ಎರಡೂ ಮಾನದಂಡಗಳೂ ಪಾಲನೆಯಾಗಿದ್ದಲ್ಲಿ, ಏಕಕಾಲದಲ್ಲಿ ಪಡೆಯುವ ಮೂಲಕ ರಾಜ್ಯವು ಯಾವುದೇ ವರ್ಷದಲ್ಲಿ ವಿತ್ತೀಯ ಕೊರತೆ ರಾ಼ಆಂಉತ್ಪನ್ನದ ಗರಿಷ್ಠ ಮಿತಿ ಶೇಕಡ 3.5ರಷ್ಟನ್ನು ಹೊಂದಬಹುದು. ಸಾಲ ಮಾಡುವ ಮಿತಿಯನ್ನು ನಿಗದಿ ಪಡಿಸಬೇಕಾದ ವರ್ಷದಲ್ಲಿ ಅಥವಾ ಅದರ ಹಿಂದಿನ ವರ್ಷದಲ್ಲಿ ರಾಜಸ್ವ ಕೊರತೆಯಿಲ್ಲದಿದ್ದಲ್ಲಿ ಮಾತ್ರ ಹೆಚ್ಚುವರಿ ಮಿತಿಯ ಅವಕಾಶವು ಲಭ್ಯವಿರುತ್ತದೆ.

ಮೊದಲ ನಾಲ್ಕು ವರ್ಷಗಳ ನಿರ್ಧಾರಿತ ಅವಧಿಯಲ್ಲಿ (2015–16 ಮತ್ತು 2018–19) ಯಾವುದೇ ವರ್ಷದಲ್ಲಿ ರಾಜ್ಯವು ಮಂಜೂರಾದ ರಾ಼ಆಂಉದ ಶೇಕಡ 3ರಷ್ಟು ಸಾಲದ ಮಿತಿಯನ್ನು ಬಳಸಿಕೊಳ್ಳಲಾಗದಿದ್ದಲ್ಲಿ, ನಿರ್ಧಾರಿತ ಅವಧಿಯೊಳಗೆ ಮುಂದಿನ ವರ್ಷದಲ್ಲಿ ಮಾತ್ರ ಬಳಕೆಯಾಗದ ಸಾಲದ ಮೊತ್ತವನ್ನು ಬಳಸಿಕೊಳ್ಳುವ ಅವಕಾಶವನ್ನು ಹೊಂದಿರುತ್ತದೆ. ಮುಂದುವರೆದು ವಿತ್ತೀಯ ಕೊರತೆಯ ಮೇಲೆ ಶಾಸನಬದ್ಧ ನಮ್ಯತೆಗೆ ಅನುವು ಮಾಡಲು ರಾಜ್ಯ ಸರ್ಕಾರಗಳು ತಮ್ಮ ವಿತ್ತೀಯ ಜವಾಬ್ದಾರಿ ಆಯವ್ಯಯ ನಿರ್ವಹಣಾ ಕಾಯ್ದೆಗಳಿಗೆ ತಿದ್ದುಪಡಿ ಮಾಡಬಹುದೆಂದೂ ಶಿಫಾರಸ್ಸು ಮಾಡಿತು.

ಆದಾಗ್ಯೂ, ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆಯು ಮೇಲಿನ ಶಿಫಾರಸ್ಸುಗಳನ್ನು ಬಿಂಬಿಸುವ ಯಾವುದೇ ತಿದ್ದುಪಡಿಗಳನ್ನು ಮಾಡಿಲ್ಲ. ವಿಧಾನಸಭೆಯ ಮುಂದೆ ಮಂಡಿಸಲಾದ ಮಧ್ಯಮಾವಧಿ ವಿತ್ತೀಯ ಯೋಜನೆಯೂ ಸಹ ತಿದ್ದುಪಡಿಯಾಗದ್ದಕ್ಕೆ ಕಾರಣಗಳನ್ನು ಹೊಂದಿರಲಿಲ್ಲ.

2016–17ಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (₹11,17,334 ಕೋಟಿ) ಬಾಕಿ ಇರುವ ಋಣ (ಆಯವ್ಯಯದ ಹೊರಗಿನ ಸಾಲಗಳೂ ಸೇರಿದಂತೆ) ಮತ್ತು ವಿತ್ತೀಯ ಕೊರತೆಯ ಅನುಪಾತವು ಕ್ರಮವಾಗಿ ಶೇಕಡ 19.81 ಮತ್ತು ಶೇಕಡ 2.57ಗಳಷ್ಟಿದ್ದು, ಇವು ನಿಗದಿತ ಶೇಕಡ 25 ಮತ್ತು ಶೇಕಡ 3ರ ಮಿತಿಯೊಳಗೆ ಇದ್ದವು.

ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಮುಖ್ಯಸ್ಥರಾಗಿರುವ ವಿತ್ತೀಯ ನಿರ್ವಹಣಾ ಪರಿಶೀಲನಾ ಸಮಿತಿಯನ್ನು ಜುಲೈ 2011ರಲ್ಲಿ ರಚಿಸಲಾಯಿತು. ಸದರಿ ಸಮಿತಿಯು ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆಯ ಪ್ರಮಿತಿಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಅಳವಡಿಸಿ ಕೊಳ್ಳಬೇಕಾದ ಕೆಳಕಂಡ ನಿವಾರಣ ಕ್ರಮಗಳನ್ನು ಶಿಫಾರಸ್ಸು ಮಾಡಿದೆ (ಮಾರ್ಚ್ 2017).

- ಮುದ್ರಾಂಕ ಮತ್ತು ನೋಂದಣಿ ಹಾಗೂ ವಾಣಿಜ್ಯ ತೆರಿಗೆಗಳಲ್ಲಿನ ಕಡಿಮೆ ಸಂಗ್ರಹಣೆಗೆ ನೋಟು ಅಮಾನ್ಯೀಕರಣದ ಆರ್ಥಿಕ ಪರಿಣಾಮಗಳೇ ಪ್ರಾಥಮಿಕ ಕಾರಣವೆಂದು ಪರಿಗಣಿಸಲಾಗಿತ್ತು. ನೆರೆ ರಾಜ್ಯಗಳಲ್ಲಿ ವೃದ್ಧಿದರಗಳು ಉತ್ತಮವಾಗಿರುವುದರಿಂದ ಭಾರತದಲ್ಲಿ ತಯಾರಾದ ವಿದೇಶೀ ಮದ್ಯದ ತಟಸ್ಥ ಮಾರಾಟದ ಗಾತ್ರವನ್ನು ಪರಿಶೀಲಿಸಬೇಕೆಂದೂ ಸಹ ಹೇಳಿತು;

- ಸಾರ್ವಜನಿಕ ಲೆಕ್ಕದಲ್ಲಿ ಸ್ಥಳೀಯ ಸಂಸ್ಥೆಗಳ ನಿಧಿಗಳಲ್ಲಿನ ಬಳಕೆಯಾಗದ ಶಿಲ್ಕುಗಳ ಹಿಂಬರೆಯುವಿಕೆಗೆ ಪರಿಷ್ಕೃತ ವ್ಯವಸ್ಥೆಯನ್ನು ಗಮನಿಸಲಾಯಿತು ಮತ್ತು ಸೂಕ್ತ ನಿರ್ಧಾರವನ್ನು ಕೈಗೊಳ್ಳಲು ಸ್ಥಳೀಯ ಸಂಸ್ಥೆಗಳ ಬ್ಯಾಂಕು ಖಾತೆಗಳಲ್ಲಿನ ಶಿಲ್ಕುಗಳ ಸ್ಪಷ್ಟ ಚಿತ್ರಣವನ್ನು ಹೊರತರಬೇಕೆಂದು ಸೂಚಿಸಿತು;

- ವಾಸ್ತವ ನಗದು ಹರಿವನ್ನು ಆಧರಿಸಿ 3ನೇ ಮತ್ತು 4ನೇ ತ್ರೈಮಾಸಿಕದಲ್ಲಿ ಮಾತ್ರ ಆಯವ್ಯಯ ಸಾಲಗಳಿಗೆ ಮೊರೆ ಹೋಗುವ ಪದ್ಧತಿಯನ್ನು ಮುಂದುವರೆಸುವುದು;

- ಸಹಕಾರ ವಲಯವೂ ಸೇರಿದಂತೆ ವಿವಿಧ ವಲಯಗಳಿಗೆ ನೀಡಲಾಗಿರುವ ಸಾಲಗಳ ಮರುಪಾವತಿಯ ಸ್ಥಿತಿಗತಿಗಳನ್ನು ಪರಿಶೀಲಿಸುವ ಮೂಲಕ ಬಂಡವಾಳ ಸ್ವೀಕೃತಿಗಳನ್ನು ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳಬೇಕು;

- ಬ್ಯಾಂಕುಗಳಲ್ಲಿನ ಸರ್ಕಾರಿ ಹಣದ ಠೇವಣಿಗಳನ್ನು ನಿರ್ವಹಿಸಲು ಆರ್ಥಿಕ ಇಲಾಖೆಯು ನೀಡಿರುವ ವಿವರವಾದ ಸೂಚನೆಗಳನ್ನು ಇಲಾಖೆಗಳು ತಪ್ಪದೇ ಪಾಲಿಸಬೇಕು;

- ಹೊಸ ಬಂಡವಾಳ ಪ್ರಾಯೋಜನೆಗಳನ್ನು ಅನುಮೋದಿಸಲು ಸರಾಸರಿ ಆಯವ್ಯಯ ಗುಣಾಕಾರ ಅಪವರ್ತನವು ಮೂರು ವರ್ಷಗಳಲ್ಲೇ ಉಳಿಯುವಂತೆ ವ್ಯವಸ್ಥೆಯೊಂದನ್ನು ರೂಪಿಸಬೇಕು. ಒಂದು ನಿರ್ದಿಷ್ಟ ಗಾತ್ರಕ್ಕಿಂತ ಹೆಚ್ಚಿರುವ ಎಲ್ಲಾ ಹೊಸ ಬಂಡವಾಳ ಕಾರ್ಯಕ್ರಮಗಳು ಮತ್ತವುಗಳ ಹಣಕಾಸಿನ ಯೋಜನೆಯನ್ನು ಅವುಗಳ ಪರಿಣಾಮಕಾರಿತ್ವ ಮತ್ತು ಸಾಮರ್ಥ್ಯದ ದೃಷ್ಟಿಯಿಂದ ಪರಿಶೀಲಿಸುವ ಸಾರ್ವಜನಿಕ ಹೂಡಿಕೆ ಸಮಿತಿಯೊಂದನ್ನು ಸೃಷ್ಟಿಸುವ ಪ್ರಸ್ತಾವನೆಯೊಂದನ್ನು ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆಯು ತಯಾರಿಸುವುದು;

- ಸಾರ್ವಜನಿಕರಿಗೆ ತಕ್ಷಣ ಉಪಯೋಗ ಲಭಿಸುವಂತೆ ಮಾಡಲು ಲಭ್ಯವಿರುವ ನಿಧಿಗಳನ್ನು ಪೂರ್ಣಾವಸ್ಥೆಯ ಹಂತದಲ್ಲಿರುವ ಯೋಜನೆಗಳ ಬಳಕೆಗೆ ಆದ್ಯತೀಕರಿಸಬೇಕು;

- ತೆರಿಗೆ ಆಡಳಿತದಲ್ಲಿನ ದಕ್ಷತೆ ಮತ್ತು ಮೇಲ್ವಿಚಾರಣೆಯ ಹೆಚ್ಚಳ ಮತ್ತು ವಿವಿಧ ಯೋಜನೆಗಳಡಿ ಲಭ್ಯವಿರುವ ಕೇಂದ್ರ ಸರ್ಕಾರದ ನಿಧಿಗಳ ಹೆಚ್ಚಿನ ಬಳಕೆಯ ಮೂಲಕ ಸ್ವಂತ ರಾಜಸ್ವ ಸ್ವೀಕೃತಿಗಳನ್ನು ಸುಧಾರಿಸಲು ಪರಿಶ್ರಮವನ್ನು ಮುಂದುವರೆಸಬೇಕು; ಮತ್ತು

- ತೆರಿಗೆಯೇತರ ರಾಜಸ್ವಗಳಿಗೆ ದರಗಳನ್ನು ಪರಿಶೀಲಿಸಲು ಮತ್ತು ಸಾಧ್ಯವಾದಲ್ಲೆಲ್ಲಾ ಅವುಗಳನ್ನು ಸೂಚಿಸಂಪರ್ಕಗೊಳಿಸಬೇಕು.

2016–17ನೇ ವರ್ಷದ ಕೆಲವು ಮೇಲ್ಸ್ತರದ ವ್ಯವಹಾರಗಳನ್ನು ಪರಿಶೀಲಿಸಿದಾಗ ವಿತ್ತೀಯ ಕೊರತೆ ಮತ್ತು ಸಾರ್ವಜನಿಕ ಲೆಕ್ಕದಲ್ಲಿನ ಜವಾಬ್ದಾರಿಗಳು ವಿತ್ತೀಯ ನಿರ್ವಹಣೆಗಿಂತಲೂ ಕೆಲವು ಲೆಕ್ಕ ಹೊಂದಾಣಿಕೆಗಳಿಂದಾಗಿ ಬಾಧಿತವಾಗಿರುವುದು ಕಂಡುಬಂದಿದೆ. ಅಂತಹ ಹೊಂದಾಣಿಕೆಗಳನ್ನು ಸ್ಥೂಲವಾಗಿ ಕೆಳಗೆ ಚರ್ಚಿಸಲಾಗಿದೆ:

- ಅಬಕಾರಿ ಸನ್ನದು ಶುಲ್ಕ, ಮೋಟಾರು ವಾಹನ ತೆರಿಗೆ ಮತ್ತು ನ್ಯಾಯಾಂಗೇತರ ಮುದ್ರಾಂಕ ಸುಂಕಗಳ ಮೇಲೆ ಸಂಗ್ರಹಿಸಿದ ಮೂಲಸೌಲಭ್ಯ ಉಪಕರವನ್ನು ಮೂಲಸೌಲಭ್ಯ ಉಪಕ್ರಮನಿಧಿ (ಐಐಎಫ್) ಬೆಂಗಳೂರು ಮೆಟ್ರೋರೈಲು ನಿಗಮ ನಿಯಮಿತ ನಿಧಿ (ಬಿಎಮ್ಆರ್‌ಸಿಎಲ್) ಮತ್ತು ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿ (ಸಿಎಮ್ಆರ್‌ಆರ್‌ಡಿ) ನಿಧಿಗಳಿಗೆ ಕ್ರಮವಾಗಿ ಶೇಕಡ 57, 28 ಮತ್ತು 15ರ ಅನುಪಾತದಲ್ಲಿ ಹಂಚಿಕೆ ಮಾಡಬೇಕು. 2016–

17ರಲ್ಲಿ ಪ್ರಾರಂಭದಲ್ಲಿ ಸಂಚಿತ ನಿಧಿಯಡಿ ಲೆಕ್ಕ ಮಾಡಿದ ₹951.53 ಕೋಟಿಗಳ ಮೂಲಸೌಲಭ್ಯ ಉಪಕರವನ್ನು ಸಾರ್ವಜನಿಕ ಲೆಕ್ಕಗಳಲ್ಲಿ ನಿರ್ವಹಿಸುವ ಐಐಎಫ್ (₹542.36 ಕೋಟಿ), ಬಿಎಮ್‌ಆರ್‌ಸಿಎಲ್ (₹266.43 ಕೋಟಿ) ಮತ್ತು ಸಿಎಮ್‌ಆರ್‌ಆರ್‌ಡಿ (₹142.74 ಕೋಟಿ) ಗಳಿಗೆ ಹೊಂದಾಣಿಕೆ ಮಾಡಲಾಯಿತು. ಮೂಲಸೌಲಭ್ಯ ಕಾಮಗಾರಿಗಳಿಗೆ ವೆಚ್ಚವನ್ನು ನಿಧಿಯಿಂದ ಭರಿಸಬೇಕಿದ್ದರೂ, ವೆಚ್ಚವನ್ನು ನಿಧಿಯಡಿ ತೋರಿಸದಿದ್ದುದು ರಾಜಸ್ವ ಮತ್ತು ಬಂಡವಾಳ ವೆಚ್ಚಗಳನ್ನು ಅಧಿಕವಾಗಿ ಹೇಳುವಲ್ಲಿ ಪರಿಣಮಿಸಿತು;

ಮುಂದುವರೆದು, 2005ರಲ್ಲಿ ಏಕರೂಪ ಮೌಲ್ಯಾಧಾರಿತ ತೆರಿಗೆ (ವ್ಯಾಟ್) ಪ್ರಾರಂಭವಾದ ಬಳಿಕ ಮೂಲಸೌಲಭ್ಯ ಉಪಕರದ ವಿಧಿಸುವಿಕೆಯನ್ನು ನಿಲ್ಲಿಸಲಾಯಿತು ಮತ್ತು ರಾಜ್ಯ ಸರ್ಕಾರವು ರಾಜ್ಯದ ಸಾಮಾನ್ಯ ರಾಜಸ್ವದಿಂದ ವಂತಿಗೆ ನೀಡಲು ನಿರ್ಧರಿಸಿತು. 2016–17ರಲ್ಲಿ ರಾಜ್ಯದ ಸಾಮಾನ್ಯ ರಾಜಸ್ವದಿಂದ ಐಐಎಫ್ (₹2,092 ಕೋಟಿ), ಬಿಎಮ್‌ಆರ್‌ಸಿಎಲ್ ನಿಧಿ (₹1,027 ಕೋಟಿ) ಮತ್ತು ಸಿಎಮ್‌ಆರ್‌ಆರ್‌ಡಿ ನಿಧಿಗೆ (₹551 ಕೋಟಿ) ಒಟ್ಟು ₹3,670 ಕೋಟಿಗಳನ್ನು ಸಾರ್ವಜನಿಕ ಲೆಕ್ಕಗಳ ನಿಧಿಯ ಲೆಕ್ಕಗಳಡಿ ಯಾವುದೇ ಹೂಡಿಕೆಗಳಿಲ್ಲದೆ ವರ್ಗಾಯಿಸಲಾಯಿತು. ಸಾಮಾನ್ಯ ರಾಜಸ್ವದಿಂದಾದ ವರ್ಗಾವಣೆಗಳು ರಾಜಸ್ವ ವೆಚ್ಚ ಮತ್ತು ವಿತ್ತೀಯ ಕೊರತೆಗಳನ್ನು ಅಧಿಕವಾಗಿ ಹೇಳುವುದಲ್ಲದೇ ರಾಜಸ್ವ ಹೆಚ್ಚಳವನ್ನು ಕಡಿಮೆ ತೋರಿಸುವ ಪರಿಣಾಮವನ್ನು ಹೊಂದಿತ್ತು. ಇನ್ನಿತರ ವಿವರಗಳು ವರದಿಯ **ಕಂಡಿಕೆ 1.9.4**ರಲ್ಲಿ ಲಭ್ಯವಿದೆ;

- ರಾಜ್ಯ ನಗರ ಸಾರಿಗೆ ನಿಧಿಯು(ಎಸ್‌ಯುಟಿಎಫ್) ಆಯವ್ಯಯ ಅನುದಾನ, ಮೋಟಾರು ವಾಹನ ತೆರಿಗೆ ಮೇಲಿನ ಉಪಕರ ಮತ್ತು ಆಸ್ತಿ ತೆರಿಗೆ ಮೇಲಿನ ಉಪಕರ ಎಂಬ ಮೂರು ಆಕರಗಳಿಂದ ತುಂಬಲ್ಪಡುತ್ತದೆ. 2016–17ರಲ್ಲಿ ಮೋಟಾರು ವಾಹನ ತೆರಿಗೆಯಿಂದ ₹43.82 ಕೋಟಿ, ಸಾಮಾನ್ಯ ಮೀಸಲಿನಿಂದ ₹13.49 ಕೋಟಿ ಮತ್ತು ಆಸ್ತಿ ತೆರಿಗೆ ಮೇಲಿನ ಉಪಕರದಿಂದ ₹3.59 ಕೋಟಿಗಳ ಒಟ್ಟು ₹60.90 ಕೋಟಿಗಳ ಉಪಕರವನ್ನು ಸಂಚಿತ ನಿಧಿಯಿಂದ ಎಸ್‌ಯುಟಿಎಫ್‌ಗೆ ವರ್ಗಾಯಿಸಲಾಯಿತು. ಆದರೆ, ನಿಧಿಯಿಂದ ವೆಚ್ಚವನ್ನು ಭರಿಸಲಿಲ್ಲವಾದ್ದರಿಂದ ವಿತ್ತೀಯ ಕೊರತೆಯನ್ನು ಅಧಿಕವಾಗಿ ಹೇಳುವಲ್ಲಿ ಪರಿಣಮಿಸಿತು. ನಿಧಿ ಲೆಕ್ಕಗಳ ಬಗ್ಗೆ ಇನ್ನಿತರ ವಿವರಗಳನ್ನು ಈ ವರದಿಯ **ಕಂಡಿಕೆ 1.9.4**ರಲ್ಲಿ ವಿವರಿಸಲಾಗಿದೆ;

- ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಅನುದಾನಗಳನ್ನು ಸಂಚಿತ ನಿಧಿಯಡಿ ಕಾರ್ಯಕಾರಿ ಲೆಕ್ಕಶೀರ್ಷಿಕೆಯಡಿ ಬಿಡುಗಡೆಗೊಳಿಸಲಾಗುತ್ತದೆ ಮತ್ತು ಸಾರ್ವಜನಿಕ ಲೆಕ್ಕದಡಿ ಲೆಕ್ಕ ಹಾಕಲಾಗುತ್ತದೆ. ಪ್ರತಿ ವರ್ಷ ಮಾರ್ಚ್ ಅಂತ್ಯಕ್ಕೆ ಜಿಲ್ಲಾ ಪಂಚಾಯತ್ ನಿಧಿ II ಲೆಕ್ಕ ಮತ್ತು ತಾಲ್ಲೂಕು ಪಂಚಾಯತ್ ನಿಧಿ II ರಡಿ ಲಭ್ಯವಿರುವ ಶಿಲ್ಕುಗಳನ್ನು ಸಂಚಿತ ನಿಧಿಗೆ ಮುಂಬರುವ ಎರಡನೇ ಆರ್ಥಿಕ ವರ್ಷದಲ್ಲಿ ಹಿಂದಕ್ಕೆ ಬರೆಯಬೇಕು. 2016–17ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ನಿಧಿ II ರಡಿ 2014–15ನೇ ಸಾಲಿನ ₹565.77 ಕೋಟಿ ಮತ್ತು ತಾಲ್ಲೂಕು ಪಂಚಾಯತ್ ನಿಧಿ II ರಡಿ ₹520.51 ಕೋಟಿಗಳನ್ನೊಳಗೊಂಡ ಒಟ್ಟು ₹1,086.28 ಕೋಟಿಗಳ ಹಿಂಬರೆಯುವಿಕೆಯನ್ನು, ಅಧಿಕ ಸಂದಾಯದ ವಸೂಲಾತಿಯೆಂದು ಪರಿಗಣಿಸುವ ಮೂಲಕ ವೆಚ್ಚವನ್ನು ಮರೆಮಾಡುವುದಕ್ಕೆಡೆ ಮಾಡಿತು. ಈ ಮೊತ್ತಗಳ ಹಿಂಬರೆಯುವಿಕೆಯು ಅಷ್ಟರ ಮಟ್ಟಿಗೆ ರಾಜಸ್ವ ಹೆಚ್ಚಳವನ್ನು ಅಧಿಕವಾಗಿ ತೋರಿಸುವುದರೊಂದಿಗೆ ವಿತ್ತೀಯ ಕೊರತೆಯನ್ನು ಕಡಿಮೆಯಾಗಿಸಿತು ಹಾಗೂ ಸಾರ್ವಜನಿಕ ಲೆಕ್ಕಗಳಲ್ಲಿ ಸರ್ಕಾರದ ಜವಾಬ್ದಾರಿಗಳು ಸಮಾನವಾದ ಮೊತ್ತದಷ್ಟು ಕಡಿಮೆಯಾದವು; ಮತ್ತು

- 2016–17ರಲ್ಲಿ 2515–ನೀರು ಸರಬರಾಜು ಮತ್ತು ನೈರ್ಮಲ್ಯ ಪ್ರಧಾನ ಲೆಕ್ಕಶೀರ್ಷಿಕೆಯಡಿ ಒಳ ಶೀರ್ಷಿಕೆ 911–ಹಿಂದಿನ ವರ್ಷಗಳ ಅಧಿಕಪಾವತಿಗಳ ವಸೂಲಾತಿಯ ಮೂಲಕ ₹612.04 ಕೋಟಿಗಳ ಮೊತ್ತವನ್ನು ಸಂಚಿತ ನಿಧಿಗೆ ಜಮೆ ಮಾಡಲಾಯಿತು. ಇದು ಇಲಾಖೆಯ ಬ್ಯಾಂಕು ಖಾತೆಯಲ್ಲಿಟ್ಟ ಹಣದ ಮೇಲೆ ಗಳಿಸಿದ ಬಡ್ಡಿಯನ್ನೂ ಕೂಡಿತ್ತು. ಇದನ್ನು ರಾಜ್ಯದ ಸಂಚಿತ ನಿಧಿಯಿಂದ ಬಿಡುಗಡೆಯಾದ ವರ್ಷದಲ್ಲಿ ವೆಚ್ಚವೆಂದು ಪರಿಗಣಿಸಲಾಗಿತ್ತು. ಈ

ಬಿಡುಗಡೆಗಳು ಆಯಾ ವರ್ಷಗಳಲ್ಲಿ ರಾಜಸ್ವ ವೆಚ್ಚವನ್ನು ಮತ್ತು ವಿತ್ತೀಯ ಕೊರತೆಯನ್ನು ಅಧಿಕವಾಗಿ ಹೇಳುವಲ್ಲಿ ಪರಿಣಮಿಸಿತು. ಈ ಹಣವನ್ನು ಪ್ರಸಕ್ತ ಸಾಲಿನಲ್ಲಿ ಸಂಚಿತ ನಿಧಿಗೆ ಪುನ: ಜಮೆ ಮಾಡಿದ್ದರಿಂದ ವೆಚ್ಚವು ಸಂಕುಚಿತಗೊಂಡು ರಾಜಸ್ವ ಹೆಚ್ಚಳವು ಅಧಿಕವಾಗಿ ಹೇಳುವುದರೊಂದಿಗೆ ವಿತ್ತೀಯ ಕೊರತೆಯನ್ನು ಸಮಪ್ರಮಾಣದಲ್ಲಿ ಕಡಿಮೆ ಹೇಳುವಂತಾಯಿತು. ಇನ್ನಿತರ ವಿವರಗಳು ಈ ವರದಿಯ **ಕಂಡಿಕೆ 2.7.4**ರಲ್ಲಿ ಲಭ್ಯವಿದೆ.

### 1.1.3 ಪ್ರಮುಖ ವಿತ್ತೀಯ ವ್ಯತ್ಯಯಗಳು

ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮದ ಗುರಿಯಂತೆ ಮತ್ತು ಆಯವ್ಯಯದಲ್ಲಿ ಒದಗಿಸಿದ ಪ್ರಮುಖ ವಿತ್ತೀಯ ವ್ಯತ್ಯಯಗಳನ್ನು ಕೆಳಗಿನ **ಕೋಷ್ಟಕ 1.3**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.3: ಪ್ರಮುಖ ವಿತ್ತೀಯ ವ್ಯತ್ಯಯಗಳು**

| | 2016–17 | | | |
|---|---|---|---|---|
| ವಿತ್ತೀಯ ವ್ಯತ್ಯಯಗಳು | ವಿತ್ತೀಯ ಸುಧಾರಣಾ ಅಧಿನಿಯಮದಲ್ಲಿ ನಿಗದಿಪಡಿಸಿದ ಗುರಿಗಳು | ಆಯವ್ಯಯದಲ್ಲಿ ಸೂಚಿಸಿದ ಗುರಿಗಳು | ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿನ ಪ್ರಕ್ಷೇಪಗಳು 2013–17 | ವಾಸ್ತವಗಳು (2016–17) |
| ವಿತ್ತೀಯ ಕೊರತೆ (–)/ ಹೆಚ್ಚಳ (+) (ಕೋಟಿಗಳಲ್ಲಿ) | – | 522 | 13,665 | 1,293 |
| ವಿತ್ತೀಯ ಕೊರತೆ/ರಾಒಆಂಉ(ಶೇ.) | 3.00 | 2.12* | 3.00 | 2.57 |
| ಸರ್ಕಾರದ ಒಟ್ಟು ಬಾಕಿ ಇರುವ ಋಣಕ್ಕೆ ರಾಒಆಂಉನ ಅನುಪಾತ (ಶೇಕಡ) | 25.00 | 17.22* | 22.62 | 19.81 |

** ಆಯವ್ಯಯ ಅಂದಾಜುಗಳಲ್ಲಿ ತೆಗೆದುಕೊಳ್ಳಲಾದ ರಾಒಆಂಉದ ಅಂಕಿಗಳು ₹12,11,080 ಕೋಟಿಗಳಿದ್ದು, ಇದು ಹಣಕಾಸು ಸಚಿವಾಲಯ, ಭಾರತ ಸರ್ಕಾರ ಪತ್ರ ದಿನಾಂಕ 29ನೇ ಮಾರ್ಚ್ 2016ರಲ್ಲಿ ತಿಳಿಸಿದಂತೆ ₹11,17,334 ಕೋಟಿಗೆ ಪರಿಷ್ಕೃತಗೊಂಡಿದೆ.*

2016–17ನೇ ವರ್ಷದಲ್ಲಿ ರಾಜಸ್ವ ಲೆಕ್ಕದಲ್ಲಿ ಹೆಚ್ಚಳವಿದ್ದು (₹1,293 ಕೋಟಿ) ಇದು ಆಯವ್ಯಯದ ಪ್ರಕ್ಷೇಪಣೆಗಿಂತ ₹771 ಕೋಟಿಗಳಷ್ಟು ಹೆಚ್ಚಾಗಿದ್ದು, ಮಧ್ಯಂತರ ವಿತ್ತೀಯ ಯೋಜನೆ ಪ್ರಕ್ಷೇಪಣೆಗಿಂತಲೂ (2013–17) ₹12,372 ಕೋಟಿಯಷ್ಟು ಕಡಿಮೆಯಾಗಿತ್ತು. ಒಟ್ಟು ಬಾಕಿ ಇರುವ ಋಣ ಮತ್ತು ರಾಒಆಂಉದ ಅನುಪಾತವು ಆಯವ್ಯಯ ಅಂದಾಜುಗಳಿಗಿಂತ ಶೇಕಡ 2.59ರಷ್ಟು ಹೆಚ್ಚಾಗಿದೆ ಮತ್ತು ವಿತ್ತೀಯ ಕೊರತೆ ಮತ್ತು ರಾಒಆಂಉದ ಅನುಪಾತವು ಶೇಕಡ 2.57ರಷ್ಟಿದ್ದು, ಇದು ಆಯವ್ಯಯ ಅಂದಾಜಿಗಿಂತಲೂ ಶೇಕಡ 0.45ರಷ್ಟು ಹೆಚ್ಚಾಗಿದೆ. ಇದು ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯಡಿ ನಿಗದಿಪಡಿಸಿದ ಗುರಿಯೊಳಗೆ ಇದೆ.

### 1.1.4 ಆಯವ್ಯಯ ಅಂದಾಜುಗಳು ಮತ್ತು ವಾಸ್ತವಗಳು 2016–17

ರಾಜ್ಯ ಸರ್ಕಾರವು ಮಂಡಿಸುವ ಆಯವ್ಯಯವು ನಿರ್ದಿಷ್ಟ ವಿತ್ತ ವರ್ಷದ ಆದಾಯ ಮತ್ತು ವೆಚ್ಚಗಳ ಅಂದಾಜುಗಳನ್ನು ನಿರೂಪಿಸುತ್ತದೆ. ವಿತ್ತೀಯ ಕಾರ್ಯನೀತಿ ಮತ್ತು ಸಮಗ್ರ ಆರ್ಥಿಕ ನಿರ್ವಹಣೆಯ ದೃಷ್ಟಿಯಲ್ಲಿ, ಆದಾಯ ಮತ್ತು ವೆಚ್ಚಗಳ ಅಂದಾಜುಗಳ ಖಚಿತತೆಯ ಪ್ರಾಮುಖ್ಯತೆಯನ್ನು ಒಟ್ಟಾರೆ ಆರ್ಥಿಕ ನಿರ್ವಹಣೆಗೆ, ವಿತ್ತೀಯ ಕಾರ್ಯಸೂಚಿಗಳ ಪರಿಣಾಮಕಾರಿ ಅನುಷ್ಠಾನದ ಸಂದರ್ಭದಲ್ಲಿ ಬಹುಮಟ್ಟಿಗೆ ಅಂಗೀಕರಿಸಲಾಗಿದೆ. ಆಯವ್ಯಯದ ಅಂದಾಜುಗಳಿಂದ ಆದಂತಹ ಮಾರ್ಗಪಲ್ಲಟಗಳು ಉದ್ದೇಶಿತ ವಿತ್ತೀಯ ಗುರಿಗಳನ್ನು ಸಾಧಿಸಲಾಗದಿರುವುದನ್ನು ಮತ್ತು ವಿತ್ತೀಯ ಭರವಸೆಗಳು ಈಡೇರದಿರುವುದನ್ನು ಸೂಚಿಸುತ್ತವೆ. ಇವು ಸರ್ಕಾರದ ನಿಯಂತ್ರಣದಲ್ಲಿರುವ ಮತ್ತು ನಿಯಂತ್ರಣ ಮೀರಿದ ಕೆಲವು ಅಂಶಗಳಿಂದ ಉಂಟಾಗುತ್ತವೆ.

2016–17ರಲ್ಲಿ ಕೆಲವು ಪ್ರಮುಖ ವಿತ್ತೀಯ ಪ್ರಮಿತಿಗಳ ಆಯವ್ಯಯ ಅಂದಾಜುಗಳು ಮತ್ತು ವಾಸ್ತವಗಳನ್ನು **ನಕ್ಷೆ 1.1** ತೋರಿಸುತ್ತದೆ.

**ನಕ್ಷೆ 1.1: ಆಯ್ದ ವಿತ್ತೀಯ ಪ್ರಮಿತಿಗಳು – 2016–17ರ ಆಯವ್ಯಯ ಅಂದಾಜುಗಳಿಗೆ ಪ್ರತಿಯಾಗಿ ವಾಸ್ತವಗಳು**




*ಆಕರ: ವಾರ್ಷಿಕ ಹಣಕಾಸು ತಃಖ್ತೆಗಳು ಮತ್ತು ಹಣಕಾಸು ಲೆಕ್ಕಗಳು.*

** ಆಯವ್ಯಯ ಹೊರಗಿನ ಸಾಲಗಳ ಮೇಲಿನ ಬಡ್ಡಿಯನ್ನು ಹೊರತುಪಡಿಸಿ.*

ಆಯವ್ಯಯ ಅಂದಾಜುಗಳು ₹1,30,758 ಕೋಟಿಗಳ ರಾಜಸ್ವ ಸ್ವೀಕೃತಿಗಳನ್ನು ಅಂದಾಜು ಮಾಡಿತ್ತು. ಇದಕ್ಕೆ ಪ್ರತಿಯಾಗಿ ವಾಸ್ತವ ಸಂಗ್ರಹವು ₹1,33,214 ಕೋಟಿಗಳಾಗಿದ್ದು, ₹2,456 ಕೋಟಿಗಳಷ್ಟು ಹೆಚ್ಚಾಗಿದ್ದಿತು (ಶೇಕಡ ಎರಡು). ಹಾಗೂ ಈ ಹೆಚ್ಚಳವು ಮುಖ್ಯವಾಗಿ ಭಾರತ ಸರ್ಕಾರದಿಂದ ಸಹಾಯಾನುದಾನಗಳು ಮತ್ತು ವಂತಿಗೆ (₹2,009 ಕೋಟಿ) ಮತ್ತು ಕೇಂದ್ರ ತೆರಿಗೆ ವರ್ಗಾವಣೆ (₹1,781 ಕೋಟಿ) ಗಳಲ್ಲಿ ಉಂಟಾಗಿದ್ದು, ಸ್ವಂತ ತೆರಿಗೆ ಆದಾಯದಲ್ಲಿ (₹908 ಕೋಟಿ) ಮತ್ತು ತೆರಿಗೆಯೇತರ ಆದಾಯದಲ್ಲಿ (₹426 ಕೋಟಿ) ಉಂಟಾದ ಇಳಿಕೆಯಿಂದ ಉತ್ತಾರವಾಗಿದೆ.

ರಾಜಸ್ವ ವೆಚ್ಚವು ₹1,30,236 ಕೋಟಿಗಳು ಎಂದು ಪ್ರಕ್ಷೇಪಿಸಿದ್ದು, ವಾಸ್ತವ ವೆಚ್ಚವು ₹1,31,921 ಕೋಟಿಗಳಾಗಿದ್ದು ವೆಚ್ಚದಲ್ಲಿನ ಹೆಚ್ಚಳ ₹1,685 ಕೋಟಿಗಳಷ್ಟಿತ್ತು (ಶೇಕಡ ಒಂದು) ವಾಸ್ತವ ವೆಚ್ಚದಲ್ಲಿನ ಹೆಚ್ಚಳವು ಆರ್ಥಿಕ ಸೇವೆಗಳಲ್ಲಿ (₹2,144 ಕೋಟಿ) ಮತ್ತು ಸಾಮಾಜಿಕ ಸೇವೆಗಳಲ್ಲಿ (₹3,589 ಕೋಟಿ) ಉಂಟಾಗಿದ್ದು ಸಹಾಯಾನುದಾನ ಮತ್ತು ವಂತಿಗೆಗಳು (₹294 ಕೋಟಿ) ಮತ್ತು ಸಾಮಾನ್ಯ ಸೇವೆಗಳಲ್ಲಿ (₹3,754 ಕೋಟಿ) ಇಳಿಕೆಯಿಂದ ಉತ್ತಾರವಾಗಿದೆ. ಉಳಿದ ವಿವರಗಳು ಈ ವರದಿಯ **ಅಧ್ಯಾಯ–II**ರಲ್ಲಿ ಲಭ್ಯವಿದೆ.

ಬಡ್ಡಿ ಪಾವತಿಗಳನ್ನು ₹12,672 ಕೋಟಿಗಳು ಎಂದು ಅಂದಾಜಿಸಲಾಗಿತ್ತು (ಆಯವ್ಯಯ ಹೊರಗಿನ ಸಾಲಗಳನ್ನು ಬಿಟ್ಟು – ಸರ್ಕಾರದ ಖಾತರಿಯ ಮೇಲೆ ಸಾರ್ವಜನಿಕ ಉದ್ದಿಮೆಗಳು ಮತ್ತು ವಿಶೇಷ ಉದ್ದೇಶ ಸಾಧನಗಳು ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳ ಋಣಸೇವೆಯು ಸರ್ಕಾರದ ಜವಾಬ್ದಾರಿಯಾಗಿ) ಈ ಸಾಲಗಳ ಮೇಲಿನ ಬಡ್ಡಿ ಪಾವತಿಯನ್ನು ಲೆಕ್ಕ ಶೀರ್ಷಿಕೆ 2049–ಬಡ್ಡಿ ಪಾವತಿಯಡಿ ತೋರಿಸಲಾಗುತ್ತಿದೆ. ವಾಸ್ತವ ವೆಚ್ಚವು ₹12,033 ಕೋಟಿಗಳು (ಆಯವ್ಯಯದ ಹೊರಗಿನ ಸಾಲ ₹817 ಕೋಟಿಗಳ ಹೊರತು ಪಡಿಸಿ) ಆಗಿದೆ. ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ 2002ರನ್ವಯ (28.02.2014ರಂದು ಪರಿಷ್ಕರಿಸಿದಂತೆ) ಆಯಾ ಸೇವಾ ಶೀರ್ಷಿಕೆಗಳಡಿ ದಾಖಲಿಸಲಾದ ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿಯನ್ನು ಸಹ ರಾಜ್ಯದ ಬಡ್ಡಿ ಜವಾಬ್ದಾರಿ ಎಂದು ಪರಿಗಣಿಸಬೇಕಾಗಿದೆ.

ರಾಜಸ್ವ ಸ್ವೀಕೃತಿಗಳ ಪ್ರಧಾನ ಆಕರವು ರಾಜ್ಯದ ಸ್ವಂತ ತೆರಿಗೆ ಆದಾಯವಾಗಿದ್ದು ಇದು ಶೇಕಡ 62ರಷ್ಟಿತ್ತು. 2016–17ರಲ್ಲಿ ತೆರಿಗೆಯೇತರ ಆದಾಯವೂ ಸೇರಿದಂತೆ ರಾಜ್ಯದ ಸ್ವಂತ ಸಂಪನ್ಮೂಲಗಳು ಸುಮಾರು ಶೇಕಡ 67ರಷ್ಟಿತ್ತು. ನಾಲ್ಕು ಪ್ರಮುಖ ತೆರಿಗೆ ಆದಾಯ ಶೀರ್ಷಿಕೆಗಳು ಮತ್ತು ಎರಡು

ತೆರಿಗೆಯೇತರ ಆದಾಯ ಶೀರ್ಷಿಕೆಗಳ ಆಯವ್ಯಯ ಅಂದಾಜುಗಳ ಮತ್ತು ವಾಸ್ತವಗಳ ನಡುವಿನ ವ್ಯತ್ಯಾಸಗಳನ್ನು ಕಾರಣಗಳೊಂದಿಗೆ **ಕೋಷ್ಟಕ 1.4**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.4: ಆಯವ್ಯಯ ಮತ್ತು ವಾಸ್ತವಗಳ ನಡುವಿನ ವ್ಯತ್ಯಾಸ**

**(ಕೋಟಿ ರೂಪಾಯಿಗಳಲ್ಲಿ)**

| ಆದಾಯದ ಮೂಲ | ಆಯವ್ಯಯ ಅಂದಾಜು | ವಾಸ್ತವ | ಹೆಚ್ಚಳ (+) ಇಳಿಕೆ(–) | ಮಧ್ಯಮಾವಧಿ ವಿತ್ತೀಯ ಯೋಜನೆ 2017–21ರಂತೆ ವ್ಯತ್ಯಯಕ್ಕೆ ಕಾರಣಗಳು |
|---|---|---|---|---|
| ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಿನ ತೆರಿಗೆಗಳು | 46,504 | 46,105 | (–) 399 | ಪ್ರಸಕ್ತ ಸಾಲಿನಲ್ಲಿ ನೋಟು ಅಮಾನ್ಯೀಕರಣದಿಂದಾದ ಆರ್ಥಿಕ ಪರಿಣಾಮದಿಂದ ಸಂಗ್ರಹಣೆಯಲ್ಲಿ ಇಳಿಕೆಯಾಗಿದೆ. |
| ರಾಜ್ಯ ಅಬಕಾರಿ | 16,510 | 16,484 | (–) 26 | ರಾಜ್ಯ ಅಬಕಾರಿಯು ರಾಜ್ಯದ ಸ್ವಂತ ತೆರಿಗೆ ರಾಜಸ್ವಕ್ಕೆ ಎರಡನೇ ಬಹುದೊಡ್ಡ ಅಂಶದಾನಿಯಾಗಿದೆ. 2016–17ರಲ್ಲಿ ಆಯವ್ಯಯ ಗುರಿಯನ್ನು ಬಹುಪಾಲು ಸಾಧಿಸಲಾಯಿತು. |
| ಮುದ್ರಾಂಕ ಮತ್ತು ನೋಂದಣಿ | 9,100 | 7,806 | (–) 1,294 | ಮುದ್ರಾಂಕ ಮತ್ತು ನೋಂದಣಿ ರಾಜಸ್ವ ಸಂಗ್ರಹಣೆಯ ಮೇಲೆ ನೋಟು ಅಮಾನ್ಯೀಕರಣವು ಬಹುವಾಗಿ ಪ್ರಭಾವ ಬೀರಿತ್ತು. |
| ಮೋಟಾರು ವಾಹನಗಳ ಮೇಲಿನ ತೆರಿಗೆ | 5,160 | 5,594 | 434 | ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ಸಂಗ್ರಹಣೆಯಲ್ಲಿ ಆರೋಗ್ಯಕರ ಬೆಳವಣಿಗೆಯಾಗಿತ್ತು. ಆಯವ್ಯಯ ಗುರಿಗಳನ್ನು ಮೀರಿಸಲಾಯಿತು. |
| ಭಾರಿ ಮತ್ತು ಸಣ್ಣ ಖನಿಜಗಳ ಮೇಲಿನ ರಾಜಧನ | 2,137 | 2,229 | 92 | ಆಯವ್ಯಯ ಗುರಿಗಳನ್ನು ಬಹುಪಾಲು ಸಾಧಿಸಲಾಯಿತು. |
| ಬಡ್ಡಿ ಸ್ವೀಕೃತಿಗಳು | 1,211 | 1,200 | (–) 11 | ಬಡ್ಡಿಗಳು ಪ್ರಧಾನವಾಗಿ ಸರ್ಕಾರ ನೀಡಿದ ಸಾಲಗಳು ಮತ್ತು ರಾಜ್ಯದ ಹೆಚ್ಚುವರಿ ನಗದು ಶಿಲ್ಕನ್ನು ಭಾರತ ಸರ್ಕಾರದ ಟ್ರೆಜರಿ ಬಿಲ್ಲುಗಳಲ್ಲಿ ಹೂಡಿಕೆಯಿಂದ ಗಳಿಸಿದ ಬಡ್ಡಿಯಾಗಿದ್ದವು. |

*ಆಕರ: ಆಯವ್ಯಯ ದಾಖಲೆಗಳು 2016–17.*

### 1.1.5 ಮಹಿಳಾ ಉದ್ದೇಶಿತ ಆಯವ್ಯಯ

ರಾಜ್ಯದ ಮಹಿಳಾ ಉದ್ದೇಶಿತ ಆಯವ್ಯಯವು ಸಮಗ್ರ ಆಯವ್ಯಯದೊಳಗೆ ಮಹಿಳೆಯರಿಗಾಗಿ ಪೂರ್ಣವಾದ ಅಥವಾ ಭಾಗಶಃ ಸೌಲಭ್ಯ ದೊರಕಿಸಿಕೊಡಲು ರೂಪಿಸಿದ ಕಾರ್ಯಕ್ರಮಗಳ ವೆಚ್ಚದ ಪ್ರಸ್ತಾವನೆಯನ್ನು ಸೂಚಿಸುತ್ತದೆ. ರಾಜ್ಯ ಸರ್ಕಾರವು ಮಹಿಳಾ ಉದ್ದೇಶಿತ ಆಯವ್ಯಯ ಕೋಶವನ್ನು ಸ್ಥಾಪಿಸಿದ್ದು (ಜನವರಿ 2007), 2007–08ರಿಂದ ಮಹಿಳಾ ಉದ್ದೇಶಿತ ಆಯವ್ಯಯವನ್ನು ಪ್ರಾರಂಭಿಸಿತು. ಮಹಿಳಾ ಉದ್ದೇಶಿತ ಆಯವ್ಯಯದಲ್ಲಿನ ವರ್ಷವಾರು ಹಂಚಿಕೆಗಳನ್ನು **ಕೋಷ್ಟಕ 1.5**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5: 2012–13 ರಿಂದ 2016–17ರಲ್ಲಿ ಮಹಿಳಾ ಉದ್ದೇಶಿತ ಆಯವ್ಯಯದ ಹಂಚಿಕೆಗಳು**

**(ಕೋಟಿ ರೂಪಾಯಿಗಳಲ್ಲಿ)**

| ವರ್ಷ | ವರ್ಗವಾರು ಆಯವ್ಯಯ | | | ವರ್ಗವಾರು ವೆಚ್ಚ | | | ಬೇಡಿಕೆಗಳ ವ್ಯಾಪ್ತಿ |
|---|---|---|---|---|---|---|---|
| | ವರ್ಗ ಎ* | ವರ್ಗ ಬಿ^ | ಒಟ್ಟು | ವರ್ಗ ಎ* | ವರ್ಗ ಬಿ^ | ಒಟ್ಟು | |
| **2012–13** | 1,509.36 | 44,647.63 | 46,156.79 | 2,643.91 | 41,026.57 | 43,670.48 | 27 |
| **2013–14** | 1,915.30 | 55,032.21 | 56,947.51 | 2,541.78 | 47,679.24 | 50,221.02 | 28 |
| **2014–15** | 3,684.91 | 66,615.81 | 70,300.72 | 3,513.71 | 50,912.24 | 54,425.95 | 28 |
| **2015–16** | 5,617.10 | 55,834.26 | 61,451.36 | 5,135.04 | 58,119.33 | 63,254.37 | 27 |
| **2016–17** | 5,091.07 | 61,603.40 | 66,694.47 | 5,055.10# | 61,031.79# | 66,086.89# | 27 |

** ಹಂಚಿಕೆಯ ಶೇಕಡ 100ರಷ್ಟನ್ನು ಮಹಿಳೆಯರ ಸೌಲಭ್ಯಕ್ಕಾಗಿ ರೂಪಿಸಲಾಗಿರುವ ಯೋಜನೆಗಳಿಗೆ ಅನ್ವಯ.*
*^ ಕನಿಷ್ಠ ಶೇಕಡ 30ರಷ್ಟು ಮೊತ್ತವು ಮಹಿಳೆಯರ ಸೌಲಭ್ಯಕ್ಕಾಗಿ ರೂಪಿಸಲಾಗಿರುವ ಯೋಜನೆಗಳಿಗೆ ಆಯವ್ಯಯ ಹಂಚಿಕೆಗಳು.*
*# 2016–17 ಅಂಕಿಗಳು ಪರಿಷ್ಕೃತ ಅಂದಾಜುಗಳ ಅಂಕಿಗಳಾಗಿವೆ ಮತ್ತು ವಾಸ್ತವ ಅಂಕಿಗಳಲ್ಲ.*

2016–17ರಲ್ಲಿ ಎ ಮತ್ತು ಬಿ ವರ್ಗಗಳ ಅಡಿಯಲ್ಲಿ 721 ಯೋಜನೆಗಳಿದ್ದು, ಇದರಲ್ಲಿ 57 ಯೋಜನೆಗಳು ಎ ವರ್ಗದಲ್ಲಿ ಮತ್ತು 664 ಯೋಜನೆಗಳು ಬಿ ವರ್ಗದಲ್ಲಿದ್ದವು. ಮಹಿಳಾ ಉದ್ದೇಶಿತ ದಾಖಲೆಯು ಯೋಜನೆಗಳ ಉದ್ದೇಶವನ್ನು ಸೂಚಿಸುವ ಸಂಕ್ಷಿಪ್ತ ವಿವರಣಾ ಟಿಪ್ಪಣಿಯನ್ನು ಸಹ ನೀಡುತ್ತದೆ. 2012–13 ರಿಂದ 2016–17ರ ಅವಧಿಯಲ್ಲಿ ಮಹಿಳಾ ಉದ್ದೇಶಿತ ಆಯವ್ಯಯದ ಒಟ್ಟು ಹಂಚಿಕೆ ಮತ್ತು ಒಟ್ಟು ವೆಚ್ಚದಲ್ಲಿನ ಪ್ರವೃತ್ತಿಯನ್ನು **ನಕ್ಷೆ 1.2**ರಲ್ಲಿ ನೀಡಲಾಗಿದೆ ಮತ್ತು 'ಎ' ವರ್ಗಗಳಡಿ ಯೋಜನೆಗಳ ಒಟ್ಟು ಹಂಚಿಕೆ ಮತ್ತು ಒಟ್ಟು ವೆಚ್ಚಗಳ ಪ್ರವೃತ್ತಿಯನ್ನು **ನಕ್ಷೆ 1.3**ರಲ್ಲಿ ನೀಡಲಾಗಿದೆ.

**ನಕ್ಷೆ 1.2: ಒಟ್ಟು ಹಂಚಿಕೆಗೆ ಪ್ರತಿಯಾಗಿ ಒಟ್ಟು ವೆಚ್ಚದ ಪ್ರವೃತ್ತಿಗಳು**




**ನಕ್ಷೆ 1.3: ವರ್ಗ 'ಎ' ಯೋಜನೆಗಳಲ್ಲಿ ಹಂಚಿಕೆ ಮತ್ತು ವೆಚ್ಚದ ಪ್ರವೃತ್ತಿಗಳು**




ಮೇಲಿನ ನಕ್ಷೆಯಲ್ಲಿ ಗಮನಿಸಿದಂತೆ 2012–13ರಿಂದ 2013–14ರಲ್ಲಿ ಎ ವರ್ಗದ ಯೋಜನೆಗಳಲ್ಲಿ ಹಂಚಿಕೆಗೆ ಹೋಲಿಸಿದಲ್ಲಿ ವೆಚ್ಚವು ಅಧಿಕವಾಗಿತ್ತು ಮತ್ತು 2015–16ರಲ್ಲಿ ವೆಚ್ಚವು ಅಂದಾಜಿಗಿಂತ ಕಡಿಮೆಯಿತ್ತು. 2014–15 ಮತ್ತು 2016–17ರಲ್ಲಿ ವೆಚ್ಚವು ಹಂಚಿಕೆಗೆ ಸಮನಾಗಿದ್ದು ಸಂಪೂರ್ಣ ಆಯವ್ಯಯವನ್ನು ಬಳಸಲಾಗಿದೆ ಎಂದು ಸೂಚಿಸುತ್ತದೆ. ಎ ವರ್ಗದ ಕೆಲವು ಯೋಜನೆಗಳ ಸಮೀಕ್ಷೆಯನ್ನು ಈ ಕೆಳಗಿನ ಕಂಡಿಕೆಗಳಲ್ಲಿ ನೀಡಲಾಗಿದೆ.

### (ಎ) ಅಂಗನವಾಡಿ ಕಾರ್ಯಕರ್ತೆಯರು/ಸಹಾಯಕರಿಗೆ ಪಿಂಚಣಿ–ಎನ್‌ಪಿಎಸ್ ಲೈಟ್/ಸ್ವಾವಲಂಬನೆ/ಅಟಲ್ ಪಿಂಚಣಿ ಯೋಜನೆ

ಕರ್ನಾಟಕದ ಅಂಗನವಾಡಿ ಕಾರ್ಯಕರ್ತೆಯರು/ಸಹಾಯಕಿಯರು ತಾಯಿ ಮತ್ತು ಶಿಶು ಆರೋಗ್ಯ ಅಭಿವೃದ್ಧಿ ಯೋಜನೆಗಳು ಮತ್ತು ಪೌಷ್ಟಿಕ ಆಹಾರ ಸರಬರಾಜಿನಲ್ಲಿ ಪ್ರಮುಖ ಪಾತ್ರ ವಹಿಸುವರು. ಸಮಾಜಕ್ಕೆ ಅವರ ಸೇವೆಯನ್ನು ಪರಿಗಣಿಸಿ 2010–11ರ ಆಯವ್ಯಯದಲ್ಲಿ ಅವರಿಗಾಗಿ ವಂತಿಗೆ ಪಿಂಚಣಿ ಯೋಜನೆಯೊಂದನ್ನು ಘೋಷಿಸಲಾಯಿತು. ಈ ಯೋಜನೆಯನ್ನು 31.3.2011ರಂದು 56–60 ವರ್ಷಗಳ ವಯಸ್ಸಿನಲ್ಲಿ ಸೇವೆಯಿಂದ ನಿವೃತ್ತರಾಗುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು

ಸಹಾಯಕಿಯರಿಗೆ ವಂತಿಗೆ ಪಿಂಚಣಿ ಸವಲತ್ತುಗಳನ್ನು ನೀಡಲು ಪ್ರಾರಂಭಿಸಲಾಯಿತು. ಈ "ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ನೂತನ ಪಿಂಚಣಿ ಯೋಜನೆ (ಎನ್‌ಪಿಎಸ್)" ಯೋಜನೆಯನ್ನು ಎನ್‌ಪಿಎಸ್–ಲೈಟ್/ಸ್ವಾವಲಂಬನ ಎಂದು ಕರೆಯಲಾಗುತ್ತಿದ್ದು ಇದನ್ನು ಮಹಿಳಾ ಮತ್ತು ಮಕ್ಕಳ ಇಲಾಖೆಯು ಅನುಷ್ಠಾನಗೊಳಿಸುತ್ತದೆ.

ರಾಜ್ಯ ಸರ್ಕಾರವು ಸರ್ಕಾರೀ ಆದೇಶ ಸಂಖ್ಯೆ ಡಬ್ಲ್ಯುಸಿಡಿ 119 ಐಸಿಡಿ 2010 ಬೆಂಗಳೂರು ದಿನಾಂಕ 18.3.2011ರಲ್ಲಿ 1–4–1955ರಂದು ಅಥವಾ ನಂತರ ಹುಟ್ಟಿದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಮಾಹೆಯಾನ ಕ್ರಮವಾಗಿ ₹150 ಮತ್ತು ₹84ನ್ನು ವಂತಿಗೆಯಾಗಿ ನೀಡಬೇಕು ಮತ್ತು ಸರ್ಕಾರವು ಸಮಾನ ಮೊಬಲಗನ್ನು ವಂತಿಗೆ ನೀಡುವುದೆಂದು ಹೇಳಿತು.

ಭಾರತ ಸರ್ಕಾರವು 1 ಜೂನ್ 2015ರಿಂದ ಅಟಲ್ ಪಿಂಚಣಿ ಯೋಜನೆಯನ್ನು (ಎಪಿವೈ) ಘೋಷಿಸಿತು (ಅಕ್ಟೋಬರ್ 2015). ಈ ಯೋಜನೆಯು 18–40ರ ವಯಸ್ಸಿನಲ್ಲಿರುವ ಎಲ್ಲ ನಾಗರೀಕರಿಗೂ ಲಭ್ಯವಿದೆ. ಈ ಯೋಜನೆಯ ಮಾರ್ಗಸೂಚಿಗಳಡಿ, ಎನ್‌ಪಿಎಸ್–ಲೈಟ್/ಸ್ವಾವಲಂಬನ್‌ನ 18–40ರ ವಯಸ್ಸಿನೊಳಗೆ ಇರುವ ಚಂದಾದಾರರೆಲ್ಲರಿಗೂ ಅವರೇ ಹೊರಗುಳಿಯುವಂತೆ ಕೋರದಿದ್ದಲ್ಲಿ ಎಪಿವೈಗೆ ಸೇರುತ್ತಾರೆ.

ಈ ಮೇಲೆ ಹೇಳಿದ ಪರಿಸ್ಥಿತಿಯಲ್ಲಿ ಪಿಂಚಣಿ ನಿಧಿ ನಿಯಂತ್ರಕ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಪಿಎಫ್‌ಆರ್‌ಡಿಎ) ತನ್ನ ಸಾರ್ವಜನಿಕ ಸೂಚನೆಯಲ್ಲಿ (ಜನವರಿ 2016) 1 ಏಪ್ರಿಲ್ 2015ರಿಂದ ಎನ್‌ಪಿಎಸ್–ಲೈಟ್/ಸ್ವಾವಲಂಬನ್ ಯೋಜನೆಯಡಿ ಹೊಸ ಸೇರ್ಪಡೆಗಳನ್ನು ನಿಲ್ಲಿಸಿತು ಮತ್ತು 1.4.2015ರ ಪೂರ್ವದಲ್ಲಿ ಯೋಜನೆಯಡಿ ನೋಂದಯಿತರಾಗಿದ್ದ ಚಂದಾದಾರರು ಮಾತ್ರವೇ ಮುಂದಿನ ವಂತಿಕೆಗಳ ಠೇವಣಿ ಮುಂದುವರೆಸಬಹುದಿತ್ತು. ಅದು ಎಲ್ಲಾ ಏಜೆನ್ಸಿಗಳು ಎನ್‌ಪಿಎಸ್–ಲೈಟ್/ಸ್ವಾವಲಂಬನ್ ಯೋಜನೆಯಡಿಯ ಆಸಕ್ತ ಚಂದಾದಾರರು ಎಪಿವೈ ಯೋಜನೆಗೆ ವರ್ಗಾವಣೆ ಯಾಗುವುದನ್ನು ಖಾತರಿ ಪಡಿಸಿಕೊಳ್ಳುವಂತೆ ನಿರ್ದೇಶಿಸಿತು.

ಆದ್ದರಿಂದ ಎನ್‌ಪಿಎಸ್–ಲೈಟ್ ಯೋಜನೆಯು 1.4.2015 ರಿಂದ ಸ್ಥಗಿತಗೊಂಡಿತು ಮತ್ತು 1,08,037 ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ನೋಂದಣಿಗೊಂಡಿದ್ದರು ಮತ್ತು ಯೋಜನೆಯು ಕೊನೆಗೊಂಡ ದಿನಕ್ಕೆ 5,925 ಅರ್ಜಿಗಳು ನೋಂದಣಿಯಾಗದೇ ಉಳಿದಿದ್ದವು. ಇಲಾಖೆಯು ಎಪಿವೈ ಯೋಜನೆಯು 18–40ರ ವಯೋಮಿತಿಯವರಿಗೆ ಮಾತ್ರ ಅನ್ವಯ ವಾಗುವುದರಿಂದ ಎನ್‌ಪಿಎಸ್–ಲೈಟ್ ಚಂದಾದಾರರ ವರ್ಗಾವಣೆಯು ಸ್ವೀಕೃತವಾಗಿರಲಿಲ್ಲ ಮತ್ತು ಚಂದಾದಾರರ ಒಪ್ಪಿಗೆಯ ಮೇರೆಗೆ ಅವರನ್ನು ಎನ್‌ಪಿಎಸ್ ಯೋಜನೆಯಡಿಯಲ್ಲಿಯೇ ಮುಂದುವರೆಸಲಾಗಿತ್ತೆಂದು ಹೇಳಿತು (ಜೂನ್ 2017). ಇಲಾಖೆಯು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಅಟಲ್ ಪಿಂಚಣಿ ಯೋಜನೆಯಡಿ ಕಾರ್ಯಕಾರಿ ಮತ್ತು ಷರತ್ತಿನ ಅಂಶಗಳಲ್ಲಿ ಸಮಾನತೆಯನ್ನು ನಿರ್ವಹಿಸಲು ಪಿಎಫ್‌ಆರ್‌ಡಿಎದೊಂದಿಗೆ ಸಂಪರ್ಕದಲ್ಲಿದೆ ಎಂದೂ ಸಹ ಹೇಳಿತು.

ಇಲಾಖೆಯು ತನ್ನ ಉತ್ತರದಲ್ಲಿ (ನವೆಂಬರ್ 2017) ಜಿಲ್ಲಾ ಸ್ತರದ ಅಧಿಕಾರಿಗಳಿಗೆ ಎನ್‌ಪಿಎಸ್/ಲೈಟ್ ಯೋಜನೆಯಡಿ ಬಾಕಿ ಉಳಿದಿರುವ 5,925 ಚಂದಾದಾರರನ್ನಾಗಿ ಎಪಿವೈ ಯೋಜನೆಯಡಿ ನೋಂದಣಿ ಮಾಡಿಸುವಂತೆ ಸೂಚನೆ ನೀಡಲಾಗಿದೆ (ಜುಲೈ 2017) ಮತ್ತು ಅಟಲ್ ಪಿಂಚಣಿ ಯೋಜನೆಯ ಅನುಷ್ಠಾನದ ಕಾರ್ಯಾಚರಣೆಯ ವಿಧಾನವನ್ನು ಪಿಎಫ್‌ಆರ್‌ಡಿಎ ಯೊಂದಿಗೆ ಚರ್ಚಿಸಿ, ಸರ್ಕಾರದ ವಂತಿಗೆಯನ್ನು ಫೆಸಿಲಿಟೇಟರ್ ಮೂಲಕ ಎನ್‌ಪಿಎಸ್ ಟ್ರಸ್ಟಿಗೆ ಜಮಾ ಮಾಡಲು ಒಂದು ಮಾಡ್ಯೂಲನ್ನು ರೂಪಿಸಲು ಚಿಂತನೆ ಮಾಡಿದೆಯೆಂದು ಹೇಳಿದೆ. ಇಲಾಖೆಯು ಪಿಎಫ್‌ಆರ್‌ಡಿಎ ಯಿಂದ ಯೋಜನೆಯನ್ನು ನಿರೀಕ್ಷಿಸುತ್ತಿದ್ದು ಮಾದರಿಯು ರೂಪುಗೊಂಡ ಕೂಡಲೇ 5,925 ಅಂಗನವಾಡಿ ಕಾರ್ಯಕರ್ತೆಯರು/ ಸಹಾಯಕಿಯರು ಮತ್ತು 1–4–2015ರಿಂದ ನೇಮಕಗೊಂಡ ಎಲ್ಲಾ ವಂತಿಗದಾರರನ್ನೂ ಎಪಿವೈ ಯೋಜನೆಯಲ್ಲಿ ಸೇರ್ಪಡೆ ಮಾಡಿಕೊಳ್ಳಲಾಗುವುದು ಎಂದು ಹೇಳಿದೆ.

ಆದಾಗ್ಯೂ, 1 ಏಪ್ರಿಲ್ 2015ರಿಂದ ಎನ್‌ಪಿಎಸ್/ಲೈಟ್ ಯೋಜನೆಯಡಿ ಹೊಸ ಸೇರ್ಪಡೆಯನ್ನು ನಿಲ್ಲಿಸುವ ನಿರ್ಣಯದಿಂದಾಗಿ, 5,925 ವಂತಿಕೆದಾರರು ಹಾಗೂ ಹೊಸದಾಗಿ ನೇಮಕವಾದ ಅಂಗನವಾಡಿ ಕಾರ್ಯಕರ್ತೆಯರು ಪಿಂಚಣಿ ಯೋಜನೆಯ ಸೌಲಭ್ಯದಿಂದ ವಂಚಿತರಾಗಿರುವುದು ವಾಸ್ತವ ಸಂಗತಿಯಾಗಿದೆ.

### (ಬಿ) ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಮಹಿಳಾ ವಾಣಿಜ್ಯೋದ್ಯಮಿಗಳ ತರಬೇತಿಗೆ ಸಂಬಂಧಿಸಿದ ನಿಧಿಗಳನ್ನು ತಡೆಹಿಡಿದಿರುವಿಕೆ – ₹12.92 ಕೋಟಿ

ಮಹಿಳೆಯರಿಗೆ ಗಣಕಯಂತ್ರ ಕ್ರಮವಿಧಿ ರಚನೆ (ಕಂಪ್ಯೂಟರ್ ಪ್ರೋಗ್ರಾಮಿಂಗ್), ಕಾಲ್‌ಸೆಂಟರ್ ತರಬೇತಿ, ಹಣಕಾಸಿನ ಲೆಕ್ಕ, ವೆಬ್ ಡಿಸೈನ್, ಫ್ಯಾಷನ್ ಡಿಸೈನ್, ಅತಿಥಿ ಸತ್ಕಾರ ಮುಂತಾದ ಕೌಶಲ್ಯಗಳಲ್ಲಿ ತರಬೇತಿ ನೀಡಲು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವನ್ನು ನೋಡಲ್ ಏಜೆನ್ಸಿಯಾಗಿ ನೇಮಿಸಲಾಗಿತ್ತು. 2011–12ರಿಂದ 2016–17ರ ಅವಧಿಯಲ್ಲಿ ಆಯವ್ಯಯದಲ್ಲಿ ಮಂಡಿಸಿ ನಿಗಮಕ್ಕೆ ಬಿಡುಗಡೆ ಮಾಡಲಾದ ₹20.36 ಕೋಟಿಗಳಲ್ಲಿ ಕೇವಲ ₹7.44 ಕೋಟಿಗಳನ್ನು ವೆಚ್ಚ ಮಾಡಿ ಉಳಿದ ₹12.92 ಕೋಟಿಗಳನ್ನು ನಿಗಮದ ಬ್ಯಾಂಕ್ ಖಾತೆಯಲ್ಲಿಯೇ ಇಡಲಾಗಿತ್ತು. ಉಳಿದ ಹಣವನ್ನು ಬಳಸದಿದ್ದುದಕ್ಕೆ ನೀಡಿದ ಕಾರಣಗಳು ಕೆಳಗಿನಂತಿದ್ದವು:

(1) ತರಬೇತಿ ನೀಡುವ ಕೆಲಸವನ್ನು ವಹಿಸಿದ್ದ ಏಜೆನ್ಸಿಗಳು ಅಗತ್ಯವಿರುವ ದಾಖಲೆಗಳನ್ನು ಸಲ್ಲಿಸದಿರುವುದು;

(2) ಟೆಂಡರ್ ಕಾರ್ಯವಿಧಾನವನ್ನು ಅಂತಿಮಗೊಳಿಸದಿರುವುದು, ಇತ್ಯಾದಿ

ಆಡಳಿತಾತ್ಮಕ ಇಲಾಖೆಯು ಹಿಂದೆ ಬಿಡುಗಡೆಯಾದ ಅನುದಾನಗಳ ಸ್ಥಿತಿಗತಿಯನ್ನು ಮತ್ತು ಅನುದಾನದ ಬಳಕೆಯನ್ನು ಪರಿಶೀಲಿಸದೇ ಅನುದಾನಗಳನ್ನು ಬಿಡುಗಡೆ ಮಾಡುತ್ತಲೇ ಹೋಯಿತು. ಇಲಾಖೆಯ ಈ ಕ್ರಮವು ₹12.92 ಕೋಟಿಯಷ್ಟು ಸರ್ಕಾರೀ ಹಣವು ವರ್ಷಗಟ್ಟಲೆ ಬಳಕೆಯಾಗದೇ ಅನಗತ್ಯವಾಗಿ ತಡೆಯಾಗುವುದರಲ್ಲಿ ಪರಿಣಮಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು.

### 1.1.6 2016–17ನೇ ಸಾಲಿನ ಆಯವ್ಯಯದ ಪ್ರಮುಖ ಕಾರ್ಯನೀತಿ ಉಪಕ್ರಮಣಗಳು

2016–17ರಲ್ಲಿ ಸಮಾಜ ಕಲ್ಯಾಣ ಇಲಾಖೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಇಲಾಖೆಗಳಲ್ಲಿ ಅನುಷ್ಠಾನಕ್ಕೆ ಪ್ರಸ್ತಾಪಿಸಿದ ಕೆಲವು ಯೋಜನೆಗಳನ್ನು ಮತ್ತು ಅಂತಹ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ತೆಗೆದುಕೊಂಡ ಕ್ರಮಗಳನ್ನು **ಕೋಷ್ಟಕ 1.6**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.6: ಆಯವ್ಯಯ ಭರವಸೆಗಳು ಮತ್ತು ಅವುಗಳ ಮೇಲಿನ ಲೆಕ್ಕ ಪರಿಶೋಧನಾ ವಿಶ್ಲೇಷಣೆ**

| ಆಯವ್ಯಯ ಭರವಸೆ | ಕ್ರಮ ತೆಗೆದುಕೊಂಡ ವರದಿಯಂತೆ ಕೈಗೊಂಡ ಕ್ರಮ | ಲೆಕ್ಕಪರಿಶೋಧನಾ ವಿಶ್ಲೇಷಣೆ |
|---|---|---|
| ಶುಚಿ ಕಿಟ್‌ಗಳನ್ನು (ಸೋಪುಗಳು, ಟೂತ್‌ಪೇಸ್ಟ್, ಎಣ್ಣೆ ಮುಂತಾದವುಗಳು) ಮೆಟ್ರಿಕ್‌ಪೂರ್ವ ವಿದ್ಯಾರ್ಥಿಗಳಿಗೆ ನೀಡುವಂತೆಯೇ 75,000 ಮೆಟ್ರಿಕ್ ನಂತರದ ಹಾಸ್ಟೆಲ್ ನಿವಾಸಿಗಳಿಗೆ ನೀಡಲಾಗುವುದು. | ಸರ್ಕಾರಿ ಆದೇಶ ಸಂಖ್ಯೆ: ಸಕಇ 172 ಪಣವಿ 2016 ದಿನಾಂಕ 15.6.2016 ಜಾರಿ ಮಾಡಲಾಗಿದೆ. | ಸಮಾಜ ಕಲ್ಯಾಣ ಇಲಾಖೆಯಲ್ಲಿ ಮೆಟ್ರಿಕ್ ನಂತರದ ಹಾಸ್ಟೆಲ್ ನಿವಾಸಿಗಳಿಗೆ ವಿತರಿಸಲು ಶುಚಿ ಕಿಟ್‌ಗಳನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಯಿತು. ಜಿಲ್ಲಾ ಸ್ತರದ ಅಧಿಕಾರಿಗಳಿಂದ ₹5.68 ಕೋಟಿಗಳಿಗೆ ಬಳಕೆ ಪ್ರಮಾಣ ಪತ್ರಗಳು ಬಂದಿರುವುದಿಲ್ಲ. |
| ವಿವಿಧ ಇಲಾಖೆಗಳಿಂದ ಪರಿಶಿಷ್ಟ ಜಾತಿ ಉಪ ಯೋಜನೆ/ಗಿರಿಜನ ಉಪಯೋಜನೆಗಳಡಿ ಅನೇಕ ಕಲ್ಯಾಣ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತದೆ. ಯೋಜನೆಗಳ ಲಾಭಗಳು ಉದ್ದೇಶಿತ ಗುಂಪಿಗೆ ತಲುಪಲು ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಾಮಾಜಿಕ ಲೆಕ್ಕಪರಿಶೋಧನಾ ಕೋಶವೊಂದನ್ನು ಸ್ಥಾಪಿಸಲಾಗುವುದು. | ಸಮಾಜ ಕಲ್ಯಾಣ ಇಲಾಖೆಯಿಂದ ಪ್ರಸ್ತಾವನೆಯನ್ನು ನಿರೀಕ್ಷಿಸಲಾಗಿದೆ. 4.1.2017ರಂದು ನೆನಪೋಲೆಯನ್ನು ಕಳುಹಿಸಲಾಗಿದೆ. | ಪರಿಶಿಷ್ಟ ಜಾತಿ/ಪರಿಶಿಷ್ಟ ಜನಾಂಗಗಳ ಕಾಲೋನಿಗಳಲ್ಲಿ ವಿವಿಧ ಇಲಾಖೆಗಳು ಕೈಗೊಂಡ ಮೂಲಭೂತ ಕಾಮಗಾರಿಗಳ ಮೌಲ್ಯಾಧಾರಣೆಯನ್ನು ನಡೆಸಲು ರಾಜ್ಯಾದ್ಯಂತ ಶಾಖೆಗಳಿರುವ ಏಜೆನ್ಸಿಗಳನ್ನು ಗುರುತಿಸಲು ಕರ್ನಾಟಕ ಇವಾಲ್ಯುಯೇಷನ್ ಪ್ರಾಧಿಕಾರಕ್ಕೆ ಪತ್ರ ಬರೆಯಲಾಗಿದೆ (ಜೂನ್ 2017). ಕೆಇಎಯಿಂದ ಉತ್ತರ ಬಂದಿರುವುದಿಲ್ಲ. |
| ನಿರಾಶ್ರಿತರ ಪುನರ್ವಸತಿ ಕೇಂದ್ರ, ಮಾಗಡಿ ರಸ್ತೆ, ಬೆಂಗಳೂರಿನಲ್ಲಿ ಡಾ.ಬಾಬು ಜಗಜೀವನರಾಂ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ಸಂಶೋಧನೆ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು. | ಹಣಕಾಸು ಇಲಾಖೆಯು ತಾತ್ವಿಕ ಅನುಮೋದನೆಯನ್ನು ನೀಡಿದೆ. | ಸಂಶೋಧನಾ ಸಂಸ್ಥೆಯ ನಿರ್ಮಾಣವನ್ನು ₹88.25 ಕೋಟಿ ವೆಚ್ಚದಲ್ಲಿ ಅನುಮೋದಿಸಲಾಗಿದೆ. ಪ್ರಸ್ತಾವನೆಯನ್ನು ಮಂತ್ರಿಮಂಡಲವು ಅನುಮೋದಿಸಬೇಕಿದೆ (ಅಕ್ಟೋಬರ್ 2017). |

| ಆಯವ್ಯಯ ಭರವಸೆ | ಕ್ರಮ ತೆಗೆದುಕೊಂಡ ವರದಿಯಂತೆ ಕೈಗೊಂಡ ಕ್ರಮ | ಲೆಕ್ಕಪರಿಶೋಧನಾ ವಿಶ್ಲೇಷಣೆ |
|---|---|---|
| ಕಲಬುರಗಿ ವಿಮಾನ ನಿಲ್ದಾಣವನ್ನು ಲೋಕೋಪಯೋಗಿ ಇಲಾಖೆಯು ಅಭಿವೃದ್ಧಿ ಪಡಿಸುತ್ತಿದೆ ಮತ್ತು ಪ್ರಸಕ್ತ ಸಾಲಿನಲ್ಲಿ ಅದು ಪೂರ್ಣಗೊಳ್ಳಲಿದೆ. ಶಿವಮೊಗ್ಗ ವಿಮಾನ ನಿಲ್ದಾಣದ ಅಭಿವೃದ್ಧಿಯನ್ನು ಪಿಪಿಪಿ ಆಧಾರದಲ್ಲಿ ಕೈಗೊಳ್ಳಲಾಗುವುದು. | ಕಲಬುರಗಿ ವಿಮಾನ ನಿಲ್ದಾಣದ ಉಳಿಕೆ ಕಾಮಗಾರಿಯನ್ನು ರಾಜ್ಯ ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದೆ. ಯೋಜನೆಯ ಅಂದಾಜು ವೆಚ್ಚ ₹109,47,85,149 ಗಳಿಗೆ ಅನುಮೋದನೆಯನ್ನು 27.4.2016ರಂದು ನೀಡಲಾಗಿದೆ.<br><br>ಶಿವಮೊಗ್ಗ ವಿಮಾನ ನಿಲ್ದಾಣ ಯೋಜನೆಯನ್ನು ಪಿಪಿಪಿ ಮಾದರಿಯಡಿ ಅಭಿವೃದ್ಧಿ ಪಡಿಸಲು ಸರ್ಕಾರವು ನಿರ್ಧರಿಸಿದೆ. ಮರುಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. | 2016–17ರಲ್ಲಿ ಪೂರ್ಣಗೊಳ್ಳಬೇಕಿದ್ದ ಕಲಬುರಗಿ ವಿಮಾನ ನಿಲ್ದಾಣ ಅಭಿವೃದ್ಧಿ ಕಾಮಗಾರಿಯು ಇನ್ನೂ ಪ್ರಗತಿಯಲ್ಲಿದ್ದು ಲೋಕೋಪಯೋಗಿ ಇಲಾಖೆಯು ಕಾಮಗಾರಿಯನ್ನು 18 ತಿಂಗಳುಗಳೊಳಗೆ (ಜುಲೈ 2017) ಪೂರ್ಣಗೊಳಿಸುವ ನಿರೀಕ್ಷೆಯಿದೆ.<br><br>ಇಲಾಖೆಯು ಶಿವಮೊಗ್ಗ ವಿಮಾನ ನಿಲ್ದಾಣದ ಪ್ರಸಕ್ತ ಜಾಗದಲ್ಲಿ ಸಂಭವನೀಯತಾ ವಿಶ್ಲೇಷಣೆ, ಅಡಚಣೆ ಸಮೀಕ್ಷೆ ಮತ್ತು ಸ್ಥಳಲಕ್ಷಣದ ಸಮೀಕ್ಷೆಗಳನ್ನು ಪಿಪಿಪಿ ಆಧಾರದಡಿ ಮರುಟೆಂಡರ್ ಪ್ರಕ್ರಿಯೆ ಪ್ರಾರಂಭಿಸುವಮುನ್ನ ನಡೆಸಲು ನಿರ್ಧರಿಸಿದೆ. |

## 1.2 ರಾಜ್ಯದ ಸಂಪನ್ಮೂಲಗಳು

### 1.2.1 ವಾರ್ಷಿಕ ಹಣಕಾಸಿನ ಲೆಕ್ಕಗಳ ಪ್ರಕಾರ ರಾಜ್ಯದ ಸಂಪನ್ಮೂಲಗಳು

ರಾಜಸ್ವ ಮತ್ತು ಬಂಡವಾಳಗಳು ಸ್ವೀಕೃತಿಗಳ ಎರಡು ಹರಿವುಗಳಾಗಿದ್ದು, ರಾಜ್ಯಸರ್ಕಾರದ ಸಂಪನ್ಮೂಲಗಳ ಆಕರವಾಗಿವೆ. ರಾಜಸ್ವ ಸ್ವೀಕೃತಿಗಳು ತೆರಿಗೆ ಆದಾಯಗಳು, ತೆರಿಗೆಯೇತರ ಆದಾಯಗಳು, ಕೇಂದ್ರ ಸುಂಕ ತೆರಿಗೆಗಳಲ್ಲಿನ ರಾಜ್ಯದ ಪಾಲು ಮತ್ತು ಭಾರತ ಸರ್ಕಾರದಿಂದ ನೀಡುವ ಸಹಾಯಾನುದಾನ ಮತ್ತು ವಂತಿಗೆಗಳನ್ನು ಹೊಂದಿದೆ. ಬಂಡವಾಳ ಸ್ವೀಕೃತಿಯು ಹೂಡಿಕೆಗಳ ಹಿಂಪಡೆತ, ಸಾಲ ಮತ್ತು ಮುಂಗಡಗಳ ವಸೂಲಿ, ಆಂತರಿಕ ಮೂಲಗಳಿಂದ (ಮಾರುಕಟ್ಟೆ ಸಾಲಗಳು, ಹಣಕಾಸು ಸಂಸ್ಥೆ/ವಾಣಿಜ್ಯ ಬ್ಯಾಂಕುಗಳಿಂದ ಸಾಲಗಳು, ಋಣ ಸ್ವೀಕೃತಿಗಳು ಮತ್ತು ಕೇಂದ್ರ ಸರ್ಕಾರದಿಂದ ಪಡೆದ ಸಾಲ ಮುಂಗಡಗಳು ಮುಂತಾದ ಇತರ ಬಂಡವಾಳ ಸ್ವೀಕೃತಿಗಳನ್ನು ಹೊಂದಿದೆ. ಜೊತೆಗೆ ಸಾರ್ವಜನಿಕ ಲೆಕ್ಕದಲ್ಲಿನ ನಿವ್ವಳ ಸ್ವೀಕೃತಿಗಳನ್ನೂ ಸಹ ಸರ್ಕಾರವು ತನ್ನ ಕೊರತೆಗಳನ್ನು ತುಂಬಿಕೊಳ್ಳಲು ಬಳಸಿಕೊಳ್ಳುತ್ತದೆ. ಮುಂದುವರಿದು, **ನಕ್ಷೆ 1.4**ರಲ್ಲಿ 2012–13ರಿಂದ 2016–17ರ ಅವಧಿಯಲ್ಲಿ ಸ್ವೀಕೃತಿಗಳ ವಿವಿಧ ಅಂಗಗಳ ಪ್ರವೃತ್ತಿಯನ್ನು ತೋರಿಸಲಾಗದೆ. **ನಕ್ಷೆ–1.5**ರಲ್ಲಿ 2016–17ನೇ ಸಾಲಿನಲ್ಲಿ ರಾಜ್ಯದ ಸಂಪನ್ಮೂಲಗಳ ವಿವಿಧ ಅಂಗಗಳ ಮತ್ತು ಉಪ ಅಂಗಗಳನ್ನು ತೋರಿಸಿದಲ್ಲಿ **ನಕ್ಷೆ 1.6**ರಲ್ಲಿ ರಾಜ್ಯದ ಸಂಪನ್ಮೂಲಗಳ ಸಂಯೋಜನೆಯನ್ನು ತೋರಿಸಲಾಗಿದೆ.

**ನಕ್ಷೆ 1.4 – ಸ್ವೀಕೃತಿಗಳ ಪ್ರವೃತ್ತಿ 2012–17**




*#ಸಾದಿಲ್ವಾರು ನಿಧಿ ಸ್ವೀಕೃತಿಗಳನ್ನು ಹೊರತುಪಡಿಸಿ.*

**ನಕ್ಷೆ 1.5: ಸಂಪನ್ಮೂಲಗಳ ಅಂಗಗಳು ಮತ್ತು ಉಪ–ಅಂಗಗಳು**




*ಆಕರ: ಹಣಕಾಸು ಲೆಕ್ಕಗಳು.*

**ನಕ್ಷೆ 1.6: 2016–17ರಲ್ಲಿ ಸಂಪನ್ಮೂಲಗಳ ಸಂಯೋಜನೆ**




ಒಟ್ಟಾರೆ ಸ್ವೀಕೃತಿಗಳು (ಸಾದಿಲ್ವಾರು ನಿಧಿ ಸ್ವೀಕೃತಿಗಳನ್ನು ಹೊರತುಪಡಿಸಿ) 2012–13ರಲ್ಲಿದ್ದ ₹97,503 ಕೋಟಿಯಿಂದ 2016–17ರಲ್ಲಿ ₹1,76,661 ಕೋಟಿಗೆ ಏರಿದ್ದು, ಹೆಚ್ಚಳವು ಶೇಕಡ 81ರಷ್ಟಿತ್ತು. ಹಿಂದಿನ ವರ್ಷಕ್ಕೆ ಹೋಲಿಸಿದರೆ (₹1,45,725 ಕೋಟಿ), 2016–17ರಲ್ಲಿ (₹1,76,661 ಕೋಟಿ) ಸ್ವೀಕೃತಿಗಳು ₹30,963 ಕೋಟಿಯಷ್ಟು ಹೆಚ್ಚಳಗೊಂಡಿತ್ತು (ಶೇಕಡ 21).

2016–17ರಲ್ಲಿ ಒಟ್ಟಾರೆ ಸ್ವೀಕೃತಿಗಳಲ್ಲಿ ರಾಜಸ್ವ ಸ್ವೀಕೃತಿಯ ಪಾಲು ಶೇಕಡ 75ರಷ್ಟಿದ್ದು, ಮುಂದಿನ ವಿವರಗಳನ್ನು **ಕಂಡಿಕೆ 1.3**ರಲ್ಲಿ ಒದಗಿಸಲಾಗಿದೆ.

ಬಂಡವಾಳ ಸ್ವೀಕೃತಿಗಳು 2012–13ರಲ್ಲಿನ ₹13,656 ಕೋಟಿಯಿಂದ 2016–17ರಲ್ಲಿ ₹31,283 ಕೋಟಿಗೆ ಏರಿ ಶೇಕಡ 129ರಷ್ಟು ಹೆಚ್ಚಳವಾಗಿದೆ. 2016–17ರಲ್ಲಿ ಬಂಡವಾಳ ಸ್ವೀಕೃತಿಗಳು ಒಟ್ಟು ಸ್ವೀಕೃತಿಗಳ ಶೇಕಡ 18ರಷ್ಟಿದ್ದವು. ಬಂಡವಾಳ ಸ್ವೀಕೃತಿಗಳ ಪ್ರಮುಖ ಅಂಗವಾಗಿರುವ ಋಣ ಸ್ವೀಕೃತಿಗಳು ಪ್ರಸಕ್ತ ಸಾಲಿನಲ್ಲಿ ₹10,084 ಕೋಟಿಯಷ್ಟು ಹೆಚ್ಚಾಗಿದ್ದವು. ಆಂತರಿಕ ಋಣ ಮತ್ತು ಭಾರತ ಸರ್ಕಾರದಿಂದ ಸಾಲಗಳು ಹಾಗೂ ಮುಂಗಡಗಳು, ಋಣ ಸ್ವೀಕೃತಿಗಳ ಎರಡು ಅಂಗಗಳಾಗಿದ್ದು ಒಟ್ಟಾರೆ ಋಣ ಸ್ವೀಕೃತಿಗಳಲ್ಲಿ (₹31,156 ಕೋಟಿ) ಅವುಗಳ ಪಾಲು ಕ್ರಮವಾಗಿ ಶೇಕಡ 94 (₹29,238 ಕೋಟಿ) ಹಾಗೂ ಶೇಕಡ ಆರು (₹1,918 ಕೋಟಿ) ಆಗಿದ್ದಿತು. 2016–17ರಲ್ಲಿ ಆಂತರಿಕ ಋಣ ಸ್ವೀಕೃತಿಗಳಲ್ಲಿ ಶೇಕಡ 48ರಷ್ಟು ಏರಿಕೆಯಾಗಿದ್ದಿತು. ಸಾಲಗಳು ಮತ್ತು ಮುಂಗಡಗಳಲ್ಲಿ ಹಿಂದಿನ ವರ್ಷಕ್ಕಿಂತ ಶೇಕಡ 51ರಷ್ಟು ಏರಿಕೆಯಾಗಿದ್ದಿತು.

ಋಣ ಸ್ವೀಕೃತಿಗಳಲ್ಲದೇ ಬಂಡವಾಳ ಸ್ವೀಕೃತಿಗಳು, ಸಾಲಗಳು ಮತ್ತು ಮುಂಗಡಗಳ ವಸೂಲಾತಿ ಹಾಗೂ ಭೂಮಿ ಮಾರಾಟಗಳ ಮೂಲಕದ ಸ್ವೀಕೃತಿಗಳನ್ನು ಮತ್ತು ಇತರೆ ಬಂಡವಾಳ ಮತ್ತು ಸಹಕಾರಿ ಸಂಘಗಳು/ಬ್ಯಾಂಕುಗಳಲ್ಲಿನ ಬಂಡವಾಳ ಹೂಡಿಕೆಯ ಹಿಂಪಡೆತವನ್ನು ಒಳಗೊಂಡಿದೆ. 2016–17ರಲ್ಲಿ ಋಣೇತರ ಬಂಡವಾಳ ಸ್ವೀಕೃತಿಗಳು ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ಶೇಕಡ 69ರಷ್ಟು ವೃದ್ಧಿಯನ್ನು ತೋರಿಸಿದ್ದವು.

ಸಾರ್ವಜನಿಕ ಹಣಕ್ಕೆ ಸರ್ಕಾರವು ಬ್ಯಾಂಕರ್/ಟ್ರಸ್ಟಿಯಾಗಿ ಕಾರ್ಯನಿರ್ವಹಿಸುವಂತಹ ಸ್ವೀಕೃತಿಗಳನ್ನು ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು ಉಲ್ಲೇಖಿಸುತ್ತದೆ. 2012–13 ರಿಂದ 2016–17ರ ಅವಧಿಯಲ್ಲಿ ಒಟ್ಟು ಸ್ವೀಕೃತಿಗಳಿಗೆ ಅದು ಸರಾಸರಿ ಶೇಕಡ ಆರರಷ್ಟಿತ್ತು. ನಿವ್ವಳ ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು 2012–13ರಲ್ಲಿ ₹5,671 ಕೋಟಿ ಇದ್ದುದು 2016–17ರಲ್ಲಿ ₹12,164 ಕೋಟಿಗೆ ಏರಿದೆ.

### 1.2.2 ರಾಜ್ಯದಲ್ಲಿನ ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ಕೇಂದ್ರ ಯೋಜನಾ ನಿಧಿಗಳ ನೇರ ವರ್ಗಾವಣೆ (ರಾಜ್ಯ ಆಯವ್ಯಯದ ಹೊರಗಿನ ಮಾರ್ಗದ ಮೂಲಕ)

ಕೇಂದ್ರ ಸರ್ಕಾರವು ಸಾಮಾಜಿಕ ಮತ್ತು ಆರ್ಥಿಕ ವಲಯಗಳಲ್ಲಿ ಪ್ರಮುಖವೆಂದು ಪರಿಗಣಿಸಲಾಗುವ ಅನೇಕ ಯೋಜನೆಗಳು/ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ದೊಡ್ಡ ಗಾತ್ರದ ಮೊತ್ತಗಳನ್ನು ರಾಜ್ಯದಲ್ಲಿನ

ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ[1] ನೇರವಾಗಿ ವರ್ಗಾಯಿಸುತ್ತಿದೆ. 2014–15ರ ಆರ್ಥಿಕ ವರ್ಷದಿಂದ ಸದರಿ ಪದ್ಧತಿಯನ್ನು ಭಾರತ ಸರ್ಕಾರವು ಬದಲಾಯಿಸಿತು ಮತ್ತು ಕೇಂದ್ರದ ಪಾಲೂ ಸಹ ಸಂಚಿತ ನಿಧಿಯ ಮೂಲಕ ಹರಿಯಲಾರಂಭಿಸಿದೆ. ಈ ಹಣವು ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಮುಡಿಪಾಗಿದ್ದರೂ ಸಹ ಈ ಆದಾಯದ ಆಕರವೂ ಸಹ ರಾಜ್ಯಕ್ಕೆ ಲಭ್ಯವಿದೆ.

ಆದಾಗ್ಯೂ, 2016–17ರಲ್ಲಿ ಈ ಪದ್ಧತಿಯಿಂದ ಮಾರ್ಗಪಲ್ಲಟವಾಗಿ ₹98.61 ಕೋಟಿಗಳಷ್ಟು ಕೇಂದ್ರದ ನಿಧಿಗಳನ್ನು ರಾಜ್ಯದ ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ನೇರವಾಗಿ ವರ್ಗಾವಣೆ ಮಾಡಲಾಯಿತು. ಒಟ್ಟು ಸಂಪನ್ಮೂಲಗಳ ಲಭ್ಯತೆಯ ಸಂಪೂರ್ಣ ಚಿತ್ರಣವನ್ನು ಬಿಂಬಿಸಲು ಭಾರತ ಸರ್ಕಾರದ ಆರು ಪ್ರಮುಖ ಯೋಜನೆಗಳು ಅನುಷ್ಠಾನಗೊಳಿಸುತ್ತಿರುವ ರಾಜ್ಯದ ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ನೇರವಾಗಿ ವರ್ಗಾವಣೆಯಾದ ನಿಧಿಗಳನ್ನು **ಕೋಷ್ಟಕ–1.7**ರಲ್ಲಿ ನೀಡಲಾಗಿದೆ. ಲೆಕ್ಕ ಮಹಾನಿಯಂತ್ರಕರ (ಸಿಜಿಎ) ಜಾಲತಾಣದಿಂದ ದತ್ತಾಂಶವನ್ನು ಸಂಗ್ರಹಿಸಿ ರಾಜ್ಯ ಸರ್ಕಾರದ ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ರಾಜ್ಯ ಆಯವ್ಯಯದ ಹೊರಗೆ ನೇರವಾಗಿ ವರ್ಗಾವಣೆಯಾಗುವ ವಿವರಣೆಗಳನ್ನು ತೋರಿಸುವ ಅನುಬಂಧವನ್ನು ಹಣಕಾಸು ಲೆಕ್ಕಗಳಲ್ಲಿ ಸೇರಿಸಲಾಗಿದೆ (ಲೆಕ್ಕಪರಿಶೋಧನೆಯಾಗದ ಅಂಕಿಗಳು).

**ಕೋಷ್ಟಕ 1.7: ರಾಜ್ಯ ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ನೇರವಾಗಿ ವರ್ಗಾವಣೆಯಾದ ನಿಧಿಗಳು**

**(ಕೋಟಿ ರೂಪಾಯಿಗಳಲ್ಲಿ)**

| ಕ್ರಮ ಸಂಖ್ಯೆ | ಭಾರತ ಸರ್ಕಾರದ ಯೋಜನೆ | ರಾಜ್ಯದಲ್ಲಿ ಅನುಷ್ಠಾನಗೊಳಿಸುವ ಏಜೆನ್ಸಿ/ಸ್ವೀಕರ್ತ | 2016–17ರಲ್ಲಿ ಭಾರತ ಸರ್ಕಾರದಿಂದ ನೇರವಾಗಿ ವರ್ಗಾವಣೆಯಾದ ನಿಧಿಗಳು |
|---|---|---|---|
| 1 | ಪಂಚಾಯತ್‌ರಾಜ್ ಅಡಿಯ ಯೋಜನೆಗಳು | ಸೀಗೆಹಳ್ಳಿ ಗ್ರಾಮ ಪಂಚಾಯತಿ | 0.10 |
| 2 | ನಗರಾಭಿವೃದ್ಧಿಯಡಿಯ ಯೋಜನೆಗಳು | ಪುರಸಭೆ ಬಾದಾಮಿ | 3.73 |
| 3 | ಯುವಜನ ಮತ್ತು ಕ್ರೀಡೆಗಳಡಿಯ ಯೋಜನೆಗಳು | ಕರ್ನಾಟಕ ರಾಜ್ಯ ಎನ್‌ಎಸ್‌ಎಸ್ ಕೋಶ | 9.69 |
| 4 | ಆರೋಗ್ಯ ಮತ್ತು ಕುಟುಂಬ ಕಲ್ಯಾಣದಡಿಯ ಯೋಜನೆಗಳು | ಯೋಗ, ಯೋಜನೆ – ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ | 0.17 |
| 5 | ಪಂಚಾಯತ್ ಸಶಕ್ತೀಕರಣ ಅಭಿಯಾನ | ಅಬ್ದುಲ್ ನಜೀರ್‌ಸಾಬ್ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಂಸ್ಥೆ, ಮೈಸೂರು | 15.08 |
| 6 | ರಾಷ್ಟ್ರೀಯ ಏಡ್ಸ್ ಮತ್ತು ನಿಯಂತ್ರಣ ಸಂಸ್ಥೆ (ನ್ಯಾಕೋ) | ಕರ್ನಾಟಕ ರಾಜ್ಯ ಏಡ್ಸ್ ನಿವಾರಣಾ ಸೊಸೈಟಿ, ಬೆಂಗಳೂರು | 69.84 |
| ಒಟ್ಟು | | | **98.61** |

*ಆಕರ: ಹಣಕಾಸು ನಿಧಿಗಳು.*

## 1.3 ರಾಜಸ್ವ ಸ್ವೀಕೃತಿಗಳು

ಕರ್ನಾಟಕ ಸರ್ಕಾರದ ವಿತ್ತಪರಿಸ್ಥಿತಿಯು ಬಹುಪಾಲು ರಾಜಸ್ವದೆಡೆಯಿಂದ ಪ್ರಭಾವಿತವಾಗಿದ್ದು, ರಾಜಸ್ವ ಸ್ವೀಕೃತಿಗಳು 2012–13ರಲ್ಲಿದ್ದ ₹78,176 ಕೋಟಿಯಿಂದ 2016–17ರಲ್ಲಿ ₹1,33,214 ಕೋಟಿಗೆ ಸತತವಾದ ಏರಿಕೆಯನ್ನು ತೋರಿಸಿದೆ. ಈ ಅವಧಿಯಲ್ಲಿ ಸರಾಸರಿ ಶೇಕಡ 71ರಷ್ಟು ಆದಾಯವು ರಾಜ್ಯದ ಸ್ವಂತ ಸಂಪನ್ಮೂಲಗಳಿಂದ ಬಂದಿದೆ. ಉಳಿದ ಭಾಗ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯದ

---

[1] ರಾಜ್ಯದ ನಿರ್ದಿಷ್ಟ ಕಾರ್ಯಕ್ರಮಗಳು ಅನುಷ್ಠಾನಗೊಳಿಸಲು ಭಾರತ ಸರ್ಕಾರದಿಂದ ನಿಧಿಗಳನ್ನು ಸ್ವೀಕರಿಸಲು ರಾಜ್ಯ ಸರ್ಕಾರದಿಂದ ಅಧಿಕೃತಗೊಂಡ ಯಾವುದೇ ಸಂಸ್ಥೆ/ಸಂಘಟನೆ, ಸರ್ಕಾರೇತರ ಸಂಸ್ಥೆಗಳು ಮತ್ತು ಕೇಂದ್ರ ಸ್ವಾಯುತ್ತ ಸಂಸ್ಥೆಗಳು ರಾಜ್ಯ ಅನುಷ್ಠಾನಗೊಳಿಸುವ ಏಜೆನ್ಸಿಗಳಲ್ಲಿ ಸೇರಿವೆ.

ಪಾಲು ಮತ್ತು ಸಹಾಯಾನುದಾನ ಮತ್ತು ವಂತಿಗೆಗಳ ರೂಪದಲ್ಲಿ ಕೇಂದ್ರ ಸರ್ಕಾರದಿಂದ ವರ್ಗಾವಣೆಯಾಗಿದೆ.

ತೆರಿಗೆಯ ವಿನ್ಯಾಸದ ಪುನರ್ವ್ಯವಸ್ಥೆ ಮತ್ತು ಸರಳೀಕರಣದ ಜೊತೆಗೆ ತೆರಿಗೆ ಸಲ್ಲಿಕೆಗಳ ಕ್ರಿಯೆಯನ್ನು ಸುಲಭಗೊಳಿಸಿರುವುದು, ವಿದ್ಯುನ್ಮಾನ ತೆರಿಗೆ ಪಾವತಿ ಮತ್ತು ಎಲ್ಲಿ ಬೇಕಾದರೂ ನೋಂದಣಿಯಂತಹವುಗಳಿಂದ ವಿವಿಧ ತೆರಿಗೆಗಳ ಸಂಪನ್ಮೂಲ ಸಂಗ್ರಹವು ಪ್ರಭಾವಶಾಲಿಯಾಗಿ ತೆರಿಗೆ ವಸೂಲಿಯಲ್ಲಿ ಸತತವಾಗಿ ಉತ್ತಮ ಕಾರ್ಯವನ್ನು ಖಚಿತಪಡಿಸಿದೆ. ತೆರಿಗೆ ಆದಾಯವು ಸುಸಂಗತವಾಗಿ ಏರುತ್ತಿದ್ದರೂ ಕರ್ನಾಟಕ ಸರ್ಕಾರವು ತೆರಿಗೆಯೇತರ ಆದಾಯ ಸಂಗ್ರಹವನ್ನು ಉತ್ತಮ ಪಡಿಸಿಲ್ಲವಾದ್ದರಿಂದ ಅದು 2012–13 ರಿಂದ 2016–17ರ ಅವಧಿಯಲ್ಲಿ ಶೇಕಡ 4ರಿಂದ 5ರ ನಡುವೆಯೇ ಇದೆ. ಇದನ್ನು **ಕಂಡಿಕೆ 1.3.1.2**ರಲ್ಲಿ ವಿವರವಾಗಿ ಚರ್ಚಿಸಲಾಗಿದೆ. ರಾಜ್ಯದ ಎಫ್‌ಆರ್‌ಬಿಎಂ ಸಮಿತಿಯು ಈ ಅಂಶವನ್ನು ಗುರುತಿಸಿ ಇಲಾಖೆಗಳು ತಮ್ಮ ತೆರಿಗೆಯೇತರ ಆದಾಯವನ್ನು ನಿಯತಕಾಲಿಕವಾಗಿ ಶುಲ್ಕಗಳು ಮತ್ತು ಬಳಕೆದಾರರ ಶುಲ್ಕಗಳ ಪರಿಷ್ಕರಣೆಯ ಮೂಲಕ ಸುಧಾರಿಸಲು ಸಲಹೆ ನೀಡಿದೆ.

ಸರ್ಕಾರದ ರಾಜಸ್ವ ಸ್ವೀಕೃತಿಗಳ ವಿವರಗಳನ್ನು ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ–14 ನೀಡುತ್ತದೆ. 2012–13 ರಿಂದ 2016–17ರ ಅವಧಿಯಲ್ಲಿ ರಾಜಸ್ವ ಸ್ವೀಕೃತಿಗಳ ಪ್ರವೃತ್ತಿಯನ್ನು ಹಾಗೂ ಸಂಯೋಜನೆಯನ್ನು **ಅನುಬಂಧ 1.4**ರಲ್ಲಿ ನೀಡಲಾಗಿದೆ ಹಾಗೂ **ನಕ್ಷೆ 1.7**ರಲ್ಲಿ ತೋರಿಸಲಾಗಿದೆ.

**ನಕ್ಷೆ 1.7: ರಾಜಸ್ವ ಸ್ವೀಕೃತಿಗಳ ಪ್ರವೃತ್ತಿಗಳು**




*ಆಕರ: ಹಣಕಾಸು ಲೆಕ್ಕಗಳು.*

**ನಕ್ಷೆ 1.8: 2012–13ರಿಂದ 2016–17ರಲ್ಲಿ ರಾಜಸ್ವ ಸ್ವೀಕೃತಿಗಳ ಶೇಕಡಾವಾರು ಸಂಯೋಜನೆ**



**ನಕ್ಷೆ 1.8** 2016–17ರಲ್ಲಿ ರಾಜಸ್ವದ ಶೇಕಡ 66 ಭಾಗವು ರಾಜ್ಯದ ಸ್ವಂತ ಸಂಪನ್ಮೂಲಗಳಿಂದ ಬಂದಿದ್ದು, ಉಳಿದ ಭಾಗವು ಭಾರತ ಸರ್ಕಾರದಿಂದ ತೆರಿಗೆಗಳಲ್ಲಿನ ರಾಜ್ಯದ ಪಾಲಿನ ರೂಪದಲ್ಲಿ ಮತ್ತು ಸಹಾಯಾನುದಾನಗಳಿಂದ ಬಂದಿರುವುದನ್ನು ಸೂಚಿಸುತ್ತದೆ. ಸ್ವಂತ ತೆರಿಗೆ ಆದಾಯದ ಪಾಲು 2012–13ರಲ್ಲಿ ಶೇಕಡ 69ರಷ್ಟಿದ್ದು, 2013–14ರಲ್ಲಿ ಶೇಕಡ 70ಕ್ಕೇರಿತು. ನಂತರ 2016–17ರಲ್ಲಿ ಅಂತರ ವರ್ಷ ವ್ಯತ್ಯಯಗಳಿಂದ ಶೇಕಡ 62ಕ್ಕೆ ಇಳಿಯಿತು. 2016–17ರಲ್ಲಿ ಕೇಂದ್ರ ತೆರಿಗೆ ವರ್ಗಾವಣೆಗಳಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಏರಿಕೆಯಾಗಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಾಪೇಕ್ಷವಾಗಿ ರಾಜಸ್ವ ಸ್ವೀಕೃತಿಗಳ ಪ್ರವೃತ್ತಿಯನ್ನು **ಕೋಷ್ಟಕ 1.8**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.8: ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಾಪೇಕ್ಷವಾಗಿ ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ**

| | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ರಾಜಸ್ವ ಸ್ವೀಕೃತಿಗಳು (ಕೋಟಿ ರೂಪಾಯಿಗಳಲ್ಲಿ) | 78,176 | 89,542 | 1,04,142 | 1,18,817 | 1,33,214 |
| ರಾಜಸ್ವ ಸ್ವೀಕೃತಿಗಳ ವೃದ್ಧಿಯ ದರ (ಶೇಕಡಾವಾರು) | 12.0 | 14.5 | 16.3 | 14.1 | 12.1 |
| ರಾಜ್ಯದ ಸ್ವಂತ ತೆರಿಗೆಗಳ ವೃದ್ಧಿಯ ದರ (ಶೇಕಡಾವಾರು) | 15.7 | 16.5 | 12.1 | 7.6 | 9.8 |
| ಸ್ವಂತ ತೆರಿಗೆ/ ರಾಒಆಂಉ (ಶೇಕಡಾವಾರು) | 7.8 | 7.6 | 7.6 | 7.3 | 7.4 |
| **ಪ್ಲವನತೆಯ ಅನುಪಾತಗಳು**[2] | | | | | |
| ರಾಜಸ್ವ ಸ್ವೀಕೃತಿಗಳು/ರಾಒಆಂಉ (ಶೇಕಡಾವಾರು) | 11.3 | 10.9 | 11.3 | 11.5 | 11.9 |
| ರಾಒಆಂಉಕ್ಕೆ ಸಂಬಂಧಿಸಿದಂತೆ ಆದಾಯ ಪ್ಲವನತೆ | 0.8 | 0.8 | 1.3 | 1.2 | 1.4 |
| ರಾಒಆಂಉಕ್ಕೆ ಸಂಬಂಧಿಸಿದಂತೆ ರಾಜ್ಯದ ಸ್ವಂತ ತೆರಿಗೆಯ ಪ್ಲವನತೆ | 1.1 | 0.9 | 1.0 | 0.7 | 1.1 |
| ರಾಜ್ಯದ ಸ್ವಂತ ತೆರಿಗೆ ಸಂಬಂಧಿಸಿದಂತೆ ರಾಜಸ್ವ ಪ್ಲವನತೆ | 0.8 | 0.9 | 1.3 | 1.8 | 1.2 |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನ @ (ಕೋಟಿ ರೂಪಾಯಿಗಳಲ್ಲಿ) | 6,91,700 | 8,17,886 | 9,21,788 | 10,27,068 | 11,17,334 |
| ರಾಒಆಂಉಕ್ಕೆ ಸಂಬಂಧಿಸಿದಂತೆ ಬೆಳವಣಿಗೆಯ ದರ | 14.56 | 18.24 | 12.70 | 11.42 | 8.79 |

*ಆಕರ: ಹಣಕಾಸು ಲೆಕ್ಕಗಳು.*

*@ 2012–13ರಿಂದ 2015–16 ರವರೆಗಿನ ರಾಒಆಂಉದ ಅಂಕಿಗಳನ್ನು ಕರ್ನಾಟಕ ಆರ್ಥಿಕ ಸಮೀಕ್ಷೆ 2016–17ರಿಂದ ಪಡೆಯಲಾಗಿದ್ದು, ಇದಕ್ಕೆ 2011–12ನ್ನು ಆಧಾರ ವರ್ಷವಾಗಿ ತೆಗೆದುಕೊಳ್ಳಲಾಗಿದೆ ಮತ್ತು 2016–17ಕ್ಕೆ ಹಣಕಾಸು ಸಚಿವಾಲಯವು ಪತ್ರ ದಿನಾಂಕ 29 ಮಾರ್ಚ್ 2016ರಲ್ಲಿ ತಿಳಿಸಿದಂತೆ ಇದ್ದು ಇದಕ್ಕೆ 2011–12 ಆಧಾರ ವರ್ಷವಾಗಿದೆ.*

- ತೆರಿಗೆ ರಾಜಸ್ವದಲ್ಲಿನ ವೃದ್ಧಿಯಲ್ಲಿನ ಏರುಪೇರಿನಿಂದ ರಾಜ್ಯದ ಸ್ವಂತ ತೆರಿಗೆಯ ಪ್ಲವನತೆಯು ತೂಗಾಡುವ ಪ್ರವೃತ್ತಿಯನ್ನು ತೋರಿಸಿತು ಮತ್ತು 2012–13ರಲ್ಲಿ 1.1ರ ತಾರಕದಲ್ಲಿದ್ದ ಪ್ಲವನತೆಯ ಅನುಪಾತವು 2015–16ರಲ್ಲಿ 0.7ಕ್ಕೆ ಇಳಿದು 2016–17ರಲ್ಲಿ ಮತ್ತೆ 1.1ಕ್ಕೆ ಏರಿತು; ಮತ್ತು

- ರಾಜಸ್ವ ಪ್ಲವನತೆಯು ರಾಜಸ್ವ ಸ್ವೀಕೃತಿಗಳ ಮತ್ತು ರಾಒಆಂಉದ ವೃದ್ಧಿಗೆ ನೇರ ಪ್ರಮಾಣವನ್ನು ಹೊಂದಿದ್ದು ತೂಗಾಡುವ ಪ್ರವೃತ್ತಿಯನ್ನು ತೋರಿಸಿತು ಮತ್ತು 0.8 ಮತ್ತು 1.4ರ ನಡುವೆ ಇದ್ದಿತು. ರಾಜಸ್ವ ಸ್ವೀಕೃತಿಗಳ ವೃದ್ಧಿಯು 2015–16ರಲ್ಲಿ 14.1 ಇದ್ದದ್ದು 2016–17ರಲ್ಲಿ 12.1ಕ್ಕೆ ಇಳಿಯಿತು.

**ನಕ್ಷೆ 1.9** ರಾಒಆಂಉ ಮತ್ತು ಒಟ್ಟು ರಾಜಸ್ವ ಸ್ವೀಕೃತಿಗಳಿಗೆ ಹೋಲಿಸಿದಂತೆ ವೃದ್ಧಿಯ ದರವನ್ನು ತೋರಿಸುತ್ತದೆ ಮತ್ತು **ನಕ್ಷೆ 1.10** ಪ್ಲವನತೆಯ ಅನುಪಾತಗಳ ಪ್ರವೃತ್ತಿಯನ್ನು ಬಿಂಬಿಸುತ್ತದೆ.

[2] ಪ್ಲವನತೆಯ ಅನುಪಾತವು ಮೂಲ ಅಸ್ಥಿರತೆಯ ಬದಲಾವಣೆಗೆ ಸಂಬಂಧಿಸಿದಂತೆ ವಿತ್ತೀಯ ವ್ಯತ್ಯಯದ ಸ್ಥಿತಿಸ್ಥಾಪಕತ್ವವನ್ನು ಅಥವಾ ಪ್ರತಿಕ್ರಿಯೆ ನೀಡುವ ಮಟ್ಟವನ್ನು ಸೂಚಿಸುತ್ತದೆ. ಉದಾಹರಣೆಗೆ ರಾಜಸ್ವ ಪ್ಲವನತೆಯು 0.4ರಲ್ಲಿದೆ ಎಂದರೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಶೇಕಡ ಒಂದರಷ್ಟು ಹೆಚ್ಚಾದಲ್ಲಿ ರಾಜಸ್ವ ಸ್ವೀಕೃತಿಗಳು ಶೇಕಡ 0.4 ಅಂಕಗಳಷ್ಟು ಹೆಚ್ಚುತ್ತವೆ ಎಂಬುದನ್ನು ಸೂಚಿಸುತ್ತದೆ.

**ನಕ್ಷೆ 1.9: ರಾಒಆಂಉದ ಉಲ್ಲೇಖದೊಂದಿಗೆ ರಾಜಸ್ವ ಸ್ವೀಕೃತಿಗಳ ವೃದ್ಧಿ**




*ಆಕರ: ಹಣಕಾಸು ಲೆಕ್ಕಗಳು ಮತ್ತು 2016–17ರ ಆರ್ಥಿಕ ಸಮೀಕ್ಷೆ, ಕರ್ನಾಟಕ ಸರ್ಕಾರ ಮತ್ತು ಹಣಖಾಸು ಸಚಿವಾಲಯ, ಭಾರತ ಸರ್ಕಾರ ಪತ್ರ ದಿನಾಂಕ 29 ಮಾರ್ಚ್ 2016*

**ನಕ್ಷೆ 1.10: ರಾಜಸ್ವ ಪ್ಲವನತೆಯ ಪ್ರವೃತ್ತಿ**




ರಾಒಆಂಉಕ್ಕೆ ಸಂಬಂಧಿಸಿದಂತೆ ರಾಜಸ್ವ ಪ್ಲವನತೆಯು 2015–16ರ ವರೆಗೆ ಸ್ಥಿರವಾದ ವೃದ್ಧಿಯನ್ನು ತೋರಿಸಿದ್ದು, 2016–17ರಲ್ಲಿ ಇಳಿಕೆಯಾಗಿದೆ. ರಾಒಆಂಉಕ್ಕೆ ಸಂಬಂಧಿಸಿದಂತೆ ರಾಜ್ಯದ ಸ್ವಂತ ತೆರಿಗೆ ಪ್ಲವನತೆಯು 2012–13ರಿಂದ 2015–16ರವರೆಗೆ ಇಳಿಕೆಯಾಗಿದ್ದು, 2016–17ರಲ್ಲಿ ಏರಿಕೆಯಾಗಿದೆ.

2016–17ರ ಆರ್ಥಿಕ ಸಮೀಕ್ಷೆಯು, ತೆರಿಗೆಯೇತರ ರಾಜಸ್ವ ಸ್ವೀಕೃತಿಯ ಹಾಗೂ ಒಟ್ಟು ಸ್ವೀಕೃತಿಗಳ ಅನುಪಾತವು ಕಳೆದ ವರ್ಷಗಳಲ್ಲಿ ನಿರಂತರವಾಗಿ ಕುಸಿಯುತ್ತಾ ಬಂದಿದೆ ಎಂದು ಒಪ್ಪಿಕೊಂಡಿದೆ. ರಾಜ್ಯವು ದೇಶದಲ್ಲಿ ರಾಒಆಂಉಕ್ಕೆ ತೆರಿಗೆಯೇತರ ಅನುಪಾತವು ಅತ್ಯಂತ ಕಡಿಮೆಯಿರುವ ರಾಜ್ಯಗಳಲ್ಲೊಂದಾಗಿದೆ (**ಅನುಬಂಧ 1.4**). ಹಿಂದಿನ ಐದು ವರ್ಷಗಳಲ್ಲಿ ಅದು ಶೇಕಡ ಒಂದರಲ್ಲಿ ಇದ್ದು, ಇದು ಕ್ರಯಗಳ ಕಡಿಮೆ ವಸೂಲಿಯಿಂದಾಗಿದೆ. ಹಿಂದಿನ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ವರದಿಗಳಲ್ಲಿ ಆಸ್ಪತ್ರೆಗಳು, ತೋಟಗಾರಿಕೆಯಂತಹ ಇಲಾಖೆಗಳು ಬಳಕೆದಾರರ ಶುಲ್ಕ/ಬಾಡಿಗೆಗಳನ್ನು ಸಂಗ್ರಹಿಸಿ ರಾಜ್ಯದ ಸಂಚಿತ ನಿಧಿಗೆ ಜಮೆ ಮಾಡದೇ ಬಳಸಿಕೊಂಡಿದ್ದನ್ನು ವರದಿ ಮಾಡಲಾಗಿತ್ತು. ಅನೇಕ ಇಲಾಖೆಗಳಲ್ಲಿ ಬಳಕೆದಾರರ ಶುಲ್ಕ, ದಂಡ ಮತ್ತಿತರ ತೆರಿಗೆಯೇತರ ಸ್ವೀಕೃತಿಗಳನ್ನು ಬಹಳ ವರ್ಷಗಳಿಂದ ಪರಿಷ್ಕರಿಸಲಾಗಿಲ್ಲ. ದರಗಳ ಪರಿಷ್ಕರಣೆ ಮತ್ತು ಸುಧಾರಿತ ಸಂಗ್ರಹಣಾ ವ್ಯವಸ್ಥೆಯಿಂದಲೂ ಸಹ ರಾಜಸ್ವ ಹೆಚ್ಚಳವು ಈಗಿರುವ ಕೆಳಸ್ತರದ ಕಾರಣ ಅಧಿಕವಾಗಲಾರದು.

ವೆಚ್ಚ ಸುಧಾರಣಾ ಸಮಿತಿಯೂ 2010ರಲ್ಲಿ ಬಳಕೆದಾರರ ಅನುಭೋಗದ ಬೆಲೆಯಿಂದ ಆದಾಯವನ್ನು ಹೆಚ್ಚಿಸಲು ಅನೇಕ ಶಿಫಾರಸ್ಸುಗಳನ್ನು ಮಾಡಿದ್ದರೂ ಸಹ, ಇದು ಕಾರ್ಯಗತವಾಗಿಲ್ಲ. ಹಿಂದಿನ ವರದಿಯಲ್ಲಿ ವರದಿ ಮಾಡಿದಂತೆ ಇದಕ್ಕೆ ಉತ್ತರವಾಗಿ ಸರ್ಕಾರವು ಪ್ರಸ್ತುತ ಬಳಕೆದಾರರ ಅನುಭೋಗದ ಬೆಲೆಯ ಸಂಗ್ರಹದ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಲಾಗುವುದಾಗಿ ಹೇಳಿದೆ. ಈ ಬಗ್ಗೆ ಮುಂದಿನ ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ (ಡಿಸೆಂಬರ್ 2017).

### 1.3.1 ರಾಜ್ಯದ ಸ್ವಂತ ಸಂಪನ್ಮೂಲಗಳು

ರಾಜ್ಯದ ತೆರಿಗೆ ಆದಾಯವು 2016–17ರಲ್ಲಿ ಮಧ್ಯಮಾವಧಿ ವಿತ್ತೀಯ ಯೋಜನೆಗಳ ಪ್ರಕ್ಷೇಪಣೆಗಿಂತ ₹15,507 ಕೋಟಿಯಷ್ಟು ಹಾಗೂ ಆಯವ್ಯಯ ಅಂದಾಜುಗಳಿಗಿಂತ ₹908 ಕೋಟಿಯಷ್ಟು ಕಡಿಮೆಯಿತ್ತು. ತೆರಿಗೆಯೇತರ ಆದಾಯವು ಮಧ್ಯಮಾವಧಿ ವಿತ್ತೀಯ ಯೋಜನೆಯ ಅಂದಾಜಿಗಿಂತಲೂ ಗಣನೀಯವಾಗಿ ಹೆಚ್ಚಿದ್ದು (₹870 ಕೋಟಿ), ಮತ್ತು ಆಯವ್ಯಯ ಅಂದಾಜುಗಳಿಗಿಂತ ₹425 ಕೋಟಿಗಳಷ್ಟು ಕಡಿಮೆಯಾಗಿತ್ತು. ವಿವರಗಳನ್ನು **ಕೋಷ್ಟಕ 1.9**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.9: 2016–17ರಲ್ಲಿ ತೆರಿಗೆ ಹಾಗೂ ತೆರಿಗೆಯೇತರ ಆದಾಯಗಳ ಪ್ರಕ್ಷೇಪಣೆಗಳು**

(ಕೋಟಿ ರೂಪಾಯಿಗಳಲ್ಲಿ)

| | ಆಯವ್ಯಯ ಅಂದಾಜುಗಳು | ಮಧ್ಯಮಾವಧಿ ವಿತ್ತೀಯ ಯೋಜನೆ ಅಂದಾಜು | ವಾಸ್ತವಿಕ |
|---|---|---|---|
| ತೆರಿಗೆ ಆದಾಯ | 83,864 | 98,463 | 82,956 |
| ತೆರಿಗೆಯೇತರ ಆದಾಯ | 6,220 | 4,925 | 5,795 |

#### 1.3.1.1 ತೆರಿಗೆ ಆದಾಯ

2016–17ನೇ ವರ್ಷದಲ್ಲಿ ರಾಜ್ಯದ ತೆರಿಗೆ ಆದಾಯದಲ್ಲಿ ಮಾರಾಟಗಳು, ವಾಣಿಜ್ಯ ಇತ್ಯಾದಿಗಳ ಮೇಲಿನ ತೆರಿಗೆಗಳು ಪ್ರಮುಖ ಮೂಲವಾಗಿದ್ದು (ಶೇಕಡ 56), ರಾಜ್ಯ ಅಬಕಾರಿ (ಶೇಕಡ 20), ಮುದ್ರಾಂಕ ಮತ್ತು ನೋಂದಣಿ ಶುಲ್ಕ (ಶೇಕಡ 9) ಹಾಗೂ ವಾಹನಗಳ ಮೇಲಿನ ತೆರಿಗೆಗಳು (ಶೇಕಡ 7) ನಂತರದ ಸ್ಥಾನದಲ್ಲಿದ್ದವು. 2012–13 ರಿಂದ 2016–17ರ ಅವಧಿಯಲ್ಲಿ ತೆರಿಗೆ ಆದಾಯದ ಪ್ರಮುಖ ಅಂಗಗಳ ಪ್ರವೃತ್ತಿಯನ್ನು **ಕೋಷ್ಟಕ 1.10** ಮತ್ತು **ನಕ್ಷೆ 1.11**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 1.10: ತೆರಿಗೆ ಹಾಗೂ ತೆರಿಗೆಯೇತರ ಆದಾಯಗಳ ಪ್ರಕ್ಷೇಪಣೆಗಳು**

(ಕೋಟಿ ರೂಪಾಯಿಗಳಲ್ಲಿ ಮತ್ತು ಶೇಕಡಾವಾರು ವೃದ್ಧಿದರ)

| ರಾಜಸ್ವ ಶೀರ್ಷಿಕೆ | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ಮಾರಾಟಗಳು, ವ್ಯಾಪಾರ ಮುಂತಾದವುಗಳ ಮೇಲಿನ ತೆರಿಗೆ | 28,414 | 33,719 | 38,286 | 40,449 | 46,105 |
| ವೃದ್ಧಿಯ ದರ | 13.57 | 18.67 | 13.54 | 5.65 | 13.98 |
| ರಾಜ್ಯ ಅಬಕಾರಿ | 11,070 | 12,828 | 13,801 | 15,333 | 16,484 |
| ವೃದ್ಧಿಯ ದರ | 13.24 | 15.88 | 7.58 | 11.10 | 7.51 |
| ಮುದ್ರಾಂಕಗಳು ಮತ್ತು ನೋಂದಣಿ ಶುಲ್ಕಗಳು | 5,225 | 6,189 | 7,026 | 8,215 | 7,806 |
| ವೃದ್ಧಿಯ ದರ | 13.02 | 18.45 | 13.52 | 16.92 | (–) 4.98 |
| ವಾಹನಗಳ ಮೇಲಿನ ತೆರಿಗೆ | 3,830 | 3,911 | 4,541 | 5,001 | 5,594 |
| ವೃದ್ಧಿಯ ದರ | 29.52 | 2.11 | 16.11 | 10.13 | 11.86 |
| ಭೂ ಕಂದಾಯ | 205 | 199 | 186 | 181 | 209 |
| ವೃದ್ಧಿಯ ದರ | (–) 4.65 | (–) 2.93 | (–) 6.53 | (–) 2.69 | 15.47 |
| ಸರಕು ಮತ್ತು ಪ್ರಯಾಣಿಕರ ಮೇಲಿನ ತೆರಿಗೆಗಳು | 2,181 | 2,626 | 3,038 | 3,125 | 3,306 |
| ವೃದ್ಧಿಯ ದರ | 29.05 | 20.40 | 15.69 | 2.86 | 5.79 |

| ರಾಜಸ್ವ ಶೀರ್ಷಿಕೆ | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ಇತರ ತೆರಿಗೆಗಳು[3] | 2,829 | 3,131 | 3,302 | 3,246 | 3,452 |
| ವೃದ್ಧಿಯ ದರ | 28.88 | 10.68 | 5.46 | (–) 1.70 | 6.35 |
| ಒಟ್ಟು | **53,754** | **62,603** | **70,180** | **75,550** | **82,956** |

*ಆಕರ: ಆಯಾ ವರ್ಷದ ಹಣಕಾಸು ಲೆಕ್ಕಗಳು.*

ನಕ್ಷೆ 1.11: ಪ್ರಮುಖ ತೆರಿಗೆ ಆದಾಯಗಳ ವೃದ್ಧಿ ಪ್ರವೃತ್ತಿ




2012–13 ರಿಂದ 2016–17ರ ಅವಧಿಯಲ್ಲಿ ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಿನ ತೆರಿಗೆಯ ವೃದ್ಧಿಯ ದರವು ಶೇಕಡ 5.65 ಮತ್ತು 18.67ರ ನಡುವೆ ಇದ್ದಿತು. 2016–17ನೇ ವರ್ಷದಲ್ಲಿ ವೃದ್ಧಿದರವು ಶೇಕಡ 14ರಷ್ಟಿತ್ತು.

ರಾಜ್ಯ ಅಬಕಾರಿಯು, ರಾಜ್ಯದ ಸ್ವಂತ ತೆರಿಗೆ ಆದಾಯದಲ್ಲಿ ಎರಡನೇ ಅತಿ ದೊಡ್ಡ ಕೊಡುಗೆ ನೀಡಿದೆ. 2012–13ರಲ್ಲಿ ಶೇಕಡ 13.24ರಷ್ಟಿದ್ದ ವೃದ್ಧಿ ದರವು 2013–14ಕ್ಕೆ ಶೇಕಡ 15.88ಕ್ಕೆ ಏರಿ 2016–17ರಲ್ಲಿ ಶೇಕಡ 7.51ಕ್ಕೆ ಇಳಿಯಿತು.

ಮುದ್ರಾಂಕ ಮತ್ತು ನೋಂದಣಿ ಶುಲ್ಕಗಳೂ ಸಹ ಸ್ವಂತ ತೆರಿಗೆ ಆದಾಯಕ್ಕೆ ಕೊಡುಗೆ ನೀಡಿದೆ. 2012–13 ರಿಂದ 2016–17ರ ಅವಧಿಯಲ್ಲಿ ವೃದ್ಧಿದರವು ಮಂದವಾಗಿತ್ತು. 2016–17ರಲ್ಲಿ ಅದು ಶೇಕಡ (–)4.98ರಷ್ಟಿದ್ದು, ಸಂಗ್ರಹಣೆಯನ್ನು ಉತ್ತಮಗೊಳಿಸಲು ಕ್ರಮದ ಅಗತ್ಯವಿದೆ. ಮಧ್ಯಮಾವಧಿ ವಿತ್ತೀಯ ಯೋಜನೆ 2017–21ರ ಅನ್ವಯ ನೋಟು ಅಮಾನ್ಯೀಕರಣವು ಮುದ್ರಾಂಕ ಮತ್ತು ನೋಂದಣಿ ರಾಜಸ್ವ ಸಂಗ್ರಹಣೆಯ ಮೇಲೆ ಅತ್ಯಂತ ಪ್ರಭಾವ ಬೀರಿತ್ತು.

ವಾಹನಗಳ ಮೇಲಿನ ತೆರಿಗೆಯು ಸ್ವಂತ ತೆರಿಗೆ ಆದಾಯದ ಗಣನಾರ್ಹ ಕೊಡುಗೆಯ ಭಾಗವಾಗಿದೆ. ಈ ಶೀರ್ಷಿಕೆಯಡಿ ವೃದ್ಧಿದರವು 2013–14ರಲ್ಲಿ ಶೇಕಡ 2.11ರಷ್ಟಿದ್ದು, 2014–15ರಲ್ಲಿ ಶೇಕಡ 16.11ರಷ್ಟು ಹೆಚ್ಚಳವಾಗಿದ್ದು 2016–17ರಲ್ಲಿ ಶೇಕಡ 11.86ಕ್ಕೆ ಇಳಿಯಿತು.

### ಸಂಗ್ರಹಣಾ ವೆಚ್ಚ

2014–15 ರಿಂದ 2016–17ರ ಅವಧಿಯಲ್ಲಿ ವಾಹನಗಳ ಮೇಲಿನ ತೆರಿಗೆ, ಮಾರಾಟ, ವ್ಯಾಪಾರ ಇತ್ಯಾದಿಗಳ ಮೇಲಿನ ತೆರಿಗೆ, ಮುದ್ರಾಂಕ ಮತ್ತು ನೋಂದಣಿ ಶುಲ್ಕ ಮತ್ತು ರಾಜ್ಯ ಅಬಕಾರಿ ಮೇಲಿನ ತೆರಿಗೆಯ ಒಟ್ಟು ಸಂಗ್ರಹಣೆ, ಸಂಗ್ರಹಣೆಗಾಗಿ ಮಾಡಿದ ವೆಚ್ಚ ಮತ್ತು ಸಂಗ್ರಹಣೆಯ ಮೊತ್ತಕ್ಕೆ ಸಂಗ್ರಹಣಾ ವೆಚ್ಚದ ಶೇಕಡಾವಾರುಗಳನ್ನು, ಆಯಾ ವರ್ಷಗಳಿಗೆ ಹಿಂದಿನ ವರ್ಷದ ಅಖಿಲ ಭಾರತ ಸರಾಸರಿ ಸಂಗ್ರಹಣಾ ವೆಚ್ಚವನ್ನು **ಕೋಷ್ಟಕ 1.11**ರಲ್ಲಿ ನೀಡಲಾಗಿದೆ.

[3] ಇತರೆ ತೆರಿಗೆಗಳು ಕೃಷಿ ಆದಾಯದ ಮೇಲಿನ ತೆರಿಗೆ (₹1.00 ಕೋಟಿ), ವಿದ್ಯುಚ್ಛಕ್ತಿ ಮೇಲಿನ ಸುಂಕ ಮತ್ತು ತೆರಿಗೆ (₹1,451 ಕೋಟಿ), ಆದಾಯ ಮತ್ತು ವೆಚ್ಚಗಳ ಮೇಲಿನ ಇತರೆ ತೆರಿಗೆ (₹901 ಕೋಟಿ) ಮತ್ತು ಸಾಮಗ್ರಿಗಳು ಮತ್ತು ಸೇವೆಗಳ ಮೇಲಿನ ಇತರ ತೆರಿಗೆ ಮತ್ತು ಸುಂಕಗಳಳನ್ನು (₹1,099 ಕೋಟಿ) ಒಳಗೊಂಡಿದೆ.

**ಕೋಷ್ಟಕ 1.11: ಸಂಗ್ರಹಣಾ ವೆಚ್ಚಗಳು**

| ಸ್ವೀಕೃತಿ | ವರ್ಷ | ಒಟ್ಟು ಸಂಗ್ರಹಣೆ (ಕೋಟಿ ರೂಪಾಯಿಗಳಲ್ಲಿ) | ಸಂಗ್ರಹಣೆಯ ಮೇಲಿನ ವೆಚ್ಚ@ | ಒಟ್ಟು ಸಂಗ್ರಹಣೆಗೆ ಹೋಲಿಸಿದಲ್ಲಿ ಶೇಕಡಾವಾರು ಸಂಗ್ರಹಣಾ ವೆಚ್ಚ | ಹಿಂದಿನ ವರ್ಷದಲ್ಲಿ ಅಖಿಲ ಭಾರತ ಸರಾಸರಿ ಶೇಕಡಾವಾರು |
|---|---|---|---|---|---|
| ಮೋಟಾರು ವಾಹನಗಳು | 2014–15 | 4,544.17 | 82.52 | 1.82 | 6.25 |
| | 2015–16 | 5,004.35 | 83.37 | 1.67 | 6.08 |
| | 2016–17 | 5,597.93 | 81.41 | 1.45 | 4.99 |
| ಮಾರಾಟಗಳು, ವ್ಯಾಪಾರ ಇತ್ಯಾದಿಗಳ ಮೇಲಿನ ತೆರಿಗೆ | 2014–15 | 39,694.76 | 1,464.43* | 3.69 | 0.88 |
| | 2015–16 | 41,891.72 | 250.47 | 0.60 | 0.91 |
| | 2016–17 | 48,034.12 | 259.35 | 0.54 | 0.66 |
| ಮುದ್ರಾಂಕ ಶುಂಕ ಮತ್ತು ನೋಂದಣಿ | 2014–15 | 7,063.35 | 68.28 | 0.96 | 3.37 |
| | 2015–16 | 8,241.07 | 126.03 | 1.53 | 3.59 |
| | 2016–17 | 7,884.29 | 92.73 | 1.18 | 2.87 |
| ರಾಜ್ಯ ಅಬಕಾರಿ | 2014–15 | 13,805.75 | 130.11 | 0.94 | 1.81 |
| | 2015–16 | 15,337.11 | 132.61 | 0.86 | 2.09 |
| | 2016–17 | 16,488.94 | 146.25 | 0.89 | 3.21 |

*@001–ನಿರ್ದೇಶನ ಮತ್ತು ಆಡಳಿತದಡಿ ಲೆಕ್ಕ ಮಾಡಿದ ವೆಚ್ಚ ಹಾಗೂ ಒಳಶೀರ್ಷಿಕೆ 101–ಸಂಗ್ರಹಣಾ ವೆಚ್ಚದಡಿ ತೋರಿಸಿದ ವೆಚ್ಚವನ್ನು ಪರಿಗಣಿಸಿ ಸಂಗ್ರಹಣಾ ವೆಚ್ಚವನ್ನು ಲೆಕ್ಕಮಾಡಿದೆ.*

**ಸಂಗ್ರಹಣೆಯ ಮೇಲಿನ ವೆಚ್ಚವು ಸಂಗ್ರಹಣಾ ವೆಚ್ಚದಡಿ ಎಚ್‌ಎಎಲ್‌ಗೆ ಸಂಬಂಧಿಸಿದಂತೆ ಮಾಡಿದ ₹1,211.67 ಕೋಟಿಗಳ ಸಹಾಯಾನುದಾನದ ಮೊತ್ತವನ್ನು ಒಳಗೊಂಡಿದೆ.*

2014–17ರ ಅವಧಿಯಲ್ಲಿ ಒಟ್ಟು ಸಂಗ್ರಹಣಾ ಮೊತ್ತಕ್ಕೆ ಹೋಲಿಸಿದಲ್ಲಿ 2014–15ರಲ್ಲಿ ಮಾರಾಟ, ವ್ಯಾಪಾರ ಇತ್ಯಾದಿಗಳ ಮೇಲಿನ ತೆರಿಗೆಯನ್ನು ಹೊರತುಪಡಿಸಿ ಶೇಕಡಾವಾರು ಸಂಗ್ರಹಣಾ ವೆಚ್ಚವು ಅಖಿಲ ಭಾರತ ಸರಾಸರಿಗಿಂತ ಗಮನಾರ್ಹವಾಗಿ ಕಡಿಮೆ ಪ್ರಮಾಣದಲ್ಲಿದೆ.

### 1.3.1.2 ತೆರಿಗೆಯೇತರ ಆದಾಯ

ತೆರಿಗೆಯೇತರ ಆದಾಯವನ್ನು (ಶುಲ್ಕ, ಬಳಕೆದಾರರ ಕರ, ಬಡ್ಡಿ ಸ್ವೀಕೃತಿಗಳು, ಇತ್ಯಾದಿ) ಸಾಮಾನ್ಯವಾಗಿ ಶಾಸನಬದ್ಧವಲ್ಲದ ಅಧ್ಯಾದೇಶಗಳ ಮೂಲಕ ಸಂಗ್ರಹಿಸಲಾಗುತ್ತದೆ ಮತ್ತು ಸಾಮಾನ್ಯವಾಗಿ ಆ ಸ್ವೀಕೃತಿಗಳನ್ನು ಯಾವ ಪೌರರಿಂದ ಸಂಗ್ರಹಿಸಲಾಯಿತೋ ಅವರಿಗೆ ಪ್ರತಿಸೌಲಭ್ಯಗಳನ್ನು ಒದಗಿಸಲಾಗುತ್ತದೆ. ತೆರಿಗೆಯೇತರ ಸ್ವೀಕೃತಿಗಳ ಮೂಲಗಳು ಬಾಕಿ ಇರುವ ಮುಂಗಡಗಳ ಮೇಲಿನ ಬಡ್ಡಿ ಸ್ವೀಕೃತಿಗಳು, ಈಕ್ವಿಟಿ ಹೂಡಿಕೆಗಳ ಮೇಲಿನ ಡಿವಿಡೆಂಡುಗಳು ಮತ್ತು ಲಾಭಾಂಶಗಳು, ಖನಿಜಗಳು, ಅರಣ್ಯ ಮತ್ತು ವನ್ಯಜೀವಿ ಅಥವಾ ಇಂತಹ ಸೇವೆಗಳನ್ನು ಬಳಸಿಕೊಳ್ಳಲು ಅವಕಾಶ ನೀಡಿದ್ದಕ್ಕೆ ಕೊಡಬೇಕಾದ ರಾಜಧನ ಶುಲ್ಕಗಳು ಮತ್ತು ಸರ್ಕಾರದ ಯಂತ್ರವು ಒದಗಿಸುವ ವಿವಿಧ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳಿಗೆ ಬಳಕೆದಾರರು ನೀಡಬೇಕಾದ ಬೆಲೆಗಳು ಮುಂತಾದ ವಿತ್ತೀಯ ಸೇವೆಗಳನ್ನು ಒಳಗೊಂಡಿರುತ್ತವೆ. ಕೆಲವು ಮುಖ್ಯವಾದ ಲೆಕ್ಕಶೀರ್ಷಿಕೆಗಳಡಿಯ ತೆರಿಗೆಯೇತರ ಆದಾಯದ ಸಂಗ್ರಹಣೆಯ ಪ್ರವೃತ್ತಿಯನ್ನು **ಕೋಷ್ಟಕ 1.12** ರಲ್ಲಿ ನೀಡಲಾಗಿದೆ.

**ಕೋಷ್ಟಕ 1.12 ತೆರಿಗೆಯೇತರ ಆದಾಯದ ಸಂಗ್ರಹಣೆಯಲ್ಲಿನ ಪ್ರವೃತ್ತಿ**

(ಕೋಟಿ ರೂಪಾಯಿಗಳಲ್ಲಿ)

| ಆದಾಯ ಶೀರ್ಷಿಕೆ | 2012–13 | 2013–14 | 2014–15 | 2015–16 | 2016–17 | ಹಿಂದಿನ ವರ್ಷಕ್ಕಿಂತ ಹೆಚ್ಚು(+)/ಕಡಿಮೆ(–) (ಶೇಕಡ) |
|---|---|---|---|---|---|---|
| ಬಡ್ಡಿ ಸ್ವೀಕೃತಿಗಳು | 778.55 | 693.17 | 874.74 | 1,292.63 | 1,199.74 | (–) 7.19 |
| ಡಿವಿಡೆಂಡುಗಳು ಮತ್ತು ಲಾಭಾಂಶ | 56.29 | 55.49 | 74.84 | 69.40 | 82.50 | 18.88 |
| ಕಬ್ಬಿಣಯುಕ್ತವಲ್ಲದ | 1,496.49 | 1,474.49 | 1,931.10 | 2,003.80 | 2,419.43 | 20.74 |

| ಆದಾಯ ಶೀರ್ಷಿಕೆ | 2012–13 | 2013–14 | 2014–15 | 2015–16 | 2016–17 | ಹಿಂದಿನ ವರ್ಷಕ್ಕಿಂತ ಹೆಚ್ಚು(+)/ಕಡಿಮೆ(–) (ಶೇಕಡ) |
|---|---|---|---|---|---|---|
| ಗಣಿಗಾರಿಕೆ ಮತ್ತು ಲೋಹಗಳ ಕೈಗಾರಿಕೆಗಳು | | | | | | |
| ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ | 100.70 | 207.54 | 224.00 | 260.74 | 152.90 | (–) 41.36 |
| ಇತರ ಆಡಳಿತಾತ್ಮಕ ಸೇವೆಗಳು | 123.37 | 181.66 | 179.23 | 269.08 | 130.74 | (–) 51.41 |
| ಅರಣ್ಯ ಪ್ರದೇಶ ಮತ್ತು ವನ್ಯಜೀವಿಗಳು | 171.54 | 161.14 | 178.21 | 168.15 | 291.94 | 73.62 |
| ಶಿಕ್ಷಣ, ಕ್ರೀಡೆ ಮತ್ತು ಸಂಸ್ಕೃತಿ | 148.73 | 120.09 | 154.96 | 159.72 | 193.43 | 21.11 |
| ಪೊಲೀಸ್ | 110.84 | 150.71 | 152.07 | 171.87 | 176.47 | 2.68 |
| ರಸ್ತೆಗಳು ಮತ್ತು ಸೇತುವೆಗಳು | 119.49 | 120.14 | 118.38 | 56.11 | 61.70 | 9.96 |
| ಇತರೆ ತೆರಿಗೆಯೇತರ ಸ್ವೀಕೃತಿಗಳು | 860.11 | 867.47 | 800.71 | 903.54 | 1,085.68 | 20.16 |
| **ಒಟ್ಟು** | **3,966.11** | **4,031.90** | **4,688.24** | **5,355.04** | **5,794.53** | **8.21** |

*ಆಕರ: ಹಣಕಾಸು ಲೆಕ್ಕಗಳು.*

### ತೆರಿಗೆಯೇತರ ರಾಜಸ್ವದಡಿ ತಪ್ಪಾದ ಲೆಕ್ಕಹಾಕಿರುವಿಕೆ

ಪ್ರಧಾನ ಮತ್ತು ಒಳಲೆಕ್ಕಶೀರ್ಷಿಕೆಗಳ ಪಟ್ಟಿಯ ಕಂಡಿಕೆ 3.10ರ ಅನ್ವಯ ಹೆಚ್ಚಾಗಿ ಪಾವತಿಯಾದ ವಸೂಲಿಗಳನ್ನು ನಗದು ಅಥವಾ ಬಿಲ್ಲಿನಿಂದ ಕಡಿಮೆ ಸೆಳೆಯುವ ಮೂಲಕ ಅಧಿಕ ಪಾವತಿಯಾದ ಹಣಕಾಸು ವರ್ಷದಲ್ಲೇ ಸಂಬಂಧಿಸಿದ ಸೇವಾ ಲೆಕ್ಕಶೀರ್ಷಿಕೆಯಡಿ ವೆಚ್ಚದ ಕಡಿತವೆಂದು ದಾಖಲಿಸಬೇಕು. ಹಿಂದಿನ ವರ್ಷಗಳಿಗೆ ಸಂಬಂಧಿಸಿದ ಅಧಿಕ ಪಾವತಿಯ ವಸೂಲಾತಿಗಳನ್ನು ಧನ ವಿನಿಯೋಗ ಲೆಕ್ಕಗಳಲ್ಲಿ ಕಾರ್ಯಕಾರಿ ಪ್ರಧಾನ/ಉಪಪ್ರಧಾನ ಲೆಕ್ಕ ಶೀರ್ಷಿಕೆಯಡಿ ಒಟ್ಟು ವೆಚ್ಚವನ್ನು ಬಾಧಿಸದಂತೆ ಪ್ರತ್ಯೇಕ ಒಳಶೀರ್ಷಿಕೆ ಅಧಿಕ ಪಾವತಿಯ ವಸೂಲಾತಿ–ಕಡಿತವೆಂದು ದಾಖಲಿಸಬೇಕು. 2016–17ರಲ್ಲಿ ಹಿಂದಿನ ವರ್ಷಗಳಿಗೆ ಸಂಬಂಧಿಸಿದ ಅಧಿಕ ಪಾವತಿಯ ವಸೂಲಾತಿಗಳಾದ ₹3.87 ಕೋಟಿಗಳನ್ನು ಪ್ರಧಾನ ಲೆಕ್ಕ ಶೀರ್ಷಿಕೆ 0515–ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು–800–ಇತರೆ ಸ್ವೀಕೃತಿಗಳಡಿ ಸ್ವೀಕೃತಿಯೆಂದು ಪರಿಗಣಿಸಲಾಗಿತ್ತು. ಈ ವ್ಯವಹಾರವನ್ನು ತೆರಿಗೆಯೇತರ ರಾಜಸ್ವವಾಗಿ ಪರಿಗಣಿಸಿದ್ದರಿಂದ ತಪ್ಪಾಗಿದ್ದು ಅದು ತೆರಿಗೆಯೇತರ ರಾಜಸ್ವವನ್ನು ಅಧಿಕವಾಗಿ ಹೇಳುವಲ್ಲಿ ಪರಿಣಮಿಸಿತು. ಅದನ್ನು ವೆಚ್ಚದ ಪ್ರಧಾನ ಲೆಕ್ಕಶೀರ್ಷಿಕೆ 2515–ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು–911 ಅಧಿಕ ಪಾವತಿಯ ವಸೂಲಿಯೆಂದು ದಾಖಲಿಸಬೇಕಿತ್ತು.

2016–17ನೇ ಸಾಲಿಗೆ ತೆರಿಗೆಯೇತರ ರಾಜಸ್ವದ ಸಂಯೋಜನೆಯನ್ನು **ನಕ್ಷೆ 1.12**ರಲ್ಲಿ ನೀಡಲಾಗಿದೆ.



### ಬಡ್ಡಿ ಸ್ವೀಕೃತಿಗಳು, ಡಿವಿಡೆಂಡುಗಳು ಮತ್ತು ಲಾಭಾಂಶಗಳು

ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳ ಮೇಲಿನ ಬಡ್ಡಿ ಸ್ವೀಕೃತಿಯ ಜೊತೆಗೆ ಮತ್ತೊಂದು ಪ್ರಮುಖವಾದ ಬಡ್ಡಿ ಉತ್ಪನ್ನದ ಮೂಲವು ರಾಜ್ಯದ ಹೆಚ್ಚುವರಿ ನಗದು ಶಿಲ್ಕುಗಳ ಹೂಡಿಕೆಯಿಂದ ಬಂದದ್ದಾಗಿದೆ. ಭಾರತೀಯ ರಿಜರ್ವ್ ಬ್ಯಾಂಕಿನ ನಿಯಮಾವಳಿಯಂತೆ ರಾಜ್ಯ ಸರ್ಕಾರವು ನಿರ್ವಹಿಸುವ ನಗದು ಉಳಿಕೆಯನ್ನು 14 ದಿನಗಳ ಖಜಾನೆ ಬಿಲ್ಲುಗಳಲ್ಲಿ ಹೂಡಿಕೆ ಮಾಡಲಾಗುವುದು. ನಗದು ನಿರ್ವಹಣೆಯನ್ನು ಉತ್ತಮಗೊಳಿಸಲು ರಾಜ್ಯಸರ್ಕಾರವು ಹೆಚ್ಚುವರಿ ನಗದನ್ನು (ತಕ್ಷಣದ ಅಗತ್ಯಕ್ಕಿಂತ ಹೆಚ್ಚಿನ) 91 ದಿನಗಳ ಖಜಾನೆ ಬಿಲ್ಲುಗಳಲ್ಲಿ ಹೂಡಿಕೆ ಮಾಡುತ್ತಿದೆ. ಪ್ರಸಕ್ತ ವರ್ಷದಲ್ಲಿ ಆಯವ್ಯಯದಲ್ಲಿ ಅಂದಾಜು ಮಾಡಲಾಗಿದ್ದ ₹1,097 ಕೋಟಿಗೆ ಪ್ರತಿಯಾಗಿ ಸಂಗ್ರಹವಾದ ಆದಾಯವು ₹1,054.16 ಕೋಟಿಗಳಾಗಿದ್ದು, ಇದರಲ್ಲಿ 14 ದಿನದ ಟ್ರೆಜರಿ ಬಿಲ್ಲುಗಳಿಂದ ₹349.51 ಕೋಟಿಗಳು ಸಂಗ್ರಹವಾಗಿದ್ದರೆ, 91 ದಿನಗಳ ಟ್ರೆಜರಿ ಬಿಲ್ಲುಗಳು ₹704.65 ಕೋಟಿಗಳನ್ನು ಗಳಿಸಿದೆ.

ಸರ್ಕಾರವು ತನ್ನ ಕಂಪೆನಿ/ನಿಗಮಗಳಿಗೆ ನೀಡಿದ ಸಾಲ ಮತ್ತು ಮುಂಗಡಗಳ ಮೇಲಿನ ಬಡ್ಡಿ ಸಂಗ್ರಹಣೆಯು ₹144.93 ಕೋಟಿಗಳಷ್ಟಿದ್ದು, ಇದು ವರ್ಷದ ಕೊನೆಯಲ್ಲಿ ಉಳಿದಿರುವ ಸಾಲಗಳ ಬಾಕಿಯ ಶೇಕಡ ಒಂದರಷ್ಟಿತ್ತು. ಸ್ವೀಕೃತಿಗಳು ರೇಷ್ಮೆ ಫಿಲೇಚರುಗಳು ಮುಂತಾದ ಇಲಾಖಾ ವತಿಯ ವಾಣಿಜ್ಯ ಉದ್ದಿಮೆಯ ಬಂಡವಾಳ ವೆಚ್ಚದ ಮೇಲಿನ ₹0.67 ಕೋಟಿ ಬಡ್ಡಿಯ ಮೊತ್ತವನ್ನೂ ಒಳಗೊಂಡಿದ್ದು ಇದು ಪುಸ್ತಕ ವರ್ಗಾವಣೆಯ ಮೂಲಕ ಆಗಿದೆ.

ಹಣಕಾಸು ನಿಯಮಗಳು, ಇಲಾಖಾ ಅಧಿಕಾರಿಗಳು ಉಳಿತಾಯ ಖಾತೆಗಳಲ್ಲಿ ಹಣವನ್ನು ಠೇವಣಿ ಇಡುವುದನ್ನು ನಿರ್ಬಂಧಿಸುತ್ತದೆ. ಆದಾಗ್ಯೂ ಇಲಾಖಾ ಅಧಿಕಾರಿಗಳಿಂದ ದೊಡ್ಡ ಮೊತ್ತದ ಹಣವನ್ನು ಬ್ಯಾಂಕುಗಳಲ್ಲಿ ಇಡಲಾಗಿತ್ತು. 2016–17ರಲ್ಲಿ ಬ್ಯಾಂಕುಗಳಲ್ಲಿನ ಠೇವಣಿಗಳ ಮೇಲಿನ ₹20.18 ಕೋಟಿ ಬಡ್ಡಿಯನ್ನು ಲೆಕ್ಕಶೀರ್ಷಿಕೆ '0049–04–800–6–01–ಠೇವಣಿಗಳ ಮೇಲೆ ಸ್ವೀಕರಿಸಿದ ಬಡ್ಡಿ' ಯಡಿ ಲೆಕ್ಕ ಹಾಕಲಾಗಿತ್ತು. ₹0.91 ಕೋಟಿಯ ಬ್ಯಾಂಕ್‌ಗಳಲ್ಲಿಟ್ಟ ಬಳಕೆಯಾಗದ ಅನುದಾನಗಳನ್ನೂ ಸಹ ಬಡ್ಡಿ ಸ್ವೀಕೃತಿಗಳೆಂದು ಜಮೆ ಮಾಡಲಾಗಿತ್ತು. ಅದಲ್ಲದೇ ಹಣಕಾಸು ಆಯೋಗ ಅನುದಾನಕ್ಕೆ ಸಂಬಂಧಿಸಿದ ಉಳಿತಾಯ ಖಾತೆಯಲ್ಲಿ ಕೂಡಿದ್ದ ₹1.19 ಕೋಟಿಯನ್ನೂ ಸಹ ಬಡ್ಡಿ ಸ್ವೀಕೃತಿಯೆಂದು ಮೇಲೆ ಹೇಳಿದ ಲೆಕ್ಕಶೀರ್ಷಿಕೆಗೆ ಜಮೆ ಮಾಡಲಾಗಿದ್ದು ಅಸಲಿ ಮೊತ್ತಕ್ಕೆ ಸಂಬಂಧಿಸಿದಂತೆ ಲೆಕ್ಕದ ಪುಸ್ತಕಗಳಲ್ಲಿ ತಪ್ಪಾಗಿ ವರ್ಗೀಕರಿಸಲಾಗಿತ್ತು.

2016–17ನೇ ವರ್ಷದಲ್ಲಿ ಕಂಪನಿಗಳು ಹೂಡಿಕೆಯ ಮೇಲಿನ ಪ್ರತಿಫಲಗಳನ್ನು ಡಿವಿಡೆಂಡ್ ರೂಪದಲ್ಲಿ ಪ್ರಕಟಿಸಿ ಸರ್ಕಾರಿ ಲೆಕ್ಕಕ್ಕೆ ಜಮಾ ಮಾಡಿದ ಮೊತ್ತವು ₹82.50 ಕೋಟಿಗಳಷ್ಟಿತ್ತು. ಸರ್ಕಾರದ ಹೂಡಿಕೆಯ ಪ್ರಮಾಣವನ್ನು (₹63,115 ಕೋಟಿ) ಪರಿಗಣಿಸಿದಾಗ ಪ್ರತಿಫಲವು ನಗಣ್ಯವಾದ ಶೇಕಡ 0.13ರಷ್ಟಿತ್ತು.

### ಇತರ ತೆರಿಗೆಯೇತರ ಸ್ವೀಕೃತಿಗಳು

ಇತರ ತೆರಿಗೆಯೇತರ ಆದಾಯವು ಭಾರಿ ಹಾಗೂ ಸಣ್ಣ ಖನಿಜಗಳ ಮೇಲಿನ ರಾಜಧನವನ್ನು ಒಳಗೊಂಡಿದೆ. ಆಯವ್ಯಯ ಅಂದಾಜುಗಳ ಪ್ರಕಾರ ₹2,137 ಕೋಟಿಗಳಿಗೆದುರಾಗಿ ವಾಸ್ತವ ಸಂಗ್ರಹವು ₹2,229 ಕೋಟಿಗಳಾಗಿತ್ತು. ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ₹317 ಕೋಟಿಗಳಷ್ಟು ಏರಿಕೆಯಾಗಿದೆ.

### 1.3.2 ಕೇಂದ್ರ ಸರ್ಕಾರದಿಂದ ಸಹಾಯಾನುದಾನ

**ಕೋಷ್ಟಕ 1.13**ರಲ್ಲಿ ತೋರಿಸಿರುವಂತೆ ಭಾರತ ಸರ್ಕಾರದಿಂದ ಸಹಾಯಾನುದಾನಗಳು ಮತ್ತು ವಂತಿಗೆಗಳು 2012–13ರಲ್ಲಿ ₹7,809 ಕೋಟಿ ಇದ್ದುದು 2016–17ರಲ್ಲಿ ₹15,703 ಕೋಟಿಗಳಿಗೆ ಏರಿಕೆಯಾಗಿದ್ದಿತು.

**ಕೋಷ್ಟಕ 1.13: ಭಾರತ ಸರ್ಕಾರದಿಂದ ಸಹಾಯಾನುದಾನ**

**(ಕೋಟಿ ರೂಪಾಯಿಗಳಲ್ಲಿ)**

| ವಿವರ | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ಯೋಜನೇತರ ಅನುದಾನಗಳು | 2,455.43 | 3,139.79 | 3,634.58 | 5,547.34 | 7,045.21 |
| ರಾಜ್ಯ ಯೋಜನೆಗೆ ಅನುದಾನಗಳು | 2,908.74 | 3,341.15 | 9,096.87 | 8,105.31 | 8,101.62 |
| ಕೇಂದ್ರ ಯೋಜನೆಗಳಿಗೆ ಅನುದಾನಗಳು | 124.59 | 191.70 | 158.52 | 138.90 | 116.06 |
| ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನಗಳು | 2,320.66 | 2,426.18 | 1,729.48 | 137.20 | 440.30 |
| ವಿಶೇಷ ಯೋಜನೆಗಳಿಗೆ ಅನುದಾನಗಳು | – | – | – | – | – |
| **ಒಟ್ಟು** | **7,809.42** | **9,098.82** | **14,619.45** | **13,928.75** | **15,703.19** |
| ಹಿಂದಿನ ವರ್ಷಕ್ಕಿಂತ ಶೇಕಡಾವಾರು ಹೆಚ್ಚಳ | (–) 4.39 | 16.51 | 60.67 | (–) 4.72 | 12.74 |
| ರಾಜಸ್ವ ಸ್ವೀಕೃತಿಗಳ ಶತಾಂಶವಾಗಿ ಒಟ್ಟು ಅನುದಾನಗಳು | 10.00 | 10.16 | 14.04 | 11.72 | 11.79 |

*ಆಕರ: ಹಣಕಾಸು ಲೆಕ್ಕಗಳು.*

ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ 2016–17 ವರ್ಷದಲ್ಲಿ ₹1,774 ಕೋಟಿಗಳಷ್ಟು ಏರಿಕೆಯಾಗಿದೆ. ಇದು ರಾಜ್ಯ ಯೋಜನೇತರ ಅನುದಾನಗಳು (₹1,498 ಕೋಟಿ) ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನ (₹303 ಕೋಟಿ) ಗಳಲ್ಲಿನ ಅಧಿಕ ಸ್ವೀಕೃತಿಯಿಂದಾಗಿದ್ದು, ರಾಜ್ಯ ಯೋಜನೆಗಳಿಗೆ ಅನುದಾನಗಳಲ್ಲಿನ (₹4 ಕೋಟಿ) ಮತ್ತು ಕೇಂದ್ರ ಯೋಜನೆಗಳಿಗೆ ಅನುದಾನದಲ್ಲಿನ (₹23 ಕೋಟಿ) ಇಳಿಕೆಯ ಸ್ವೀಕೃತಿಯಿಂದ ಉತ್ತಾರವಾಗಿದೆ.

ಕೇಂದ್ರ ಸರ್ಕಾರವು 1 ಏಪ್ರಿಲ್ 2014ರಿಂದ ಕೇಂದ್ರ ಪುರಸ್ಕೃತ ಯೋಜನೆಯಡಿ ನಿಧಿಗಳ ವರ್ಗಾವಣೆಯು ರಾಜ್ಯದ ಸಂಚಿತ ನಿಧಿಯ ಮೂಲಕವೇ ಬಿಡುಗಡೆ ಮಾಡುವುದಾಗಿ ಮತ್ತು ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ನೇರವಾಗಿ ಮಾಡುವುದಿಲ್ಲವೆಂದು ನಿರ್ಧರಿಸಿತು. ಹಾಗಾಗಿ, ಈ ಕೇಂದ್ರದ ಪಾಲುಗಳೂ ಸಹ ರಾಜ್ಯ ಆಯವ್ಯಯದಲ್ಲಿ ಲಭ್ಯವಿರುತ್ತದೆ. ಆದರೆ, 2014–15 ಮತ್ತು 2015–16ರಲ್ಲಿ ಈ ಪದ್ಧತಿಯನ್ನು ನಿಲ್ಲಿಸಲಾಗಿದ್ದರೂ ಸಹ 2016–17ರಲ್ಲಿ ಕೇಂದ್ರ ಸರ್ಕಾರವು ಸಾಕಷ್ಟು ಮೊತ್ತಗಳನ್ನು ರಾಜ್ಯ ಅನುಷ್ಠಾನ ಏಜೆನ್ಸಿಗಳಿಗೆ/ಸರ್ಕಾರೇತರ ಸಂಸ್ಥೆಗಳಿಗೆ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ನೇರವಾಗಿ ವರ್ಗಾಯಿಸಿತು. ಈ ಕೇಂದ್ರ ಯೋಜನಾ ನಿಧಿಗಳ ನೇರ ವರ್ಗಾವಣೆಯ ವಿವರಗಳನ್ನು **ಕಂಡಿಕೆ 1.2.2**ರಲ್ಲಿ ವಿವರಿಸಲಾಗಿದೆ.

### 1.3.3 ಕೇಂದ್ರ ತೆರಿಗೆ ವರ್ಗಾವಣೆಗಳು

ಕೇಂದ್ರ ಸರ್ಕಾರವು ಸಾಂಸ್ಥಿಕ ತೆರಿಗೆ, ಆದಾಯ ತೆರಿಗೆ, ಸೇವಾ ತೆರಿಗೆ, ಕೇಂದ್ರ ಅಬಕಾರಿ ಸುಂಕಗಳು, ಮುಂತಾದವುಗಳಂತಹ ಕೇಂದ್ರ ತೆರಿಗೆಗಳಲ್ಲಿನ ರಾಜ್ಯ ಸರ್ಕಾರದ ಪಾಲನ್ನು ವರ್ಗಾಯಿಸುತ್ತದೆ. 2012–17ರಲ್ಲಿನ ಕೇಂದ್ರ ತೆರಿಗೆ ವರ್ಗಾವಣೆಗಳಲ್ಲಿನ ಪ್ರವೃತ್ತಿಯನ್ನು **ಕೋಷ್ಟಕ 1.14**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.14: ಕೇಂದ್ರ ತೆರಿಗೆ ವರ್ಗಾವಣೆಗಳಲ್ಲಿನ ಪ್ರವೃತ್ತಿ**

**(ಕೋಟಿ ರೂಪಾಯಿಗಳಲ್ಲಿ)**

| ವಿವರಗಳು | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ಕಾರ್ಪೊರೇಶನ್ ತೆರಿಗೆ | 4,542.84 | 4,643.76 | 5,117.21 | 7,547.57 | 9,211.05 |
| ಕಾರ್ಪೊರೇಶನ್ ತೆರಿಗೆ ಹೊರತುಪಡಿಸಿ ಆದಾಯದ ಮೇಲಿನ ತೆರಿಗೆ | 2,719.73 | 3,057.77 | 3,654.18 | 5,252.47 | 6,401.72 |
| ಸಂಪತ್ತು ತೆರಿಗೆ | 7.66 | 12.75 | 13.81 | 1.65 | 21.08 |
| ಸೀಮಾ ಸುಂಕ | 2,101.59 | 2,252.90 | 2,369.95 | 3,830.22 | 3,962.25 |
| ಕೇಂದ್ರ ಅಬಕಾರಿ ಸುಂಕಗಳು | 1,428.25 | 1,591.16 | 1,338.24 | 3,181.60 | 4,524.54 |
| ಸೇವಾ ತೆರಿಗೆ | 1,847.07 | 2,249.93 | 2,160.75 | 4,153.56 | 4,639.22 |
| ಆದಾಯ ಮತ್ತು ವೆಚ್ಚದ ಮೇಲಿನ ಇತರೆ ತೆರಿಗೆಗಳು | – | – | 0.12 | 0.15 | – |
| ಸರಕು ಮತ್ತು ಸೇವೆಗಳ ಮೇಲಿನ ಇತರ ತೆರಿಗೆ ಮತ್ತು ಸುಂಕಗಳು | – | 0.01 | (–) 0.01 | 16.12 | 0.08 |
| **ಒಟ್ಟು** | **12,647.14** | **13,808.28** | **14,654.25** | **23,983.34** | **28,759.94** |

*ಆಕರ: ಸಂಬಂಧಪಟ್ಟ ವರ್ಷದ ಹಣಕಾಸು ಲೆಕ್ಕಗಳು.*

ಹಿಂದಿನ ಸಾಲಿಗೆ ಹೋಲಿಸಿದಲ್ಲಿ ₹4,777 ಕೋಟಿಗಳಷ್ಟು ಹೆಚ್ಚಳವಾಗಿದ್ದು ಕಾರ್ಪೊರೇಶನ್ ತೆರಿಗೆ (₹1,663 ಕೋಟಿ), ಸೇವಾ ತೆರಿಗೆ (₹486 ಕೋಟಿ), ಕೇಂದ್ರ ಅಬಕಾರಿ ಸುಂಕಗಳು (₹1,343 ಕೋಟಿ) ಕಾರ್ಪೊರೇಶನ್ ತೆರಿಗೆ ಹೊರತುಪಡಿಸಿ ಆದಾಯದ ಮೇಲಿನ ತೆರಿಗೆ (₹1,149 ಕೋಟಿ) ಸೀಮಾ ಸುಂಕ (₹132 ಕೋಟಿ) ಮತ್ತು ಸಂಪತ್ತು ತೆರಿಗೆ (₹20 ಕೋಟಿ)ಗಳಲ್ಲಿ ಹೆಚ್ಚಳವಾಗಿದ್ದು ಸರಕು ಮತ್ತು ಸೇವೆಗಳ ಮೇಲಿನ ಇತರ ತೆರಿಗೆ ಮತ್ತು ಸುಂಕಗಳು (₹16 ಕೋಟಿ) ಮತ್ತು ಆದಾಯ ಮತ್ತು ವೆಚ್ಚದ ಮೇಲಿನ ಇತರ ತೆರಿಗೆಗಳು (₹0.15 ಕೋಟಿ) ಗಳಲ್ಲಿನ ಇಳಿಕೆಯಿಂದ ಉತ್ತಾರವಾಗಿದೆ. 2016–17ರಲ್ಲಿ ಕೇಂದ್ರ ತೆರಿಗೆ ವರ್ಗಾವಣೆಗಳು ರಾಜಸ್ವ ಸ್ವೀಕೃತಿಯ ಶೇಕಡ 22 ರಷ್ಟಿತ್ತು. 2016–17ರಲ್ಲಿ **ನಕ್ಷೆ 1.13**ರಲ್ಲಿ ತೋರಿಸಿರುವಂತೆ ಕೇಂದ್ರ ತೆರಿಗೆ ವರ್ಗಾವಣೆಗಳಲ್ಲಿ ಪ್ರಮುಖ ಅಂಶವು ಕಾರ್ಪೊರೇಶನ್ ತೆರಿಗೆ (ಶೇಕಡ 32), ಕಾರ್ಪೊರೇಶನ್ ತೆರಿಗೆ ಹೊರತುಪಡಿಸಿ ಆದಾಯದ ಮೇಲಿನ ತೆರಿಗೆ (ಶೇಕಡ 22) ಮತ್ತು ಸೇವಾ ತೆರಿಗೆ (ಶೇಕಡ 16).

ಮುಂದುವರೆದು, ಹದಿನಾಲ್ಕನೇ ಹಣಕಾಸು ಆಯೋಗವು ಕೇಂದ್ರ ತೆರಿಗೆಯ ನಿವ್ವಳ ಹುಟ್ಟುವಳಿಯಲ್ಲಿ (ಸೇವಾ ತೆರಿಗೆ ಹೊರತುಪಡಿಸಿ) ಮತ್ತು ಸೇವಾ ತೆರಿಗೆಯ ನಿವ್ವಳ ಹುಟ್ಟುವಳಿಯಲ್ಲಿ ರಾಜ್ಯದ ಪಾಲನ್ನು ಕ್ರಮವಾಗಿ ಶೇಕಡ 4.713 ಮತ್ತು ಶೇಕಡ 4.822ರಷ್ಟು ನಿಗಧಿ ಪಡಿಸಲಾಗಿದೆ. 2016–17ರಲ್ಲಿ ಕೇಂದ್ರ ತೆರಿಗೆಯ ನಿವ್ವಳ ಹುಟ್ಟುವಳಿ ಮತ್ತು ಅದರಲ್ಲಿನ ರಾಜ್ಯದ ಪಾಲನ್ನು **ಕೋಷ್ಟಕ 1.15**ರಲ್ಲಿ ನೀಡಲಾಗಿದೆ ಮತ್ತು ಪ್ರಸಕ್ತ ವರ್ಷದಲ್ಲಿನ ಸಂಯೋಜನೆಯನ್ನು **ನಕ್ಷೆ 1.13**ರಲ್ಲಿ ನೀಡಲಾಗಿದೆ.

### ಕೋಷ್ಟಕ 1.15: 2016–17ರಲ್ಲಿ ಕೇಂದ್ರ ತೆರಿಗೆಯ ನಿವ್ವಳ ಹುಟ್ಟುವಳಿಯಲ್ಲಿನ ಪಾಲು

(ಕೋಟಿ ರೂಪಾಯಿಗಳಲ್ಲಿ)

| ಕ್ರಮ ಸಂಖ್ಯೆ | ತೆರಿಗೆಯ ಸ್ವರೂಪ | ರಾಜ್ಯದ ಪಾಲು | ಸಮಗ್ರ ಭಾರತದ ಒಟ್ಟು (ನಿವ್ವಳ) | ಶೇಕಡಾವಾರು |
|---|---|---|---|---|
| 1 | ಕಾರ್ಪೋರೇಷನ್ ತೆರಿಗೆ | 9,211.05 | 1,95,439.24 | 4.713 |
| 2 | ಕಾರ್ಪೋರೇಷನ್ ತೆರಿಗೆ ಹೊರತುಪಡಿಸಿ ಆದಾಯದ ಮೇಲಿನ ತೆರಿಗೆ | 6,401.72 | 1,35,830.86 | 4.713 |
| 3 | ಸಂಪತ್ತು ತೆರಿಗೆ | 21.08 | 447.43 | 4.711 |
| 4 | ಸೀಮಾ ಸುಂಕ | 3,962.25 | 84,070.39 | 4.713 |
| 5 | ಕೇಂದ್ರ ಅಬಕಾರಿ ಸುಂಕಗಳು | 4,524.54 | 96,001.18 | 4.713 |
| 6 | ಸರಕು ಮತ್ತು ಸೇವೆಗಳ ಮೇಲಿನ ಇತರೆ ತೆರಿಗೆ ಮತ್ತು ಸುಂಕಗಳು | 0.08 | 1.78 | 4.494 |
| 7 | ಸೇವಾ ತೆರಿಗೆ | 4,639.22 | 96,209.43 | 4.822 |
| | ಒಟ್ಟು | **28,759.94** | **6,08,000.31** | |

**ನಕ್ಷೆ 1.13: 2016–17ರಲ್ಲಿ ಕೇಂದ್ರ ತೆರಿಗೆ ವರ್ಗಾವಣೆಗಳ ಸಂಯೋಜನೆ**




*ಆಕರ: ಹಣಕಾಸು ಲೆಕ್ಕಗಳು 2016–17*

### 1.3.4 ಹದಿನಾಲ್ಕನೇ ಹಣಕಾಸು ಆಯೋಗದ ಅನುದಾನಗಳ ಸಮರ್ಪಕ ಬಳಕೆ

#### 1.3.4.1 ಪೀಠಿಕೆ

2015-16ರಿಂದ 2019-20ರ (ನಿರ್ಧಾರಿತ ಅವಧಿ) ನಡುವೆ ಕೇಂದ್ರ ರಾಜ್ಯ ವಿತ್ತೀಯ ಸಂಬಂಧಗಳಿಗೆ ಸೇರಿದ ನಿರ್ದಿಷ್ಟ ಅಂಶಗಳ ಮೇಲೆ ಶಿಫಾರಸ್ಸು ನೀಡಲು ಭಾರತ ಸಂವಿಧಾನದ ಅನುಚ್ಛೇದ 280ರಡಿ 2ನೇ ಜನವರಿ 2013ರಂದು ಹದಿನಾಲ್ಕನೇ ಹಣಕಾಸು ಆಯೋಗವು ರಾಷ್ಟ್ರಪತಿಗಳಿಂದ ರಚಿಸಲ್ಪಟ್ಟಿತು. ಉಲ್ಲೇಖಿತ ನಿಬಂಧನೆಗಳನುಸಾರ, ತೆರಿಗೆಗಳ ಆದಾಯದ ನಿವ್ವಳ ಹುಟ್ಟುವಳಿಯನ್ನು ಕೇಂದ್ರ ಮತ್ತು ರಾಜ್ಯಗಳಿಗೆ ವಿತರಣೆ ಬಗ್ಗೆ, ರಾಜ್ಯಗಳ ಆದಾಯದ ಸಹಾಯಾನುದಾನವನ್ನು ಆಡಳಿತದ ತತ್ವಗಳು ಮತ್ತು ರಾಜ್ಯದ ಪಂಚಾಯತ್ ಮತ್ತು ಮುನಿಸಿಪಾಲಿಟಿಗಳ ಸಂಪನ್ಮೂಲಗಳಿಗೆ ಪೂರಕವಾಗುವಂತೆ ರಾಜ್ಯದ ಸಂಚಿತ ನಿಧಿಯನ್ನು ಅಧಿಕಗೊಳಿಸುವ ಅಗತ್ಯವಿರುವ ಕ್ರಮಗಳ ಬಗ್ಗೆ ಆಯೋಗವು ಶಿಫಾರಸ್ಸು ಮಾಡಬೇಕು.

#### 1.3.4.2 ಅನುದಾನಗಳ ಬಿಡುಗಡೆ

ಆಯೋಗವು 2016-17ರಲ್ಲಿ **ಕೋಷ್ಟಕ 1.16**ರಲ್ಲಿ ತೋರಿಸಿರುವ ವಿಭಾಗಗಳಿಗೆ ₹2,839.76 ಕೋಟಿಗಳ ವರ್ಗಾವಣೆಯನ್ನು ಶಿಫಾರಸ್ಸು ಮಾಡಿತ್ತು.

**ಕೋಷ್ಟಕ 1.16: 2015-16 ಮತ್ತು 2016-17ರಲ್ಲಿ ಶಿಫಾರಸ್ಸುಮಾಡಿದ ಮತ್ತು ಅನುದಾನದ ವಾಸ್ತವ ಬಿಡುಗಡೆ**

(ಕೋಟಿ ರೂಪಾಯಿಗಳಲ್ಲಿ)

| ಕ್ರಮ ಸಂಖ್ಯೆ | ವರ್ಗಾವಣೆಗಳು | 2016-17 | | | 2015-16ರಲ್ಲಿನ ಬಿಡುಗಡೆ | ಹಿಂದಿನ ವರ್ಷಕ್ಕಿಂತ ಹೆಚ್ಚಳ/ಕಡಿಮೆ | ಹೆಚ್ಚಳ(+) ಕಡಿಮೆ(-)/ ಶೇಕಡಾವಾರು |
|---|---|---|---|---|---|---|---|
| | | ಶಿಫಾರಸ್ಸು ಮಾಡಿದ ಮೊತ್ತ | ನೈಜ ಬಿಡುಗಡೆ | ವ್ಯತ್ಯಾಸ | | | |
| 1 | **ಸ್ಥಳೀಯ ಸಂಸ್ಥೆಗಳು** | | | | | | |
| | (ಎ) ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಮೂಲ ಅನುದಾನ | 1,388.62 | 1,368.21 | 20.41 | 972.36 | 395.85 | 41 |
| | (ಬಿ) ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಕಾರ್ಯನಿರ್ವಹಣಾ ಅನುದಾನ | 182.15 | 179.45 | 2.70 | - | 179.45 | - |
| | (ಸಿ) ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ | 778.29 | 778.29 | - | 562.08 | 216.21 | 38 |
| | (ಡಿ) ನಗರ ಸ್ಥಳೀಯ ಸಂಸ್ಥೆಗಳಿಗೆ ಕಾರ್ಯನಿರ್ವಹಣಾ ಅನುದಾನ | 229.70 | 229.70 | - | - | 229.70 | - |
| 2 | **ವಿಪತ್ತು ಪರಿಹಾರ** | 261.00 | 217.50 | 43.50 | 207.00 | 10.50 | 5 |
| | **ಒಟ್ಟು** | **2,839.76** | **2,773.15** | **66.61** | **1,741.44** | **1,031.71** | - |

ಮಾರ್ಚ್ 2017ರಲ್ಲಿದ್ದಂತೆ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಅನುದಾನದಲ್ಲಿ ₹1,388.62 ಕೋಟಿಗಳ ಶಿಫಾರಸ್ಸಿಗೆ ಎದುರಾಗಿ ರಾಜ್ಯ ಸರ್ಕಾರವು ₹1,368.21 ಕೋಟಿಗಳನ್ನು ಸ್ವೀಕರಿಸಿತ್ತು. ಇದು ಹಿಂದಿನ ವರ್ಷಕ್ಕಿಂತ ₹395.85 ಕೋಟಿ (ಶೇಕಡ 41) ಹೆಚ್ಚಾಗಿದ್ದು, ₹20.41 ಕೋಟಿಗಳ ಕಡಿತವನ್ನನುಭವಿಸಿತ್ತು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು (ಆರ್‌ಡಿಪಿಆರ್) ತನ್ನ ಉತ್ತರದಲ್ಲಿ (ಜೂನ್ 2017) ವಿದ್ಯುಕ್ತವಾಗಿ ಸ್ಥಾಪನೆಗೊಂಡ ಸ್ಥಳೀಯ ಸಂಸ್ಥೆಗಳಿಗೆ ಮಾತ್ರ ಅನುದಾನಗಳನ್ನು ದಾಮಾಷಾ ಮೇರೆಗೆ ಬಿಡುಗಡೆ ಮಾಡಲಾಗಿತ್ತೆಂದು ಹೇಳಿದರು. ಹದಿನಾಲ್ಕನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಅದೇ ಪದ್ಧತಿಯನ್ನು ರಾಜ್ಯಾದ್ಯಂತ ಪಾಲಿಸಲಾಗುತ್ತಿದೆ. ಅಂತೆಯೇ, ಶಿಫಾರಸ್ಸು ಮಾಡಿದ ₹778.29 ಕೋಟಿಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನವಾಗಿ ಬಿಡುಗಡೆ ಮಾಡಲಾಗಿದ್ದು ಅದು ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ₹216.21 ಕೋಟಿಗಳಷ್ಟು ಹೆಚ್ಚಳವನ್ನು ತೋರಿಸಿತು ಮತ್ತು ಶೇಕಡ 38ರಷ್ಟು ಹೆಚ್ಚಾಗಿತ್ತು.

ಗ್ರಾಮ ಪಂಚಾಯತಿಗಳು ಕಾರ್ಯನಿರ್ವಹಣಾ ಅನುದಾನಕ್ಕೆ ಅರ್ಹವಾಗಲು ಗ್ರಾಮ ಪಂಚಾಯತಿಗಳು ಯಾವ ವರ್ಷಕ್ಕೆ ಕಾರ್ಯನಿರ್ವಾಹಕ ಅನುದಾನಕ್ಕೆ ಮನವಿ ಮಾಡುತ್ತಾರೋ ಆ ವರ್ಷದ ಹಿಂದಿನ ಎರಡು ವರ್ಷಕ್ಕಿಂತ ಹಳೆಯದಲ್ಲದ ವರ್ಷದ ಲೆಕ್ಕಪರಿಶೋಧಿತ ವಾರ್ಷಿಕ ಲೆಕ್ಕಗಳನ್ನು ಸಲ್ಲಿಸಬೇಕಾಗುತ್ತದೆ ಎಂದು ಹದಿನಾಲ್ಕನೇ ಹಣಕಾಸು ಆಯೋಗವು ಶಿಫಾರಸ್ಸು ಮಾಡಿತು. ವಾರ್ಷಿಕ ಲೆಕ್ಕಗಳಲ್ಲಿ ಬಿಂಬಿಸಿದಂತೆ ಸ್ಥಳೀಯ ಸಂಸ್ಥೆಯ ಸ್ವಂತ ಆದಾಯದಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಹೆಚ್ಚಳವನ್ನು ತೋರಿಸಬೇಕು. ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಕಾರ್ಯನಿರ್ವಹಣಾ ಅನುದಾನದ ಬಿಡುಗಡೆಯು 2016–17ರಿಂದ ಪ್ರಾರಂಭಗೊಂಡಿತು. ಹದಿನಾಲ್ಕನೇ ಹಣಕಾಸು ಆಯೋಗದಡಿ ಕಾರ್ಯನಿರ್ವಹಣಾ ಅನುದಾನಗಳನ್ನು ಪಡೆಯಲು ಕಾರ್ಯಾಚರಣೆಯ ಮಾನದಂಡಗಳಿಗೆ ಸಂಬಂಧಿಸಿದಂತೆ ಅರ್ಹತೆಯನ್ನು ನಿರ್ಧರಿಸಲು ರಾಜ್ಯ ಸರ್ಕಾರವು ಪಂಚಾಯತ್‌ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮಾರ್ಗಸೂಚಿಗಳನ್ನು ಜಾರಿ ಮಾಡಿದೆ.

2016–17ರಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಕಾರ್ಯನಿರ್ವಹಣಾ ನಿಧಿಯಡಿಯಲ್ಲಿ ಶಿಫಾರಸ್ಸು ಮಾಡಲಾದ ₹182.15 ಕೋಟಿಗಳಿಗೆದುರಾಗಿ ₹179.45 ಕೋಟಿಗಳನ್ನು ಬಿಡುಗಡೆ ಮಾಡಿದ್ದು ₹2.70 ಕೋಟಿಗಳಷ್ಟು ಕಡಿಮೆಯಿದ್ದಿತು. ಆರ್‌ಡಿಪಿಆರ್ ಇಲಾಖೆಯು (ಜೂನ್ 2017) ವಿದ್ಯುಕ್ತವಾಗಿ ಸ್ಥಾಪನೆಗೊಂಡ ಸ್ಥಳೀಯ ಸಂಸ್ಥೆಗಳಿಗೆ ದಾಮಾಷಾ ಆಧಾರದ ಮೇಲೆ ಅನುದಾನ ಬಿಡುಗಡಯೇ ಕಾರಣವೆಂದು ಹೇಳಿತು. ನಗರ ಸ್ಥಳೀಯ ಸಂಸ್ಥೆಗಳಿಗೆ 2016–17ರಲ್ಲಿ ಶಿಫಾರಸ್ಸು ಮಾಡಲಾದ ಸಂಪೂರ್ಣ ₹229.70 ಕೋಟಿಗಳನ್ನು ಬಿಡುಗಡೆ ಮಾಡಲಾಯಿತು. 2016–17ಕ್ಕೆ ವಾರ್ಷಿಕ ಲೆಕ್ಕಪರಿಶೋಧಿತ ಲೆಕ್ಕಗಳನ್ನು ಸಲ್ಲಿಸಿದ 213 ನಗರ ಸ್ಥಳೀಯ ಸಂಸ್ಥೆಗಳಲ್ಲಿ 191 ನಗರ ಸ್ಥಳೀಯ ಸಂಸ್ಥೆಗಳಿಗೆ ಕಾರ್ಯನಿರ್ವಹಣಾ ಅನುದಾನವನ್ನು ಬಿಡುಗಡೆ ಮಾಡಲಾಯಿತು.

ಅದೇ ರೀತಿ, ರಾಜ್ಯ ವಿಪತ್ತು ಪರಿಹಾರ ನಿಧಿಯ ಕಡೆಗೆ ಶಿಫಾರಸ್ಸು ಮಾಡಲಾದ ₹261 ಕೋಟಿಗಳಿಗೆ ಪ್ರತಿಯಾಗಿ ₹217.50 ಕೋಟಿಗಳು ಬಿಡುಗಡೆಯಾಗಿದ್ದು ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ₹10.50 ಕೋಟಿ (ಶೇಕಡ 5) ಹೆಚ್ಚಳವಾಗಿತ್ತು. ಹದಿನಾಲ್ಕನೇ ಹಣಕಾಸು ಆಯೋಗವು ನಿಧಿಗೆ ವಂತಿಗೆಯು ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಡುವೆ 90:10ರ ಅನುಪಾತದಲ್ಲಿರಬೇಕೆಂದು ಶಿಫಾರಸ್ಸು ಮಾಡಿತು. ಭಾರತ ಸರ್ಕಾರವು ಈ ಶಿಫಾರಸ್ಸನ್ನು ರಾಜ್ಯಗಳ ಶೇಕಡಾವಾರು ಪಾಲು ಮುಂಚಿನಂತೆಯೇ 75:25ರ ಅನುಪಾತದಲ್ಲಿಯೇ ಮುಂದುವರೆಯುತ್ತದೆ ಮತ್ತು ಜಿಎಸ್‌ಟಿಯ ಅನುಷ್ಠಾನದ ನಂತರ ವಿಪತ್ತು ಪರಿಹಾರದ ಮೇಲೆ ಹದಿನಾಲ್ಕನೇ ಹಣಕಾಸು ಆಯೋಗದ ಶಿಫಾರಸ್ಸನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಲಾಗುವುದೆಂದು ಅಲ್ಪ ಮಾರ್ಪಾಡಿನೊಂದಿಗೆ ಒಪ್ಪಿಕೊಂಡಿತು. ಭಾರತ ಸರ್ಕಾರದ ವಂತಿಗೆಯೊಂದಿಗೆ ರಾಜ್ಯದ ವಂತಿಗೆಯೂ ಸೇರಿದಂತೆ ಹಣವನ್ನು ರಾಜ್ಯದ ಸಾರ್ವಜನಿಕ ಲೆಕ್ಕಗಳಲ್ಲಿನ ಎಸ್‌ಡಿಆರ್‌ಎಫ್ ಲೆಕ್ಕಕ್ಕೆ ವರ್ಗಾವಣೆ ಮಾಡಲಾಗುತ್ತದೆ.

#### 1.3.4.3 ಇತರೆ ಶಿಫಾರಸುಗಳು

ಹದಿನಾಲ್ಕನೇ ಹಣಕಾಸು ಆಯೋಗವು ಸ್ಥಳೀಯ ಸಂಸ್ಥೆಗಳಿಗೆ ಅನುದಾನದ ವರ್ಗಾವಣೆ, ವಿಪತ್ತು ಪರಿಹಾರ ಮುಂತಾದವುಗಳಿಗೆ ಸಂಬಂಧಿಸಿದಂತೆ ಅನೇಕ ಶಿಫಾರಸ್ಸುಗಳನ್ನು ಮಾಡಿದೆ. ಅದರೊಂದಿಗೆ ವೃತ್ತಿ ತೆರಿಗೆಯನ್ನೂ ಹೆಚ್ಚಿಸುವುದು, ರಾಷ್ಟ್ರೀಯ ಸಣ್ಣ ಉಳಿತಾಯ ನಿಧಿ (ಎನ್‌ಎಸ್‌ಎಸ್‌ಎಫ್) ಮತ್ತು ಜಲ ನಿಯಂತ್ರಣ ಪ್ರಾಧಿಕಾರದ ಸ್ಥಾಪನೆಯಂತಹ ಅನೇಕ ಶಿಫಾರಸ್ಸುಗಳನ್ನು ಮಾಡಿತ್ತು. ಅವುಗಳನ್ನು ವಿವರವಾಗಿ ಕೆಳಗೆ ನೀಡಲಾಗಿದೆ.

#### ವೃತ್ತಿ, ವ್ಯಾಪಾರ, ಕಸುಬು ಮತ್ತು ಉದ್ಯೋಗಗಳ ಮೇಲಿನ ತೆರಿಗೆಗಳು

ಸಂವಿಧಾನದ ಪರಿಚ್ಛೇದ 276ರ ಅನ್ವಯ ಒಬ್ಬ ತೆರಿಗೆದಾರರಿಗೆ ವಾರ್ಷಿಕ ₹2,500ನ್ನು ಮೀರದಂತೆ ರಾಜ್ಯ ಅಥವಾ ಸ್ಥಳೀಯ ಸಂಸ್ಥೆಗಳ ಉಪಯೋಗಕ್ಕಾಗಿ ವೃತ್ತಿ, ವ್ಯಾಪಾರ, ಕಸುಬು ಮತ್ತು ಉದ್ಯೋಗಗಳ ಮೇಲೆ ತೆರಿಗೆ ವಿಧಿಸಲು ಅನುವು ಮಾಡಿದೆ. ಸದರಿ ತೆರಿಗೆಯ ಗರಿಷ್ಠ ಪರಿಮಿತಿಯನ್ನು ಕಾಲಾನುಕ್ರಮವಾಗಿ ಏರಿಸಿ ತೆರಿಗೆಯನ್ನು ಸಮರ್ಥವಾಗಿ ಸಂಗ್ರಹಿಸಿದಲ್ಲಿ ತೆರಿಗೆಯು ಸ್ಥಳೀಯ ಸಂಸ್ಥೆಗಳಿಗೆ ಒಂದು ಪ್ರಮುಖ ಆಕರವಾಗಲಿದೆಯೆಂದು ರಾಜ್ಯಗಳು, ರಾಜ್ಯ ಹಣಕಾಸು ಆಯೋಗಗಳು ಮತ್ತು ಸ್ಥಳೀಯ ಸಂಸ್ಥೆಗಳು ಅಭಿಪ್ರಾಯಗಳನ್ನು ವ್ಯಕ್ತಪಡಿಸಿವೆ.

ಆಯೋಗವು ರಾಜ್ಯ ಸರ್ಕಾರಗಳ ಮನವಿಯನ್ನು ಪರಿಗಣಿಸಿ ಸಂವಿಧಾನದ ಪರಿಚ್ಛೇದ 276(2)ಕ್ಕೆ ತಿದ್ದುಪಡಿ ತರುವ ಮೂಲಕ ರಾಜ್ಯಗಳು ವೃತ್ತಿ ತೆರಿಗೆಯ ವಿಧಿಸುವಿಕೆಯ ಗರಿಷ್ಠ ಪರಿಮಿತಿಯನ್ನು ವಾರ್ಷಿಕ ₹2,500ರಿಂದ ವಾರ್ಷಿಕ ₹12,000ಕ್ಕೆ ಏರಿಸಲು ಶಿಫಾರಸ್ಸು ಮಾಡಿತು. ಪರಿಮಿತಿಗಳು ಹಣಕಾಸು ಆಯೋಗದ ಶಿಫಾರಸ್ಸುಗಳಿಗೆ ಬದ್ಧವಾಗಿರಬೇಕು ಮತ್ತು ಕೇಂದ್ರ ಸರ್ಕಾರವು ಎಲ್ಲ ರಾಜ್ಯಗಳಿಗೂ ಸಮಾನ ಪರಿಮಿತಿಯನ್ನು ವಿಧಿಸಬೇಕೆಂಬ ನಿಯಮದೊಂದಿಗೆ ತಿದ್ದುಪಡಿಯು ಸಂಸತ್ತಿನ ಮೇಲೆ ಪರಿಮಿತಿಗಳನ್ನು ವಿಧಿಸುವ ಅಧಿಕಾರವನ್ನೂ ಸಹ ನೀಡಬಹುದು.

ಆರ್ಥಿಕ ಇಲಾಖೆಯು, ಇದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಆದಷ್ಟು ಬೇಗ ಸಂವಿಧಾನದ ಅವಕಾಶಗಳಿಗೆ ತಿದ್ದುಪಡಿ ತರಲು ಭಾರತ ಸರ್ಕಾರಕ್ಕೆ ಮನವಿ ಮಾಡಿಕೊಂಡಿದೆ ಎಂದು ಉತ್ತರಿಸಿದೆ (ಜೂನ್ 2017).

### ರಾಷ್ಟ್ರೀಯ ಸಣ್ಣ ಉಳಿತಾಯ ನಿಧಿಯಡಿ (ಎನ್‌ಎಸ್‌ಎಸ್‌ಎಫ್) ವ್ಯವಹಾರಗಳು

1 ಏಪ್ರಿಲ್ 2015ರಿಂದ ರಾಜ್ಯ ಸರ್ಕಾರಗಳನ್ನು ಎನ್‌ಎಸ್‌ಎಸ್‌ಎಫ್ ಕಾರ್ಯಾಚರಣೆಯಿಂದ ಹೊರಗಿಡಬೇಕೆಂದು ಹದಿನಾಲ್ಕನೇ ಹಣಕಾಸು ಆಯೋಗವು ಶಿಫಾರಸ್ಸು ಮಾಡಿತು. ಇದರಿಂದ ರಾಜ್ಯದ ಸಾಲಕೊಳ್ಳುವ ಯಾವುದೇ ಕಾರ್ಯಕ್ರಮಕ್ಕೂ ಅಡ್ಡಿಯಾಗುವುದಿಲ್ಲವೆಂದೂ, ಅವು ಮುಕ್ತ ಮಾರುಕಟ್ಟೆ ಸಾಲಗಳನ್ನು ಕೊಳ್ಳುವುದನ್ನು ಮುಂದುವರೆಸಬಹುದು. ಎನ್‌ಎಸ್‌ಎಸ್‌ಎಫ್‌ನ ಸಂಪೂರ್ಣ ಕಾರ್ಯಾಚರಣೆಯನ್ನು ಭಾರತ ಸರ್ಕಾರವು ನಿರ್ವಹಿಸುತ್ತಿದ್ದರಿಂದ ಏಪ್ರಿಲ್ 1 2015ಕ್ಕೆ ಪೂರ್ವದಲ್ಲಿ ಎನ್‌ಎಸ್‌ಎಸ್‌ಎಫ್‌ನ ಕಾರ್ಯಾಚರಣೆಯ ವೆಚ್ಚದಿಂದಾದ ಆರ್ಥಿಕ ಹೊರೆಯ ಯಾವುದೇ ಭಾಗವನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸಬಾರದು. ರಾಜ್ಯ ಸರ್ಕಾರದ ಭಾಗಿತ್ವವು 1 ಏಪ್ರಿಲ್ 2015ರಿಂದ ಅವರು ಈಗಾಗಲೇ ತೆಗೆದುಕೊಂಡ ಸಾಲಗಳ ತೀರುವಳಿಗೆ ಸೀಮಿತವಾಗಿರಬೇಕೆಂದೂ ಸಹ ಶಿಫಾರಸ್ಸು ಮಾಡಿತು. ಆದಾಗ್ಯೂ, 2015–16, ಲೆಕ್ಕಶೀರ್ಷಿಕೆ 6003–111ರಡಿ ಎನ್‌ಎಸ್‌ಎಸ್‌ಎಫ್ ಸಾಲಗಳೆಡೆಗೆ ₹2,738 ಕೋಟಿಗಳನ್ನು ಲೆಕ್ಕ ಮಾಡಲಾಗಿದೆ.

ಭಾರತ ಸರ್ಕಾರವು 16 ಫೆಬ್ರವರಿ 2017ರ ಪತ್ರದಲ್ಲಿ ಕೇಂದ್ರ ಮಂತ್ರಿಮಂಡಲವು ಎಲ್ಲ ರಾಜ್ಯಗಳನ್ನು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು (ಸಂವಿಧಾನವನ್ನು ಹೊಂದಿರುವ) 1 ಏಪ್ರಿಲ್ 2016ರಿಂದ ಎನ್‌ಎಸ್‌ಎಸ್‌ಎಫ್ ಹೂಡಿಕೆಗಳಿಂದ ಹೊರಗಿಡಬೇಕೆಂದು ಮತ್ತು ರಾಜ್ಯದ ಹೂಡಿಕೆಗಳನ್ನು ಈಗಾಗಲೇ ಮಾಡಿರುವ ಸಾಲದ ಮರುಪಾವತಿಗಳಿಗಷ್ಟೇ ಸೀಮಿತವಾಗಿರಬೇಕೆಂದು ತಿಳಿಸಿದೆ ಎಂದು ಆರ್ಥಿಕ ಇಲಾಖೆಯು ಉತ್ತರಿಸಿತು (ಜುಲೈ 2017).

ಎನ್‌ಎಸ್‌ಎಸ್‌ಎಫ್ ಸಾಲಗಳಿಂದ ರಾಜ್ಯಗಳನ್ನು ಹೊರಗಿಡುವ ಹದಿನಾಲ್ಕನೇ ಹಣಕಾಸು ಆಯೋಗದ ಶಿಫಾರಸ್ಸಿನ ಅನುಷ್ಠಾನದಲ್ಲಿ ಭಾರತ ಸರ್ಕಾರದಿಂದಾದ ವಿಳಂಬದಿಂದ ಎನ್‌ಎಸ್‌ಎಸ್‌ಎಫ್ ಅಡಿ 2015–16ರಲ್ಲಿ ₹2,738 ಕೋಟಿಗಳ ಸ್ವೀಕೃತಿಯಾಗುವಲ್ಲಿಗೆಡೆ ಮಾಡಿತು. ಮುಂದುವರೆದು, ರಾಜ್ಯ ಸರ್ಕಾರವು 2016–17ರ ಆರ್ಥಿಕ ವರ್ಷದಲ್ಲಿ ಭಾರತ ಸರ್ಕಾರದಿಂದ ಎನ್‌ಎಸ್‌ಎಸ್‌ಎಫ್ ಅಡಿ ಯಾವುದೇ ಸಾಲಗಳನ್ನು ಸ್ವೀಕರಿಸಿಲ್ಲ ಮತ್ತು ಆರ್ಥಿಕ ವರ್ಷ 2017–18ರಲ್ಲಿ ಎಸ್‌ಎಸ್‌ಎಸ್‌ಎಫ್‌ಅಡಿ ಭಾರತ ಸರ್ಕಾರದಿಂದ ಯಾವುದೇ ಸಾಲಗಳ ನಿರೀಕ್ಷೆಯನ್ನು ಮಾಡಿಲ್ಲ.

ಭಾರತ ಸರ್ಕಾರದಿಂದಾದ ನಿರ್ಧಾರದಲ್ಲಿನ ಮತ್ತು ಶಿಫಾರಸ್ಸುಗಳ ಅನುಷ್ಠಾನದಲ್ಲಿನ ವಿಳಂಬದಲ್ಲಿ ರಾಜ್ಯ ಸರ್ಕಾರಕ್ಕೆ ಬಡ್ಡಿ ಪಾವತಿಯ ಅನವಶ್ಯಕ ಹೊರೆಯಾಗುವಂತಾಯಿತು. ಬಡ್ಡಿ ದರವು ಶೇಕಡ 7.98ರಿಂದ ಶೇಕಡ 8.67ರ ನಡುವೆ ಇದ್ದ ಮಾರುಕಟ್ಟೆ ಸಾಲಗಳ ಬದಲು ರಾಜ್ಯ ಸರ್ಕಾರವು ಮೇಲೆ ಹೇಳಿದ ಮೊತ್ತದ ಜವಾಬ್ದಾರಿಯಲ್ಲದೇ ಬಡ್ಡಿ ಜವಾಬ್ದಾರಿಯನ್ನೂ ಹೊರುವಂತಾಯಿತು.

### ವಿಸ್ತೃತಗೊಂಡ ಸಾರ್ವಜನಿಕ ಋಣಗಳನ್ನು ತಾಳೆ ಹಾಕಲು ಮಾದರಿ

ಯಾವುದೇ ಸಾರ್ವಜನಿಕ ಹಣಕಾಸುಗಳ ಮೌಲ್ಯಮಾಪನವು ಅರ್ಥಪೂರ್ಣವಾಗಬೇಕಾದಲ್ಲಿ, ಸಾರ್ವಜನಿಕ ವಲಯಕ್ಕೆ ಖಾತರಿಗಳ ರೂಪದಲ್ಲಿ ನೀಡಿದ ಆಯವ್ಯಯ ಹೊರಗಿನ ಸಾಲಗಳು ಮತ್ತು ಆರ್ಥಿಕವಾಗಿ ದುರ್ಬಲವಾಗಿರುವ ಸಾರ್ವಜನಿಕ ವಲಯ ಉದ್ದಿಮೆಗಳ ಕ್ರೋಢೀಕೃತ ನಷ್ಟಗಳಿಂದ ಸರ್ಕಾರಕ್ಕಿರುವ ಅಪಾಯಗಳನ್ನು ಪರಿಗಣಿಸಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಸಾರ್ವಜನಿಕ ವಲಯ ಉದ್ದಿಮೆಗಳ (ಸಾವಉ) ಋಣಗಳು, ಸಾವಉಗಳ ಖಾತರಿಗಳು ಮತ್ತು ಖಾತರಿಗಳಿಂದಿರುವ ಅಪಾಯಗಳ ಮೌಲ್ಯಾಧಾರಿತ ಸಂಯೋಗವೂ ಸೇರಿ ವಿವಿಧ ಸೂಚಕಗಳನ್ನು ವಿಶ್ಲೇಷಿಸುವ ಋಣಗಳ

ನೀಡುವಿಕೆಯ ತತ್ವವನ್ನು ಹದಿನಾಲ್ಕನೇ ಹಣಕಾಸು ಆಯೋಗವು ಅನ್ವೇಷಿಸಿದೆ. ರಾಜ್ಯಗಳ ಋಣ ಪರಿಸ್ಥಿತಿಯನ್ನು ನಿರ್ಧರಣೆ ಮಾಡುವಾಗ ಖಾತರಿಗಳಿಂದ ಆಯವ್ಯಯ ಹೊರಗಿನ ಸಾಲಗಳಿಂದ ಮತ್ತು ಆರ್ಥಿಕವಾಗಿ ದುರ್ಬಲವಾಗಿರುವ ಸಾರ್ವಜನಿಕ ವಲಯ ಉದ್ದಿಮೆಗಳ ಕ್ರೋಢೀಕೃತ ನಷ್ಟಗಳಿಂದ ಒದಗುವ ಅಪಾಯಗಳನ್ನು ಮನಗಂಡು ಹಣಕಾಸು ಆಯೋಗವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ನೀಡಿದ ಒಟ್ಟು ಸಾರ್ವಜನಿಕ ಋಣಗಳನ್ನು ತಾಳೆ ಮಾಡಲು, ವಿಶ್ಲೇಷಿಸಲು ಮತ್ತು ಅವುಗಳನ್ನು ಆಯವ್ಯಯದಲ್ಲಿ ಆಯವ್ಯಯ ದಾಖಲೆಗಳಿಗೆ ಪೂರಕವಾಗಿ ವಾರ್ಷಿಕವಾಗಿ ವರದಿ ಮಾಡಲು ಮಾದರಿಯೊಂದನ್ನು ಅಂಗೀಕರಿಸಬೇಕೆಂದು ಶಿಫಾರಸ್ಸು ಮಾಡಿತು.

ಆರ್ಥಿಕ ಇಲಾಖೆಯು ರಾಜ್ಯ ಸರ್ಕಾರವು ತನ್ನ ಒಟ್ಟು ಸಾರ್ವಜನಿಕ ಋಣವನ್ನು ಆಯವ್ಯಯ ದಾಖಲೆಗಳಲ್ಲಿ ವರದಿ ಮಾಡುತ್ತಿದೆಯೆಂದು ತನ್ನ ಉತ್ತರದಲ್ಲಿ ಹೇಳಿತು (ಜುಲೈ 2017). ಅದನ್ನು ಪ್ರತಿ ವರ್ಷ 'ಆಯವ್ಯಯದ ಪಕ್ಷಿನೋಟ'ದಲ್ಲಿ ಪ್ರಕಟಿಸಲಾಗುತ್ತಿದೆ.

ಹಣಕಾಸು ಆಯೋಗವು ರಾಜ್ಯ ಸರ್ಕಾರವು ವಿವಿಧ ನಗರ ಸ್ಥಳೀಯ ಸಂಸ್ಥೆಗಳು/ನಿಗಮಗಳಿಗೆ ಆಯವ್ಯಯದ ಹೊರಗಿನ ಸಾಲಗಳಡಿ ನೀಡಿರುವ ಆಯವ್ಯಯ ಬೆಂಬಲವನ್ನು ಹಾಗೂ ನೀಡಿರುವ ಸಾರ್ವಜನಿಕ ಋಣಗಳನ್ನು ತಾಳೆ ಮಾಡಲು ಮಾದರಿಯೊಂದನ್ನು ಅಂಗೀಕರಿಸಬೇಕೆಂದು ಶಿಫಾರಸ್ಸು ಮಾಡಿದ್ದು, ರಾಜ್ಯ ಸರ್ಕಾರವು ಲೆಕ್ಕಗಳಲ್ಲಿ ಗ್ರಹಿಸಲಾದ ಜವಾಬ್ದಾರಿಗಳನ್ನು ಮಾತ್ರ ವರದಿ ಮಾಡುತ್ತಿರುವುದರಿಂದ ಇಲಾಖೆಯು ನೀಡಿದ ಉತ್ತರವು ತೃಪ್ತಿಕರವಾಗಿಲ್ಲ. ಪಾರದರ್ಶಕತೆಗಾಗಿ ಈ ದತ್ತಾಂಶವನ್ನು ವರದಿ ಮಾಡುವುದು ಅವಶ್ಯಕವಾಗಿದೆ. ಸೂಚಿಸಿದ ಜವಾಬ್ದಾರಿಗಳು ಮೇಲೆ ಹೇಳಿದ ಸಾಲಗಳನ್ನು ಒಳಗೊಂಡಿಲ್ಲವೆಂದು ಆಯವ್ಯಯ ದಾಖಲೆಗಳಲ್ಲಿ ಟಿಪ್ಪಣಿಯೊಂದನ್ನು ಸೇರಿಸಲು ಪರಿಗಣಿಸಬಹುದಾಗಿದೆ.

### ಆಯವ್ಯಯದಲ್ಲಿ ಹೊಸ ಬಂಡವಾಳ ಕಾಮಗಾರಿಗಳ ಮಂಜೂರಾತಿ

ಲಭ್ಯವಿರುವ ನಿಧಿಗಳನ್ನು ಪೈಪೋಟಿಯಾಗಿ ಯೋಜನೆಗಳಲ್ಲಿ ವಿಪರ್ಯಸ್ತ ಹಂಚಿಕೆ ಮಾಡುವ ವಿಧಾನವನ್ನು ಉತ್ತೇಜಿಸದಿರಲು ಮತ್ತು ಬಂಡವಾಳ ಕಾಮಗಾರಿಯಲ್ಲಿನ ಹೂಡಿಕೆಗಳಿಂದ ಆರ್ಥಿಕತೆಗೆ ಲಾಭವಾಗುವುದನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಹೊಸ ಬಂಡವಾಳ ಕಾಮಗಾರಿಗಳ ಮಂಜೂರಾತಿಗೆ ವಾರ್ಷಿಕ ಆಯವ್ಯಯ ಹಂಚಿಕೆಯ ಸೂಕ್ತ ಗುಣಕವೊಂದಕ್ಕೆ ಶಾಸನಬದ್ಧ ಗರಿಷ್ಠ ಮಿತಿಯೊಂದನ್ನು ನಿಗದಿ ಮಾಡುವಂತೆ ತಿದ್ದುಪಡಿಯನ್ನು ತಮ್ಮ ತಮ್ಮ ಹಣಕಾಸು ಜವಾಬ್ದಾರಿ ಕಾಯಿದೆಯಲ್ಲಿ ಮಾಡುವಂತೆ ಹಣಕಾಸು ಆಯೋಗವು ಶಿಫಾರಸ್ಸು ಮಾಡಿದೆ. ಆಯೋಗವು ನೀಡಿದ ಸಲಹೆಯಂತೆ ಶಾಸನಬದ್ಧ ಬೆಂಬಲ ನೀಡುವ ತಿದ್ದುಪಡಿಯನ್ನು ತಂದಲ್ಲಿ ಕಾಲಕ್ರಮೇಣ ಅದು ಆರೋಗ್ಯಕರ ವಿತ್ತೀಯ ನಿರ್ವಹಣೆ ಮತ್ತು ಬಂಡವಾಳ ಕಾಮಗಾರಿಗಳಿಗೆ ನಿಯಂತ್ರಿತ ರೀತಿಯಲ್ಲಿ ಸಂಪನ್ಮೂಲಗಳನ್ನು ವಿಸ್ತರಿಸುವುದರಲ್ಲಿ ಪರಿಣಮಿಸುತ್ತದೆ.

### ನೀರಾವರಿ–ಜಲ ನಿಯಂತ್ರಣ ಪ್ರಾಧಿಕಾರದ ಸ್ಥಾಪನೆ

ನೀರಿನ ದರಗಳ ನಿಗದಿ ಮತ್ತು ವಿವೇಚನಾಪೂರ್ವಕ ನಿಯಂತ್ರಣವು, ಪ್ರಾರಂಭದಲ್ಲಿ ವ್ಯವಸ್ಥೆಯ ನಿರ್ವಹಣೆಗೆ ಅವಶ್ಯಕವಿರುವ ಪುನರಾವರ್ತನೆಗೊಳ್ಳುವ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚವನ್ನು ವಸೂಲಿ ಮಾಡುವ ಮತ್ತು ತದನಂತರ ಬಂಡವಾಳ ವೆಚ್ಚದ ನಿಗದಿತ ಶೇಕಡ ಭಾಗವನ್ನು ವಸೂಲಿಸುವ ಮೂಲ ತತ್ವದಿಂದ ಪ್ರೇರೇಪಿತವಾಗಬೇಕು. ಅದಲ್ಲದೆ, ರೈತರ ಪಾವತಿಯ ಸಾಮರ್ಥ್ಯವನ್ನು ಪರಿಗಣಿಸಿ ಸಮತೋಲನವನ್ನು ನಿರ್ವಹಿಸಬೇಕು. ನೀರಿನ ದರಗಳ ಸೂಕ್ತ ನಿಗದಿ ಮತ್ತು ನಿಯಂತ್ರಣಕ್ಕೆ ಮೀಟರ್‌ಗಳ ಮೂಲಕ ನೀರಿನ ಬಳಕೆಯ ಪ್ರಮಾಣದ ಮೂಲ ಮಾಹಿತಿಯ ಅವಶ್ಯಕತೆಯಿರುತ್ತದೆ. ಮೀಟರಿನ ಅಳವಡಿಕೆಯು ರೈತರನ್ನು ನೀರಿನ ಮಿತವಾದ ಬಳಕೆಗೆ ಮತ್ತು ಪ್ರದೇಶಕ್ಕೆ ಅತ್ಯಂತ ಸೂಕ್ತವಾದ ಬೆಳೆಯನ್ನು ಬೆಳೆಯುವಿಕೆಗೆ ಉತ್ತೇಜಿಸುತ್ತದೆ ಮತ್ತು ಅಧಿಕ ನೀರಾವರಿ ಮತ್ತು ನೀರು ಪೋಲಾಗದಂತೆ ತಡೆಯುತ್ತದೆ. ಈ ಕಾರಣಕ್ಕೆ ಮೀಟರ್‌ಗಳ ಬಳಕೆಯ ಅವಶ್ಯಕತೆಯಿದೆ ಮತ್ತು ಅದನ್ನು ಪ್ರಾಮಾಣಿಕವಾಗಿ ಓದಿ ವರದಿ ಮಾಡಬೇಕಿದೆ. ಆದ್ದರಿಂದ ಹದಿನಾಲ್ಕನೇ ಹಣಕಾಸು ಆಯೋಗವು ಹದಿಮೂರನೇ ಆಯೋಗದ ಶಿಫಾರಸುಗಳನ್ನು ಪುನರುಚ್ಚರಿಸುತ್ತಾ ಗೃಹೋಪಯೋಗ, ನೀರಾವರಿ ಮತ್ತಿತರ ಬಳಕೆಗೆ, ಸ್ವತಂತ್ರವಾಗಿ ಮತ್ತು ವಿವೇಚನಾಯುಕ್ತವಾಗಿ ನೀರಿನ ದರಗಳನ್ನು ನಿರ್ಧರಿಸಲು ಜಲನಿಯಂತ್ರಣ ಪ್ರಾಧಿಕಾರವನ್ನು ರಚಿಸುವಂತೆ ರಾಜ್ಯಗಳಿಗೆ ಒತ್ತಾಯಿಸಿತು. ಅದಲ್ಲದೇ, ಈಗಾಗಲೇ ಸ್ಥಾಪಿತವಾಗಿರುವ ಜಲ ನಿಯಂತ್ರಣ ಪ್ರಾಧಿಕಾರಗಳನ್ನು ಸಂಪೂರ್ಣವಾಗಿ ಕಾರ್ಯೋನ್ಮುಖ ವಾಗಿಸಬೇಕೆಂದೂ ಸಹ ಹೇಳಿತು.

ಜಲಸಂಪನ್ಮೂಲ ಇಲಾಖೆಯು ತನ್ನ ಉತ್ತರದಲ್ಲಿ (ಡಿಸೆಂಬರ್ 2017) ಭಾರತ ಸರ್ಕಾರವು ರಾಜ್ಯ ಸರ್ಕಾರವನ್ನು ಮಹಾರಾಷ್ಟ್ರ ಜಲಸಂಪನ್ಮೂಲ ನಿಯಂತ್ರಣ ಕಾಯಿದೆ 2005ರ ಮಾದರಿಯಲ್ಲಿ ರಾಜ್ಯದಲ್ಲಿಯೂ ನಿಯಂತ್ರಣ ಪ್ರಾಧಿಕಾರವನ್ನು ನೆಲೆಗೊಳಿಸುವುದನ್ನು ಪರಿಗಣಿಸಲು ಹೇಳಿದೆ. ಮಜನಿಕಾಯಿದೆಯು ಇತರ ಅನೇಕ ಅಂಶಗಳೊಂದಿಗೆ ವಿವಿಧ ವರ್ಗಗಳ ಬಳಕೆದಾರರಿಗೆ ದರಪಟ್ಟಿಯನ್ನು ನಿಗದಿಪಡಿಸಲು ಅವಕಾಶವನ್ನು ನೀಡಿದೆ. ಈ ಕಾಯಿದೆಯ ಬಗ್ಗೆ ಕರ್ನಾಟಕ ಜಲಸಂಪನ್ಮೂಲ ಇಲಾಖೆಯಡಿ ಇರುವ ಎಲ್ಲಾ ನಿಗಮಗಳ ಅಭಿಪ್ರಾಯವನ್ನು ಪಡೆಯಲಾಗುತ್ತಿದ್ದು, ಎಲ್ಲ ಅಭಿಪ್ರಾಯಗಳು ಬಂದ ನಂತರ ಮುಂದಿನ ಕ್ರಮಗಳನ್ನು ಕೈಗೊಳ್ಳುವುದಾಗಿ ಹೇಳಿದೆ.

### ವಿದ್ಯುತ್–ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗ ನಿಧಿಯ ಸ್ಥಾಪನೆ (ಎಸ್‌ಇಆರ್‌ಸಿಎಫ್)

ಎಸ್‌ಇಆರ್‌ಸಿಎಫ್ ಕಾರ್ಯ ನಿರ್ವಹಣೆಯಲ್ಲಿ ಅವುಗಳ ಆರ್ಥಿಕ ಸ್ವಾತಂತ್ರ್ಯ ಮತ್ತು ಸ್ವಾಯುತ್ತತೆಯು ಪ್ರಮುಖ ಅಂಶವಾಗಿದೆ. ಎಸ್‌ಇಆರ್‌ಸಿಎಫ್ ಆದಾಯದ ಮೂಲಗಳಲ್ಲಿ ರಾಜ್ಯ ಸರ್ಕಾರದಿಂದ ಅನುದಾನ ಮತ್ತು ವಾರ್ಷಿಕ ಲೈಸೆನ್ಸ್‌ಗಳ ಮತ್ತು ಅರ್ಜಿ ಸಲ್ಲಿಕೆ ಶುಲ್ಕಗಳ ಮೂಲಕ ಅವರ ಸ್ವಂತ ಆದಾಯವೂ ಸೇರಿದೆ. ಎಸ್‌ಸಿಆರ್‌ಸಿಗಳಿಗೆ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಲು ಅನುವಾಗುವಂತೆ ಎಲೆಕ್ಟ್ರಿಸಿಟಿ ಅಧಿನಿಯಮ 2003ರ ಪರಿಚ್ಛೇದ 103ರಡಿ ವಿಧಿಸಿರುವಂತೆ ಎಸ್‌ಇಆರ್‌ಸಿಗಳಿಗೆ ಆರ್ಥಿಕ ಸ್ವಾಯತ್ತತೆಯನ್ನು ಒದಗಿಸಲು ಹದಿನಾಲ್ಕನೇ ಹಣಕಾಸು ಆಯೋಗವು ಎಲ್ಲಾ ರಾಜ್ಯಗಳಲ್ಲೂ ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗ ನಿಧಿಯ ಸ್ಥಾಪನೆಗೆ ಶಿಫಾರಸ್ಸು ಮಾಡಿತ್ತು. ಆಯೋಗವು ಎನ್‌ಇಆರ್‌ಸಿಗಳ ಆರ್ಥಿಕ ಸ್ವಾತಂತ್ರದ ಪ್ರಾಮುಖ್ಯತೆಯನ್ನು ಪುನರುಚ್ಚರಿಸಿತು ಮತ್ತು ಶಾಸನಬದ್ಧವಾಗಿ ವಿಧಿಸಿರುವಂತೆ ಎಲ್ಲ ರಾಜ್ಯಗಳಿಗೂ ಎಸ್‌ಇಆರ್‌ಸಿ ನಿಧಿಯನ್ನು ಸ್ಥಾಪಿಸುವಂತೆ ಆಗ್ರಹಿಸಿತು.

ಇಂಧನ ಇಲಾಖೆಯು ಎಸ್‌ಇಆರ್‌ಸಿ ನಿಧಿಯನ್ನು ಸ್ಥಾಪಿಸಲು ಸಾಧ್ಯವಾಗುವಂತೆ ಕರ್ನಾಟಕ ವಿದ್ಯುತ್ ಆಯೋಗ (ವಾರ್ಷಿಕ ಲೆಕ್ಕಪತ್ರಗಳ ವಿವರಣಾಪಟ್ಟಿ) ನಿಯಮಗಳು, 2014ಕ್ಕೆ ಪರಿಷ್ಕೃತ ಕರಡು ತಿದ್ದುಪಡಿಗೆ ಸಹಮತ ನೀಡಲು ಮಹಾಲೇಖಾಪಾಲರಿಗೆ (ಆ ಮತ್ತು ರಾ ವ ಲೆ) ಮನವಿ ಮಾಡಿಕೊಂಡಿರುವುದಾಗಿ ಉತ್ತರ ನೀಡಿದೆ (ಆಗಸ್ಟ್ 2017). ಈ ತಿದ್ದುಪಡಿಯು ಕರ್ನಾಟಕ ವಿದ್ಯುತ್ ಸುಧಾರಣಾ ಕಾಯಿದೆ, 1999 ಮತ್ತು ವಿದ್ಯುತ್ ಕಾಯಿದೆ, 2003ರ ಅನುಚ್ಛೇದ 103ರ ವಿಧಿಗಳಿಗೆ ವ್ಯತಿರಿಕ್ತವಾಗಿರುವುದರಿಂದ ಈ ವಿಷಯವನ್ನು ಪುನರ್ ಪರಿಶೀಲಿಸಲು ಮಹಾಲೇಖಾಪಾಲರ (ಆ ಮತ್ತು ರಾ ವ ಲೆ) ಕಛೇರಿಯು ಸಲಹೆ ನೀಡಿದೆ (ನವೆಂಬರ್ 2017).

### ರಸ್ತೆ ಸಾರಿಗೆ–ಸ್ವತಂತ್ರ ನಿಯಂತ್ರಕದ ಸ್ಥಾಪನೆ

ಪ್ರಸ್ತುತ ರಸ್ತೆ ಸಾರಿಗೆ ವಲಯಕ್ಕೆ ಯಾವುದೇ ಸ್ವತಂತ್ರ ನಿಯಂತ್ರಣ ಪ್ರಾಧಿಕಾರವಿಲ್ಲ. ನಿಯಮಗಳನ್ನು ರೂಪಿಸುವ ಮತ್ತು ಅನುಷ್ಠಾನಗೊಳಿಸುವ ಸಂಸ್ಥೆಯು ಒಂದೇ ಆಗಿರುವುದರಿಂದ ಕೇಂದ್ರ ಮತ್ತು ರಾಜ್ಯಸ್ತರಗಳೆರಡಲ್ಲೂ ಪ್ರಸಕ್ತ ವ್ಯವಸ್ಥೆಯು ಸಂಭಾವ್ಯ ಸಂಘರ್ಷಕ್ಕೆಡೆ ಮಾಡುತ್ತದೆ. ತತ್ಪರಿಣಾಮವಾಗಿ ರಾಜ್ಯ ರಸ್ತೆ ಸಾರಿಗೆ ಉದ್ಯಮಗಳ ಕಾರ್ಯನಿರ್ವಹಣೆಯನ್ನು ವಿವಿಧ ಮಾನದಂಡಗಳಲ್ಲಿ ಸ್ವತಂತ್ರವಾಗಿ ನಿರ್ಧಾರ ಮಾಡಲಾಗುವುದಿಲ್ಲ. ಆದ್ದರಿಂದ ಹದಿನಾಲ್ಕನೇ ಹಣಕಾಸು ಆಯೋಗವು ದರ ನಿರ್ಧಾರಣೆ, ಸೇವೆಗಳ ಗುಣಮಟ್ಟ ನಿಯಂತ್ರಣ, ರಿಯಾಯಿತಿದಾರರ ಕ್ಲೈಮುಗಳ ನಿರ್ಧಾರ, ವಲಯ ಮಾಹಿತಿಯ ಸಂಗ್ರಹಣೆ ಮತ್ತು ಪ್ರಚಾರ, ಸೇವಾಮಟ್ಟದ ಮಾನದಂಡಗಳು ಮತ್ತು ರಿಯಾಯಿತಿ ಒಪ್ಪಂದಗಳ ಪಾಲನೆಯ ಮೇಲ್ವಿಚಾರಣೆಗಳನ್ನು ಒಳಗೊಳ್ಳುವ ಪ್ರಯಾಣಿಕರ ರಸ್ತೆ ವಲಯಕ್ಕೆ ಸ್ವತಂತ್ರ ನಿಯಂತ್ರಕದ ಸ್ಥಾಪನೆಗೆ ಶಿಫಾರಸ್ಸು ಮಾಡಿತು.

ಇದಕ್ಕೆ ಉತ್ತರವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು, ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರಕ್ಕೆ, ಪ್ರಯಾಣಿಕರ ರಸ್ತೆ ಸಾರಿಗೆ ವಿಭಾಗಕ್ಕೆ ಸ್ವತಂತ್ರ ನಿಯಂತ್ರಕದ ಸ್ಥಾಪನೆಗೆ ಸಂಬಂಧಿಸಿದಂತೆ ಯಾವುದೇ ಪ್ರಸ್ತಾವನೆಯನ್ನು ಕಳುಹಿಸಿಲ್ಲವೆಂದು ಹೇಳಿದೆ (ನವೆಂಬರ್ 2017).

### 1.3.5 ಬಿಟ್ಟುಕೊಡಲ್ಪಟ್ಟ ಆದಾಯಗಳು

ವಿತ್ತೀಯ ಜವಾಬ್ದಾರಿ ಅಧಿನಿಯಮದ ಪರಿಚ್ಛೇದ 5(2)(ಸಿ)ಯ ಪ್ರಕಾರ ಮಧ್ಯಮಾವಧಿ ವಿತ್ತೀಯ ಯೋಜನೆ (2017–21) ಯಲ್ಲಿ ಮೌಲ್ಯವರ್ಧಿತ ತೆರಿಗೆ, ಕೇಂದ್ರ ಮಾರಾಟ ತೆರಿಗೆ ಮತ್ತು ಪ್ರವೇಶ ತೆರಿಗೆಗಳ ವಿನಾಯಿತಿ ಅಥವಾ ಮುಂದೂಡಿಕೆಗಳ ಮೂಲಕ ತೆರಿಗೆ ವೆಚ್ಚ/ಆದಾಯ ಬಿಟ್ಟುಕೊಡುವಿಕೆಗಳ ವಿವರಗಳನ್ನು ನೀಡುವ ಹೆಚ್ಚುವರಿ ವಿವರಣಾ ಪಟ್ಟಿಗಳನ್ನು ನೀಡಬೇಕಾಗಿರುತ್ತದೆ. 2015–16 ರಿಂದ

2016–17ರ ಅವಧಿಯಲ್ಲಿ ಅಂತಹ ವಿನಾಯತಿಗಳನ್ನು ಬಿಟ್ಟುಕೊಟ್ಟ ಆದಾಯದ ವಿವರಗಳನ್ನು **ಕೋಷ್ಟಕ 1.17**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.17: ವಿನಾಯಿತಿಗಳು/ಬಿಟ್ಟುಕೊಟ್ಟ ಆದಾಯಗಳ ವಿವರಗಳು**

**(ಕೋಟಿ ರೂಪಾಯಿಗಳಲ್ಲಿ)**

| ವಿವರಗಳು | 2015–16 | 2016–17# |
|---|---|---|
| ತೆರಿಗೆ ವೆಚ್ಚ/ಕಬ್ಬಿನ ಮೇಲಿನ ಖರೀದಿ ತೆರಿಗೆಯನ್ನು ಮುಂದೂಡಿದ್ದರಿಂದ ಬಿಟ್ಟುಕೊಡಲ್ಪಟ್ಟ ಆದಾಯ | 28.53 | 45.50 |
| ತೆರಿಗೆಗಳ ವಿನಾಯಿತಿ/ಮುಂದೂಡುವಿಕೆ/ತುಂಬಿಕೊಡುವಿಕೆ | 576.02 | 635.61 |
| ಒಟ್ಟು | **604.55** | **681.11** |

*ಆಕರ: ಮಧ್ಯಮಾವಧಿ ವಿತ್ತೀಯ ಯೋಜನೆ 2017–21.*

*# 2016–17ರ ಮೊದಲ ಮೂರು ತ್ರೈಮಾಸಿಕಕ್ಕೆ.*

ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ತನ್ನ 13ನೇ ವರದಿಯಲ್ಲಿ ಆದಾಯದ ಸಂಗ್ರಹಣೆಯ ಮೇಲ್ವಿಚಾರಣೆಗೆ ವ್ಯವಸ್ಥೆಯನ್ನು ಶಿಫಾರಸ್ಸು ಮಾಡುವಾಗ ತೆರಿಗೆ ಸಂಗ್ರಹಣೆಯಲ್ಲಿ ರಿಯಾಯಿತಿಗಳನ್ನು ನೀಡುವ, ಮನ್ನಾ ಮಾಡುವ ಮತ್ತು ವಿನಾಯಿತಿ ನೀಡುವ ರೂಢಿಯನ್ನು ನಿಲ್ಲಿಸಿಬಿಡಲು ಸಲಹೆ ನೀಡಿತ್ತು. ರಾಜ್ಯ ಸರ್ಕಾರವು ಇದನ್ನು ಪಾಲಿಸಲು ವಿಫಲವಾಗಿದೆ.

ಆರ್ಥಿಕ ಇಲಾಖೆಯು, ಕೆಲವು ವಿಭಾಗಗಳ ಆರ್ಥಿಕ ಸ್ವರೂಪವನ್ನು ಉತ್ತೇಜಿಸುವ ಕಾರ್ಯನೀತಿಯಂತೆ ಮನ್ನಾ/ಕಡಿತ/ವಿನಾಯಿತಿಗಳನ್ನು ನೀಡುವುದು ರಾಜ್ಯವು ತೆಗೆದುಕೊಂಡ ಪ್ರಜ್ಞಾಪೂರ್ವಕ ನಿರ್ಧಾರವಾಗಿದೆ ಎಂದು ಉತ್ತರಿಸಿದೆ. ರಾಜ್ಯದಲ್ಲಿ ಹೆಚ್ಚಿನ ಉದ್ದಿಮೆಗಳನ್ನು ಆಕರ್ಷಿಸುವ ವಾತಾವರಣವನ್ನು ಸೃಷ್ಟಿಸುವ ಉದ್ದೇಶದಿಂದ ಇಂತಹ ರಿಯಾಯಿತಿಗಳನ್ನು ಒದಗಿಸಲಾಗಿದೆ. ಇದು ಸ್ಥಳೀಯರಿಗೆ ಉದ್ಯೋಗವನ್ನು ಒದಗಿಸುವುದರೊಂದಿಗೆ ಆರ್ಥಿಕ ಸ್ಥಿತಿಯನ್ನೂ ಉತ್ತಮಪಡಿಸುವ ಅನುಕೂಲವನ್ನು ಹೊಂದಿದೆ. ಇದು ಅಂತಿಮವಾಗಿ ಒಟ್ಟಾರೆ ತೆರಿಗೆ ಸಂಗ್ರಹದಲ್ಲಿನ ಸುಧಾರಣೆ ಮತ್ತು ರಾಒಆಂಉದ ತ್ವರಿತ ವೃದ್ಧಿಯ ಮೂಲಕ ಬಿಟ್ಟುಕೊಟ್ಟ ಆದಾಯವನ್ನು ಸರಿತೂಗಿಸುತ್ತದೆ ಎಂದು ಹೇಳಿದೆ.

## 1.4 ಬಂಡವಾಳ ಸ್ವೀಕೃತಿಗಳು

ರಾಜ್ಯ ಸರ್ಕಾರದ ಬಂಡವಾಳ ಸ್ವೀಕೃತಿಗಳು, ಋಣ ಮತ್ತು ಋಣೇತರ ಸ್ವೀಕೃತಿಗಳನ್ನು ಒಳಗೊಂಡಿದ್ದು, ಇದರ ಸಂಯೋಜನೆಯನ್ನು **ಕಂಡಿಕೆ 1.2.1**ರಲ್ಲಿ ಚರ್ಚಿಸಲಾಗಿದೆ. 2016–17ನೇ ವರ್ಷದಲ್ಲಿ ₹31,156 ಕೋಟಿಗಳ ಸಾರ್ವಜನಿಕ ಋಣ ಸ್ವೀಕೃತಿಯು ₹29,238 ಕೋಟಿಗಳ ಆಂತರಿಕ ಋಣ (ಶೇಕಡ 94) ಮತ್ತು ₹1,918 ಕೋಟಿಗಳಷ್ಟು ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳನ್ನು (ಶೇಕಡ 6) ಒಳಗೊಂಡಿದೆ. ಆಂತರಿಕ ಋಣದಲ್ಲಿ ಮಾರುಕಟ್ಟೆ ಸಾಲಗಳು ಪ್ರಧಾನ ಪಾಲನ್ನು ಹೊಂದಿದ್ದು ಇದು ಶೇಕಡ 82ರಷ್ಟಿದ್ದರೆ, ನಂತರದ ಸ್ಥಾನಗಳು ರಾಸಉನಿ ಸಾಲ (ಶೇಕಡ 15) ಮತ್ತು ವ್ಯವಹಾರಿಕ ಸಾಲಗಳದ್ದಾಗಿವೆ (ಶೇಕಡ 3). ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಯೋಜನಾ ಸಾಲಗಳು ಮಾತ್ರ 2012–13 ರಿಂದ 2016–17ರ ಅವಧಿಯಲ್ಲಿ ಬಂಡವಾಳ ಸ್ವೀಕೃತಿಗಳ ಸಂಯೋಜನೆಯಲ್ಲಿನ ಪ್ರವೃತ್ತಿಯನ್ನು **ಕೋಷ್ಟಕ 1.18**ರಲ್ಲಿ ನೀಡಿದೆ.

**ಕೋಷ್ಟಕ 1.18: ಬಂಡವಾಳ ಸ್ವೀಕೃತಿಗಳ ವೃದ್ಧಿ ಮತ್ತು ಸಂಯೋಜನೆಯಲ್ಲಿನ ಪ್ರವೃತ್ತಿ**

**(ಕೋಟಿ ರೂಪಾಯಿಗಳಲ್ಲಿ ಮತ್ತು ಶೇಕಡಾವಾರು ವೃದ್ಧಿದರ)**

| ರಾಜ್ಯದ ಬಂಡವಾಳ ಸ್ವೀಕೃತಿಗಳ ಮೂಲಗಳು | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ಬಂಡವಾಳ ಸ್ವೀಕೃತಿಗಳು | 13,656 | 17,484 | 21,968 | 21,484 | 31,283 |
| ಇತರೆ ಬಂಡವಾಳ ಸ್ವೀಕೃತಿಗಳು | 33 | 88 | 10 | 352 | 27 |
| ಸಾಲ ಮತ್ತು ಮುಂಗಡಗಳ ವಸೂಲಿ | 158 | 109 | 84 | 60 | 100 |
| ಸಾರ್ವಜನಿಕ ಋಣ ಸ್ವೀಕೃತಿ | 13,465 | 17,287 | 21,874 | 21,072 | 31,156 |
| ಬಂಡವಾಳ ಸ್ವೀಕೃತಿಗಳು ಹಾಗೂ ಸಾರ್ವಜನಿಕ ಋಣ ಸ್ವೀಕೃತಿಗಳ ಅನುಪಾತ | 98.60 | 98.87 | 99.57 | 98.08 | 99.59 |
| ಋಣ ಬಂಡವಾಳ ಸ್ವೀಕೃತಿಗಳ ವೃದ್ಧಿಯ | 43.89 | 28.38 | 26.53 | (–) 3.67 | 47.85 |

| ರಾಜ್ಯದ ಬಂಡವಾಳ ಸ್ವೀಕೃತಿಗಳ ಮೂಲಗಳು | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ದರ | | | | | |
| ಋಣೇತರ ಬಂಡವಾಳ ಸ್ವೀಕೃತಿಗಳ ವೃದ್ಧಿಯ ದರ | (–) 42.12 | 3.14 | (–) 52.28 | 338.30 | (–) 69.17 |
| ರಾಒಆಂಉದ ವೃದ್ಧಿಯ ದರ | 14.56 | 18.24 | 12.70 | 11.42 | 8.79 |
| ಬಂಡವಾಳ ಸ್ವೀಕೃತಿಗಳ ವೃದ್ಧಿಯ ದರ (ಶೇಕಡ) | 40.96 | 28.03 | 25.65 | (–) 2.20 | 45.61 |

ಒಟ್ಟಾರೆ, 2012–13ರಲ್ಲಿ ₹13,656 ಕೋಟಿಗಳಿದ್ದ ಬಂಡವಾಳ ಸ್ವೀಕೃತಿಗಳು 2016–17ರಲ್ಲಿ ₹31,283 ಕೋಟಿಗಳಿಗೆ ಏರಿದೆ. 2012–13 ರಿಂದ 2016–17ರ ಅವಧಿಯಲ್ಲಿ ಋಣ ಸ್ವೀಕೃತಿಗಳು, ಬಂಡವಾಳ ಸ್ವೀಕೃತಿಗಳ ಪ್ರಧಾನ ಭಾಗವಾಗಿದ್ದು ಇದು ಶೇಕಡ 98 ಮತ್ತು 100ರ ನಡುವೆ ಇದ್ದಿತು. ಈ ಅವಧಿಯಲ್ಲಿ ಸಾಲ ಮತ್ತು ಮುಂಗಡಗಳ ವಸೂಲಿಯು ಅತ್ಯಲ್ಪವಾಗಿದ್ದು, 2016–17ರ ಅಂತ್ಯಕ್ಕೆ ಬಾಕಿ ಇರುವ ಸಾಲ ಮತ್ತು ಮುಂಗಡಗಳ ಮೊತ್ತದ ಶೇಕಡ ಒಂದಕ್ಕಿಂತಲೂ ಕಡಿಮೆಯಿತ್ತು. ಇದು ಪುಸ್ತಕ ಹೊಂದಾಣಿಕೆಯ ಮೂಲಕ ವಿದ್ಯುಚ್ಛಕ್ತಿ ಸರಬರಾಜು ಸಂಸ್ಥೆಗಳ ಬಾಕಿ ಇದ್ದ ಸಾಲಗಳನ್ನು ರಾಜಸ್ವ ಲೆಕ್ಕದಲ್ಲಿ ಸಹಾಯ ಧನವಾಗಿ ಪರಿವರ್ತಿಸಿದ ₹9.50 ಕೋಟಿಗಳನ್ನು ಸಹ ಒಳಗೊಂಡಿದೆ.

## 1.5 ಸಾರ್ವಜನಿಕ ಲೆಕ್ಕಗಳ ಸ್ವೀಕೃತಿಗಳು

ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ, ಮೀಸಲು ನಿಧಿ, ಠೇವಣಿಗಳು, ಅಮಾನತ್ತು, ಇರಸಾಲುಗಳು ಮುಂತಾದ ಸಂಚಿತ ನಿಧಿಯ ಭಾಗವಲ್ಲದ ಕೆಲವು ವ್ಯವಹಾರಗಳ ಸ್ವೀಕೃತಿ ಮತ್ತು ಬಟವಾಡೆಗಳನ್ನು ಸಂವಿಧಾನದ ಅನುಚ್ಛೇದ 266(2) ರ ಅಡಿ ಸ್ಥಾಪಿಸಲಾದ ಸಾರ್ವಜನಿಕ ಲೆಕ್ಕದಲ್ಲಿ ಇಡಲಾಗುತ್ತದೆ ಮತ್ತು ಇದಕ್ಕೆ ಶಾಸನ ಸಭೆಯ ಅನುಮೋದನೆಯ ಅಗತ್ಯವಿರುವುದಿಲ್ಲ. ಈ ಸಂದರ್ಭಗಳಲ್ಲಿ ಸರ್ಕಾರವು ಸಾರ್ವಜನಿಕ ಹಣದ ಬ್ಯಾಂಕರ್/ಟ್ರಸ್ಟಿಯಾಗಿ ಪಾತ್ರವಹಿಸುತ್ತದೆ. 2012–13 ರಿಂದ 2016–17ರ ಅವಧಿಯಲ್ಲಿ ಸಾರ್ವಜನಿಕ ಲೆಕ್ಕದಡಿಯ ನಿವ್ವಳ ವ್ಯವಹಾರಗಳನ್ನು **ಕೋಷ್ಟಕ 1.19**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.19: ಸಾರ್ವಜನಿಕ ಲೆಕ್ಕದಡಿಯ ನಿವ್ವಳ ವ್ಯವಹಾರಗಳು**

(ಕೋಟಿ ರೂಪಾಯಿಗಳಲ್ಲಿ)

| ಸಾರ್ವಜನಿಕ ಲೆಕ್ಕದ ವಿಭಾಗಗಳಲ್ಲಿನ ಸಂಪನ್ಮೂಲಗಳು (ನಿವ್ವಳ) | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ಐ. ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ ಇತರೆ | 1,732 | 3,107 | 2,156 | 2,086 | 2,657 |
| ಜೆ. ಮೀಸಲು ನಿಧಿಗಳು | 1,362 | 1,264 | 1,547 | 2,081 | 6,013 |
| ಕೆ. ಠೇವಣಿಗಳು ಮತ್ತು ಮುಂಗಡಗಳು | 2,511 | 2,840 | 3,702 | 284 | 3,041 |
| ಎಲ್. ಅಮಾನತ್ತು ಮತ್ತು ಇತರೆ | 98 | 2,671 | 3,282 | 990 | 491 |
| ಎಂ. ಇರಸಾಲುಗಳು | (–) 32 | (–) 12 | (–) 32 | (–) 17 | (–) 38 |
| ಒಟ್ಟು | **5,671** | **8,870** | **10,655** | **5,424** | **12,164** |

2012–13ರಲ್ಲಿ ₹5,671 ಕೋಟಿಗಳಷ್ಟಿದ್ದ ಸಾರ್ವಜನಿಕ ಲೆಕ್ಕದಲ್ಲಿನ ನಿವ್ವಳ ಸ್ವೀಕೃತಿಯು 2016–17ರಲ್ಲಿ ₹12,164 ಕೋಟಿಗಳಿಗೆ ಏರಿದೆ (ಶೇಕಡ 114). ಇದು ರಾಜ್ಯದ ಸಾಮಾನ್ಯ ರಾಜಸ್ವದಿಂದ ₹3,670 ಕೋಟಿ ಮತ್ತು ಸಾರ್ವಜನಿಕ ಲೆಕ್ಕಗಳಲ್ಲಿನ ಮೂಲಸೌಕರ್ಯ ನಿಧಿಗಳಿಗೆ ಸಂಚಿತ ನಿಧಿಯಿಂದ ಉಪಕರ ಸಂಗ್ರಹಣೆಗಳ (₹952 ಕೋಟಿ) ವರ್ಗಾವಣೆಗಳನ್ನು ಸೇರಿದೆ. ಅಂತೆಯೇ, ಮೋಟಾರು ವಾಹನ ತೆರಿಗೆಯ ಉಪಕರಗಳ ಸಂಗ್ರಹಣೆಯಿಂದ ₹43.82 ಕೋಟಿ ಮತ್ತು ರಾಜ್ಯದ ಸಾಮಾನ್ಯ ರಾಜಸ್ವದಿಂದ ₹13.49 ಕೋಟಿಗಳನ್ನು ಸಾರ್ವಜನಿಕ ಲೆಕ್ಕಕ್ಕೆ ವರ್ಗಾವಣೆ ಮಾಡಲಾಯಿತು. ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ, ಮೀಸಲು ನಿಧಿಗಳು ಮತ್ತು ಠೇವಣಿಗಳು ಮತ್ತು ಮುಂಗಡಗಳಡಿಯ ನಿವ್ವಳ ಮೊತ್ತಗಳು ವಿತ್ತೀಯ ಕೊರತೆಯನ್ನು ತುಂಬುವಲ್ಲಿ ಪ್ರಧಾನ ಪಾಲು ಹೊಂದಿವೆ. ಠೇವಣಿ ಮತ್ತು ಮುಂಗಡಗಳ ಸ್ವೀಕೃತಿಗಳು ಪಂಚಾಯತ್ ಸಂಸ್ಥೆಗಳ ನಿಧಿಯಲ್ಲಿ ಮಾಡಿದ ₹1,265 ಕೋಟಿಗಳೂ ಸೇರಿವೆ. 2016–17 ರಲ್ಲಿ ಅಮಾನತ್ತು ಮತ್ತು ಇತರೆ ವಿಭಾಗದಡಿಯ ವ್ಯವಹಾರಗಳಲ್ಲಿ ಇಳಿಕೆಯಾಗಿದ್ದು, ಇದು ₹404

ಕೋಟಿಗಳಷ್ಟು ಮೊತ್ತದ ನಗದೀಕರಿಸಿಲ್ಲದ ಚೆಕ್ಕುಗಳಿಗೆ ಸಂಬಂಧಿಸಿದೆ. **ಕಂಡಿಕೆ 1.8.6**ರಲ್ಲಿ ಈ ವ್ಯವಹಾರದ ವಿಶ್ಲೇಷಣೆಯನ್ನು ನೀಡಲಾಗಿದೆ.

## 1.6 ಸಂಪನ್ಮೂಲಗಳ ಅನ್ವಯ

ಪ್ರಧಾನವಾದ ವೆಚ್ಚ ಜವಾಬ್ದಾರಿಗಳು ಸರ್ಕಾರಕ್ಕೆ ವಹಿಸಲ್ಪಟ್ಟಿರುವುದರಿಂದ ರಾಜ್ಯ ಸರ್ಕಾರದ ಮಟ್ಟದಲ್ಲಿ ವೆಚ್ಚದ ಹಂಚಿಕೆಯ ವಿಶ್ಲೇಷಣೆಯು ಮಹತ್ವವನ್ನು ಪಡೆದುಕೊಳ್ಳುತ್ತದೆ. ಹಣಕಾಸು ಹೊಣೆಗಾರಿಕೆಯ ಶಾಸನಗಳ ಚೌಕಟ್ಟಿನೊಳಗೆ ಸಾಲ ಅಥವಾ ಕೊರತೆಯ ಮೂಲಕ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಲು ಆಯವ್ಯಯದ ನಿರ್ಬಂಧಗಳಿವೆ. ಅದೇ ವೇಳೆಯಲ್ಲಿ, ರಾಜ್ಯ ಮಟ್ಟದಲ್ಲಿ ಚಾಲ್ತಿಯಲ್ಲಿರುವ ವಿತ್ತೀಯ ತಿದ್ದುಪಡಿ ಮತ್ತು ಕ್ರೋಢೀಕರಣ ಪ್ರಕ್ರಿಯೆಯು ವೆಚ್ಚದ ಬೆಲೆಯಲ್ಲಿ ಅದರಲ್ಲೂ ಸಾಮಾಜಿಕ ಮತ್ತು ಆರ್ಥಿಕ ವಲಯದ ಅಭಿವೃದ್ಧಿ ಗಮನದ ವೆಚ್ಚದಲ್ಲಿ ಅಲ್ಲವೆಂಬುದನ್ನು ಖಚಿತಪಡಿಸಿಕೊಳ್ಳುವುದು ಮುಖ್ಯವಾಗುತ್ತದೆ.

ವಿವೇಚನಾಯುಕ್ತ ಹಣಕಾಸು ನಿರ್ವಹಣೆಯು ರಾಜಸ್ವ ವೆಚ್ಚಕ್ಕಿಂತಲೂ ಹೆಚ್ಚಿನ ರಾಜಸ್ವ ಸ್ವೀಕೃತಿಗಳನ್ನು ಗಳಿಸಿ ಉಳಿತಾಯವನ್ನು ಸಾಧಿಸುವ ಗುರಿಯನ್ನು ಹೊಂದಿರಬೇಕು. ರಾಜಸ್ವ ಉಳಿಕೆಯು ಸರ್ಕಾರದ ಉಳಿತಾಯವೆಂದು ಕರೆಯಲ್ಪಟ್ಟು ಇದು ಬಂಡವಾಳ ವೆಚ್ಚವನ್ನು ಭರಿಸಲು ಬಳಕೆಯಾಗುತ್ತದೆ. ಸಾಲವಾಗಿ ಪಡೆದ ಮೊತ್ತಗಳನ್ನು ಆದಾಯ ಉತ್ಪತ್ತಿಮಾಡುವ ಚಟುವಟಿಕೆಗಳಿಗೆ ಅಥವಾ ಪರೋಕ್ಷವಾಗಿ ತೆರಿಗೆ ಅಥವಾ ತೆರಿಗೆಯೇತರ ಆದಾಯವನ್ನು ಸೃಷ್ಟಿಸುವ ಉತ್ಪಾದನೆಗೆ ಬಳಸಿದಲ್ಲಿ ಅವು ಋಣಸೇವೆಗೆ ಮತ್ತು ಸಾಲಗಳ ಮರುಪಾವತಿಗೆ ಬಳಕೆಯಾಗಬಹುದು.

### 1.6.1 ವೆಚ್ಚದ ವೃದ್ಧಿ ಮತ್ತು ಸಂಯೋಜನೆ

ಒಟ್ಟು ವೆಚ್ಚದ ಮೂಲ ಪ್ರಮಿತಿಗಳು, ವೃದ್ಧಿ ಮತ್ತು ರಾಒಆಂಉದ ಜೊತೆಗೆ ಹೋಲಿಕೆ ಮುಂತಾದವುಗಳನ್ನು **ಕೋಷ್ಟಕ 1.20**ರಲ್ಲಿ ನೀಡಿದೆ.

**ಕೋಷ್ಟಕ 1.20: ಒಟ್ಟು ವೆಚ್ಚ–ಮೂಲ ಪ್ರಮಿತಿಗಳು**

**(ಕೋಟಿ ರೂಪಾಯಿಗಳಲ್ಲಿ ವೃದ್ಧಿದರ ಶೇಕಡ)**

| | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ಒಟ್ಟು ವೆಚ್ಚ (ಒವೆ*) | 92,874 | 1,06,831 | 1,23,812 | 1,38,398 | 1,62,005 |
| ವೃದ್ಧಿದರ | 12.7 | 15.0 | 15.9 | 11.8 | 17.1 |
| ರಾಒಆಂಉ | 6,91,700 | 8,17,886 | 9,21,788 | 10,27,068 | 11,17,334 |
| ವೃದ್ಧಿದರ | 14.56 | 18.24 | 12.70 | 11.42 | 8.79 |
| ಒವೆ/ರಾಒಆಂಉ | 13.43 | 13.06 | 13.43 | 13.47 | 14.50 |
| ರಾಜಸ್ವ ಸ್ವೀಕೃತಿ/ಒವೆ | 84.20 | 83.80 | 84.11 | 85.85 | 82.23 |
| ರಾಜಸ್ವ ವೆಚ್ಚ | 76,293 | 89,189 | 1,03,614 | 1,17,028 | 1,31,921 |
| ವೃದ್ಧಿದರ | 17.2 | 16.9 | 16.2 | 12.9 | 12.7 |
| ಬಂಡವಾಳ ವೆಚ್ಚ (ಸಾಲಗಳು ಮತ್ತು ಮುಂಗಡಗಳು ಸೇರಿ) | 16,581 | 17,642 | 20,198 | 21,370 | 30,084 |
| ವೃದ್ಧಿಯ ದರ | (–) 4.3 | 6.4 | 14.5 | 5.8 | 40.8 |
| **ಒಟ್ಟು ವೆಚ್ಚದ ಪ್ಲವನತೆ** | | | | | |
| ರಾಒಆಂಉ | 0.9 | 0.8 | 1.3 | 1.0 | 1.9 |
| ರಾಜಸ್ವ ಸ್ವೀಕೃತಿಗಳು | 1.1 | 1.0 | 1.0 | 0.8 | 1.4 |
| **ರಾಜಸ್ವ ವೆಚ್ಚದ ಪ್ಲವನತೆ** | | | | | |
| ರಾಒಆಂಉ | 1.2 | 0.9 | 1.3 | 1.1 | 1.4 |
| ರಾಜಸ್ವ ಸ್ವೀಕೃತಿಗಳು | 1.4 | 1.2 | 1.0 | 1.0 | 1.0 |

*ಆಕರ: ಹಣಕಾಸು ಲೆಕ್ಕಗಳು.*

**ಒಟ್ಟು ವೆಚ್ಚವು ರಾಜಸ್ವ ವೆಚ್ಚ ಬಂಡವಾಳ ವೆಚ್ಚ (ಸಾಲಗಳು ಮತ್ತು ಮುಂಗಡಗಳು ಸೇರಿ) ಗಳನ್ನು ಒಳಗೊಂಡಿದೆ.*

**ನಕ್ಷೆ 1.14** ಐದು ವರ್ಷಗಳ ಅವಧಿಯಲ್ಲಿ (2012–13ರಿಂದ 2016–17) ಒಟ್ಟು ವೆಚ್ಚದ ಪ್ರವೃತ್ತಿಯನ್ನು ಮತ್ತು ರಾಜಸ್ವ, ಬಂಡವಾಳ ಮತ್ತು ಸಾಲ ಹಾಗೂ ಮುಂಗಡಗಳಡಿ ಅದರ ಸಂಯೋಜನೆಯನ್ನೂ ತೋರಿಸುತ್ತದೆ.

**ನಕ್ಷೆ 1.14: ಒಟ್ಟು ವೆಚ್ಚ ಪ್ರವೃತ್ತಿಗಳು ಮತ್ತು ಸಂಯೋಜನೆ**




ಒಟ್ಟು ವೆಚ್ಚವು ಶೇಕಡ 74ರಷ್ಟು ಏರಿಕೆಯಾಗಿ, ಇದು 2012–13ರಲ್ಲಿ ₹92,874 ಕೋಟಿಯಿಂದ 2016–17ರಲ್ಲಿ ₹1,62,005 ಕೋಟಿಗೆ ಏರಿ, ಇದು ರಾಜಸ್ವ ವೆಚ್ಚದಲ್ಲಿನ (₹55,628 ಕೋಟಿ), ಬಂಡವಾಳ ವೆಚ್ಚದಲ್ಲಿನ (₹12,671 ಕೋಟಿ), ಸಾಲಗಳು ಮುಂಗಡಗಳ ವಿತರಣೆಗಳಲ್ಲಿನ (₹832 ಕೋಟಿ) ಏರಿಕೆಯಿಂದಾಗಿದೆ.

2012–13 ರಿಂದ 2016–17ರ ಅವಧಿಯಲ್ಲಿ, ಒಟ್ಟಾರೆ ವೆಚ್ಚದ ಸರಾಸರಿ 83ರಷ್ಟು ರಾಜಸ್ವ ಲೆಕ್ಕದಲ್ಲಿ ಆಗಿತ್ತು. 2016–17ರಲ್ಲಿ ಇದು ಶೇಕಡ 81ರಷ್ಟಿದೆ. ಬಂಡವಾಳ ವೆಚ್ಚದ ಪಾಲು (ಸಾಲಗಳು ಮತ್ತು ಮುಂಗಡಗಳೂ ಸೇರಿದಂತೆ) ಶೇಕಡ 19ರಷ್ಟಿದೆ.

2012–13ರಿಂದ 2016–17ರ ಅವಧಿಗೆ ರಾಜಸ್ವ ವೆಚ್ಚ, ಬಂಡವಾಳ ವೆಚ್ಚ ಮತ್ತು ಸಾಲಗಳು ಮತ್ತು ಮುಂಗಡಗಳು ಇವುಗಳ ಪಾಲನ್ನು **ಕೋಷ್ಟಕ 1.21**ರಲ್ಲಿ ನೀಡಲಾಗಿದೆ.

### ಕೋಷ್ಟಕ 1.21: ಒಟ್ಟು ವೆಚ್ಚ–ಅವುಗಳ ಅಂಶಗಳ ಪಾಲಿನ ಪ್ರವೃತ್ತಿಗಳು

**(ಶೇಕಡಾವಾರಿನಲ್ಲಿ)**

| | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ರಾಜಸ್ವ ವೆಚ್ಚ | 82.15 | 83.49 | 83.68 | 84.56 | 81.43 |
| ಬಂಡವಾಳ ವೆಚ್ಚ | 16.67 | 15.86 | 15.85 | 14.97 | 17.38 |
| ಸಾಲಗಳು ಮತ್ತು ಮುಂಗಡಗಳು | 1.18 | 0.65 | 0.47 | 0.47 | 1.19 |

*ಆಕರ: ಸಂಬಂಧಿತ ವರ್ಷಗಳ ಹಣಕಾಸು ಲೆಕ್ಕಗಳು.*

**ನಕ್ಷೆ 1.15** ಐದು ವರ್ಷಗಳ ಅವಧಿಯಲ್ಲಿ (2012–13ರಿಂದ 2016–17) ಒಟ್ಟು ವೆಚ್ಚದ ಸಂಯೋಜನೆಯನ್ನು ತೋರಿಸುತ್ತದೆ.

**ನಕ್ಷೆ 1.15: ಒಟ್ಟು ವೆಚ್ಚ–ಸಂಯೋಜನೆಗಳ ಪ್ರವೃತ್ತಿ** **ಪಾಲಿನ ಶೇಕಡಾವಾರು**




ಒಟ್ಟು ವೆಚ್ಚದಲ್ಲಿ ರಾಜಸ್ವ ವೆಚ್ಚವು ಬಹು ದೊಡ್ಡ ಪಾಲನ್ನು ಹೊಂದಿದ್ದು, ಶೇಕಡ 80ರಷ್ಟು ವೆಚ್ಚವು ಬದ್ಧವೆಚ್ಚಗಳಾಗಿದ್ದು ಬಂಡವಾಳ ವೆಚ್ಚವನ್ನು ಹೆಚ್ಚಿಸಲು ಕಡಿಮೆ ಅವಕಾಶವಿತ್ತು. ಒಟ್ಟು ವೆಚ್ಚದಲ್ಲಿ ಸಾಮಾನ್ಯ, ಸಾಮಾಜಿಕ, ಆರ್ಥಿಕ, ಸಾಲಗಳು ಮತ್ತು ಮುಂಗಡಗಳು ಮತ್ತು ಸಹಾಯಾನುದಾನ ಇವುಗಳ ಚಟುವಟಿಕೆಗಳ ಪ್ರವೃತ್ತಿಯನ್ನು **ಕೋಷ್ಟಕ 1.22**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.22: ಒಟ್ಟು ವೆಚ್ಚ–ಚಟುವಟಿಕೆಗಳ ಪ್ರವೃತ್ತಿ**

**(ಪಾಲಿನ ಶೇಕಡಾವಾರು)**

| | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ಸಾಮಾನ್ಯ ಸೇವೆಗಳು | 22.36 | 23.83 | 23.33 | 22.97 | 19.95 |
| ಸಾಮಾಜಿಕ ಸೇವೆಗಳು | 35.89 | 33.39 | 35.17 | 37.30 | 37.93 |
| ಆರ್ಥಿಕ ಸೇವೆಗಳು | 36.23 | 37.43 | 36.17 | 34.87 | 37.42 |
| ಸಾಲಗಳು ಮತ್ತು ಮುಂಗಡಗಳು | 1.18 | 0.65 | 0.47 | 0.47 | 1.19 |
| ಸಹಾಯಾನುದಾನ | 4.34 | 4.70 | 4.86 | 4.39 | 3.51 |

*ಆಕರ: ಸಂಬಂಧಿತ ವರ್ಷಗಳ ಹಣಕಾಸು ಲೆಕ್ಕಗಳು.*

ಈ ಅಂಶಗಳ ಸಾಪೇಕ್ಷ ಪಾಲಿನ ನಡೆಯು, 2012–13ರಿಂದ 2016–17ರ ಅವಧಿಯಲ್ಲಿ ಅಂತರ ವರ್ಷದ ಅಲ್ಪ ಭಿನ್ನತೆಯೊಂದಿಗೆ ಸಾಪೇಕ್ಷ ಸ್ಥಿರತೆಯನ್ನು ಪ್ರದರ್ಶಿಸಿತು. 2016–17ರಲ್ಲಿ ಸಾಮಾನ್ಯ ಸೇವೆಗಳ ಪಾಲು ಅಲ್ಪವಾಗಿ ಇಳಿಕೆಯಾಗಿದ್ದರೆ ಆರ್ಥಿಕ ಮತ್ತು ಸಾಮಾಜಿಕ ಸೇವೆಗಳ ಪಾಲು ಸ್ವಲ್ಪ ಏರಿತ್ತು. ಸಾಲ ಮತ್ತು ಮುಂಗಡಗಳು 2012–13ರಿಂದ 2015–16ರಲ್ಲಿ ತೀವ್ರವಾಗಿ ಇಳಿಕೆಯಾಗಿದ್ದು, 2016–17ರಲ್ಲಿ ಶೇಕಡ 1.19ಕ್ಕೆ ಏರಿತು.

ವೆಚ್ಚ ಸುಧಾರಣಾ ಆಯೋಗವು (ಇಆರ್‌ಸಿ) ತನ್ನ ಮೊದಲ ವರದಿಯಲ್ಲಿ (ಫೆಬ್ರವರಿ 2010) ಬಂಡವಾಳ ಹೂಡಿಕೆಗಳನ್ನು ಹೆಚ್ಚಿಸಬೇಕು ಮತ್ತು ವಿವೇಚನಾಯುಕ್ತ ಹಂಚಿಕೆಗಳ ಮೂಲಕ ವಿತ್ತೀಯ ಅನಿಶ್ಚಿತತೆಗಳನ್ನು ತಡೆಯಬೇಕೆಂದು ಶಿಫಾರಸ್ಸು ಮಾಡಿದೆ. ಅದು ಬಂಡವಾಳ ವೆಚ್ಚವನ್ನು (ಋಣ ಸೇವೆಯನ್ನು ಬಿಟ್ಟು) ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ ಐದರಷ್ಟಿರುವಂತೆ ನಿರ್ವಹಿಸಬೇಕೆಂದು ಸಹಾ ಶಿಫಾರಸ್ಸು ಮಾಡಿದೆ. ಬಂಡವಾಳ ವೆಚ್ಚ ಮತ್ತು ರಾಒಆಂಉದ ಅನುಪಾತವು 2012–13ರಿಂದ 2015–16ರಲ್ಲಿ ಶೇಕಡ ಎರಡರಷ್ಟಿದ್ದು 2016–17ರಲ್ಲಿ ಶೇಕಡ ಮೂರಕ್ಕೆ ಏರಿತು.

### 1.6.2 ರಾಜಸ್ವ ವೆಚ್ಚ

ರಾಜಸ್ವ ವೆಚ್ಚವು ಸರ್ಕಾರದ ದಿನನಿತ್ಯದ ವೆಚ್ಚಗಳನ್ನು, ಕೂಲಿ ಹಾಗೂ ಸಂಬಳ, ಪಿಂಚಣಿಗಳು, ಬಡ್ಡಿಪಾವತಿಗಳು, ಬಂಡವಾಳ ಕಾಮಗಾರಿಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗಳ ವೆಚ್ಚ, ಸಹಾಯಧನಗಳು, ಸ್ಥಳೀಯ ಸಂಸ್ಥೆಗಳಿಗೆ, ಸಹಕಾರಿ ಸಂಸ್ಥೆಗಳಿಗೆ, ಸರ್ಕಾರೇತರ ಸಂಸ್ಥೆಗಳಿಗೆ ಮತ್ತು ಇತರರಿಗೆ ಮಾಡುವ ವರ್ಗಾವಣೆಗಳನ್ನು ಒಳಗೊಂಡಿದೆ. ವೆಚ್ಚವನ್ನು ಆಡಳಿತ ಸೇವೆಗಳು, ಸಾಮಾಜಿಕ ಸೇವೆಗಳು ಮತ್ತು ಆರ್ಥಿಕ ಸೇವೆಗಳು ಎಂದು ವಿವಿಧ ಕಾರ್ಯವರ್ಗಗಳಾಗಿ ವಿಂಗಡಿಸಬಹುದು.

ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳ ಮೇಲಿನ ವೆಚ್ಚವು ಭೌತಿಕ ಮೂಲಸೌಕರ್ಯಗಳ ನಿರ್ಮಾಣ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಂಬಂಧಿಸಿದ್ದು ಇದನ್ನು ಉತ್ಪಾದಕ ವೆಚ್ಚ ಎಂದು ಸಾಮಾನ್ಯ ಆಡಳಿತ ಮತ್ತು ಋಣ ಸೇವೆಗಳ ಮೇಲಿನ ವೆಚ್ಚವನ್ನು ಅನುತ್ಪಾದಕ ಎಂದು ಪರಿಗಣಿಸಲಾಗುತ್ತದೆ.

ರಾಜಸ್ವ ವೆಚ್ಚವು 2012–13ರಲ್ಲಿ ₹76,293 ಕೋಟಿಗಳಿದ್ದು 2016–17 ರಲ್ಲಿ ₹1,31,921 ಕೋಟಿಗಳಿಗೆ ಏರಿ ಶೇಕಡ 73ರಷ್ಟು ಹೆಚ್ಚಾಗಿದೆ. ರಾಜಸ್ವ ವೆಚ್ಚದ ಪ್ಲವನತೆಯು 2016–17ರಲ್ಲಿ ರಾಒಆಉಕ್ಕೆ ಹೋಲಿಸಿದರೆ 1.4ರಷ್ಟು ಆಗಿತ್ತು. ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡ 13ರಷ್ಟು ಹೆಚ್ಚಾಗಿದ್ದು, ಇದು ಸಂಬಳವೆಚ್ಚ (₹934 ಕೋಟಿ), ಬಡ್ಡಿಪಾವತಿ (₹1,507 ಕೋಟಿ), ಪಿಂಚಣಿ (₹44 ಕೋಟಿ) ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ (₹2,303 ಕೋಟಿ) ಯಲ್ಲಿನ ಏರಿಕೆಯಿಂದ ಉಂಟಾಗಿದೆ.

2016–17ರಲ್ಲಿ ರಾಜಸ್ವ ವೆಚ್ಚವು ಖಾತರಿ ಶುಲ್ಕ[4] (₹52.91 ಕೋಟಿ), ನಿಧಿ/ಗ್ರಾಮಪಂಚಾಯತ್ ನಿಧಿ ಶುಲ್ಕಗಳ ಮೇಲೆ ಬಡ್ಡಿಯ ಹೊಂದಾಣಿಕೆ (₹1,164.21 ಕೋಟಿ), ಕರ್ನಾಟಕ ಸರ್ಕಾರದ ವಿಮಾ ಯೋಜನೆಗಳ ನಿಧಿ ಶಿಲ್ಕುಗಳ ಮೇಲಿನ ಬಡ್ಡಿಯ ಹೊಂದಾಣಿಕೆ (₹739.58 ಕೋಟಿ), ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ಶಿಲ್ಕುಗಳ ಮೇಲಿನ ಬಡ್ಡಿಯ ಹೊಂದಾಣಿಕೆ (₹988.28 ಕೋಟಿ), ವಿದ್ಯುತ್ ಸರಬರಾಜು ಕಂಪನಿಗಳಿಗೆ ವಿದ್ಯುತ್ ತೆರಿಗೆ (₹1,259 ಕೋಟಿ)ಬಾಕಿಯನ್ನು ಸಹಾಯಧನವೆಂದು ಪರಿಗಣಿಸಿರುವುದು, ಮತ್ತು ಸರ್ಕಾರಿ ಸ್ವಾಮ್ಯದ ವಾಣಿಜ್ಯ ಉದ್ಯಮಗಳಲ್ಲಿ ಹೂಡಿದ ಬಂಡವಾಳ ಬಡ್ಡಿಯ ಪುಸ್ತಕ ಹೊಂದಾಣಿಕೆ (₹0.67 ಕೋಟಿ)ಗಳ ಒಟ್ಟು ಮೊತ್ತವಾದ ₹4,204.65 ಕೋಟಿಗಳನ್ನು ಸಹ ಒಳಗೊಂಡಿದೆ.

### 1.6.3 ಬದ್ಧ ವೆಚ್ಚಗಳು

ಬಹುಪಾಲು ರಾಜಸ್ವ ವೆಚ್ಚಗಳು ಸಂಬಳಗಳು, ಪಿಂಚಣಿ, ಸಹಾಯಧನ ಮುಂತಾದ ಬದ್ಧ ವೆಚ್ಚಗಳ ರೂಪದಲ್ಲಿದ್ದು, ಸಾಮಾಜಿಕ ಮತ್ತು ಆರ್ಥಿಕ ಮೂಲಸೌಲಭ್ಯದ ಹೆಚ್ಚುತ್ತಿರುವ ಅವಶ್ಯಕತೆಗಳನ್ನು ಪೂರೈಸುವಲ್ಲಿ ಮತ್ತು ಈ ದಿಸೆಯಲ್ಲಿ ವೆಚ್ಚದ ನಿಯಂತ್ರಣವನ್ನು ಬಾಧಿಸುತ್ತದೆ. ಈ ಅಂಗಗಳಡಿಯ ವೆಚ್ಚವನ್ನು ಮಧ್ಯಂತರ ವಿತ್ತೀಯ ಯೋಜನೆ 2017–21ರಲ್ಲಿ ಬದ್ಧವೆಚ್ಚವೆಂದು ಪರಿಗಣಿಸಲಾದ ಸಾಮಾಜಿಕ ಭದ್ರತೆಯಡಿಯ ಪಿಂಚಣಿಗಳು, ಸಹಾಯಾನುದಾನ ಮತ್ತಿತರ ಆರ್ಥಿಕ ಸಹಾಯಗಳು, ಆಡಳಿತ ವೆಚ್ಚ, ಸರ್ಕಾರದ ವಿವಿಧ ಯೋಜನೆಗಳಡಿ ಬರುವ ಅಂತರ್ಗತ ಸಹಾಯಧನ, ಸ್ಥಳೀಯ ಸಂಸ್ಥೆ ಮುಂತಾದವುಗಳಿಗೆ ವರ್ಗಾವಣೆ ಮುಂತಾದ ಕೆಲವು ವೆಚ್ಚಗಳ ವಿವರಗಳನ್ನು 2012–13 ರಿಂದ 2016–17ರ ಅವಧಿಯಲ್ಲಿದ್ದಂತೆ **ಕೋಷ್ಟಕ 1.23**ರಲ್ಲಿ ಮತ್ತು **ನಕ್ಷೆ 1.16**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.23: ಬದ್ಧ ವೆಚ್ಚಗಳ ಪ್ರವೃತ್ತಿ**

(ಕೋಟಿ ರೂಪಾಯಿಗಳಲ್ಲಿ)

| ಕ್ರಮ ಸಂಖ್ಯೆ | ವಿಷಯಗಳು | 2012–13 | 2013–14 | 2014–15 | 2015–16 | 2016–17 | |
|---|---|---|---|---|---|---|---|
| | | | | | | ಆಯವ್ಯಯ ಅಂದಾಜು | ವಾಸ್ತವ |
| 1 | ವೇತನಗಳು*–ಇದರಲ್ಲಿ | 16,308 | 18,027 | 19,952 | 20,774 | 23,779 | 21,708 |
| | ಯೋಜನೇತರ ಶೀರ್ಷಿಕೆ | 8,324 | 15,211 | 16,733 | 17,342 | | 18,366 |
| | ಯೋಜನಾ ಶೀರ್ಷಿಕೆ** | 7,984 | 2,816 | 3,219 | 3,432 | | 3,342 |
| 2 | ಬಡ್ಡಿ ಪಾವತಿಗಳು# | 7,454 | 8,027 | 9,804 | 11,343 | 12,672@ | 12,850 |
| 3 | ವಿಶ್ರಾಂತಿ ವೇತನಗಳ ಮೇಲಿನ ವೆಚ್ಚ | 7,227 | 9,152 | 10,118 | 11,251 | 12,123 | 11,295 |
| 4 | ಸಾಮಾಜಿಕ ಭದ್ರತೆ ಪಿಂಚಣಿಗಳು | 1,880 | 1,870 | 2,322 | 2,247 | 3,966 | 2,503 |
| 5 | ಸಹಾಯಧನಗಳು–ಇದರಲ್ಲಿ | | | | | | |

[4] ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ (₹24.22 ಕೋಟಿ), ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ (₹0.04 ಕೋಟಿ), ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಒಕ್ಕೂಟ ನಿಯಮಿತ (₹22.64 ಕೋಟಿ), ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (₹5.08 ಕೋಟಿ) ಮತ್ತು ಕರ್ನಾಟಕ ಪೊಲೀಸ್ ವಸತಿ ನಿಗಮ (₹0.93 ಕೋಟಿ).

| ಕ್ರಮ ಸಂಖ್ಯೆ | ವಿಷಯಗಳು | 2012–13 | 2013–14 | 2014–15 | 2015–16 | 2016–17 | |
|---|---|---|---|---|---|---|---|
| | | | | | | ಆಯವ್ಯಯ ಅಂದಾಜು | ವಾಸ್ತವ |
| | ನೇರ | 10,709 | 13,323 | 11,153 | 13,149 | 18,492 | 14,387 |
| | ಪರೋಕ್ಷ | 1,849 | 1,690 | 2,973 | 3,913 | | 3,714^ |
| 6 | ಸಹಾಯಾನುದಾನಗಳು ಮತ್ತು ಆರ್ಥಿಕ ಬೆಂಬಲ | 6,898 | 8,471 | 9,737 | 10,840 | 9,580 | 13,163 |
| 7 | ಆಡಳಿತಾತ್ಮಕ ವೆಚ್ಚ | 1,358 | 1,549 | 1,708 | 1,958 | 2,412 | 1,966 |
| 8 | ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ | 13,445 | 15,570 | 19,952 | 21,163 | 22,676 | 23,466 |
| **9** | **ಒಟ್ಟು ಬದ್ಧ ವೆಚ್ಚಗಳು** | **67,128** | **77,679** | **87,719** | **96,638** | **1,05,700** | **1,05,052** |
| **10** | **ರಾಜಸ್ವ ಸ್ವೀಕೃತಿಗಳು** | **78,176** | **89,542** | **1,04,142** | **1,18,817** | **1,30,758** | **1,33,214** |
| 11 | ರಾಜಸ್ವ ವೆಚ್ಚದ ಶತಾಂಶವಾಗಿ ಬದ್ಧ ವೆಚ್ಚಗಳು (9/10) | 86 | 87 | 84 | 81 | 81 | 79 |

**ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಾಗೂ ಇತರ ಸಂಸ್ಥೆಗಳಿಗೆ ಬಿಡುಗಡೆಗೊಳಿಸಲಾದ ಅನುದಾನಗಳಿಂದ ಪಾವತಿಸಲಾದ ವೇತನಗಳನ್ನು ಒಳಗೊಂಡಿದೆ.*

*** ಕೇಂದ್ರ ಪುರಸ್ಕೃತ ಯೋಜನೆಗಳಡಿಯಲ್ಲಿನ ಸಂಬಳಗಳನ್ನು ಒಳಗೊಂಡಿದೆ.*

*# ಆಯವ್ಯಯದ ಹೊರಗಿನ ಸಾಲಗಳಿಗೆ ಸಂಬಂಧಿತ ಬಡ್ಡಿ ಪಾವತಿಗಳು.*

*@2049ಕ್ಕೆ ಮಾತ್ರ ಸೇರಿದ ಬಡ್ಡಿಗಳನ್ನೊಳಗೊಂಡಿದೆ.*

*^ ಇಂದಿರಾ ಆವಾಸ್ ಯೋಜನೆಯಡಿ ಆರ್ಥಿಕ ಬೆಂಬಲವಾಗಿ ಬಿಡುಗಡೆಯಾದ ಸಬ್ಸಿಡಿಯನ್ನೊಳಗೊಂಡಿಲ್ಲ.*

ಮೇಲಿನ ಕೋಷ್ಟಕದಲ್ಲಿ ತೋರಿಸಿರುವಂತೆ ಬದ್ಧವೆಚ್ಚಕ್ಕೆ ರಾಜಸ್ವ ಸ್ವೀಕೃತಿಗಳ ಅನುಪಾತವು 2012–13ರಿಂದ 2013–14ರವರೆಗೂ ಏಕಪ್ರಕಾರವಾಗಿ ಹೆಚ್ಚುತ್ತಿದ್ದು, 2014–15ರ ನಂತರ ಇಳಿಕೆಯ ಪ್ರವೃತ್ತಿ ಹೊಂದಿದೆ. ಬದ್ಧ ವೆಚ್ಚ ಮತ್ತು ರಾಜಸ್ವ ಸ್ವೀಕೃತಿಗಳ ಅನುಪಾತದ ಹೆಚ್ಚಿನ ಶತಾಂಶವು, ತನ್ನ ಸಂಪನ್ಮೂಲಗಳನ್ನು ಹೊಸ ಯೋಜನೆಗಳಿಗೆ ಹಂಚಿಕೆ ಮಾಡಲು ರಾಜ್ಯಕ್ಕೆ ಸೀಮಿತ ನಮ್ಯತೆ ಇದೆಯೊಂಬುದನ್ನು ಸೂಚಿಸುತ್ತದೆ. ಇಂತಹ ಬದ್ಧ ವೆಚ್ಚಗಳನ್ನು ನಿಯಂತ್ರಿಸಲು ಮಧ್ಯಂತರ ಕಟ್ಟುಪಾಡಿನ ಅಗತ್ಯವಿದೆ. ಶಿಕ್ಷಣ ಹಕ್ಕು, ಆಹಾರ ಭದ್ರತೆ ಕಾಯಿದೆ ಮತ್ತು ಉದ್ಯೋಗ ಖಾತರಿ ಕ್ರಮಗಳಂತಹ ಶಾಸನ ಬದ್ಧತೆಗಳ ಹಿನ್ನೆಲೆಯಲ್ಲಿ ಸಾರ್ವಜನಿಕ ಸಂಪನ್ಮೂಲಗಳ ಮೇಲೆ ಹೆಚ್ಚುತ್ತಿರುವ ಬೇಡಿಕೆಗಳಿವೆ. ಈ ರೀತಿಯ ಹೊಸ ಆಸ್ತಿಗಳು ಅವುಗಳ ಹಂಚಿಕೆ ಹಾಗೂ ತಾಂತ್ರಿಕ ದಕ್ಷತೆಗಳನ್ನು ನಿರ್ಣಯಿಸಲು ಒಟ್ಟಾರೆ ಸಾರ್ವಜನಿಕ ಸಂಪನ್ಮೂಲಗಳ ಪರಿಶೀಲನೆಯ ಅಗತ್ಯವನ್ನು ಉಂಟುಮಾಡಿದೆ.

**ನಕ್ಷೆ 1.16: 2012–17ರ ಅವಧಿಯಲ್ಲಿ ಬದ್ಧ ವೆಚ್ಚಗಳು**



### ಸಂಬಳದ ಮೇಲಿನ ವೆಚ್ಚ

ಸಂಬಳದ ಮೇಲಿನ ವೆಚ್ಚವು 2012–13ರಲ್ಲಿ ₹16,308 ಕೋಟಿಗಳಿದ್ದು, 2016–17ರಲ್ಲಿ ₹21,708 ಕೋಟಿಗಳಿಗೆ ಏರಿತ್ತು. ಅದು ಕಳೆದ ವರ್ಷಕ್ಕಿಂತ ಶೇಕಡ ನಾಲ್ಕರಷ್ಟು ವೃದ್ಧಿಯಾಗಿತ್ತು. ಹಣಕಾಸು ಲೆಕ್ಕಗಳಲ್ಲಿನ ಸಂಬಳ ವೆಚ್ಚದ ಮಾಹಿತಿಯು ರಾಜ್ಯ ವಲಯಕ್ಕೆ ಮಾತ್ರ ಸಂಬಂಧಿಸಿದ್ದು, ಪಂಚಾಯತ್‌ರಾಜ್ ಸಂಸ್ಥೆಗಳ ನೌಕರರಿಗೆ ಸಂಬಂಧಿಸಿದ ಸಂಬಳ ವೆಚ್ಚವನ್ನು (₹11,918 ಕೋಟಿ) ಒಳಗೊಂಡಿಲ್ಲ. ಜಿಲ್ಲಾ ವಲಯಕ್ಕೆ (ಪಂಚಾಯತ್‌ರಾಜ್ ಸಂಸ್ಥೆಗಳ ನೌಕರರು) ಸಂಬಂಧಿಸಿದಂತೆ ಸಂಬಳಗಳನ್ನು ಆಯಾ ಸಂಸ್ಥೆಗಳಿಗೆ ಸಹಾಯಾನುದಾನಗಳಾಗಿ ಬಿಡುಗಡೆ ಮಾಡಲಾಗುವುದು. ಇದರಿಂದಾಗಿ ಲೆಕ್ಕಗಳಲ್ಲಿ ಸಂಬಳಗಳ ಒಟ್ಟು ವೆಚ್ಚವನ್ನು ತೋರಿಸುವುದಿಲ್ಲ. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಸಂಬಳ ಅನುದಾನಗಳನ್ನು ಹೊರತುಪಡಿಸಿದ ಒಟ್ಟು ಸಂಬಳ ವೆಚ್ಚವು, ಬಡ್ಡಿ ಪಾವತಿಗಳು ಮತ್ತು ಪಿಂಚಣಿಗಳನ್ನು ಬಿಟ್ಟು ನಿವ್ವಳ ರಾಜಸ್ವ ವೆಚ್ಚದ ಶೇಕಡ 20ರಷ್ಟಿತ್ತು. ಇದು ಹನ್ನೆರಡನೇ ಹಣಕಾಸು ಆಯೋಗ ನಿಗದಿಪಡಿಸಿದ್ದ ಶೇಕಡ 35ರ ಮಿತಿಯೊಳಗೆ ಇದ್ದಿತು.

ಆರ್ಥಿಕ ಇಲಾಖೆಯು, ಸಂವಿಧಾನದ ಅಗತ್ಯದಂತೆ ಪಂಚಾಯತ್‌ರಾಜ್ ಸಂಸ್ಥೆ/ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನಗಳನ್ನು ಒಟ್ಟು ಮೊತ್ತವಾಗಿ ಬಿಡುಗಡೆ ಮಾಡಲಾಗುತ್ತದೆ, ಅಲ್ಲದೆ ಸಂಬಳ ಮತ್ತು ಸಂಬಳೇತರ ಬಾಬ್ತುಗಳ ಯೋಜನಾವಾರು ವೆಚ್ಚ ವಿವರಗಳು ಸಂಪರ್ಕ ಸಂಪುಟಗಳಲ್ಲಿ ಲಭ್ಯವಿದೆ ಮತ್ತು ಈ ಮಾಹಿತಿಯನ್ನು ಪಂಚಾಯತ್‌ರಾಜ್ ಸಂಸ್ಥೆ/ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಗಳ ಭಾಗವಾಗಿ ತೋರಿಸಲಾಗುತ್ತಿದೆ ಎಂದು ಉತ್ತರಿಸಿದೆ (ನವಂಬರ್ 2014).

ಸಾರ್ವಜನಿಕ ಲೆಕ್ಕ ಸಮಿತಿಯು ತನ್ನ 5ನೇ ವರದಿಯಲ್ಲಿ ಆರ್ಥಿಕ ಇಲಾಖೆಗೆ ಸಂಬಳದ ವಿವರಗಳನ್ನು ಹೊಂದಿದ ಜಿಲ್ಲಾ ವಲಯದ ದತ್ತಾಂಶವನ್ನು ಹಣಕಾಸು ಲೆಕ್ಕಗಳ ಅನುಬಂಧದಲ್ಲಿ ಬಿಂಬಿಸಲು ಕ್ರೋಢೀಕರಿಸಬೇಕೆಂಬ ತನ್ನ ಮೊದಲಿನ ಶಿಫಾರಸ್ಸನ್ನು ಪುನರುಚ್ಚರಿಸಿತು (ಜುಲೈ 2015).

ಅಲ್ಲದೆ ನಗರ ಸ್ಥಳೀಯ ಸಂಸ್ಥೆಗಳ ನೌಕರರ ಸಂಬಳ ವೆಚ್ಚವು ರಾಜ್ಯ ವಿಭಾಗದ (ಸಾಂವಿಧಾನಿಕ ಗಣ್ಯರ) ವೆಚ್ಚದಲ್ಲಿ ಮೇಲು ವ್ಯಾಪಿಸಿದೆ. ಇದನ್ನು ವರದಿಯ **ಕಂಡಿಕೆ 2.4.1.6**ರಲ್ಲಿ ಚರ್ಚಿಸಲಾಗಿದೆ.

2016–17, ಬಂಡವಾಳ ಶೀರ್ಷಿಕೆಯಡಿ ಸಂಬಳಕ್ಕೆ ಸಂಬಂಧಿಸಿದ ವೆಚ್ಚದ ತಪ್ಪು ವರ್ಗೀಕರಣವೂ (₹13.23 ಕೋಟಿ) ಈ ವರ್ಷದಲ್ಲಿ ಕಂಡುಬಂದಿದ್ದು ಇದನ್ನು **ಕಂಡಿಕೆ 2.4.1.1**ರಲ್ಲಿ ಚರ್ಚಿಸಲಾಗಿದೆ.

### ನಿವೃತ್ತಿ ವೇತನ ಪಾವತಿಗಳು

2016–17, ಪ್ರಸಕ್ತ ವರ್ಷದಲ್ಲಿ ನಿವೃತ್ತಿ ವೇತನದ ವೆಚ್ಚವು (₹11,295 ಕೋಟಿ) ಮಧ್ಯಮಾವಧಿ ವಿತ್ತೀಯ ಯೋಜನೆಯ (2013–17) ಪ್ರಕ್ಷೇಪಣೆಗಿಂತ ₹1,494 ಕೋಟಿಯಷ್ಟು ಕಡಿಮೆಯಿದ್ದಿತು. ಹಿಂದಿನ ವರ್ಷಕ್ಕಿಂತ ವೆಚ್ಚದಲ್ಲಿ ಸಾಧಾರಣ ಏರಿಕೆಯಾಗಿತ್ತು (₹44 ಕೋಟಿ).

1 ಏಪ್ರಿಲ್, 2006ರಂದು ಅಥವಾ ನಂತರ ರಾಜ್ಯ ಸರ್ಕಾರದ ಸೇವೆಗೆ ಸೇರಿದ ಎಲ್ಲಾ ಉದ್ಯೋಗಿಗಳಿಗೆ ನೂತನ ಪಿಂಚಣಿ ಯೋಜನೆ ಎಂದು ಕರೆಯಲಾಗುವ ನಿರ್ದಿಷ್ಟ ವಂತಿಗೆ ನಿವೃತ್ತಿ ವೇತನ ಯೋಜನೆಯು 1 ಏಪ್ರಿಲ್ 2010ರಿಂದ ಪೂರ್ಣವಾಗಿ ಜಾರಿಗೊಂಡಿದೆ. ಖಜಾನೆ ನಿರ್ದೇಶನಾಲಯದ ನಿಯಂತ್ರಣದಲ್ಲಿ ಇದಕ್ಕಾಗಿ ಒಂದು ಪ್ರತ್ಯೇಕ ಹೊಸ ನಿವೃತ್ತಿ ವೇತನ ಯೋಜನಾ ಕೋಶವನ್ನು ಸ್ಥಾಪಿಸಲಾಗಿದೆ. ರಾಜ್ಯಸರ್ಕಾರವು ಪಿಂಚಣಿ ನಿಧಿ ನಿಯಂತ್ರಣ ಅಭಿವೃದ್ಧಿ ಪ್ರಾಧಿಕಾರವು ವಿನ್ಯಾಸಗೊಳಿಸಿದ ಹೊಸ ಪಿಂಚಣಿ ಯೋಜನೆಯ ಶೈಲಿಯನ್ನು ಅಂಗೀಕರಿಸಿದ್ದು, ಕೇಂದ್ರ ದಾಖಲೆ ನಿರ್ವಹಣಾ ಏಜೆನ್ಸಿಯಾಗಿ ರಾಷ್ಟ್ರೀಯ ಭದ್ರತೆಗಳ ಭಂಡಾರ ನಿಯಮಿತವನ್ನು ನೇಮಿಸಿದೆ. ಪಿಂಚಣಿ ನಿಧಿಗಳನ್ನು ನಿರ್ವಹಿಸಲು ಬ್ಯಾಂಕ್ ಆಫ್ ಇಂಡಿಯಾವನ್ನು ಟ್ರಸ್ಟಿ ಬ್ಯಾಂಕ್ ಆಗಿ ಆಯ್ಕೆ ಮಾಡಲಾಗಿದೆ. ಪಿಂಚಣಿ ಮೂಲಧನದ ಹೂಡಿಕೆಯ ಭದ್ರತೆಗೂ ಆದ್ಯತೆ ನೀಡಿದ್ದು ಮೂಲಧನದ ಶೇಕಡ 85ರಷ್ಟನ್ನು ಬಾಂಡುಗಳಲ್ಲಿ ಮತ್ತು ನಿಶ್ಚಿತ ಅವಧಿಯ ಹೂಡಿಕೆಗಳಲ್ಲಿ ಹೂಡುವುದನ್ನು ಕಡ್ಡಾಯಗೊಳಿಸಿದೆ ಮತ್ತು ಉಳಿದ ಶೇಕಡ 15 ಈಕ್ವಿಟಿ ಮತ್ತು ಈಕ್ವಿಟಿಗೆ ಸಂಬಂಧಿಸಿದ ಸಾಧನಗಳಲ್ಲಿ ಹೂಡಿಕೆ ಮಾಡಬೇಕಾಗಿದೆ. ನೌಕರರು ತಮ್ಮ ಹಿಂದಿನ ಬಾಕಿಯನ್ನು[5] ಸಂಬಳ ಕಡಿತವಲ್ಲದೆ ಒಟ್ಟಾಗಿ ಅಥವಾ ಸಂಬಳ ಕಡಿತದ ಮೂಲಕ ಕಂತುಗಳಲ್ಲಿ ನೀಡಲು ಆಯ್ಕೆಯ ಅವಕಾಶವನ್ನು ನೀಡಲಾಗಿದೆ.

[5] ಸರ್ಕಾರಿ ನೌಕರನು ಸೇವೆಗೆ ಸೇರಿದ ದಿನಾಂಕದಿಂದ ಯೋಜನೆಯ ಅನುಷ್ಠಾನದವರೆಗಿನ ವಂತಿಗೆಗೆ ಸಂಬಂಧಿಸಿದೆ.

31 ಮಾರ್ಚ್ 2017ರ ಅಂತ್ಯಕ್ಕೆ 1,77,962 ನೌಕರರು ಈ ಯೋಜನೆಯಡಿ ನೋಂದಣಿಯಾಗಿದ್ದು ಅವರಿಗೆ ಖಾಯಂ ನಿವೃತ್ತಿ ಖಾತೆ ಸಂಖ್ಯೆಯನ್ನು (ಪಿಆರ್ಎಎನ್) ನೀಡಲಾಗಿದೆ ಎಂದು ಹೊಸ ಪಿಂಚಣಿ ಅನುಷ್ಠಾನ ಕೋಶ (ಎನ್‌ಪಿಎಸ್) ಹೇಳಿತು (ಜೂನ್ 2017). ರಾಜ್ಯಸರ್ಕಾರವು ರಾಜಸ್ವ ಲೆಕ್ಕದ ಮೂಲಕ ₹460.94 ಕೋಟಿ ಮೊತ್ತವನ್ನು ವಂತಿಗೆಯಾಗಿ ನೀಡಿದೆ. ನೌಕರರ ವಂತಿಗೆಯಾಗಿ ₹565.97 ಕೋಟಿ ಮೊತ್ತವನ್ನು (ಕ್ರಮಬದ್ಧ ಮತ್ತು ಹಳೆಯ ಬಾಕಿ) ಸಹ ಈ ವರ್ಷದಲ್ಲಿ ಯೋಜನೆಗೆ ಲೆಕ್ಕ ಮಾಡಲಾಗಿದೆ. 31.03.2017ರಲ್ಲಿದ್ದಂತೆ, ನೌಕರರ ವಸೂಲಾತಿ ಮತ್ತು ಬಾಕಿ ವಂತಿಗೆಯು ₹2,239.16 ಕೋಟಿಗಳಷ್ಟಿದ್ದು, ಯೋಜನೆಯ ಪ್ರಾರಂಭದಿಂದ ರಾಜ್ಯ ಸರ್ಕಾರದಿಂದ ಮಾಡಿದ ವಂತಿಗೆಯು ₹1,978 ಕೋಟಿಗಳಷ್ಟಿದ್ದವು.

ನಿಧಿಯ ಶಿಲ್ಕಿನಿಂದ ಮುಖ್ಯ ಶೀರ್ಷಿಕೆ 8342 ಮತ್ತು ಒಳ ಶೀರ್ಷಿಕೆ 117–ನಿರ್ದಿಷ್ಟ ವಂತಿಗೆ ನಿವೃತ್ತಿ ವೇತನ ಯೋಜನೆಗಳಡಿ (ನೌಕರರ, ಸರ್ಕಾರದ ವಂತಿಗೆ ಮತ್ತು ಬಾಕಿ/ಬಡ್ಡಿ) ₹900.08 ಕೋಟಿಗಳ ಮೊತ್ತವನ್ನು ರಾಷ್ಟ್ರೀಯ ಭದ್ರತೆಗಳ ಭಂಡಾರ ನಿಯಮಿತ/ಟ್ರಸ್ಟಿ ಬ್ಯಾಂಕಿಗೆ ವರ್ಗಾಯಿಸಲಾಯಿತು. ₹37.64 ಕೋಟಿಗಳ ನಿವ್ವಳ ಬಾಕಿ ಉಳಿದಿದೆ. ಈ ವ್ಯತ್ಯಾಸವು ಖಜಾನೆ ನಿರ್ದೇಶಕರ ತಪ್ಪು ವರ್ಗೀಕರಣದಿಂದ ಉಂಟಾಗಿದ್ದು ಮರುಹೊಂದಾಣಿಕೆಯ ಅಗತ್ಯವಿದೆ. ಶೇಖರವಾದ ಬಡ್ಡಿ ಹಾಗೂ ವರ್ಗಾವಣೆಯಾಗದ ಮೊತ್ತಗಳು ಸರ್ಕಾರದ ಬಾಕಿ ಋಣಗಳನ್ನು ಸೂಚಿಸುತ್ತದೆ. 2016–17ರಲ್ಲಿ ₹4.61 ಕೋಟಿಗಳನ್ನು ಸಂಚಿತನಿಧಿಯಿಂದ 'ಹೊಸ ವಂತಿಗೆ ಪಿಂಚಣಿ ಯೋಜನೆಗಳು–ಯೋಜನೆಯ ಸೌಲಭ್ಯ–ಸೇವೆಯಲ್ಲಿ ನಿವೃತ್ತಿ/ಮರಣ ಹೊಂದಿದ ನೌಕರರು/ ಕುಟುಂಬದವರು' ಹೊಸ ನಿರ್ದಿಷ್ಟ ಪಿಂಚಣಿ ಯೋಜನೆಗೆ ಸೇರಿದವರಿಗೆ ಪಾವತಿಸಲಾಗಿದೆ.

ಪ್ರಧಾನ ಮತ್ತು ಒಳಶೀರ್ಷಿಕೆಗಳ ಪಟ್ಟಿಯನ್ವಯ ನೂತನ ಪಿಂಚಣಿ ಯೋಜನೆಯು ಸರ್ಕಾರದ ಹಳೆ ಬಾಕಿ ವಂತಿಗೆಯ ಮೇಲಿನ ಬಡ್ಡಿಯ ಪಾವತಿಯನ್ನು ಪ್ರತ್ಯೇಕ ಪ್ರಧಾನ ಲೆಕ್ಕಶೀರ್ಷಿಕೆ 2049–ಬಡ್ಡಿ ಪಾವತಿಗಳು–03–117 ನಿರ್ದಿಷ್ಟ ವಂತಿಗೆಯ ಪಿಂಚಣಿ ಯೋಜನೆಯಡಿ ಲೆಕ್ಕ ಮಾಡಬೇಕು. 2016–17ರಲ್ಲಿ ₹6.35 ಕೋಟಿಗಳ ಬಡ್ಡಿಯನ್ನು 2049–117–ನಿರ್ದಿಷ್ಟ ವಂತಿಗೆಯ ಪಿಂಚಣಿ ಯೋಜನೆಯ ಬಡ್ಡಿಯಡಿಯ ಬದಲಾಗಿ 2071–117 ನಿರ್ದಿಷ್ಟ ವಂತಿಗೆಯ ಪಿಂಚಣಿ ಯೋಜನೆಯಡಿಯ ಸರ್ಕಾರಿ ವಂತಿಗೆಯಡಿ ಲೆಕ್ಕ ಹಾಕಲಾಗಿತ್ತು. 31.3.2017ರವರೆಗಿನ ಸರ್ಕಾರದ ವಂತಿಗೆಯ ಬಾಕಿಯ ಮೇಲಿನ ಸಂಚಿತ ಬಡ್ಡಿಯು ₹70.21 ಕೋಟಿಗಳಷ್ಟಿತ್ತು. ಆರ್ಥಿಕ ಇಲಾಖೆಯು ದತ್ತಸಂಚಯದಲ್ಲಿ ಲೆಕ್ಕಶೀರ್ಷಿಕೆ 2049–03–117–0–01ನ್ನು ಇನ್ನೂ ಅಳವಡಿಸಿಕೊಂಡಿರಲಿಲ್ಲವೆಂದು ಉತ್ತರಿಸಿತು (ಸೆಪ್ಟಂಬರ್ 2017). ಆದ್ದರಿಂದ 2017–18ನೇ ಸಾಲಿಗೆ ನೂತನ ಪಿಂಚಣಿ ಯೋಜನೆಯು ಸರ್ಕಾರದ ಹಳೆಯ ಬಾಕಿ ವಂತಿಗೆಯ ಮೇಲಿನ ಬಡ್ಡಿಯೆಡೆಗೆ ಲೆಕ್ಕಶೀರ್ಷಿಕೆ 2071–01–101–3–01 ಮತ್ತು 2071–01–117–0–01ಗಳಡಿ ವೆಚ್ಚವಾದ ಹಣವನ್ನು ಲೆಕ್ಕ ಶೀರ್ಷಿಕೆ 2049–03–117–0–01 2017–18ರ ಪೂರಕ ಅನುದಾನ–2ರಡಿ ಸೂಕ್ತವಾಗಿ ಅನುವು ಮಾಡುವ ಮೂಲಕ ವರ್ಗಾಯಿಸಲಾಗುವುದು. ಅಂತೆಯೇ 2016–17ರಲ್ಲಿ ಸಿಜಿಎರವರಿಂದ ಪ್ರಧಾನ ಮತ್ತು ಒಳಶೀರ್ಷಿಕೆಗಳ ಪಟ್ಟಿಗೆ ಜಾರಿ ಮಾಡಲಾದ ತಿದ್ದುಪಡಿಯನ್ನು ಮಾಡದಿದ್ದುದರಿಂದ 2071ರಡಿಯ ವೆಚ್ಚವನ್ನು ಅಧಿಕವಾಗಿ ಹೇಳಲಾಗಿದ್ದು 2049ರಡಿ ಕಡಿಮೆ ಹೇಳಲಾಯಿತು.

2015–16ಕ್ಕೆ ಅನ್ವಯವಾಗುವಂತೆ ಪ್ರಧಾನ ಮತ್ತು ಒಳಶೀರ್ಷಿಕೆಗಳ ಪಟ್ಟಿಗೆ ಜಾರಿ ಮಾಡಿದ ತಿದ್ದುಪಡಿ ಚೀಟಿ ಸಂಖ್ಯೆ 793ರನ್ವಯ, ಎನ್ಎಸ್‌ಡಿಎಲ್‌ಗೆ ಪಾವತಿಸುವ ಸೇವಾ ಶುಲ್ಕದೆಡೆಗಿನ ವೆಚ್ಚವನ್ನು ಲೆಕ್ಕ ಹಾಕಲು ಪ್ರಧಾನ ಲೆಕ್ಕ ಶೀರ್ಷಿಕೆ '2071–ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯ'ಗಳಡಿ ಹೊಸ ಒಳಶೀರ್ಷಿಕೆ '119'ನ್ನು ತೆರೆಯಲಾಗಿದೆ. ಅದರಂತೆ, 2016–17ರಲ್ಲಿ ₹4.50 ಕೋಟಿಗಳನ್ನು ಎನ್ಎಸ್‌ಡಿಎಲ್‌ಗೆ ಸೇವಾ ಶುಲ್ಕವಾಗಿ ಪಾವತಿಸಿ ಲೆಕ್ಕ ಶೀರ್ಷಿಕೆ '2071–01–119–0–01 ಯೋಜನೇತರ' ಅದರಡಿ ಲೆಕ್ಕ ಹಾಕಲಾಗಿದೆ.

ಸರ್ಕಾರವು ತನ್ನ ಆದೇಶ ದಿನಾಂಕ 30 ಜನವರಿ 2014ರಲ್ಲಿ ರಾಜ್ಯಸರ್ಕಾರದ ಎಲ್ಲಾ ಮಂಡಳಿಗಳು/ನಿಗಮಗಳು/ಸೊಸೈಟಿಗಳು/ವಿಶ್ವವಿದ್ಯಾಲಯಗಳು/ರಾಜ್ಯ ಅನುದಾನಿತ ಸಂಸ್ಥೆಗಳು/ರಾಜ್ಯ ಸ್ವಾಯತ್ತ ಸಂಸ್ಥೆಗಳಲ್ಲಿ ನಿಯೋಜಿತ/ಎರವಲು ಸೇವೆಯಲ್ಲಿರುವ ನೌಕರರಿಗೆ ಎನ್‌ಪಿಎಸ್ ಕಡಿತವನ್ನು ಮಾಡುವ ಬಗ್ಗೆ ವಿವರವಾದ ಕಾರ್ಯವಿಧಾನವನ್ನು ಜಾರಿ ಮಾಡಿದೆ. ಎನ್‌ಪಿಎಸ್ ಕಡಿತವನ್ನು ಮಾಡಲು (ಜುಲೈ 2017), ಎನ್‌ಪಿಎಸ್ ಕೋಶವು 40 ಸಂಸ್ಥೆಗಳಿಗೆ ವಿಶಿಷ್ಟವಾದ ಖಜಾನೆಯದಲ್ಲದ

ಪಿಎಓ/ಡಿಡಿಓ ಕೋಡ್‌ಗಳನ್ನು ನೀಡಿದೆ. ಇವುಗಳಲ್ಲಿ 20 ಸಂಸ್ಥೆಗಳು ಸಿಆರ್‌ಎಯಿಂದ ನೋಂದಣಿಯಾಗಿದ್ದು (31.03.2017) ಪಿಎಓ ಹಾಗೂ ಡಿಡಿಓ ಸಂಖ್ಯೆಗಳನ್ನು ಹಂಚಿಕೆ ಮಾಡಿದ್ದವು.

1 ಏಪ್ರಿಲ್ 2008ಕ್ಕೆ ಹಿಂದಿನ, ಅಖಿಲ ಭಾರತ ಸೇವಾ ಅಧಿಕಾರಿಗಳಿಗೆ ನಿವೃತ್ತಿ ವೇತನ ಮತ್ತು ಇತರ ಸೌಲಭ್ಯಗಳ ಪಾವತಿಯು ರಾಜ್ಯ ಸರ್ಕಾರದ ಬಾಧ್ಯತೆಯಾಗಿದ್ದಿತು. ಏಪ್ರಿಲ್ 2008ರಿಂದ ಈ ಅಧಿಕಾರಿಗಳ ಪಿಂಚಣಿ ಪಾವತಿಯನ್ನು ಕೇಂದ್ರ ಸರ್ಕಾರ ಭರಿಸಬೇಕಾಗಿದ್ದು, ಈ ಪಾವತಿಗಳನ್ನು 8658– ಅಮಾನತ್ತು ಶೀರ್ಷಿಕೆಗೆ ಹಾಕಿ ನಂತರ ಕೇಂದ್ರ ಸರ್ಕಾರದಿಂದ ಆ ಮೊತ್ತದ ಮರುಪಾವತಿಗೆ ಬೇಡಿಕೆಯನ್ನು ಸಲ್ಲಿಸಬೇಕಾಗಿದೆ. ಮಾರ್ಚ್ 2016ರಲ್ಲಿದ್ದ ₹9.12 ಕೋಟಿಗಳಿಗೆ ಪ್ರತಿಯಾಗಿ, ಮಾರ್ಚ್ 2017ರ ಅಂತ್ಯಕ್ಕೆ ₹50.65 ಕೋಟಿಗಳ ಮೊತ್ತವು ಇತ್ಯರ್ಥವಾಗದೆ ಬಾಕಿ ಉಳಿದಿದ್ದು ರಾಜ್ಯ ಸರ್ಕಾರವು ತನಗೆ ಬರಬೇಕಾದ ಮೊತ್ತವನ್ನು ಇನ್ನೂ ಪಡೆಯಬೇಕಾಗಿದೆ.

2016–17ಕ್ಕೆ ಬಾಕಿ ಇರುವ ₹50.65 ಕೋಟಿಗಳಲ್ಲಿ ₹3.63 ಕೋಟಿಗಳನ್ನು ಆಗಸ್ಟ್ 2017ರ ಲೆಕ್ಕದಲ್ಲಿ ತೀರುವಳಿ ಮಾಡಲಾಗಿದ್ದು ಕೇಂದ್ರ ಪಿಂಚಣಿ ಲೆಕ್ಕ ಕಛೇರಿ (ಸಿಪಿಎಒ)ಯಿಂದ ಸ್ವೀಕರಿಸಿದ ₹4.36 ಕೋಟಿಗಳ ಬೇಡಿಕೆ ಹುಂಡಿಯನ್ನು ಭಾರತೀಯ ಸ್ಟೇಟ್ ಬ್ಯಾಂಕ್, ಖಜಾನೆ ಶಾಖೆ, ಬೆಂಗಳೂರಿಗೆ 31 ಅಕ್ಟೋಬರ್ 2017ರಂದು ಜಮೆ ಮಾಡಲಾಗಿದೆ.

### ಬಡ್ಡಿ ಪಾವತಿಗಳು

ಬಡ್ಡಿ ಪಾವತಿಗಳು 2012–13ರಲ್ಲಿದ್ದ ₹7,454 ಕೋಟಿಯಿಂದ 2016–17ರಲ್ಲಿ ₹12,850 ಕೋಟಿಗೆ ಏರಿದ್ದು, ₹5,396 ಕೋಟಿಯಷ್ಟು ಹೆಚ್ಚಾಗಿದೆ. 2016–17ರಲ್ಲಿನ ಬಡ್ಡಿ ಪಾವತಿಗಳು, ಆಂತರಿಕ ಸಾಲಗಳ ಮೇಲಿನ ಬಡ್ಡಿ (₹9,578 ಕೋಟಿ), ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ ಇತ್ಯಾದಿಗಳ ಮೇಲಿನ ಬಡ್ಡಿ (₹1,904 ಕೋಟಿ), ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳ ಮೇಲಿನ ಬಡ್ಡಿ (₹659 ಕೋಟಿ) ಹಾಗೂ ಆಯವ್ಯಯದ ಹೊರಗೆ ಮಾಡಲಾದ ಸಾಲಗಳ ಮೇಲಿನ ಬಡ್ಡಿ (₹817 ಕೋಟಿ) ಇವುಗಳನ್ನು ಒಳಗೊಂಡಿವೆ.

ಆಂತರಿಕ ಸಾಲಗಳ ಮೇಲಿನ ಬಡ್ಡಿಯು 2015–16ರಲ್ಲಿದ್ದ, ₹8,221 ಕೋಟಿಯಿಂದ 2016–17ರಲ್ಲಿ ₹9,578 ಕೋಟಿಗೆ ಏರಿ ಶೇಕಡ 17ರಷ್ಟು ಹೆಚ್ಚಾಗಿದೆ. ಇದು ಮಾರುಕಟ್ಟೆ ಸಾಲಗಳ ಮೇಲಿನ ಬಡ್ಡಿಪಾವತಿ ₹1,198 ಕೋಟಿ (ಶೇಕಡ 20) ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ನೀಡಿದ ಎನ್‌ಎಸ್‌ಎಸ್‌ಎಫ್ ವಿಶೇಷ ಭದ್ರತೆಗಳ ಮೇಲಿನ ಬಡ್ಡಿಪಾವತಿ ₹144 ಕೋಟಿ (ಶೇಕಡ 7) ಮತ್ತು ಋಣ ನಿರ್ವಹಣೆ ₹15 ಕೋಟಿ (ಶೇಕಡ 94)ಗಳ ಹೆಚ್ಚಳದಿಂದ ಉಂಟಾಗಿದೆ.

ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು, ಇತ್ಯಾದಿಗಳ ಮೇಲಿನ ಬಡ್ಡಿಯು 2015–16ರಲ್ಲಿನ ₹1,884 ಕೋಟಿಯಿಂದ 2016–17ರಲ್ಲಿ ₹1,904 ಕೋಟಿಗೆ ಏರಿದ್ದು, ₹60 ಕೋಟಿಗಳಷ್ಟು (ಶೇಕಡ 3) ಹೆಚ್ಚಾಗಿದೆ. ಇದು ರಾಜ್ಯ ಭವಿಷ್ಯ ನಿಧಿ ಮತ್ತು ವಿಮಾ ಮತ್ತು ನಿವೃತ್ತಿ ವೇತನ ನಿಧಿಗಳ ಮೇಲಿನ ಬಡ್ಡಿಯ ದರವು ಶೇಕಡ 3ರಷ್ಟು ಹೆಚ್ಚಳಗೊಂಡಿದ್ದುದರಿಂದ ಉಂಟಾಗಿದೆ.

ಸಿಜಿಎಯಿಂದ ಜಾರಿ ಮಾಡಿದ ತಿದ್ದುಪಡಿಯನ್ನು ಪಾಲಿಸದೇ ನಿರ್ದಿಷ್ಟ ವಂತಿಗೆ ಪಿಂಚಣಿ ಯೋಜನೆಯ ಬಡ್ಡಿಯನ್ನು 2049ರ ಬದಲಾಗಿ 2071ರಡಿ ಲೆಕ್ಕ ಹಾಕಿದ್ದರಿಂದ ಅದು ಕಡಿಮೆ ಹೇಳಲ್ಪಟ್ಟಿದ್ದು ರಾಜಸ್ವ ಸ್ವೀಕೃತಿಗಳಿಗೆ ಬಡ್ಡಿ ಪಾವತಿಯ ಅನುಪಾತವು ಹದಿನಾಲ್ಕನೇ ಹಣಕಾಸು ಆಯೋಗವು ವಿಧಿಸಿರುವಂತೆ ಶೇಕಡ 10ರ ಬಹಳ ಸಮೀಪವಿದ್ದಿತು.

### ಸಹಾಯಧನಗಳು

2012–13ರಲ್ಲಿ ₹10,709 ಕೋಟಿಯಿದ್ದ ಸಹಾಯಧನದ ವೆಚ್ಚವು 2016–17ನೇ ವರ್ಷದಲ್ಲಿ ₹14,387 ಕೋಟಿಗಳಿಗೆ ಏರಿದ್ದು ರಾಜಸ್ವ ಸ್ವೀಕೃತಿಗಳ ಶೇಕಡ 11ರಷ್ಟಿದೆ.

### ನೇರ ಸಹಾಯಧನಗಳು

ಮಧ್ಯಮಾವಧಿ ವಿತ್ತೀಯ ಯೋಜನೆ (2013–17)ಯಲ್ಲಿ ರಾಜ್ಯವು ಎರಡು ಬಗೆಯ ಸಹಾಯಧನಗಳನ್ನು–ನೇರ ಸಹಾಯಧನ ಮತ್ತು ಪರೋಕ್ಷ ಸಹಾಯಧನಗಳಾಗಿ ನೀಡುತ್ತಿದೆಯೆಂದು ಸರ್ಕಾರವು ಹೇಳಿದೆ. ನೇರ ಸಹಾಯಧನವು ಸಹಾಯಧನದ ರೂಪದ ವೆಚ್ಚವನ್ನು ಅಥವಾ ಸರ್ಕಾರದ ಕೆಲವು ಯೋಜನೆಗಳಿಗೆ ನೀಡುವ ಆರ್ಥಿಕ ಬೆಂಬಲವಾಗಿದೆ. ಈ ಸಹಾಯಧನಗಳು ಒಂದು ಖಾಯಂ ಹೆಚ್ಚುವರಿ ಬೆಂಬಲವಾಗಿ ಈ ವಿಭಾಗಗಳು ಸುಧಾರಣಾಕ್ರಮಗಳನ್ನು ತೆಗೆದುಕೊಳ್ಳುವ ದಿಸೆಯಲ್ಲಿ ಅಡ್ಡಿಯಾಗಬಾರದೆಂಬ ಅಂಶವನ್ನು ಖಚಿತಪಡಿಸಿಕೊಳ್ಳುವುದಕ್ಕೆ ಒತ್ತು ನೀಡಲಾಗಿದೆ. ಮೂರು ಪ್ರಧಾನವಾದ ನೇರ ಸಹಾಯಧನ ವೆಚ್ಚವು ಕೃಷಿ ಪಂಪ್‌ಸೆಟ್‌ಗಳ ಬಳಕೆಗೆ ರೈತರಿಗೆ ಉಚಿತ ವಿದ್ಯುತ್ ಸರಬರಾಜು ಮಾಡಲು ನೀಡುವ ಸಹಾಯಧನ, ಆಹಾರ ಸಹಾಯಧನ ಮತ್ತು ಕೃಷಿ ಸಾಲಗಳಿಗೆ ಬಡ್ಡಿ ಸಹಾಯಧನ ಆಗಿವೆ. 2016–17ನೇ ವರ್ಷದ ರಾಜ್ಯ ಹಣಕಾಸು ಲೆಕ್ಕಗಳು (ಅನುಬಂಧ–II) ₹14,387 ಕೋಟಿಗಳ ನೇರ ಸಹಾಯಧನ ನೀಡಿಕೆಯನ್ನು ತೋರಿಸಿದ್ದು, ಇದು ಹಿಂದಿನ ವರ್ಷಕ್ಕಿಂತ ₹1,238 ಕೋಟಿಯಷ್ಟು ಹೆಚ್ಚಾಗಿತ್ತು. ಈ ಹೆಚ್ಚಳವು ಹಿಂದಿನ ವರ್ಷಕ್ಕಿಂತ ಶೇಕಡ 9ರಷ್ಟಿತ್ತು. ವಿವರಗಳನ್ನು ಕೆಳಗೆ ನೀಡಲಾಗಿದೆ.

### ವಿದ್ಯುಚ್ಛಕ್ತಿ

2016–17ನೇ ಸಾಲಿನಲ್ಲಿ ವಿದ್ಯುಚ್ಛಕ್ತಿ ವಲಯಕ್ಕೆ ನೀಡಲಾದ ಸಹಾಯಧನವು (₹8,647 ಕೋಟಿ) ಒಟ್ಟಾರೆ ಸಹಾಯಧನದ (₹14,387 ಕೋಟಿ) ಶೇಕಡ 60ರಷ್ಟು ಆಗಿದ್ದಿತು. ಅದು, ಗ್ರಾಮೀಣ ವಿದ್ಯುದೀಕರಣದ (ನೀರಾವರಿ ಪಂಪ್‌ಸೆಟ್, ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ಬಳಕೆದಾರರು) ಕಾರಣ ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳು ಅನುಭವಿಸಿದ ನಷ್ಟವನ್ನು ತುಂಬಿಸಲು ನೀಡಲಾದ ಮೊತ್ತ (₹8,647 ಕೋಟಿ) ಒಳಗೊಂಡಿದೆ. ವಿದ್ಯುಚ್ಛಕ್ತಿ ಸಹಾಯಧನವು ₹1,268.26 ಕೋಟಿಗಳ ಪುಸ್ತಕ ಹೊಂದಾಣಿಕೆಯನ್ನು ಒಳಗೊಂಡಿದ್ದು ಇದರಲ್ಲಿ ₹1,218.83 ಕೋಟಿಗಳು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಗಳ ಸಹಾಯಧನಕ್ಕೆ ಪ್ರತಿಯಾಗಿ ಉಳಿಸಿಕೊಂಡಿದ್ದ ತೆರಿಗೆ ಬಾಕಿಗೆ ಸಂಬಂಧಿಸಿದೆ.

ಆರ್ಥಿಕ ಇಲಾಖೆಯು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವನ್ನು ಆಯವ್ಯಯ ದಾಖಲೆಗಳಲ್ಲಿ ಆಯವ್ಯಯದ ಹೊರಗಿನ ಘಟಕವೆಂದು ತೋರಿಸುವುದಾಗಿ ಹೇಳಿದ್ದರೂ (ನವೆಂಬರ್ 2007) ಹಾಗೆ ಮಾಡಲಿಲ್ಲ ಮತ್ತು ಕೆ.ಪಿ.ಟಿ.ಸಿ.ಎಲ್‌ಗೆ ₹8.95 ಕೋಟಿಗಳ ಮೊತ್ತವನ್ನು ವಿದ್ಯುತ್ ಹಣಕಾಸು ನಿಗಮ ಮತ್ತು ಗ್ರಾಮೀಣ ವಿದ್ಯುದೀಕರಣ ನಿಗಮಗಳಿಗೆ ನೀಡಬೇಕಿದ್ದ ಋಣ ಸೇವೆ ಜವಾಬ್ದಾರಿಯನ್ನು ತೀರಿಸಲು ನೀಡಿದ್ದನ್ನು ರಾಜಸ್ವ ಲೆಕ್ಕಗಳಡಿ ತೋರಿಸಿರಲಿಲ್ಲ.

### ಆಹಾರ

2016–17ರಲ್ಲಿ ಆಹಾರ ಧಾನ್ಯಗಳ ವ್ಯತ್ಯಾಸದ ದರಗಳನ್ನು ಭರಿಸುವುದಕ್ಕಾಗಿ ನೀಡಲಾಗುವ ಆಹಾರ ಸಹಾಯಧನವು ₹1,854 ಕೋಟಿಗಳಷ್ಟಿತ್ತು. ಇದು ಬಡತನ ರೇಖೆಯ ಕೆಳಗಿರುವ ಫಲಾನುಭವಿಗಳಿಗೆ ಅನ್ನಭಾಗ್ಯ ಯೋಜನೆಯಡಿ ಆಹಾರಧಾನ್ಯಗಳ ಮೇಲೆ ನೀಡಿದ ಸಹಾಯಧನ (₹1,171 ಕೋಟಿ), ಬಡತನ ರೇಖೆಯ ಕೆಳಗಿರುವ ಫಲಾನುಭವಿಗಳಿಗೆ ಇತರೆ ಬಾಬ್ತುಗಳ ಮೇಲಿನ ಸಹಾಯಧನ (₹620 ಕೋಟಿ) ಮತ್ತು ಬಡತನ ರೇಖೆಯ ಮೇಲಿರುವ ಫಲಾನುಭವಿಗಳಿಗೆ ಆಹಾರಧಾನ್ಯಗಳ (₹9 ಕೋಟಿ) ಮತ್ತು ಸಕ್ಕರೆ (₹54 ಕೋಟಿ)ಗಳ ಮೇಲಿನ ಸಹಾಯಧನಗಳನ್ನು ಒಳಗೊಂಡಿದೆ.

### ಸಹಕಾರ

ಸಹಕಾರ ವಲಯದಲ್ಲಿನ ಸಹಾಯಧನವು ಪ್ರಧಾನವಾಗಿ ರೈತರಿಗೆ ನೀಡಲಾಗಿದ್ದ ಕಾಲಮೀರಿದ ಸಾಲಗಳನ್ನು (ಅಸಲು ಹಾಗೂ ಬಡ್ಡಿ) ಮನ್ನಾ ಮಾಡಿದ್ದನ್ನು ಪ್ರತಿನಿಧಿಸುತ್ತದೆ. ಆ ರೀತಿ ಮನ್ನಾಮಾಡಲಾದ ಸಾಲಗಳು ಮತ್ತು ಬಡ್ಡಿಯ ಮೊತ್ತವು ಒಟ್ಟು ₹6,234 ಕೋಟಿಗಳಾಗಿದೆ. (₹1,323 ಕೋಟಿ 2012–13ರಲ್ಲಿ, ₹2,704 ಕೋಟಿ 2013–14ರಲ್ಲಿ, ₹624 ಕೋಟಿ 2014–15ರಲ್ಲಿ ₹765 ಕೋಟಿ 2015–16ರಲ್ಲಿ ಮತ್ತು ₹818 ಕೋಟಿ 2016–17ರಲ್ಲಿ).

ವೈದ್ಯನಾಥನ್ ಸಮಿತಿ ವರದಿಯಂತೆ (ಮಾರ್ಚ್ 2008) ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಪುನರುಚ್ಚರಿಸಿರುವಂತೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಹಕಾರಿ ಸಾಲ ವ್ಯವಸ್ಥೆಯು ಕ್ಷೀಣಿಸುವುದನ್ನು ತಡೆಗಟ್ಟಲು, ಸಾಲ ವಸೂಲಾತಿಯನ್ನು ಮತ್ತು ಬಡ್ಡಿಪಾವತಿಯನ್ನು ಮನ್ನಾ ಮಾಡುವ ಪದ್ದತಿಯನ್ನು ನಿಲ್ಲಿಸಬೇಕಾಗಿದೆ.

### ಸಾರಿಗೆ

2015–16ರಲ್ಲಿ ₹748 ಕೋಟಿಗಳಿದ್ದ ಸಾರಿಗೆ ಸಹಾಯಧನವು 2016–17ರಲ್ಲಿ ₹799 ಕೋಟಿಗೆ ಏರಿದೆ. ಈ ಸಹಾಯಧನವು ವಿದ್ಯಾರ್ಥಿಗಳಿಗೆ, ಸ್ವಾತಂತ್ರ್ಯ ಹೋರಾಟಗಾರರಿಗೆ, ವಿಕಲಚೇತನರಿಗೆ ಮುಂತಾದವರಿಗೆ ನೀಡಿದ ಪ್ರಯಾಣದರ ರಿಯಾಯಿತಿಗೆ ಸಂಬಂಧಿಸಿದೆ. ಇದು ಸಾರಿಗೆ ನಿಗಮಗಳ ಮೋಟಾರು ವಾಹನ ತೆರಿಗೆ ಬಾಕಿ, ವಿದ್ಯಾರ್ಥಿಗಳಿಗೆ, ಹಿರಿಯ ನಾಗರೀಕ ಅಂಧರು, ವಿಶೇಷ ಚೇತನದವರಿಗೆ ನೀಡಿದ ರಿಯಾಯತಿ ದರದ ಪಾಸುಗಳು ಮತ್ತು ಮಾಜಿ ಶಾಸಕರಿಗೆ ವಿತರಿಸಿದ ಉಚಿತ ಬಸ್‌ಪಾಸುಗಳನ್ನು ಸಹಾಯಧನವನ್ನಾಗಿ ತೋರಿಸಿದ ₹291.39 ಕೋಟಿಗಳ ಪುಸ್ತಕ ಹೊಂದಾಣಿಕೆಯನ್ನು ಒಳಗೊಂಡಿದೆ.

### ಪರೋಕ್ಷ ಸಹಾಯಧನಗಳು

ಪರೋಕ್ಷ ಸಹಾಯಧನಗಳು, ಇನ್ನಿತರವುಗಳ ಜೊತೆಗೆ ಸರ್ಕಾರವು ಸಾಮಾಜಿಕ ಹಾಗೂ ಆರ್ಥಿಕ ಸರಕುಗಳ/ಸೇವೆಗಳ, ಅನುವುಗಳಲ್ಲಿ ಅದು ಭರಿಸುವ ವೆಚ್ಚಗಳನ್ನು ವಾಪಸ್ಸು ಪಡೆಯಲು ಸಾಧ್ಯವಾಗದಿದ್ದಲ್ಲಿ ಉದ್ಭವಿಸುತ್ತವೆ, ಇವು ಪ್ರಮುಖವಾಗಿ ಖಾಸಗಿ ಸರಕುಗಳ/ಸೇವೆಗಳ ಸ್ವಭಾವದ್ದಾಗಿದ್ದು, ಕೆಲವೊಮ್ಮೆ ವಿಸ್ತರಿಸಿದ ಸೌಲಭ್ಯಗಳಾಗಬಹುದು. ಇದು ಪರೋಕ್ಷವಾಗಿರಬಹುದು, ವಸ್ತು ರೂಪದಲ್ಲಿರಬಹುದು ಅಥವಾ ತೆರಿಗೆ ರಿಯಾಯಿತಿಯ ರೂಪದಲ್ಲಿರಬಹುದು. 2016–17ರಲ್ಲಿ ನೀಡಲಾದ ಕೆಲವು ಪರೋಕ್ಷ ಸಹಾಯಧನಗಳ ವಿವರಗಳನ್ನು **ಅನುಬಂಧ 1.5**ರಲ್ಲಿ ವಿವರಿಸಲಾಗಿದೆ.

2012–13ರಲ್ಲಿ ₹1,849 ಕೋಟಿಗಳಷ್ಟಿದ್ದ ಪರೋಕ್ಷ ಸಹಾಯಧನವು 2016–17ರಲ್ಲಿ ₹3,714 ಕೋಟಿಗಳಿಗೆ ಏರಿತ್ತು. ಇದು ಪ್ರಮುಖವಾಗಿ ಬೀಜ ಸರಬರಾಜಿಗೆ ನೀಡಿದ ಆರ್ಥಿಕ ಸಹಾಯ, ನೇಕಾರರ ಪ್ಯಾಕೇಜ್, ಆಶ್ರಯ ಯೋಜನೆ, ಕಿರು/ಹನಿ ನೀರಾವರಿ, ಕನಿಷ್ಠದರ ಯೋಜನೆ, ದುರ್ಬಲ ವರ್ಗದವರಿಗೆ ವಸತಿ, ಭೂಹೀನರಿಗೆ ಮನೆ ನಿವೇಶನಗಳು ಮುಂತಾದವುಗಳಿಗೆ ನೀಡಿದ ಆರ್ಥಿಕ ಸಹಾಯವನ್ನು ಒಳಗೊಂಡಿದೆ.

2016–17ರಲ್ಲಿ ಇಂದಿರಾ ಆವಾಸ್ ಯೋಜನೆಯಡಿಯ ಸಹಾಯಧನವು (₹962.99 ಕೋಟಿ) ಲೆಕ್ಕಶೀರ್ಷಿಕೆ 2216–80–103–0–21 (ಇಂದಿರಾ ಆವಾಸ್ ಯೋಜನೆ) ಮತ್ತು 2216–80–800–0–04ರ (ಇಂದಿರಾ ಆವಾಸ್ ಯೋಜನೆ – ರಾಜ್ಯಪಾಲು) ಬದಲಾಗಿ ಲೆಕ್ಕಶೀರ್ಷಿಕೆ 2216–80–198–6–02–300 (ಯೋಜನೆ)ಯಡಿ ಹಣಕಾಸಿನ ನೆರವು/ಜಿಲ್ಲಾ ಪಂಚಾಯತ್‌ಗಳಿಗೆ ಬ್ಲಾಕ್ ಅನುದಾನವೆಂದು ಲೆಕ್ಕ ಮಾಡಲಾಗಿದೆ.

### 1.6.4 ಸ್ಥಳೀಯ ಸಂಸ್ಥೆಗಳಿಗೆ ಮತ್ತು ಇತರ ಸಂಸ್ಥೆಗಳಿಗೆ ಹಣಕಾಸು ಸಹಾಯ

2016–17ರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಹಾಗೂ ಇನ್ನಿತರ ಸಂಸ್ಥೆಗಳಿಗೆ ಅನುದಾನಗಳ ರೂಪದಲ್ಲಿ ಒದಗಿಸಲಾದ ಸಹಾಯದ ಪರಿಮಾಣವನ್ನು, ಹಿಂದಿನ ವರ್ಷಗಳಿಗೆ ಹೋಲಿಸಿದಂತೆ **ಕೋಷ್ಟಕ 1.24**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.24: ಸ್ಥಳೀಯ ಸಂಸ್ಥೆಗಳಿಗೆ ಹಾಗೂ ಇನ್ನಿತರ ಸಂಸ್ಥೆಗಳಿಗೆ ಹಣಕಾಸಿನ ಸಹಾಯ**

(ಕೋಟಿ ರೂಪಾಯಿಗಳಲ್ಲಿ)

| | 2012-13 | 2013-14 | 2014-15 | 2015-16 | 2016-17 |
|---|---|---|---|---|---|
| ಪಂಚಾಯತ್ ರಾಜ್ ಸಂಸ್ಥೆಗಳು | 18,532.58 | 20,512.71 | 24,991.27 | 26,694.94 | 29,697.94 |
| ನಗರ ಸ್ಥಳೀಯ ಸಂಸ್ಥೆಗಳು* | 4,018.42 | 5,020.43 | 6,011.45 | 6,076.05 | 5,685.58 |
| ಶೈಕ್ಷಣಿಕ ಸಂಸ್ಥೆಗಳು (ವಿಶ್ವವಿದ್ಯಾನಿಲಯಗಳೂ ಸೇರಿದಂತೆ) | 738.69 | 961.62 | 1,145.04 | 1,406.50 | 1,449.75 |
| ಸಹಕಾರಿ ಸಂಘಗಳು ಹಾಗೂ ಸಹಕಾರಿ ಸಂಸ್ಥೆಗಳು | 47.04 | 849.85 | 818.09 | 1,023.13 | 1,009.47 |
| ಇತರ ಸಂಸ್ಥೆಗಳು ಹಾಗೂ ಮಂಡಳಿಗಳು (ಶಾಸನಬದ್ಧ ಮಂಡಳಿಗಳೂ ಸೇರಿ) | 3,850.11 | 5,267.90 | 5,782.63 | 4,820.87 | 6,656.29 |
| ರಾಜಸ್ವ ವೆಚ್ಚಕ್ಕೆ ಹೋಲಿಸಿದಲ್ಲಿ ಶೇಕಡಾವಾರು ಸಹಾಯ | 36 | 37 | 37 | 34 | 34 |
| **ಒಟ್ಟು** | **27,186.84** | **32,612.51** | **38,748.48** | **40,021.49** | **44,499.03** |

*ಆಕರ: ಹಣಕಾಸು ಲೆಕ್ಕಗಳು.*

** ನಗರ ಸ್ಥಳೀಯ ಸಂಸ್ಥೆಗಳಡಿ ತೋರಿಸಿರುವ ಅಂಕಿಗಳು ಹಿಂದಿನ ವರದಿಗಳಲ್ಲಿ ತೋರಿಸಿರುವ ಅಂಕಿಗಳಿಗಿಂತ ಒಳಶೀರ್ಷಿಕೆ '200-ಇತರೆ ಪರಿಹಾರಗಳು ಮತ್ತು ಹಂಚಿಕೆಗಳು' ಇದರಡಿ ವರ್ಗಾವಣೆಗಳನ್ನು ಸೇರಿಸಿದ್ದರಿಂದ ಭಿನ್ನವಾಗಿದೆ.*

ಹನ್ನೊಂದನೆಯ ಹಣಕಾಸು ಆಯೋಗದ ಶಿಫಾರಸ್ಸಿನ ಮುಂದಿನ ಹಂತವಾಗಿ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಅನುದಾನವನ್ನು 196, 197 ಮತ್ತು 198 ಎಂಬ ಮೂರು ವಿಶಿಷ್ಟ ಒಳಶೀರ್ಷಿಕೆಗಳಡಿ ಬಿಡುಗಡೆ ಮಾಡಲಾಗುತ್ತದೆ. ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಮಾಡಲಾದ ಸಹಾಯವು 2012-13ರಲ್ಲಿದ್ದ ₹18,533 ಕೋಟಿಯಿಂದ 2016-17ರಲ್ಲಿ ₹29,698 ಕೋಟಿಗೆ ಏರಿಕೆಯಾಗಿದ್ದು, ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಲಾದ ಸಹಾಯವು 2012-13ರಲ್ಲಿನ ₹4,018 ಕೋಟಿಯಿಂದ 2016-17ರಲ್ಲಿ ₹5,686 ಕೋಟಿಗೆ ಏರಿಕೆಯಾಗಿದೆ.

2016-17ರಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮಾಡಲಾದ ಒಟ್ಟು ಹಂಚಿಕೆಯ ಮೊತ್ತ ₹29,698 ಕೋಟಿಯ ಪೈಕಿ, ₹11,918 ಕೋಟಿ (ಶೇಕಡ 40) ಮೊತ್ತವು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಲಾದ ರಾಜ್ಯಸರ್ಕಾರದ ಕಾರ್ಯ ಚಟುವಟಿಕೆಗಳಾದ ಶಿಕ್ಷಣ, ನೀರು ಸರಬರಾಜು ಮತ್ತು ನೈರ್ಮಲ್ಯ, ವಸತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇತ್ಯಾದಿ ಇಲಾಖೆಗಳ ಸಂಬಳಕ್ಕೆ ಸಂಬಂಧಿಸಿದೆ. ಇದು ಹದಿನಾಲ್ಕನೇ ಹಣಕಾಸು ಆಯೋಗವು ರಾಜ್ಯಸರ್ಕಾರಕ್ಕೆ ಬಿಡಗಡೆ ಮಾಡಿದ (₹1,547.66 ಕೋಟಿ) ಅನುದಾನವನ್ನು ಒಳಗೊಂಡಿದೆ.

ಹಿಂದಿನ ವರ್ಷಕ್ಕೆ ಹೋಲಿಸಿದರೆ, ನಗರ ಸ್ಥಳೀಯ ಸಂಸ್ಥೆಗಳಿಗೆ ಮತ್ತು ಸಹಕಾರಿ ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನಗಳು ಕ್ರಮವಾಗಿ ₹390 ಕೋಟಿಗಳಷ್ಟು ಮತ್ತು ₹14 ಕೋಟಿಗಳಷ್ಟು ಇಳಿದಿದೆ. ಶಿಕ್ಷಣ ಸಂಸ್ಥೆಗಳಿಗೆ ನೀಡಿದ ಅನುದಾನವು 2016-17ರಲ್ಲಿ, ₹43 ಕೋಟಿಯಷ್ಟು ಮತ್ತು ಇತರ ಸಂಸ್ಥೆಗಳಿಗೆ ₹1,835 ಕೋಟಿಯಷ್ಟು ಏರಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿದ ಸಹಾಯವು ಬಂಡವಾಳ ಆಸ್ತಿಗಳನ್ನು ಸೃಷ್ಟಿಸುವುದಕ್ಕಾದ ₹2,190 ಕೋಟಿ ಮೊತ್ತವನ್ನು ಒಳಗೊಂಡಿದೆ. ಇದರಲ್ಲಿ ಹದಿನಾಲ್ಕನೇ ಹಣಕಾಸು ಆಯೋಗವು ರಾಜ್ಯಕ್ಕೆ ಬಿಡುಗಡೆ ಮಾಡಿದ (₹1,007.99 ಕೋಟಿ) ಮೊತ್ತವು ಸೇರಿದೆ.

ಇತರ ಸಂಸ್ಥೆಗಳಿಗೆ ಮಾಡಲಾದ ಸಹಾಯವು (₹6,656 ಕೋಟಿ) ಇನ್ನಿತರವುಗಳ ಜೊತೆಗೆ ಅಭಿವೃದ್ಧಿ ಪ್ರಾಧಿಕಾರಗಳಿಗೆ (₹1,853 ಕೋಟಿ), ಸರ್ಕಾರೇತರ ಸಂಸ್ಥೆಗಳಿಗೆ (₹1,772 ಕೋಟಿ) ಹಾಗೂ ಇತರರಿಗೆ (₹3,006 ಕೋಟಿ) ಮತ್ತು ಸಾರ್ವಜನಿಕ ವಲಯ ಉದ್ದಿಮೆಗಳಿಗೆ (₹25 ಕೋಟಿ) ನೀಡಿದ ಸಹಾಯವನ್ನು ಒಳಗೊಂಡಿದೆ.

## 1.7 ವೆಚ್ಚದ ಗುಣಮಟ್ಟ

ರಾಜ್ಯದಲ್ಲಿನ ಉತ್ತಮ ಸಾಮಾಜಿಕ ಮತ್ತು ಭೌತಿಕ ಮೂಲಭೂತ ಸೌಕರ್ಯಗಳ ಲಭ್ಯತೆಯು ಸಾಮಾನ್ಯವಾಗಿ ಅದರ ವೆಚ್ಚದ ಗುಣಮಟ್ಟವನ್ನು ಪ್ರತಿಬಿಂಬಿಸುತ್ತದೆ. ವೆಚ್ಚದ ಗುಣಮಟ್ಟದಲ್ಲಿನ ಸುಧಾರಣೆಯು ಮೂಲತಃ ವೆಚ್ಚದ ಪರ್ಯಾಪ್ತತೆ (ಅಂದರೆ ಸಾರ್ವಜನಿಕ ಸೇವೆಗಳನ್ನು ಒದಗಿಸಲು ಸಾಕಾಗುವಷ್ಟು ಅನುವುಗಳು) ವೆಚ್ಚದ ದಕ್ಷತೆ ಹಾಗೂ ವೆಚ್ಚದ ಪರಿಣಾಮಕಾರಿತ್ವ ಎಂಬ ಮೂರು ಅಂಶಗಳನ್ನು ಒಳಗೊಂಡಿರುತ್ತದೆ.

### 1.7.1 ಸಾರ್ವಜನಿಕ ವೆಚ್ಚದ ಪರ್ಯಾಪ್ತತೆ

ರಾಜ್ಯ ಸರ್ಕಾರಕ್ಕೆ ವಹಿಸಲಾದ ಸಾಮಾಜಿಕ ವಲಯ ಹಾಗೂ ಆರ್ಥಿಕ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ವೆಚ್ಚ ಜವಾಬ್ದಾರಿಗಳು ಬಹುಪಾಲು ರಾಜ್ಯದ ವಿಷಯಗಳಾಗಿವೆ. ಮಾನವ ಅಭಿವೃದ್ಧಿಮಟ್ಟಗಳನ್ನು ಹೆಚ್ಚಿಸಲು ಪ್ರಮುಖ ಸಾಮಾಜಿಕ ಸೇವೆಗಳಾದ ಶಿಕ್ಷಣ ಮತ್ತು ಆರೋಗ್ಯ ಮುಂತಾದವುಗಳ ಮೇಲಿನ ವೆಚ್ಚವನ್ನು ಉನ್ನತ ಮಟ್ಟಕ್ಕೆ ತರಬೇಕಾಗುತ್ತದೆ. ನಿರ್ದಿಷ್ಟ ವೆಚ್ಚ ಶೀರ್ಷಿಕೆಗೆ ನೀಡಿದ ಆದ್ಯತೆಯು ಸಾಮಾನ್ಯ ವರ್ಗದ ರಾಜ್ಯಗಳ ಆ ವರ್ಷದ ಸರಾಸರಿಗಿಂತಲೂ ಕಡಿಮೆಯಿದ್ದರೆ, ಕಡಿಮೆ ವಿತ್ತ ಆದ್ಯತೆಯನ್ನು (ಒಟ್ಟು ವೆಚ್ಚಕ್ಕೆ–ವೆಚ್ಚವರ್ಗದ ಅನುಪಾತ) ಆ ವಿಭಾಗಕ್ಕೆ ಅನ್ವಯಿಸಲಾಗುತ್ತದೆ.

**ಕೋಷ್ಟಕ 1.25** ರಾಜ್ಯದ ವೆಚ್ಚ ವರ್ಗಗಳಿಗೆ ನೀಡಿದ ವಿತ್ತೀಯ ಆದ್ಯತೆಯನ್ನು ಅಭಿವೃದ್ಧಿ ವೆಚ್ಚ, ಸಾಮಾಜಿಕ ವೆಚ್ಚ ಮತ್ತು ಬಂಡವಾಳ ವೆಚ್ಚಗಳಿಗೆ ಸಂಬಂಧಿಸಿದಂತೆ, ಸಾಮಾನ್ಯ ವರ್ಗದ ರಾಜ್ಯಗಳಿಗೆ ಹೋಲಿಸಿದಂತೆ 2013–14 ಹಾಗೂ ಪ್ರಸಕ್ತ ವರ್ಷ 2016–17ರ ವಿವರಗಳನ್ನು ನೀಡುತ್ತದೆ.

**ಕೋಷ್ಟಕ 1.25: 2013–14 ಮತ್ತು 2016–17ರಲ್ಲಿ ರಾಜ್ಯದ ವಿತ್ತೀಯ ಆದ್ಯತೆ**

| ರಾಜ್ಯದ ವಿತ್ತೀಯ ಆದ್ಯತೆ | ಒವೆ/ ರಾಒಆಉ | ಅವೆ#/ ಒವೆ | ಸಾವವೆ/ ಒವೆ | ಬಂವೆ/ ಒವೆ | ಶಿಕ್ಷಣ / ಒವೆ | ಆರೋಗ್ಯ/ ಒವೆ |
|---|---|---|---|---|---|---|
| 2013–14ರ ಸಾಮಾನ್ಯ ವರ್ಗ ರಾಜ್ಯಗಳ* ಸರಾಸರಿ (ಅನುಪಾತ) | 14.80 | 70.00 | 38.20 | 13.70 | 17.70 | 4.60 |
| 2013–14ರ ಕರ್ನಾಟಕ ರಾಜ್ಯದ (ಅನುಪಾತ) | 13.06 | 71.45 | 33.79 | 16.51 | 15.49 | 4.24 |
| 2016–17ರ ಸಾಮಾನ್ಯವರ್ಗ ರಾಜ್ಯಗಳ* ಸರಾಸರಿ (ಅನುಪಾತ ) | 16.70 | 70.90 | 32.20 | 19.70 | 15.20 | 4.80 |
| 2016–17ರ ಕರ್ನಾಟಕ ರಾಜ್ಯದ (ಅನುಪಾತ) | 14.50 | 76.53 | 38.96 | 18.57 | 13.08 | 4.25 |

*ಒವೆ: ಒಟ್ಟು ವೆಚ್ಚ, ಅವೆ: ಅಭಿವೃದ್ಧಿ ವೆಚ್ಚ, ಸಾವವೆ: ಸಾಮಾಜಿಕ ವಲಯ ವೆಚ್ಚ, ಬಂವೆ: ಬಂಡವಾಳ ವೆಚ್ಚ.*

*# ಅಭಿವೃದ್ಧಿ ವೆಚ್ಚವು ಅಭಿವೃದ್ಧಿ ರಾಜಸ್ವ ವೆಚ್ಚವನ್ನು, ಅಭಿವೃದ್ಧಿ ಬಂಡವಾಳ ವೆಚ್ಚವನ್ನು ಹಾಗೂ ವಿತರಿಸಲಾದ ಸಾಲಗಳು ಮತ್ತು ಮುಂಗಡಗಳನ್ನು ಒಳಗೊಂಡಿದೆ.*

*ಆಕರ: ರಾಒಆಉಕ್ಕೆ ದತ್ತಾಂಶವು ಕೇಂದ್ರ ಸರ್ಕಾರವು ತಿಳಿಸಿರುವ ರಾಜ್ಯ ಸರ್ಕಾರವು ತನ್ನ ಆಯವ್ಯಯ ದಾಖಲೆಗಳಲ್ಲಿ ಅಂಗೀಕರಿಸಿರುವ ಅಂಕಿಗಳು.*

**ಅನುಬಂಧ 1.1.ರ ಟಿಪ್ಪಣಿಯನ್ನು ಗಮನಿಸಿ.*

**ತುಲನಾತ್ಮಕ ವಿಶ್ಲೇಷಣೆಯು ಈ ಕೆಳಗಿನವುಗಳನ್ನು ತೋರಿಸಿಕೊಟ್ಟಿತು:**

- ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ಮತ್ತು ಒಟ್ಟಾರೆ ವೆಚ್ಚಕ್ಕೆ ರಾಜ್ಯದ ವೆಚ್ಚದ ಅನುಪಾತವು 2013–14ಕ್ಕೆ ಹೋಲಿಸಿದರೆ 2016–17ರಲ್ಲಿ ಏರಿಕೆಯಾಗಿದೆ. ಆದರೆ, ಅನುಪಾತವು ಸಾಮಾನ್ಯ ವರ್ಗ ರಾಜ್ಯಗಳ ಅನುಪಾತಕ್ಕಿಂತ ಕಡಿಮೆಯಿದೆ;

- ಅಭಿವೃದ್ಧಿ ವೆಚ್ಚವು ರಾಜ್ಯದ ಒಟ್ಟಾರೆ ವೆಚ್ಚಕ್ಕೆ ಅನುಪಾತವಾಗಿ ಸಾಮಾನ್ಯ ವರ್ಗದ ರಾಜ್ಯಗಳ ಸರಾಸರಿಗಿಂತ ಅಧಿಕವಾಗಿದ್ದಿತು. ಅಭಿವೃದ್ಧಿ ವೆಚ್ಚವು ಆರ್ಥಿಕ ಮತ್ತು ಸಾಮಾಜಿಕ ಸೇವಾ ವಲಯಗಳೆರಡರ ವೆಚ್ಚವನ್ನು ಒಳಗೊಂಡಿದೆ. ಸಾಮಾಜಿಕ ವಲಯ ವೆಚ್ಚವು ರಾಜ್ಯದಲ್ಲಿನ ಒಟ್ಟಾರೆ ವೆಚ್ಚಕ್ಕೆ ಒಂದು ಅನುಪಾತವಾಗಿ 2013–14ರಲ್ಲಿ ಮತ್ತು 2016–17ರಲ್ಲಿ ಸಾಮಾನ್ಯ ವರ್ಗದ ರಾಜ್ಯಗಳಿಗಿಂತ ಕಡಿಮೆಯಾಗಿತ್ತು ಮತ್ತು 2016–17ರಲ್ಲಿ ಹೆಚ್ಚಾಗಿದೆ. **ಕೋಷ್ಟಕ**

**1.25**ರಿಂದ ಗಮನಿಸಿದಂತೆ, ಶಿಕ್ಷಣ ಮತ್ತು ಆರೋಗ್ಯ ವಲಯಗಳೆರಡರ ಅಡಿಯಲ್ಲಿನ ಅನುಪಾತವು 2013–14 ಮತ್ತು 2016–17ರಲ್ಲಿ ಸಾಮಾನ್ಯ ವರ್ಗದ ರಾಜ್ಯಗಳ ಸರಾಸರಿಗಿಂತ ಸಾಕಷ್ಟು ಕಡಿಮೆ ಪ್ರಮಾಣದಲ್ಲಿದ್ದುದರಿಂದ, ಈ ಎರಡೂ ವಲಯಕ್ಕೂ ಸಾಕಾದಷ್ಟು ಆದ್ಯತೆಯನ್ನು ನೀಡುವ ಅಗತ್ಯವಿದೆ; ಮತ್ತು

- ರಾಜ್ಯದ ಶಿಕ್ಷಣದ ಮೇಲಿನ ವೆಚ್ಚದ ಸರಾಸರಿ ಅನುದಾನವು 2013–14 ಮತ್ತು 2016–17ರಲ್ಲಿ ಸಾಮಾನ್ಯ ವರ್ಗದ ರಾಜ್ಯಗಳ ಸರಾಸರಿ ಅನುಪಾತಕ್ಕಿಂತ ಕಡಿಮೆಯಿದ್ದಿತು. ಇದು ಶಿಕ್ಷಣ ಕ್ಷೇತ್ರದಲ್ಲಿ ರಾಜ್ಯದ ಕಡಿಮೆ ಆದ್ಯತೀಕರಣವನ್ನು ಸೂಚಿಸಿತು. ಆದಾಗ್ಯೂ, 2011ರ ಜನಗಣತಿಯ ಅನ್ವಯ ರಾಜ್ಯದ ಸಾಕ್ಷರತಾ ದರವು ಶೇಕಡ 75.40ರಷ್ಟಿತ್ತು.

### 1.7.2 ವೆಚ್ಚದ ದಕ್ಷತೆ

ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಅಭಿವೃದ್ಧಿ ಶೀರ್ಷಿಕೆಯ ಮೇಲೆ ಸಾರ್ವಜನಿಕ ವೆಚ್ಚದ ಪ್ರಾಮುಖ್ಯತೆಯ ದೃಷ್ಟಿಯಲ್ಲಿ ರಾಜ್ಯ ಸರ್ಕಾರವು ಸೂಕ್ತ ವೆಚ್ಚ ಪುನರ್ವ್ಯವಸ್ಥೆಯ ಕ್ರಮಗಳನ್ನು ತೆಗೆದುಕೊಂಡು ಅಭಿವೃದ್ಧಿ ವೆಚ್ಚಗಳಿಗೆ ಒತ್ತುಕೊಡಬೇಕಾಗಿದೆ. ಒಟ್ಟು ವೆಚ್ಚಕ್ಕೆ ಈ ಭಾಗಗಳ ಅನುಪಾತವು ಹೆಚ್ಚಾಗಿದ್ದಷ್ಟೂ, ವೆಚ್ಚದ ಗುಣಮಟ್ಟವು ಉತ್ತಮವಾಗಿರುತ್ತದೆ. **ಕೋಷ್ಟಕ 1.26**ರಲ್ಲಿ ಹಿಂದಿನ ವರ್ಷಗಳಿಗೆ ಹೋಲಿಸಿದಂತೆ 2016–17ರ ಸಾಲಿನ ಒಟ್ಟು ವೆಚ್ಚಕ್ಕೆ ಪ್ರತಿಯಾಗಿ ಅಭಿವೃದ್ಧಿ ವೆಚ್ಚದ ಪ್ರವೃತ್ತಿಯನ್ನು ತೋರಿಸುತ್ತದೆ.

**ಕೋಷ್ಟಕ 1.26: ಅಭಿವೃದ್ಧಿ ವೆಚ್ಚ**

(ಕೋಟಿ ರೂಪಾಯಿಗಳಲ್ಲಿ)

| | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ಅಭಿವೃದ್ಧಿ ವೆಚ್ಚ | 68,067 | 76,328 | 88,904 | 1,00,441 | 1,23,988 |
| ಒಟ್ಟು ವೆಚ್ಚಕ್ಕೆ ಹೋಲಿಸಿದಲ್ಲಿ ಶೇಕಡಾವಾರು | 73 | 71 | 72 | 73 | 77 |
| **ಅಭಿವೃದ್ಧಿ ವೆಚ್ಚದ ಅಂಗಗಳು** | | | | | |
| ರಾಜಸ್ವ | 52,094 (76) | 59,215 (77) | 69,337 (78) | 80,153 (80) | 94,970 (76) |
| ಬಂಡವಾಳ | 14,889 (22) | 16,446 (22) | 19,004 (21) | 19,722 (20) | 27,090 (22) |
| ಸಾಲ ಮತ್ತು ಮುಂಗಡ | 1,084(2) | 667(1) | 563(1) | 566(–) | 1,928(2) |

*ಆಕರ: ಹಣಕಾಸು ಲೆಕ್ಕಗಳು.*

*ಆವರಣದಲ್ಲಿರುವ ಅಂಕಿಗಳು ಒಟ್ಟು ವೆಚ್ಚದ ಶೇಕಡಾವಾರನ್ನು ತೋರಿಸುತ್ತದೆ.*

ಅಭಿವೃದ್ಧಿ ವೆಚ್ಚವು 2012–13ರಲ್ಲಿ ₹68,067 ಕೋಟಿ ಇದ್ದುದು 2016–17ರಲ್ಲಿ ₹1,23,988 ಕೋಟಿಗೆ ಏರಿದೆ. ಒಟ್ಟಾರೆ ವೆಚ್ಚಕ್ಕೆ, ಅದು 2012–13ರಲ್ಲಿ ಶೇಕಡ 73ರಿಂದ 2013–14ರಲ್ಲಿ ಶೇಕಡ 71ಕ್ಕೆ ಇಳಿಕೆಯಾಗಿ 2016–17ನೇ ವರ್ಷದಲ್ಲಿ ಶೇಕಡ 77ಕ್ಕೆ ಏರಿಕೆಯಾಯಿತು. 2012–13 ರಿಂದ 2016–17ರ ಅವಧಿಯಲ್ಲಿ ಸರಾಸರಿಯಾಗಿ ಅಭಿವೃದ್ಧಿ ವೆಚ್ಚದ ಶೇಕಡ 77ರಷ್ಟು ರಾಜಸ್ವ ಲೆಕ್ಕದಡಿಯಿದ್ದರೆ ಉಳಿದ ಭಾಗ ಸಾಲ ಮತ್ತು ಮುಂಗಡಗಳೂ ಸೇರಿದಂತೆ ಬಂಡವಾಳ ವೆಚ್ಚದಡಿ ಉಂಟಾಗಿದೆ. 2016–17ರಲ್ಲಿ ಸಂಬಳ ವೆಚ್ಚ (₹16,149 ಕೋಟಿ) ಮತ್ತು ಸಹಾಯಧನ ವೆಚ್ಚ (₹14,364 ಕೋಟಿ)ಗಳು ಅಭಿವೃದ್ಧಿ ರಾಜಸ್ವ ವೆಚ್ಚದ ಎರಡು ಪ್ರಮುಖ ಅಂಶಗಳಾಗಿದ್ದವು.

ಈ ಕೆಳಗಿನ **ಕೋಷ್ಟಕ 1.27**ರಲ್ಲಿ ಆಯ್ದ ಕೆಲವು ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಬಂಡವಾಳ ವೆಚ್ಚ ಮತ್ತು ಸಂಬಳ ಮತ್ತು ನಿರ್ವಹಣೆಗಳ ಮೇಲಿನ ರಾಜಸ್ವ ವೆಚ್ಚದ ಅಂಶಗಳ ವಿವರಗಳನ್ನು ನೀಡಲಾಗಿದೆ.

**ಕೊಷ್ಟಕ 1.27:ಆಯ್ದ ಕೆಲವು ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಬಂಡವಾಳ ವೆಚ್ಚ**

(ಅನುಪಾತವು ಶೇಕಡಾವಾರಿನಲ್ಲಿ)

| ವಲಯ | 2015–16 | | | 2016–17 | | |
|---|---|---|---|---|---|---|
| | ರಾಜಸ್ವ ವೆಚ್ಚ | | | ರಾಜಸ್ವ ವೆಚ್ಚ | | |
| | ಒಟ್ಟು ವೆಚ್ಚಕ್ಕೆ ಬಂಡವಾಳ ವೆಚ್ಚದ ಅನುಪಾತ | ಸಂಬಳ ಮತ್ತು ಕೂಲಿ | ಕಾರ್ಯಾಚರಣೆ ಮತ್ತು ನಿರ್ವಹಣೆ | ಒಟ್ಟು ವೆಚ್ಚಕ್ಕೆ ಬಂಡವಾಳ ವೆಚ್ಚದ ಅನುಪಾತ | ಸಂಬಳ ಮತ್ತು ಕೂಲಿ | ಕಾರ್ಯಾಚರಣೆ ಮತ್ತು ನಿರ್ವಹಣೆ |
| **ಸಾಮಾಜಿಕ ಸೇವೆಗಳು** | | | | | | |
| ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 0.52 | 8.68 | 0.01 | 0.68 | 8.25 | 0.01 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 0.59 | 1.96 | 0.01 | 0.50 | 1.63 | 0.01 |
| ನೀರು ಸರಬರಾಜು, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿ | 1.42 | 0.08 | 0.12 | 2.61 | 0.09 | 0.11 |
| ಇತರೆ | 1.55 | 0.55 | 0.02 | 1.54 | 0.51 | 0.02 |
| **ಒಟ್ಟು (ಸಾಮಾಜಿಕ ಸೇವೆಗಳಯ)** | **4.08** | **11.27** | **0.16** | **5.29** | **10.48** | **0.15** |
| **ಆರ್ಥಿಕ ಸೇವೆಗಳು** | | | | | | |
| ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು | 0.14 | 1.04 | 0.04 | 0.34 | 0.94 | 0.04 |
| ನೀರಾವರಿ ಮತ್ತು ನೆರೆ ನಿಯಂತ್ರಣ | 5.02 | 0.12 | 0.29 | 5.33 | 0.10 | 0.26 |
| ವಿದ್ಯುಚ್ಛಕ್ತಿ ಮತ್ತು ಇಂಧನ | 0.06 | – | – | 0.57 | – | – |
| ಸಾರಿಗೆ | 3.90 | 0.07 | 0.62 | 4.71 | 0.05 | 0.56 |
| ಇತರೆ | 1.46 | 0.74 | 0.02 | 1.69 | 0.67 | 0.03 |
| **ಒಟ್ಟು (ಆರ್ಥಿಕ ಸೇವೆಗಳು)** | **10.58** | **1.97** | **0.97** | **12.62** | **1.76** | **0.89** |
| **ಒಟ್ಟು (ಸಾ.ಸೇ.+ಆ.ಸೇ)** | **14.66** | **13.24** | **1.13** | **17.91** | **12.24** | **1.04** |

*ಆಕರ: ಹಣಕಾಸು ಲೆಕ್ಕಗಳು.*

### ಸಾಮಾಜಿಕ ಸೇವೆಗಳ ಮೇಲಿನ ವೆಚ್ಚ

ಸಾಮಾಜಿಕ ಸೇವೆಗಳ ಮೇಲಿನ ಬಂಡವಾಳ ವೆಚ್ಚವು 2015–16ರಲ್ಲಿದ್ದ ₹5,641 ಕೋಟಿಗಳಿಂದ 2016–17ರಲ್ಲಿ ₹8,571 ಕೋಟಿಗಳಿಗೆ ಏರಿಕೆಯಾಗಿದ್ದು, ಬಂಡವಾಳ ವೆಚ್ಚ ಮತ್ತು ಒಟ್ಟು ವೆಚ್ಚಗಳ ಅನುಪಾತವು 2015–16ರಲ್ಲಿ ಶೇಕಡ 4.08 ರಷ್ಟಿದ್ದು 2016–17ರಲ್ಲಿ ಶೇಕಡ 5.29ಕ್ಕೆ ಏರಿತ್ತು. ಒಟ್ಟು ರಾಜಸ್ವ ವೆಚ್ಚದಲ್ಲಿ ಸಂಬಳದ ಮೇಲಿನ ವೆಚ್ಚದ (ಸಾಮಾಜಿಕ ಸೇವೆಗಳಡಿ) ಪಾಲು 2016–17ರಲ್ಲಿ ಶೇಕಡ 10 ರಷ್ಟಿತ್ತು (**ಕೋಷ್ಟಕ 1.27**).

### ಆರ್ಥಿಕ ಸೇವೆಗಳ ಮೇಲಿನ ವೆಚ್ಚ

ಆರ್ಥಿಕ ವಿಭಾಗದಲ್ಲಿನ ಬಂಡವಾಳ ವೆಚ್ಚವು 2015–16ರಲ್ಲಿದ್ದ ₹14,647 ಕೋಟಿಗಳಿಂದ 2016–17ರಲ್ಲಿ ₹20,447 ಕೋಟಿಗಳಿಗೆ ಏರಿದೆ. ಒಟ್ಟು ರಾಜಸ್ವ ವೆಚ್ಚದಲ್ಲಿ (ಆರ್ಥಿಕ ಸೇವೆಗಳ ಅಡಿ) ಸಂಬಳದ ವೆಚ್ಚದ ಪಾಲು 2016–17ರಲ್ಲಿ ಶೇಕಡ 2ರಷ್ಟಿತ್ತು (**ಕೋಷ್ಟಕ 1.27**).

ರಾಜ್ಯ ಸರ್ಕಾರವು ಆರ್ಥಿಕ ಸೇವೆಗಳಲ್ಲಿ ಕೃಷಿ, ಗ್ರಾಮೀಣ ಅಭಿವೃದ್ಧಿ, ನೀರಾವರಿ ಮತ್ತು ಪ್ರವಾಹ ನಿಯಂತ್ರಣ, ಸಾರಿಗೆ ಮತ್ತು ಕೈಗಾರಿಕೆ ಮತ್ತು ಖನಿಜಗಳನ್ನು ಆದ್ಯತೆಯ ವಿಭಾಗಗಳಾಗಿ ಗುರುತಿಸಿದೆ. 2016–17ರಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ, ಬಂಡವಾಳ ವೆಚ್ಚವು ಕ್ರಮವಾಗಿ ಸಾರಿಗೆ, ನೀರಾವರಿ ಮತ್ತು ಪ್ರವಾಹ ನಿಯಂತ್ರಣ, ಇಂಧನ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ₹2,224 ಕೋಟಿ, ₹1,680

ಕೋಟಿ ಮತ್ತು ₹812 ಕೋಟಿ, ₹319 ಕೋಟಿ ಮತ್ತು ₹43 ಕೋಟಿಗಳಷ್ಟು ಹೆಚ್ಚಾಗಿದ್ದು ಮತ್ತು ವಿಶೇಷ ಪ್ರದೇಶ ಕಾರ್ಯಕ್ರಮಗಳಲ್ಲಿ ಕ್ರಮವಾಗಿ ₹238 ಕೋಟಿ ಮತ್ತು ₹10 ಕೋಟಿಗಳಷ್ಟು ಇಳಿಕೆಯಾಗಿದೆ.

## 1.8 ರಾಜ್ಯ ಸರ್ಕಾರದ ವೆಚ್ಚ ಮತ್ತು ಹೂಡಿಕೆಗಳ ಆರ್ಥಿಕ ವಿಶ್ಲೇಷಣೆ

ವಿತ್ತೀಯ ಜವಾಬ್ದಾರಿ ಕಾಯಿದೆ ನಂತರದ ನಿರ್ಬಂಧಗಳನ್ವಯ ರಾಜ್ಯ ಸರ್ಕಾರವು ತನ್ನ ವಿತ್ತ ಕೊರತೆಯನ್ನು (ಸಾಲಗಳನ್ನು) ಕನಿಷ್ಠ ಮಟ್ಟದಲ್ಲಿಟ್ಟುಕೊಳ್ಳುವುದು ಮಾತ್ರವಲ್ಲದೆ ತನ್ನ ಬಂಡವಾಳ ವೆಚ್ಚ/ಹೂಡಿಕೆಗಳ (ಸಾಲ ಮತ್ತು ಮುಂಗಡಗಳೂ ಸೇರಿ) ಅಗತ್ಯತೆಗಳನ್ನು ಪೂರೈಸಿಕೊಳ್ಳಬೇಕಾಗಿದೆ. ರಾಜ್ಯ ಸರ್ಕಾರವು ಇದನ್ನು ಪರೋಕ್ಷ ಸಹಾಯಧನಗಳ ರೂಪದಲ್ಲಿ ತನ್ನ ಆಯವ್ಯಯದ ಮೂಲಕ ಭರಿಸುವ ಬದಲು ತನ್ನ ಹೂಡಿಕೆಗಳ ಮೇಲಿನ ಪ್ರತಿಫಲಗಳನ್ನು ಮತ್ತು ಕಡವಾಗಿ ಪಡೆದ ಮೊತ್ತಗಳ ಬೆಲೆಯನ್ನು ಗಳಿಸಲು ಕ್ರಮಗಳನ್ನು ತೆಗೆದುಕೊಳ್ಳುವುದರೊಂದಿಗೆ ತನ್ನ ಹಣಕಾಸು ನಿರ್ವಹಣೆಯಲ್ಲಿ ಪಾರದರ್ಶಕವನ್ನು ತುಂಬಲು ಯತ್ನಿಸಬೇಕಾಗಿದೆ. ಈ ವಿಭಾಗವು ಹಿಂದಿನ ವರ್ಷಗಳಿಗೆ ಹೋಲಿಸಿದಂತೆ 2016–17ರಲ್ಲಿ ಸರ್ಕಾರವು ಮಾಡಿದ ಹೂಡಿಕೆಗಳ ಮತ್ತಿತರ ಬಂಡವಾಳ ವೆಚ್ಚಗಳ ಸ್ಥೂಲ ಆರ್ಥಿಕ ವಿಶ್ಲೇಷಣೆಯನ್ನು ನೀಡುತ್ತದೆ.

### 1.8.1 ಅಪೂರ್ಣ ಕಾಮಗಾರಿಗಳು

ದಾವೆ ಮುಂತಾದ ಕಾರಣಗಳೂ ಸೇರಿದಂತೆ ವಿವಿಧ ಕಾರಣಗಳಿಂದ ಅಪೂರ್ಣವಾಗಿ ಉಳಿದ ಕಾಮಗಾರಿಗಳಿಂದ ಅವುಗಳ ಮೇಲಿನ ವೆಚ್ಚವು ನಿರ್ಬಂಧಿತವಾಗಿ ವೆಚ್ಚದ ಗುಣಮಟ್ಟದ ಮೇಲೆ ಋಣಾತ್ಮಕ ಪ್ರಭಾವ ಬೀರುತ್ತದೆ. 31 ಮಾರ್ಚ್ 2017ರಲ್ಲಿದ್ದಂತೆ, ಅಪೂರ್ಣ ಕಾಮಗಾರಿಗಳ ಇಲಾಖಾವಾರು ಮಾಹಿತಿಯನ್ನು **ಕೋಷ್ಟಕ 1.28**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.28: ಅಪೂರ್ಣ ಕಾಮಗಾರಿಗಳು**

(ಕೋಟಿ ರೂಪಾಯಿಗಳಲ್ಲಿ)

| ಇಲಾಖೆ | ಅಪೂರ್ಣ ಕಾಮಗಾರಿಗಳು* | | | | ಮಾರ್ಚ್ 2017ರ ಅಂತ್ಯಕ್ಕೆ ಸಂಚಿತ ವೆಚ್ಚ |
|---|---|---|---|---|---|
| | ಸಂಖ್ಯೆ | ಆಯವ್ಯಯ ಅಂದಾಜು | ವೆಚ್ಚದ ಅಧಿವ್ಯಾಪನೆ | | |
| | | | ಸಂಖ್ಯೆ | ಮೊತ್ತ | |
| ಲೋಕೋಪಯೋಗಿ | | | | | |
| ಕಟ್ಟಡಗಳು | 67 | 353.81 | 9 | 10.75 | 282.83 |
| ರಸ್ತೆಗಳು ಮತ್ತು ಸೇತುವೆಗಳು | 232 | 1,798.08 | 74 | 68.93 | 1,682.66 |
| ನೀರಾವರಿ | 42 | 76.19 | 5 | 0.62 | 61.12 |
| ಒಟ್ಟು | **341** | **2,228.08** | **88** | **80.30** | **2,026.61** |

*ಆಕರ: ಹಣಕಾಸು ಲೆಕ್ಕಗಳು.*

** 31 ಮಾರ್ಚ್ 2017ಕ್ಕೆ ಮುಂಚಿತವಾಗಿ ಪೂರ್ಣಗೊಳ್ಳಲು ಉದ್ದೇಶಿಸಿದ್ದ ಯೋಜನೆಗಳನ್ನು ಪರಿಗಣಿಸಲಾಗಿದೆ.*

₹2,228.08 ಕೋಟಿಗಳ ಮೂಲ ಅಂದಾಜು ಮೊತ್ತದ 341 ಕಾಮಗಾರಿಗಳು ಮಾರ್ಚ್ 2017 ಅಥವಾ ಅದಕ್ಕಿಂತಲೂ ಮುಂಚಿತವಾಗಿ ಪೂರ್ಣಗೊಳ್ಳಬೇಕಾಗಿದ್ದು, 31 ಮಾರ್ಚ್ 2017ರಲ್ಲಿದ್ದಂತೆ ಇವುಗಳ ಮೇಲಿನ ಸಂಚಿತ ವೆಚ್ಚವು ₹2,026.61 ಕೋಟಿಗಳಷ್ಟಿದೆ. ಇದರಲ್ಲಿ 88 ಪ್ರಕರಣಗಳಲ್ಲಿ ಅಧಿವ್ಯಾಪನ ವೆಚ್ಚವು ₹80.30 ಕೋಟಿಗಳಷ್ಟಿತ್ತು. ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳು ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ಆದ ವಿಳಂಬಕ್ಕೆ ಕಾರಣಗಳನ್ನು ನೀಡಿರುವುದಿಲ್ಲ.

### 1.8.2 ಹೂಡಿಕೆಗಳು ಮತ್ತು ಪ್ರತಿಫಲಗಳು

ರಾಜ್ಯ ಹಣಕಾಸು ಲೆಕ್ಕಗಳಲ್ಲಿ ತೋರಿಸಿರುವಂತೆ ಕಂಪನಿ/ನಿಗಮ ಮುಂತಾದವುಗಳಲ್ಲಿನ ಸರ್ಕಾರದ ಷೇರು ಬಂಡವಾಳ ಹೂಡಿಕೆಯು ಲೆಕ್ಕಶೀರ್ಷಿಕೆ 4225–107 ಸಾಲ ಸಹಕಾರಿಗಳಲ್ಲಿನ ಹೂಡಿಕೆಗಳು, 4225–108 ಇತರ ಸಹಕಾರಿಗಳಲ್ಲಿನ ಹೂಡಿಕೆಗಳು, 4405–00–191 ಮೀನುಗಾರರ ಸಹಕಾರಿಗಳು ಮತ್ತು 4851–00–108–01 ವಿದ್ಯುತ್ ಚಾಲಿತ ಮಗ್ಗ ಸಹಕಾರಿ ಸಂಸ್ಥೆಗಳಿಗೆ ಷೇರು ಬಂಡವಾಳ ಸಹಾಯ ಮತ್ತು ವಿವಿಧ ಬಂಡವಾಳ ವೆಚ್ಚ ಶೀರ್ಷಿಕೆಗಳಡಿಯಲ್ಲಿನ ಒಳಶೀರ್ಷಿಕೆ 190–ಸಾರ್ವಜನಿಕ

ವಿಭಾಗ ಮತ್ತು ಇತರ ಉದ್ದಿಮೆಗಳು ಮತ್ತು ವಿವಿಧ ಬಂಡವಾಳ ಶೀರ್ಷಿಕೆಯಡಿ 195– ಸಹಕಾರಿಗಳಡಿಯ ಹೂಡಿಕೆಗಳ ವೆಚ್ಚವನ್ನು ಒಳಗೊಂಡಿದೆ.

### ರೋಗಗ್ರಸ್ತ/ಕೆಲಸ ಮಾಡದ ಸಾರ್ವಜನಿಕ ವಲಯದ ಸಂಸ್ಥೆಗಳು/ಸರ್ಕಾರಿ ನಿರ್ವಹಣಾ ಸಂಸ್ಥೆಗಳು

31 ಮಾರ್ಚ್ 2017ರಲ್ಲಿದ್ದಂತೆ ಸರ್ಕಾರವು ₹63,115 ಕೋಟಿಗಳನ್ನು 16 ನಿಷ್ಕ್ರಿಯ ಸರ್ಕಾರಿ ಕಂಪೆನಿಗಳಲ್ಲಿನ ಹೂಡಿಕೆಯ ₹68 ಕೋಟಿಗಳೂ ಸೇರಿದಂತೆ 84 ಸರ್ಕಾರಿ ಕಂಪೆನಿಗಳು (₹57,674 ಕೋಟಿ), ಒಂಭತ್ತು ಶಾಸನಬದ್ಧ ನಿಗಮಗಳು (₹2,520 ಕೋಟಿ), 43 ಕೂಡು ಬಂಡವಾಳ ಕಂಪೆನಿಗಳು (₹2,524 ಕೋಟಿ) ಮತ್ತು ಸಹಕಾರಿ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಲ್ಲಿ (₹397 ಕೋಟಿ) ಹೂಡಿದೆ. ಈ ಹೂಡಿಕೆಗಳಿಂದ ಬಂದ ಪ್ರತಿಫಲವು ನಗಣ್ಯವಾಗಿದೆ (**ಕೋಷ್ಟಕ 1.29**).

**ಕೋಷ್ಟಕ 1.29: ಹೂಡಿಕೆಗಳ ಮೇಲಿನ ಪ್ರತಿಫಲ**

| | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ವರ್ಷಾಂತ್ಯದಲ್ಲಿ ಹೂಡಿಕೆ (ಕೋಟಿ ರೂಪಾಯಿಗಳಲ್ಲಿ) | 49,463.80 | 55,048.00 | 61,726.92 | 61,335.89 | 63,115.06 |
| ಪ್ರತಿಫಲ (ಕೋಟಿ ರೂಪಾಯಿಗಳಲ್ಲಿ) | 56.29 | 55.49 | 74.84 | 69.40 | 82.50 |
| ಪ್ರತಿಫಲ (ಶೇಕಡ) | 0.1 | 0.1 | 0.1 | 0.1 | 0.1 |
| ಸರ್ಕಾರದ ಸಾಲದ ಮೇಲಿನ ಸರಾಸರಿ ಬಡ್ಡಿ (ಶೇಕಡ) | 6.6 | 6.2 | 6.5 | 6.5 | 6.3 |
| ಬಡ್ಡಿದರ ಮತ್ತು ಪ್ರತಿಫಲಗಳ ನಡುವಿನ ವ್ಯತ್ಯಾಸ (ಶೇಕಡ) | 6.5 | 6.1 | 6.4 | 6.4 | 6.2 |

*ಆಕರ: ಹಣಕಾಸು ಲೆಕ್ಕಗಳು.*

ರಾಜ್ಯ ಸರ್ಕಾರವು ಈ ಹೂಡಿಕೆಗಳ ಮೇಲಿನ ಪ್ರತಿಫಲವು ನಗಣ್ಯವೆಂಬ ಸತ್ಯಾಂಶವನ್ನು ಒಪ್ಪಿಕೊಂಡಿದ್ದರೂ, ಅದು ದೀರ್ಘಕಾಲೀನ ಬೆಳವಣಿಗೆ ಮತ್ತು ಪ್ರತಿಫಲಾವಧಿಯಿರುವ ಸಾಮಾಜಿಕ ಮೂಲಸೌಕರ್ಯಗಳಲ್ಲಿ ಹೂಡಿಕೆ ಮಾಡಲು ಹಿಂಜರಿಯುವುದಿಲ್ಲವೆಂದು ಹೇಳಿದೆ. ಮುಂದುವರೆದು, ಸರ್ಕಾರವು ನಿರ್ದಿಷ್ಟ ಪ್ರತಿಫಲವನ್ನು ಖಚಿತಪಡಿಸಿಕೊಳ್ಳಲು ತನ್ನ ಶ್ರಮವನ್ನು ಮುಂದುವರಿಸಬೇಕೆಂದು ಹೇಳಿದೆ. ಆದರೆ, ಶಾಸಕಾಂಗದ ಮುಂದೆ ಮಂಡಿಸಲಾಗುವ ಮಧ್ಯಮಾವಧಿ ವಿತ್ತೀಯ ಯೋಜನೆಗಳು ಹೂಡಿಕೆಗಳ ಮೇಲೆ ಸೂಕ್ತ ಪ್ರತಿಫಲ ಪಡೆಯಲು ಯಾವುದೇ ಮಾರ್ಗಸೂಚಿಗಳನ್ನು ಹೊಂದಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ.

ಅಲ್ಲದೆ, ಮಾರ್ಚ್ 2017ರ ಅಂತ್ಯಕ್ಕೆ, ಐದು [6] ಕಂಪೆನಿಗಳು/ನಿಗಮಗಳಿಗೆ ಸಂಬಂಧಿಸಿದ ₹916.61 ಕೋಟಿಗಳ ಹೂಡಿಕೆಗಳು ಸಂಸ್ಥೆಗಳಿಂದ ವಾಸ್ತವವಾಗಿ ಬಳಕೆಯಾಗದೆ ಸಾರ್ವಜನಿಕ ಲೆಕ್ಕದಲ್ಲಿಯೇ ಉಳಿದಿದೆ. ಇದು ಸಾರ್ವಜನಿಕ ಲೆಕ್ಕದಲ್ಲಿ ನಿಧಿಗಳು ನಿರ್ಬಂಧಿತವಾಗಿ ಉಳಿಯುವಲ್ಲಿ ಮತ್ತು ಸಂಚಿತನಿಧಿಯಲ್ಲಿ ವೆಚ್ಚವನ್ನು ಅಧಿಕವಾಗಿ ತೋರಿಸಿ ಸಾಲಗಳನ್ನು ಪಡೆಯಲು ಸಮರ್ಥನೆ ನೀಡುವಂತಾಗುವಲ್ಲಿ ಪರಿಣಮಿಸಿದೆ. ಈ ಮೊತ್ತಗಳನ್ನು ಸಮರ್ಪಕವಾಗಿ ಬಳಸಲು ಶ್ರಮ ವಹಿಸಬೇಕಾಗಿದೆ ಮತ್ತು ಸಂಚಿತನಿಧಿಯಿಂದ ಹಣದ ಬಿಡುಗಡೆಯ ಮೊದಲು ಕಂಪೆನಿಯಿಂದ ಬರುವ ಹಣದ ಬೇಡಿಕೆಗಳ ಪ್ರಸ್ತಾವನೆಯನ್ನು ಪರಿಶೀಲಿಸುವ ವ್ಯವಸ್ಥೆಯನ್ನು ಪ್ರಾರಂಭಿಸಬೇಕಿದೆ.

ಕೆಲವು ಸಂಸ್ಥೆಗಳಿಂದ ಬಳಕೆಯಾಗದೇ ಉಳಿದಿರುವ ಅಗಾಧ ಮೊತ್ತಗಳ ಬಗ್ಗೆ ಆರ್ಥಿಕ ಇಲಾಖೆಯು (ಅಕ್ಟೋಬರ್ 2015), ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ ಅವರ ನೇತೃತ್ವದಡಿ ಆಯವ್ಯಯ ಹೊರಗಿನ ಸಾಲಗಳ ಮೇಲ್ವಿಚಾರಣಾ ಸಮಿತಿ (ಓಎಮ್‌ಸಿ)ಯೊಂದನ್ನು ರಚಿಸಲಾಗಿದೆ ಮತ್ತು ಈ ಸಮಿತಿಯು ಮಂಡಳಿಗಳ/ ನಿಗಮಗಳ ಹಣಕಾಸಿನ ಸಮಗ್ರ ಒಳಿತಿಗಾಗಿ ಅಗತ್ಯವಿರುವ ಕ್ರಮಗಳ ಬಗ್ಗೆ

[6] ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ (₹629.26 ಕೋಟಿ), ಕರ್ನಾಟಕ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ (₹177.83 ಕೋಟಿ). ಕರ್ನಾಟಕ ನೀರಾವರಿ ನಿಗಮ ನಿಯಮಿತ (₹49.09 ಕೋಟಿ), ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮ (₹53.30 ಕೋಟಿ), ಕರ್ನಾಟಕ ಕೊಳಚೆ ಪ್ರದೇಶಗಳ ಅಭಿವೃದ್ಧಿ ಮಂಡಳಿ (₹7.13 ಕೋಟಿ).

ಸಲಹೆ ನೀಡಲು ಹಾಲಿಯಿರುವ ಸಾಲಗಳ ಮತ್ತು ಬಾಂಡುಗಳ ಸ್ಥಿತಿಗಳನ್ನು ಪರಿಶೀಲಿಸುವ ಅಧಿಕಾರವನ್ನು ಹೊಂದಿದೆಯೆಂದು ಉತ್ತರಿಸಿದೆ. ಅಸಲು ಮತ್ತು ಬಡ್ಡಿಗಳ ಮರುಪಾವತಿಗಳಿಗೆ ಹಣವನ್ನು ಬಿಡುಗಡೆ ಮಾಡುವ ಮೊದಲು ಹಿಂದಿನ ವರ್ಷದ ಅಸಲು ಮತ್ತು ಬಡ್ಡಿಗಳ ಮರುಪಾವತಿಯ ಹಣ ಬಳಕೆಯನ್ನು ಸಹ ಖಚಿತಪಡಿಸಿಕೊಳ್ಳಲಾಗುತ್ತಿದೆ ಎಂದೂ ಸಹ ಆರ್ಥಿಕ ಇಲಾಖೆಯು ಹೇಳಿದೆ (ಅಕ್ಟೋಬರ್ 2015).

ಮಾರ್ಚ್ 2017ರ ಅಂತ್ಯಕ್ಕೆ ಒಟ್ಟು ₹63,115 ಕೋಟಿಗಳ ಒಟ್ಟು ಹೂಡಿಕೆಯಲ್ಲಿ, ₹60,139 ಕೋಟಿಗಳ (ಶೇಕಡ 95) ಹೂಡಿಕೆಯನ್ನು ನೀರಾವರಿ ವಿಭಾಗದಡಿ 77 ಸರ್ಕಾರಿ ಕಂಪೆನಿಗಳು/ ನಿಗಮಗಳು (₹36,779 ಕೋಟಿ), ಸಾರಿಗೆ ವಿಭಾಗ (₹2,399 ಕೋಟಿ) ಮೂಲ ಸೌಕರ್ಯ ವಿಭಾಗ (₹4,251 ಕೋಟಿ) ವಿದ್ಯುಚ್ಛಕ್ತಿ ವಿಭಾಗ (₹10,120 ಕೋಟಿ), ಕೈಗಾರಿಕಾ ವಿಭಾಗ (₹850 ಕೋಟಿ), ವಸತಿ ವಿಭಾಗ (₹1,451 ಕೋಟಿ), ಹಣಕಾಸು ವಿಭಾಗ (₹2,932 ಕೋಟಿ), ನಿರ್ಮಾಣ ವಿಭಾಗ (₹2 ಕೋಟಿ) ಮತ್ತು ಸಾಮಾಜಿಕ ವಿಭಾಗ (₹1,267 ಕೋಟಿ), ಮತ್ತಿತರ ವಿಭಾಗಗಳು (₹88 ಕೋಟಿ) ಶಾಸನಬದ್ಧ ನಿಗಮಗಳಲ್ಲಿ ಮಾಡಲಾಗಿದೆ. ಹೂಡಿಕೆಯು ಸತತ ನಷ್ಟದಲ್ಲಿರುವ ಈ ಕೆಳಗಿನ ಕಂಪೆನಿಗಳ/ನಿಗಮಗಳಲ್ಲಿ ₹24,474 ಕೋಟಿಗಳನ್ನು (ಶೇಕಡ 39) ಒಳಗೊಂಡಿದ್ದು, ಇವುಗಳಲ್ಲಿ ಹೂಡಿಕೆಯು ಗಣನೀಯ ಪ್ರಮಾಣದಲ್ಲಿದೆ (**ಕೋಷ್ಟಕ 1.30**).

**ಕೋಷ್ಟಕ 1.30: ನಷ್ಟದಲ್ಲಿರುವ ಕಂಪನಿಗಳು/ನಿಗಮಗಳಲ್ಲಿನ ಹೂಡಿಕೆಗಳು**

(ಕೋಟಿ ರೂಪಾಯಿಗಳಲ್ಲಿ)

| ಕಂಪನಿ/ನಿಗಮ | 2016–17ರವರೆಗಿನ ಹೂಡಿಕೆ | ಸಂಚಿತ ನಷ್ಟ | ಇಲ್ಲಿಯವರೆಗೆ ಸಂಚಿತ ನಷ್ಟ |
|---|---|---|---|
| ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ | 266.85 | 562.17 | 2014–15 |
| ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ | 183.43 | 432.74 | 2014–15 |
| ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ | 23,745.34 | 564.64 | 2015–16 |
| ಮೈಸೂರು ಸಕ್ಕರೆ ಕಂಪೆನಿ ನಿಯಮಿತ | 278.78 | 289.42 | 2012–13 |
| ಒಟ್ಟು | **24,474.40** | **1,848.97** | |

*ಆಕರ:ಹಣಕಾಸು ಲೆಕ್ಕಗಳು.*

2016–17ರ ವರ್ಷದಲ್ಲಿ ಈ ಕಂಪನಿಗಳಲ್ಲಿ ಸರ್ಕಾರವು ₹123 ಕೋಟಿಗಳನ್ನು ಹೂಡಿದ್ದು ಸಂಚಿತ ನಷ್ಟವು ಕಳೆದ ವರ್ಷಕ್ಕಿಂತ ₹45 ಕೋಟಿಗಳಷ್ಟು ಇಳಿದಿದೆ. 2016–17ರಲ್ಲಿ ಸರ್ಕಾರವು ₹1,558.57 ಕೋಟಿಯನ್ನು ಶಾಸನಬದ್ಧ ನಿಗಮಗಳಲ್ಲಿ (₹75.00 ಕೋಟಿ) ಸರ್ಕಾರಿ ಕಂಪೆನಿಗಳಲ್ಲಿ (ಕಾರ್ಯನಿರತ) (₹1,466.52 ಕೋಟಿ) ಮತ್ತು ಸಹಕಾರಿ ಸಂಸ್ಥೆಗಳಲ್ಲಿ (₹17.05 ಕೋಟಿ) ಹೂಡಿದೆ.

### 1.8.3 ಸಾರ್ವಜನಿಕ ಖಾಸಗಿ ಪಾಲುದಾರಿಕೆ (ಪಿಪಿಪಿ) ಯೋಜನೆಗಳಲ್ಲಿ ಹೂಡಿಕೆಗಳು

ಯೋಜನೆಗಳಿಗೆ ಹಣ ಒದಗಿಸಲು ಸಾರ್ವಜನಿಕ ಖಾಸಗಿ ಪಾಲುದಾರಿಕೆ (ಪಿಪಿಪಿ) ಮಾದರಿಯ ಆಸರೆಯನ್ನು ಅದು ಸಾರ್ವಜನಿಕ ಅಗತ್ಯಗಳಿಗೆ ಅಮೂಲ್ಯವಾದ ವಿತ್ತೀಯ ಅವಕಾಶವನ್ನು, ಅಂತಹ ಅವಕಾಶಗಳು ಲಭ್ಯವಿಲ್ಲದ ಕ್ಷೇತ್ರಗಳಲ್ಲಿ ಒದಗಿಸುವುದರಿಂದ ಅಂತಹ ಮಾದರಿಯನ್ನು ಅನುಸರಿಸುವುದನ್ನು ಉತ್ತೇಜಿಸಲಾಗುತ್ತಿದೆ. ಪಿಪಿಪಿ ಯೋಜನೆಯು ಸಾರಿಗೆ, ಕೃಷಿ ಮೂಲ ಸೌಕರ್ಯ, ಶಿಕ್ಷಣ, ಆರೋಗ್ಯ, ಪ್ರವಾಸೋದ್ಯಮ, ನಗರ ಹಾಗೂ ಮುನಿಸಿಪಲ್ ಮೂಲ ಸೌಕರ್ಯ ಮತ್ತು ಇಂಧನ ವಿಭಾಗಗಳಲ್ಲಿದೆ. ರಾಜ್ಯದಲ್ಲಿ ವಾಯು ರೈಲು ಹಾಗೂ ಕಡಲ ತಡಿಯ ಸಂಪರ್ಕ ಅಭಿವೃದ್ಧಿ ಮತ್ತು ಪಿಪಿಪಿಯ ಮೂಲಕ ಸಾರ್ವಜನಿಕ ಮೂಲಸೌಕರ್ಯದಲ್ಲಿ ಹೆಚ್ಚಿನ ಖಾಸಗಿ ಹೂಡಿಕೆಗಳನ್ನು ಉತ್ತೇಜಿಸಲು ಮೂಲ ಸೌಕರ್ಯ ಅಭಿವೃದ್ಧಿ ಇಲಾಖೆಯನ್ನು ಸ್ಥಾಪಿಸಲಾಗಿದೆ.

31 ಮಾರ್ಚ್ 2017ರಲ್ಲಿ ಇದ್ದಂತೆ ಪೂರ್ಣಗೊಂಡಿರುವ ಅನುಷ್ಠಾನ/ನಿರ್ಮಾಣ ಮತ್ತು ಕಾರ್ಯಾಚರಣೆಯಲ್ಲಿರುವ/ಯೋಜನೆಯ/ಸಿದ್ಧತೆಯ ಹಾದಿಯಲ್ಲಿರುವ ಪಿಪಿಪಿ ಯೋಜನೆಗಳ ಅನುಷ್ಠಾನ ಮತ್ತು ಕಾರ್ಯ ನಿರ್ವಹಣೆಯ ಸಾರಾಂಶವನ್ನು **ಕೋಷ್ಟಕ 1.31**ರಲ್ಲಿ ನೀಡಿದೆ.

**ಕೋಷ್ಟಕ 1.31: ರಾಜ್ಯದಲ್ಲಿನ ಪಿಪಿಪಿ ಯೋಜನೆಗಳ ವಿಭಾಗ ಮತ್ತು ಹಂತವಾರು ಸ್ಥಿತಿ**

(ಕೋಟಿ ರೂಪಾಯಿಗಳಲ್ಲಿ)

| ವಿಭಾಗ | ಪೂರ್ಣಗೊಂಡಿರುವುದು | | ಅನುಷ್ಠಾನ/ ನಿರ್ಮಾಣದಲ್ಲಿರುವುದು | | ಯೋಜನೆಯ ಸಿದ್ಧತೆಯ ಹಂತದಲ್ಲಿರುವುದು | | ಒಟ್ಟು ಮೊತ್ತ | |
|---|---|---|---|---|---|---|---|---|
| | ಸಂಖ್ಯೆ | ಮೌಲ್ಯ | ಸಂಖ್ಯೆ | ಮೌಲ್ಯ | ಸಂಖ್ಯೆ | ಮೌಲ್ಯ | ಸಂಖ್ಯೆ | ಮೌಲ್ಯ |
| ಕೃಷಿ ಮೂಲ ಸೌಕರ್ಯ | – | – | 1 | 105.90 | 12 | 5,439.00 | 13 | 5,544.90 |
| ಶಿಕ್ಷಣ | – | – | – | – | – | – | – | – |
| ಇಂಧನ | – | – | – | – | 1 | 20.00 | 1 | 20.00 |
| ಆರೋಗ್ಯ ರಕ್ಷಣೆ | – | – | – | – | 1 | 0.00 | 1 | 0.00 |
| ಕೈಗಾರಿಕಾ ಮೂಲ ಸೌಕರ್ಯ (ಐಟಿ ಪಾರ್ಕ್‌ಗಳು ಮತ್ತು ದೂರಸಂಪರ್ಕ ಸೇರಿ) | – | – | – | – | 10 | 61,851.50 | 10 | 61,851.50 |
| ರಸ್ತೆಗಳು ಮತ್ತು ಸೇತುವೆಗಳು | 6 | 983.34 | 3 | 1,085.35 | 28 | 41,438.00 | 37 | 43,506.69 |
| ಪ್ರವಾಸೋದ್ಯಮ | 1 | 32.00 | 1 | 108.00 | 20 | 1,982.00 | 22 | 2,122.00 |
| ಸಾರಿಗೆ ಮತ್ತು ಸಾಗಣೆ ರಸ್ತೆ ಮತ್ತು ಸೇತುವೆಗಳ ಹೊರತು | 2 | 2,763.29 | 3 | 60.82 | 19 | 23,483.00 | 24 | 26,307.11 |
| ನಗರ ಮತ್ತು ಪುರಸಭಾ ಮೂಲ ಸೌಕರ್ಯ | 7 | 325.00 | 1 | 40.00 | 54 | 34,284.00 | 62 | 34,649.00 |
| **ಒಟ್ಟು** | **16** | **4,103.63** | **9** | **1,400.07** | **145** | **1,68,497.50** | **170** | **1,74,001.20** |

*ಆಕರ: ಮೂಲಭೂತ ಸೌಕರ್ಯ ಅಭಿವೃದ್ಧಿ ಇಲಾಖೆಯಲ್ಲಿನ ಪಿಪಿಪಿ ಕೋಶ.*

ಮೇಲಿನ ಕೋಷ್ಟಕದಲ್ಲಿ ಕಂಡುಬಂದಂತೆ 31ನೇ ಮಾರ್ಚ್ 2017ರಲ್ಲಿದ್ದಂತೆ, ₹4,103.63 ಕೋಟಿಗಳ ಮೊತ್ತದ 16 ಯೋಜನೆಗಳು ಪೂರ್ಣಗೊಂಡಿದ್ದು ₹1,400 ಕೋಟಿಗಳ ಮೊತ್ತದ 9 ಯೋಜನೆಗಳು ಅನುಷ್ಠಾನದಲ್ಲಿದ್ದು ₹1,68,498 ಕೋಟಿಗಳ ಮೊತ್ತದ 145 ಯೋಜನೆಗಳು ಯೋಜನಾ ಸಿದ್ಧತೆಯ ಹಂತದಲ್ಲಿವೆ.

## 1.8.4 ಇಲಾಖಾ ಉದ್ದಿಮೆಗಳು

ಕೆಲವು ಸರ್ಕಾರಿ ಇಲಾಖೆಗಳ 19 ಉದ್ದಿಮೆಗಳು ಅರೆವಾಣಿಜ್ಯ ಸ್ವರೂಪದ ಚಟುವಟಿಕೆಗಳನ್ನು ನಿರ್ವಹಿಸುತ್ತವೆ. ಆರು ಉದ್ದಿಮೆಗಳು ಇತ್ತೀಚಿಗೆ ನೀಡಿದ ಲೆಕ್ಕಗಳ ಪ್ರಕಾರ ಅವುಗಳಲ್ಲಿ ರಾಜ್ಯ ಸರ್ಕಾರದ ಹೂಡಿಕೆಯು ₹9.64 ಕೋಟಿಗಳಷ್ಟಿದೆ. ಈ ಉದ್ದಿಮೆಗಳ ಒಟ್ಟು ನಷ್ಟವು ₹6.09 ಕೋಟಿಗಳಷ್ಟಿದೆ. ವಿವರಗಳನ್ನು **ಅನುಬಂಧ 1.6**ರಲ್ಲಿ ನೀಡಲಾಗಿದೆ.

ಈ ಉದ್ದಿಮೆಗಳು ಸತತವಾಗಿ ಮುಂದುವರೆದ ನಷ್ಟದಲ್ಲಿರುವ ಕಾರಣದಿಂದ ಸರ್ಕಾರವು ಅವುಗಳ ಕಾರ್ಯವೈಖರಿಯನ್ನು ವಿಶ್ಲೇಷಿಸಿ ಅವುಗಳ ನಷ್ಟವನ್ನು ಅಲ್ಪಾವಧಿಯಲ್ಲಿ ಅಳಿಸಿ ಅವುಗಳನ್ನು ಮಧ್ಯಮಾವಧಿಯಿಂದ ದೀರ್ಘಾವಧಿಯಲ್ಲಿ ಸ್ವಸಮರ್ಥವಾಗುವಂತೆ ಮಾಡಬೇಕಾಗಿದೆ.

ರಾಜ್ಯ ಸರ್ಕಾರವು, ಈ ಮೇಲೆ ಹೇಳಿದ ಉದ್ದಿಮೆಗಳ ಕಾರ್ಯವೈಖರಿಯ ಸಮೀಕ್ಷೆಯನ್ನು ನಡೆಸಲು ಇಲಾಖೆಗಳಿಗೆ ತಿಳಿಸಿ ಫಲಗಳನ್ನು ಆರ್ಥಿಕ ಇಲಾಖೆ ಮತ್ತು ಸಾರ್ವಜನಿಕ ಲೆಕ್ಕ ಸಮಿತಿಗೆ ತಿಳಿಸುವಂತೆ ಹೇಳಿರುವುದಾಗಿ ಉತ್ತರಿಸಿದೆ (ಡಿಸೆಂಬರ್ 2013). ಸಮೀಕ್ಷೆಯ ಫಲಿತಾಂಶವು ಇನ್ನೂ ತಿಳಿದಿಲ್ಲ.

## 1.8.5 ರಾಜ್ಯ ಸರ್ಕಾರ ನೀಡಿದ ಸಾಲಗಳು ಮತ್ತು ಮುಂಗಡಗಳು

ಕಂಪೆನಿಗಳು, ನಿಗಮಗಳು ಮತ್ತು ಸಹಕಾರಿ ಸಂಸ್ಥೆಗಳಲ್ಲಿ ಹೂಡಿಕೆಯೊಂದಿಗೆ ಸರ್ಕಾರ ಅನೇಕ ಸಂಸ್ಥೆಗಳಿಗೆ ಸಾಲ ಮತ್ತು ಮುಂಗಡವನ್ನು ನೀಡುತ್ತದೆ. **ಕೋಷ್ಟಕ 1.32**ರಲ್ಲಿ, 31 ಮಾರ್ಚ್ 2017ರ ಅಂತ್ಯಕ್ಕೆ ಕಳೆದ ಐದು ವರ್ಷಗಳಲ್ಲಿ ಬಾಕಿ ಇರುವ ಸಾಲ ಮತ್ತು ಮುಂಗಡಗಳ ಸ್ಥಿತಿಯನ್ನು ಮತ್ತು ಬಡ್ಡಿ ಸ್ವೀಕೃತಿಗಳಿಗೆ ಸಂವಾದಿಯಾಗಿ ಬಡ್ಡಿ ಪಾವತಿಗಳನ್ನು ನೀಡಲಾಗಿದೆ.

**ಕೋಷ್ಟಕ 1.32: ರಾಜ್ಯ ಸರ್ಕಾರ ನೀಡಿದ ಸಾಲಗಳ ಮೇಲೆ ಸ್ವೀಕೃತಿಯಾದ ಸರಾಸರಿ ಬಡ್ಡಿ**

(ಕೋಟಿ ರೂಪಾಯಿಗಳಲ್ಲಿ)

| | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ಆರಂಭಿಕ ಶಿಲ್ಕು | 11,198 | 12,142 | 12,724* | 13,216 | 13,813 |
| ಪ್ರಸಕ್ತ ವರ್ಷದಲ್ಲಿ ನೀಡಿದ ಮುಂಗಡ | 1,102 | 695 | 576 | 657 | 1,934 |
| ಪ್ರಸಕ್ತ ವರ್ಷದ ಮರುಪಾವತಿ | 158 | 109 | 84 | 60 | 100 |
| ಅಂತಿಮ ಶಿಲ್ಕು | 12,142 | 12,729 | 13,216 | 13,813 | 15,648 |
| ನಿವ್ವಳ ಸೇರ್ಪಡೆ | 944 | 586 | 492 | 597 | 1,835 |
| ಬಡ್ಡಿ ಸ್ವೀಕೃತಿಗಳು | 247 | 235 | 127 | 264 | 145 |
| ಬಾಕಿ ಇರುವ ಸಾಲ ಮತ್ತು ಮುಂಗಡಗಳಿಗೆ ಬಡ್ಡಿ ಸ್ವೀಕೃತಿಯ ಶತಾಂಶ | 2.2 | 1.9 | 1.0 | 1.9 | 0.9 |
| ರಾಜ್ಯ ಸರ್ಕಾರದ ಬಾಕಿ ಇರುವ ವಿತ್ತ ಜವಾಬ್ದಾರಿಗಳಿಗೆ ಬಡ್ಡಿ ಪಾವತಿಯ ಶತಾಂಶ | 6.2 | 5.8 | 6.0 | 6.2 | 5.8 |
| ಬಡ್ಡಿ ಪಾವತಿ ಮತ್ತು ಬಡ್ಡಿ ಸ್ವೀಕೃತಿಗಳ ವ್ಯತ್ಯಾಸ ಶತಾಂಶ | –4.0 | –3.9 | –5.0 | –4.3 | –4.9 |

*ಆಕರ: ಹಣಕಾಸು ಲೆಕ್ಕಗಳು.*

**2014–15ರಲ್ಲಿ ಎಮ್‌ಎಸ್‌ಐಎಲ್‌ನಿಂದ ಬಾಕಿ ಇದ್ದ ₹5ಕೋಟಿ ಸಾಲವನ್ನು ಷೇರು ಬಂಡವಾಳಕ್ಕೆ ಪರಿವರ್ತಿಸಿದ್ದರಿಂದ ವ್ಯತ್ಯಾಸವಾಗಿದೆ.*

31 ಮಾರ್ಚ್ 2017ರ ಅಂತ್ಯಕ್ಕೆ ಬಾಕಿ ಇರುವ ಸಾಲಗಳ ಮೊತ್ತವು ₹15,648 ಕೋಟಿಯಷ್ಟಿತ್ತು. 2012–13ರಿಂದ 2016–17ರ ಅವಧಿಯಲ್ಲಿ ಸರ್ಕಾರದ ಸಾಲಗಳ ಮೇಲಿನ ಬಡ್ಡಿಯ ಹರಹು ಋಣಾತ್ಮಕವಾಗಿದ್ದು, ಇದು ರಾಜ್ಯ ಸರ್ಕಾರ ಪಡೆದ ಸಾಲಗಳು, ಸಾಲಗಳ ನೀಡಿಕೆಗಿಂತ ದುಬಾರಿಯಾಗಿರುವುದನ್ನು ಸೂಚಿಸುತ್ತದೆ.

2016–17ರಲ್ಲಿ ನೀಡಿದ ಸಾಲಗಳ ಮೊತ್ತವು ₹1,934 ಕೋಟಿ. ಈ ವರ್ಷದಲ್ಲಿ ಸಾಲಗಳ ಮರುಪಾವತಿಯ ಮೊತ್ತವು ₹100 ಕೋಟಿಯಷ್ಟಿದೆ.

ಮಹಾಲೇಖಾಪಾಲರು (ಲೆ ಮತ್ತು ಹ) ಅವರ ಕಛೇರಿಯಲ್ಲಿ ನಿರ್ವಹಿಸಲಾಗಿರುವ ಸಾಲ ಮರುಪಾವತಿಗಳ ವಿವರವಾದ ಲೆಕ್ಕಗಳು, 31 ಮಾರ್ಚ್ 2017ರ ಅಂತ್ಯಕ್ಕೆ 21 ಸಂಸ್ಥೆಗಳಿಂದ ₹6,973 ಕೋಟಿ (ಅಸಲು: ₹4,069 ಕೋಟಿ ಮತ್ತು ಬಡ್ಡಿ: ₹2,904 ಕೋಟಿ) ಅವಧಿ ಮೀರಿದ ಸಾಲವಾಗಿ ಉಳಿದಿರುವುದನ್ನು ಸೂಚಿಸುತ್ತದೆ (**ಅನುಬಂಧ 1.7**).

ಸಾಲಗಳ ವಿವರವಾದ ಲೆಕ್ಕಗಳನ್ನು ನಿರ್ವಹಿಸುವ ರಾಜ್ಯದ 842 ಸಂಸ್ಥೆಗಳ ಇಲಾಖಾ ಮುಖ್ಯಸ್ಥರು/ಪ್ರಧಾನ ನಿಯಂತ್ರಣಾಧಿಕಾರಿಗಳಲ್ಲಿ ಕೇವಲ 16 ಅಧಿಕಾರಿಗಳು ಮಾತ್ರ ಅಗತ್ಯವಾದ ಮಾಹಿತಿಯನ್ನು ಮಹಾಲೇಖಾಪಾಲರಿಗೆ ಒದಗಿಸಿರುವುದರಿಂದ ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ–7ರಲ್ಲಿ ನೀಡಿರುವ ಅವಧಿ ಮೀರಿದ ಅಸಲು ಮತ್ತು ಬಡ್ಡಿಗಳ ಮಾಹಿತಿಯು ಅಪೂರ್ಣವಾಗಿದೆ. ಭಾರತೀಯ ಲೆಕ್ಕವಿಧಾನ ಪ್ರಮಾಣಕ–3 (ಐಜಿಎಎಸ್)ರ ಅನ್ವಯ ಪ್ರತಿ ಸಾಲವನ್ನು ನಿಯಂತ್ರಿಸುವ ನಿರ್ದಿಷ್ಟ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸದೆ ಮಂಜೂರು ಮಾಡಲಾದ ಸಾಲಗಳ ವಿವರಗಳನ್ನು ಪ್ರಕಟಿಸುವುದು ಅಗತ್ಯವಾಗಿದೆ. 2016–17ರಲ್ಲಿ ರಾಜ್ಯಸರ್ಕಾರವು ಮಂಜೂರು ಮಾಡಿದ ₹1,934.38 ಕೋಟಿಗಳ ಮೊತ್ತದ 53 ಸಾಲ ಪ್ರಕರಣಗಳಲ್ಲಿ ₹1,777.42 ಕೋಟಿಗಳ 29 ಸಾಲಗಳನ್ನು ಯಾವುದೇ ನಿರ್ದಿಷ್ಟ ನಿಬಂಧನೆ ಮತ್ತು ಷರತ್ತುಗಳನ್ನು ವಿಧಿಸದೆ ಮಂಜೂರು ಮಾಡಲಾಗಿದೆ. ಇದರ ವಿವರಗಳು ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ–18ಕ್ಕೆ ನೀಡಿರುವ ಹೆಚ್ಚುವರಿ ಪ್ರಕಟಗಳಲ್ಲಿ ಲಭ್ಯವಿದೆ.

ಆರ್ಥಿಕ ಇಲಾಖೆಯು ಸಾಲ ಮೊತ್ತಗಳನ್ನು ಬಿಡುಗಡೆ ಮಾಡುವ ಸರ್ಕಾರಿ ಆದೇಶಗಳಲ್ಲಿ ಆರ್ಥಿಕ ಇಲಾಖೆ ನವೆಂಬರ್ 2013ರಲ್ಲಿ ಜಾರಿ ಮಾಡಿರುವ ಸಾಮಾನ್ಯ ಸಾಲಗಳ ಸರ್ಕಾರಿ ಆದೇಶಗಳಲ್ಲಿನ ಸೂಚನೆಗಳು ನಿರೂಪಿತವಾಗಿರುವುದನ್ನು ನಿಖರವಾಗಿ ಪರಿಶೀಲಿಸಲು ಖಜಾನೆ ಇಲಾಖೆಗೆ ನಿರ್ದೇಶನ

ನೀಡುವುದಾಗಿ ಉತ್ತರಿಸಿದೆ (ನವೆಂಬರ್ 2014). ಸೂಚನೆಗಳನ್ನು ನೀಡಿದ ನಂತರವೂ ಅನುಪಾಲನೆಯು ಸಮರ್ಪಕವಾಗಿಲ್ಲದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

### 1.8.6 ನಗದು ಶಿಲ್ಕುಗಳು ಮತ್ತು ನಗದು ಶಿಲ್ಕುಗಳ ಹೂಡಿಕೆ

2016–17ನೇ ವರ್ಷದಲ್ಲಿನ ರಾಜ್ಯಸರ್ಕಾರದ ನಗದು ಶಿಲ್ಕುಗಳು ಮತ್ತು ಅವುಗಳಿಂದ ಮಾಡಿದ ಹೂಡಿಕೆಗಳ ವಿವರಗಳನ್ನು **ಕೋಷ್ಟಕ 1.33**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 1.33: ನಗದು ಶಿಲ್ಕುಗಳು ಮತ್ತು ಅವುಗಳ ಹೂಡಿಕೆಗಳು**

**(ಕೋಟಿ ರೂಪಾಯಿಗಳಲ್ಲಿ)**

| | ಆರಂಭಿಕ ಶಿಲ್ಕು 01–04–2016 ರಲ್ಲಿದ್ದಂತೆ | ಅಂತಿಮ ಶಿಲ್ಕು 31–03–2017 ರಲ್ಲಿದ್ದಂತೆ | ಹೆಚ್ಚಳ(+)/ ಕಡಿಮೆ(–) |
|---|---|---|---|
| ಅ) ಸಾಮಾನ್ಯ ನಗದು ಶಿಲ್ಕು | | | |
| ಖಜಾನೆಗಳಲ್ಲಿನ ನಗದು | – | – | – |
| ಭಾರತೀಯ ರಿಜರ್ವ್ ಬ್ಯಾಂಕಿನಲ್ಲಿನ ಠೇವಣಿ | (–) 74.90 | 100.05 | 174.95 |
| ಇತರ ಬ್ಯಾಂಕುಗಳಲ್ಲಿನ ಠೇವಣಿ | – | – | – |
| ರವಾನೆಯಲ್ಲಿರುವ ಇರಸಾಲುಗಳು–ಸ್ಥಳೀಯ | 0.01 | 0.01 | – |
| ಒಟ್ಟು | (–) 74.89 | 100.06 | 174.95 |
| ನಗದು ಶಿಲ್ಕು ಹೂಡಿಕೆ ಲೆಕ್ಕದಲ್ಲಿನ ಹೂಡಿಕೆಗಳು | 16,917.13 | 23,977.48 | 7,060.35 |
| ಒಟ್ಟು (ಅ) | **16,842.24** | **24,077.54** | **7,235.30** |
| ಆ) ಇತರೆ ನಗದು ಶಿಲ್ಕುಗಳು ಮತ್ತು ಹೂಡಿಕೆಗಳು | | | |
| ಇಲಾಖಾ ಅಧಿಕಾರಿಗಳ ಬಳಿ ಇರುವ ನಗದು (ಲೋಕೋಪಯೋಗಿ, ಅರಣ್ಯ ಇಲಾಖೆ ಅಧಿಕಾರಿಗಳು, ಜಿಲ್ಲಾಧಿಕಾರಿಗಳು) | 2.09 | 2.09 | – |
| ಸಾದಿಲ್ವಾರು ವೆಚ್ಚಗಳಿಗಾಗಿ ಇಲಾಖಾ ಅಧಿಕಾರಿಗಳ ಬಳಿ ಇರುವ ಖಾಯಂ ಮುಂಗಡಗಳು | 1.69 | 1.74 | 0.05 |
| ಮೀಸಲಿಟ್ಟ ನಿಧಿಗಳ ಹೂಡಿಕೆಗಳು | 10,272.21 | 10,272.21 | – |
| ಒಟ್ಟು (ಆ) | **10,275.99** | **10,276.04** | **0.05** |
| ಒಟ್ಟು ಮೊತ್ತ (ಅ+ಆ) | **27,118.23** | **34,353.58** | **7,235.35** |

*ಆಕರ: ಹಣಕಾಸು ಲೆಕ್ಕಗಳು.*

ಸರ್ಕಾರದಿಂದ ಬರಬೇಕಾದ ಕ್ಲೈಮುಗಳನ್ನು ಬಿಲ್ಲುಗಳನ್ನು ಖಜಾನೆಗಳಿಗೆ ಸಲ್ಲಿಸುವ ಮೂಲಕ ಇತ್ಯರ್ಥಗೊಳಿಸಲಾಗುತ್ತದೆ. ಸಂಚಿತ ನಿಧಿಗೆ ಖರ್ಚು ಹಾಕಿ ಕ್ಲೇಮುದಾರರಿಗೆ ಚೆಕ್ ಮೂಲಕ ಪಾವತಿ ಮಾಡಲಾಗುತ್ತದೆ. ಇಲ್ಲಿಗೆ ಕ್ಲೇಮುಗಳಿಗೆ ಸಂಬಂಧಿಸಿದಂತೆ ಸರ್ಕಾರದ ಹೊಣೆ ಮುಗಿಯುತ್ತದೆ. ಪ್ರತಿ ಚೆಕ್ಕಿನ ಮೊತ್ತವನ್ನೂ ಪ್ರಧಾನ ಲೆಕ್ಕಶೀರ್ಷಿಕೆ 8670–ಚೆಕ್ಕುಗಳು ಮತ್ತು ಬಿಲ್ಲುಗಳಿಗೆ ಜಮಾ ತೋರಿಸಿ, ಆ ಚೆಕ್ಕುಗಳು ಏಜೆನ್ಸಿ ಬ್ಯಾಂಕುಗಳಲ್ಲಿ ನಗದೀಕರಣವಾದ ನಂತರ ಈ ಜಮಾವನ್ನು ಕಳೆಯಲಾಗುತ್ತದೆ. ಹೀಗಾಗಿ ಈ ಶೀರ್ಷಿಕೆಯಲ್ಲಿನ ಜಮೆಗಳಲ್ಲಿ ಶಿಲ್ಕು ಉಳಿದಿದ್ದರೆ, ಅದು ನಗದೀಕರಣವಾಗದೆ ಉಳಿದ ಚೆಕ್ಕುಗಳ ಮೊತ್ತವಾಗಿರುತ್ತದೆ. ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 75(1)ರ ಅನ್ವಯ ಖಜಾನಾಧಿಕಾರಿಗಳು ನಮೂದಿಸಿದ ದಿನಾಂಕದಿಂದ 12 ತಿಂಗಳು ಮೀರಿ ನಗದೀಕರಿಸದೆ ಉಳಿದ ಚೆಕ್ಕುಗಳ ಮೊತ್ತಕ್ಕೆ ಪ್ರತಿ ವರ್ಷ ಮೇ 15ರಂದು, ತಿದ್ದುಪಡಿ ದಾಖಲೆಯನ್ನು ತಯಾರಿಸಿ ಮಹಾಲೇಖಪಾಲರಿಗೆ ಕಳುಹಿಸಿಕೊಡಬೇಕು. ಈ ಸೂಚನೆಗಳನ್ನು ಖಜಾನೆ ಅಧಿಕಾರಿಗಳು ಅನುಪಾಲನೆ ಮಾಡದಿರುವುದರಿಂದ ಪ್ರಧಾನ ಶೀರ್ಷಿಕೆ 8670ರಡಿ ಉಳಿದಿದ್ದ ಜಮೆ ಶಿಲ್ಕು 2015–16ರಲ್ಲಿದ್ದ ₹13,752 ಕೋಟಿಗಳಿಂದ 2016–17ರಲ್ಲಿ ₹14,156 ಕೋಟಿಗಳಿಗೆ ಏರಿದ್ದು, ಇದು ಜನವರಿಯಿಂದ ಮಾರ್ಚ್ 2017ರವರೆಗೆ ನೀಡಿದ ನಗದೀಕರಣವಾಗದ ಚೆಕ್ಕುಗಳನ್ನು ಒಳಗೊಂಡಿದೆ.

ಲೆಕ್ಕ ಪರಿಶೋಧನೆಯು 2016–17ರ ಲೆಕ್ಕಗಳಲ್ಲಿನ ನಿವ್ವಳ ಜಮಾ ₹404 ಕೋಟಿಗಳಷ್ಟಿರುವುದನ್ನು ಗಮನಿಸಿದೆ. ದತ್ತಾಂಶವನ್ನು ಪರಿಶೀಲಿಸಿ ಇವುಗಳನ್ನು ತೀರುವಳಿ ಮಾಡಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ.

ವರ್ಷದ ಅಂತ್ಯಕ್ಕೆ ರಾಜ್ಯದ ನಗದು ಶಿಲ್ಕು ₹34,354 ಕೋಟಿಗಳಷ್ಟಿದ್ದು, ಕಳೆದ ವರ್ಷಕ್ಕಿಂತಲೂ ನಗದು ಶಿಲ್ಕಿನಲ್ಲಿ ಶೇಕಡ 27ರಷ್ಟು ಹೆಚ್ಚಳವಾಗಿದೆ. ಈ ಅಧಿಕ ನಗದಿಗೆ ಕಾರಣವು ಭಾರತ ಸರ್ಕಾರದಿಂದ 2016–17ರಲ್ಲಿ ರಾಜ್ಯ ಸರ್ಕಾರಕ್ಕೆ ಬಿಡುಗಡೆಯಾದ ಮೊತ್ತಗಳಿಂದಾಗಿದ್ದು, ಇವು ಬಳಕೆಯಾಗದೆ ಉಳಿದಿದ್ದು, ಇದರಲ್ಲಿ ₹1,235.52 ಕೋಟಿ 2017–18ರ ಪೂರಕ ಅಂದಾಜುಗಳಲ್ಲಿ ಬಿಡುಗಡೆಯಾಗಿದೆ.

ಅಧಿಕ ನಗದು ಶಿಲ್ಕಿಗೆ 2016–17ರಲ್ಲಿ ಪಡೆದ ₹28,007 ಕೋಟಿಗಳ ಮೊತ್ತದ ಮಾರುಕಟ್ಟೆ ಸಾಲಗಳು ಮುಖ್ಯ ಕಾರಣವಾಗಿದೆ. ವರ್ಷಾಂತ್ಯಕ್ಕೆ ರಿಸರ್ವ್ ಬ್ಯಾಂಕಿನ ನಗದು ಶಿಲ್ಕು ಹೂಡಿಕೆ ಲೆಕ್ಕದಲ್ಲಿನ ಹೂಡಿಕೆಗಳಲ್ಲಿ ₹7,060 ಕೋಟಿಗಳಷ್ಟು ಏರಿಕೆಯಾಗಿದೆ.

ಅಧಿಕ ನಗದು ಶಿಲ್ಕನ್ನು ಭಾಗಶ: ಸರಾಸರಿ ವಾರ್ಷಿಕ ಶೇಕಡ 3.90 ಬಡ್ಡಿದರದ ಭಾರತೀಯ ರಿಸರ್ವ್ ಬ್ಯಾಂಕಿನ 14 ದಿನಗಳ ತಾತ್ಕಾಲಿಕ ಟ್ರೆಜರಿ ಬಿಲ್ಲುಗಳಲ್ಲಿ ಮತ್ತು ಭಾಗಶ: ಸರಾಸರಿ ವಾರ್ಷಿಕ ಶೇಕಡ 6.49ರ ಬಡ್ಡಿದರ ಭಾರತೀಯ ರಿಸರ್ವ್ ಬ್ಯಾಂಕಿನ 91 ದಿನಗಳ ತಾತ್ಕಾಲಿಕ ಟ್ರೆಜರಿ ಬಿಲ್ಲುಗಳಲ್ಲಿ ಹೂಡಿಕೆ ಮಾಡಲಾಗಿತ್ತು ಪ್ರತಿಯಾಗಿ ವಾರ್ಷಿಕ ಸರಾಸರಿ ಶೇಕಡ 7.34 ಬಡ್ಡಿದರದಲ್ಲಿ ಸಾಲಗಳನ್ನು ಮಾಡಲಾಗಿತ್ತು. 2016–17ರಲ್ಲಿ 91 ದಿನಗಳ ಟ್ರೆಜರಿ ಬಿಲ್ಲಿನಲ್ಲಿ ಹೂಡಿಕೆಯಿಂದ ಸ್ವೀಕೃತವಾದ ಬಡ್ಡಿಯು ₹704.65 ಕೋಟಿಗಳಷ್ಟಿತ್ತು.

## 1.9 ಆಸ್ತಿಗಳು ಮತ್ತು ಜವಾಬ್ದಾರಿಗಳು

### 1.9.1 ಆಸ್ತಿಗಳ ಮತ್ತು ಜವಾಬ್ದಾರಿಗಳ ವೃದ್ಧಿ ಮತ್ತು ಸಂಯೋಜನೆ

ಚಾಲ್ತಿಯಲ್ಲಿರುವ ಸರ್ಕಾರದ ಲೆಕ್ಕ ವಿಧಾನದಲ್ಲಿ ಸರ್ಕಾರವು ಹೊಂದಿರುವ ಜಮೀನು ಮತ್ತು ಕಟ್ಟಡಗಳು ಮುಂತಾದ ಸ್ಥಿರ ಆಸ್ತಿಗಳ ಸಮಗ್ರ ಲೆಕ್ಕವನ್ನು ಮಾಡಿರುವುದಿಲ್ಲ. ಆದರೂ, ಸರ್ಕಾರದ ಲೆಕ್ಕಗಳಲ್ಲಿ ಸರ್ಕಾರದ ಹಣಕಾಸಿನ ಜವಾಬ್ದಾರಿಗಳು ಮತ್ತು ಮಾಡಿದ ವೆಚ್ಚದಿಂದ ನಿರ್ಮಿಸಲಾದ ಆಸ್ತಿಗಳ ಲೆಕ್ಕಗಳನ್ನು ತೋರಿಸಲಾಗಿದೆ. 31 ಮಾರ್ಚ್ 2017ರಂದು, 31 ಮಾರ್ಚ್ 2016ಕ್ಕೆ ಹೋಲಿಸಿದಂತೆ, ಅಂತಹ ಜವಾಬ್ದಾರಿಗಳ ಮತ್ತು ಆಸ್ತಿಗಳ ಘೋಷ್ವಾರೆಯನ್ನು **ಅನುಬಂಧ 1.8**ರಲ್ಲಿ ನೀಡಲಾಗಿದೆ.

ಕರ್ನಾಟಕ ವಿತ್ತ ಜವಾಬ್ದಾರಿಗಳ ಕಾಯಿದೆ, 2002ರಲ್ಲಿ ಹೇಳಿರುವಂತೆ ಒಟ್ಟು ಜವಾಬ್ದಾರಿಗಳು ಅಂದರೆ ರಾಜ್ಯದ ಸಂಚಿತ ನಿಧಿಯಲ್ಲಿನ ಮತ್ತು ಸಾರ್ವಜನಿಕ ಲೆಕ್ಕದಲ್ಲಿನ ಜವಾಬ್ದಾರಿಗಳು ಆಗಿರುತ್ತದೆ. ಈ ಕಾಯಿದೆಯ ಅನುಚ್ಛೇದ 2(ಜಿ)ಗೆ ಫೆಬ್ರವರಿ 2014ರಲ್ಲಿ ತಂದಿರುವ ತಿದ್ದುಪಡಿಯಂತೆ ರಾಜ್ಯದ ಒಟ್ಟು ಜವಾಬ್ದಾರಿಗಳ ವ್ಯಾಪ್ತಿಯು ಸಾರ್ವಜನಿಕ ಉದ್ದಿಮೆಗಳು ಮತ್ತು ವಿಶೇಷ ಉದ್ದೇಶ ಸಾಧನಗಳು ಮತ್ತು ಇತರ ಸಮಾನ ಸಾಧನಗಳ ಸಾಲಗಳನ್ನೂ ಒಳಗೊಂಡು, ಈ ಸಾಲಗಳ ಅಸಲು ಮತ್ತು/ಅಥವಾ ಬಡ್ಡಿಗಳ ತೀರುವಳಿಯು ರಾಜ್ಯಸರ್ಕಾರದ ಆಯವ್ಯಯ ಅವಕಾಶದ ಮೂಲಕ ಮಾಡಬೇಕಾಗಿದೆ.

ಆಂತರಿಕ ಋಣವು ಮಾರುಕಟ್ಟೆ ಸಾಲಗಳು, ರಿಸರ್ವ್ ಬ್ಯಾಂಕಿಗೆ ನೀಡಿದ ವಿಶೇಷ ಭದ್ರತೆಗಳು ಮತ್ತಿತರ ಸಮಾಲೋಚಿತ ಸಾಲಗಳನ್ನು ಒಳಗೊಂಡಿದೆ. ಸಾರ್ವಜನಿಕ ಲೆಕ್ಕಗಳ ಜವಾಬ್ದಾರಿಗಳು, ಸಣ್ಣ ಉಳಿತಾಯ, ಭವಿಷ್ಯನಿಧಿ ಇತ್ಯಾದಿ, ಮೀಸಲು ನಿಧಿಗಳು ಮತ್ತು ಇತರ ಠೇವಣಿಗಳನ್ನು ಒಳಗೊಂಡಿದೆ. ಆದರೆ, ಹಣಕಾಸು ಲೆಕ್ಕಗಳಲ್ಲಿ ತೋರಿಸಿರುವ ರಾಜ್ಯದ ಜವಾಬ್ದಾರಿಗಳು ರಾಜ್ಯದ ನಿವೃತ್ತ/ನಿವೃತ್ತಿಯಾಗಲಿರುವ ಸರ್ಕಾರಿ ನೌಕರರಿಗೆ ನೀಡಬೇಕಾದ ನಿವೃತ್ತಿವೇತನ, ಇತರ ನಿವೃತ್ತಿ ಸೌಲಭ್ಯಗಳು/ಖಾತರಿಗಳು/ಸರ್ಕಾರ ನೀಡಿದ ಭರವಸೆ ಪತ್ರಗಳು, ಆಯವ್ಯಯ ಹೊರಗಿನ ಸಾಲಗಳು ಎಂದು ಕರೆಯಲ್ಪಡುವ ವಿಶೇಷ ಉದ್ದೇಶ ಸಾಧನಗಳ ಮೂಲಕ ಪಡೆದ ಸಾಲಗಳನ್ನು ಒಳಗೊಂಡಿಲ್ಲ.

ಆಸ್ತಿಗಳು, ಸಂಚಿತ ನಿಧಿಯಲ್ಲಿನ ಆಸ್ತಿಗಳು ಮತ್ತು ನಗದನ್ನು ಒಳಗೊಂಡಿದೆ. ಸಂಚಿತ ನಿಧಿಯಲ್ಲಿನ ಆಸ್ತಿಗಳು ಸ್ಥಿರ ಆಸ್ತಿಗಳ ಮೇಲಿನ ಬಂಡವಾಳ ವೆಚ್ಚ–ಕಂಪೆನಿಗಳು ಮತ್ತು ನಿಗಮಗಳ ಷೇರುಗಳ ಮೇಲಿನ ಹೂಡಿಕೆ ಮತ್ತು ಸಾಲಗಳು ಮತ್ತು ಮುಂಗಡಗಳನ್ನು ಒಳಗೊಂಡಿದ್ದು ಸಾಲಗಳು ಮತ್ತು ಮುಂಗಡಗಳು ವಿದ್ಯುಚ್ಛಕ್ತಿ ಯೋಜನೆಗಳಿಗೆ ನೀಡಿದ ಸಾಲಗಳು ಮತ್ತು ಇತರ ಅಭಿವೃದ್ಧಿ ಸಾಲಗಳನ್ನು ಒಳಗೊಂಡಿದೆ.

ಆಸ್ತಿಗಳು ಮತ್ತು ಜವಾಬ್ದಾರಿಗಳ ಸಂಯೋಜನೆಯ ವೃದ್ಧಿಯ ದರವನ್ನು **ಕೋಷ್ಟಕ 1.34**ರಲ್ಲಿ ಸಂಕ್ಷಿಪ್ತ ರೂಪದಲ್ಲಿ ನೀಡಲಾಗಿದೆ.

**ಕೋಷ್ಟಕ 1.34: ಆಸ್ತಿಗಳು ಮತ್ತು ಜವಾಬ್ದಾರಿಗಳ ಸಂಕ್ಷಿಪ್ತ ಸ್ಥಿತಿ**

(ಕೋಟಿ ರೂಪಾಯಿಗಳಲ್ಲಿ)

| ಜವಾಬ್ದಾರಿಗಳು | | | | ಆಸ್ತಿಗಳು | | | |
|---|---|---|---|---|---|---|---|
| | **2015–16** | **2016–17** | ***ಶೇಕಡ*** | | **2015–16** | **2016–17** | ***ಶೇಕಡ*** |
| ***ಸಂಚಿತ ನಿಧಿ*** | **1,22,547** | **1,46,283** | **19** | ***ಸಂಚಿತ ನಿಧಿ*** | **1,90,566** | **2,20,527** | **16** |
| *ಅ. ಆಂತರಿಕ ಋಣ* | 1,09,545 | 1,32,489 | 21 | ಬಂಡವಾಳ ವೆಚ್ಚ | 1,76,753 | 2,04,880 | 16 |
| ಆ. ಕೇಂದ್ರ ಸರ್ಕಾರದ ಸಾಲಗಳು ಮತ್ತು ಮುಂಗಡಗಳು | 13,002 | 13,794 | 6 | ಸಾಲಗಳು ಮತ್ತು ಮುಂಗಡಗಳು | 13,813 | 15,647 | 13 |
| **ಆಯವ್ಯಯದ ಹೊರಗಿನ ಸಾಲಗಳು** | **7,699** | **10,248** | **33** | **ನಗದು** | **27,118** | **34,354** | **27** |
| ***ಸಾರ್ವಜನಿಕ ಲೆಕ್ಕ*** | **53,076** | **64,788** | **22** | | | | |
| *ಅ. ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು ಇತ್ಯಾದಿ* | 22,262 | 24,920 | 12 | | | | |
| ಆ.ಮೀಸಲು ನಿಧಿಗಳು | 10,371 | 16,384 | 58 | | | | |
| ಇ.ಠೇವಣಿಗಳು | 20,443 | 23,484 | 15 | | | | |

*ಆಕರ: ಹಣಕಾಸು ಲೆಕ್ಕಗಳು.*

* *ಜವಾಬ್ದಾರಿಗಳು ನಿವ್ವಳ ಆಧಾರಿತವಾಗಿವೆ. ಇವು ಮೀಸಲಿಟ್ಟ ನಿಧಿಗಳಿಂದ ಮಾಡಿದ ₹10,272 ಕೋಟಿ (2015–16 ಮತ್ತು 2016–17) ಹೂಡಿಕೆಗಳನ್ನು ಒಳಗೊಂಡಿಲ್ಲ.*

ಆಸ್ತಿಗಳ ವೃದ್ಧಿಯ ದರವು 2015–16ರಲ್ಲಿ ಶೇಕಡ 13ರಿಂದ 2016–17ರಲ್ಲಿ ಶೇಕಡ 16ಕ್ಕೆ ಏರಿತು ಮತ್ತು ಆಯವ್ಯಯದ ಹೊರಗಿನ ಸಾಲವನ್ನು ಸೇರಿದಂತೆ ಜವಾಬ್ದಾರಿಗಳ ವೃದ್ಧಿಯ ದರವು 2015–16ರಲ್ಲಿ ಶೇಕಡ 16ರಷ್ಟಿದ್ದು, 2016–17ರಲ್ಲಿ ಶೇಕಡ 19ಕ್ಕೆ ಏರಿದೆ.

ಹಣಕಾಸು ಲೆಕ್ಕಗಳು, ಎಲ್ಐಸಿ, ಜಿಐಸಿ, ನಬಾರ್ಡ್, ಎನ್‌ಸಿಡಿಸಿ ಮುಂತಾದವುಗಳ ಲೆಕ್ಕಗಳಲ್ಲಿದ್ದ ₹558.50 ಕೋಟಿಗಳ ವ್ಯತ್ಯಾಸವನ್ನು ಪರಿಗಣಿಸಿದ ನಂತರ 2016–17ರ ಅಂತ್ಯಕ್ಕೆ ಬಾಕಿಯಿದ್ದ ₹1,32,489 ಕೋಟಿಗಳನ್ನು ಆಂತರಿಕ ಋಣವೆಂದು ತೋರಿಸಿದೆ. ಮುಂದುವರೆದು, ಭಾರತೀಯ ರಿಸರ್ವ್ ಬ್ಯಾಂಕು, 31 ಮಾರ್ಚ್ 2017ರಲ್ಲಿದ್ದಂತೆ ಕರ್ನಾಟಕ ಸರ್ಕಾರದ ಬಾಕಿ ಶಿಲ್ಕುಗಳ ತನ್ನ ತ್ರೈಮಾಸಿಕ ವಿವರಣಾ ಪಟ್ಟಿಯಲ್ಲಿ ಬಡ್ಡಿರಹಿತ ಮಾರುಕಟ್ಟೆ ಸಾಲಗಳ ಆಖೈರು ಶಿಲ್ಕನ್ನು ₹0.15 ಕೋಟಿಗಳೆಂದು ತೋರಿಸಿದೆ. ಆದರೆ, ಹಣಕಾಸು ಲೆಕ್ಕಗಳು, ₹0.70 ಕೋಟಿಗಳ ಮೊತ್ತವನ್ನು ತೋರಿಸಿದ್ದು ಇದು ಸಾಲಶಿಲ್ಕುಗಳ (ಬಂಡವಾಳ ಲೆಕ್ಕ) ಹೊಂದಾಣಿಕೆಯ ಅಗತ್ಯವನ್ನು ಸೂಚಿಸುತ್ತದೆ. ಅಲ್ಲದೆ, ರಾಜ್ಯದ ಹಣಕಾಸು ಲೆಕ್ಕಗಳಲ್ಲಿ ಕಾಣಿಸಿರುವ ಕೆಲವು ಸಾಲ ಶಿಲ್ಕುಗಳು ರಿಜರ್ವ್ ಬ್ಯಾಂಕ್ ಪುಸ್ತಕಗಳಲ್ಲಿ ಸೂಚಿಸಿಲ್ಲ (ನಾಲ್ಕು ಪ್ರಕರಣಗಳು). ಏಳು ಪ್ರಕರಣಗಳಲ್ಲಿ ಶಿಲ್ಕುಗಳಲ್ಲಿ ವ್ಯತ್ಯಾಸವಿದ್ದು ಹೊಂದಾಣಿಕೆ ಆಗಬೇಕಾಗಿದೆ. ನಾಲ್ಕು ಪ್ರಕರಣಗಳಲ್ಲಿ ಮಹಾಲೇಖಪಾಲರು (ಲೆ ಮತ್ತು ಹ) ಲೆಕ್ಕಪುಸ್ತಕಗಳಲ್ಲಿನ ಶಿಲ್ಕು ರಿಜರ್ವ್ ಬ್ಯಾಂಕಿನೊಂದಿಗೆ ಹೊಂದಾಣಿಕೆ ಆಗಿವೆ. ಅಲ್ಲದೆ, ರಿಜರ್ವ್ ಬ್ಯಾಂಕ್ ಹೇಳಿರುವಂತೆ ಒಳಶೀರ್ಷಿಕೆ 106 ಅಡಿ ಲೆಕ್ಕಹಾಕಲಾದ ಪರಿಹಾರ ಬಾಂಡುಗಳಿಗೆ ಸಂಬಂಧಿಸಿದಂತೆ ₹0.40 ಕೋಟಿಗಳ ಶಿಲ್ಕು ಮೊತ್ತವು ಇನ್ನೂ ತೀರಿಕೆಯಾಗದೆ ಉಳಿದಿದೆ. ಆದರೆ ಹಣಕಾಸು ಲೆಕ್ಕಗಳಲ್ಲಿ ಈ ಸಾಲಗಳು ಪ್ರತಿಬಿಂಬಿತವಾಗಿಲ್ಲ. 2016–17ರ ಅಂತ್ಯಕ್ಕೆ ಭಾರತ ಸರ್ಕಾರದಿಂದ ಪಡೆದ ಸಾಲಗಳ ಬಾಕಿ ಮೊತ್ತವು ₹13,794 ಕೋಟಿಗಳಷ್ಟಿದೆ.

ಹದಿಮೂರನೇ ಹಣಕಾಸು ಆಯೋಗದ ಶಿಫಾರಸ್ಸುಗಳ ಮುಂದುವರೆದ ಭಾಗವಾಗಿ ಭಾರತ ಸರ್ಕಾರದ ಹಣಕಾಸು ಸಚಿವಾಲಯವು ದಿನಾಂಕ 29ನೇ ಫೆಬ್ರವರಿ 2012ರ ಆದೇಶಗಳ ಸರಣಿಯಲ್ಲಿ ರಾಜ್ಯ ಸರ್ಕಾರಗಳಿಗೆ ವಿವಿಧ ಸಚಿವಾಲಯಗಳು ನೀಡಿದ್ದು (ಸಚಿವಾಲಯ ದಾಖಲೆಗಳ ಪ್ರಕಾರ ಬಾಕಿ ಇರುವ ಮೊತ್ತಗಳಿಗೆ ಮಿತಿಗೊಳಿಸಿ) 31ನೇ ಮಾರ್ಚ್ 2010ರಂದು ಬಾಕಿ ಇದ್ದ (ಹಣಕಾಸು ಸಚಿವಾಲಯ ತಾನೇ ನೀಡಿದ ಸಾಲಗಳನ್ನು ಬಿಟ್ಟು) ಕೇಂದ್ರ ಯೋಜನೆ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಸಂಬಂಧಿಸಿದ ಸಾಲಗಳನ್ನು ಮನ್ನಾ ಮಾಡಿದೆ. ಹಣಕಾಸು ಸಚಿವಾಲಯದ ಆದೇಶದ ಜಾರಿಯ ದಿನಾಂಕದಿಂದ (31 ಮಾರ್ಚ್ 2010) ರಾಜ್ಯ ಸರ್ಕಾರ ಮಾಡಿರುವ ಅಸಲು ಮತ್ತು ಬಡ್ಡಿಗಳ ಹೆಚ್ಚುವರಿ

ಪಾವತಿಗಳನ್ನು ಆರ್ಥಿಕ ಇಲಾಖೆಗೆ ಬಾಕಿ ಇರುವ ಮುಂದಿನ ಮರುಪಾವತಿಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲು ಅನುಮತಿ ನೀಡಿದೆ. ಕರ್ನಾಟಕ ಸರ್ಕಾರಕ್ಕೆ ಸಂಬಂಧಿಸಿದಂತೆ ಈ ಹೆಚ್ಚುವರಿ ಮರುಪಾವತಿಯು ₹68.66 ಕೋಟಿಗಳಿದ್ದು, ಇದರಲ್ಲಿ ಹಣಕಾಸು ಸಚಿವಾಲಯವು ರಾಜ್ಯ ಸರ್ಕಾರವು ಹಣಕಾಸು ಸಚಿವಾಲಯಕ್ಕೆ ಮಾರ್ಚ್ 2013ರ ಅಂತ್ಯಕ್ಕೆ ಪಾವತಿಸಬೇಕಾಗಿದ್ದ ₹22.79 ಕೋಟಿ (ಜೂನ್ 2013) ಮತ್ತು ಮಾರ್ಚ್ 2014ರ ಅಂತ್ಯಕ್ಕೆ ಪಾವತಿಸಬೇಕಿದ್ದ ₹5.48 ಕೋಟಿಗಳನ್ನು (ಮೇ 2014) ಹೊಂದಾಣಿಕೆ ಮಾಡಿದೆ. ಹೊಂದಾಣಿಕೆ ಮಾಡಲು ಬಾಕಿ ಇರುವ ಮೊತ್ತವು ₹45.86 ಕೋಟಿಗಳಿದ್ದು (ಅಸಲು ₹23.66 ಕೋಟಿ ಮತ್ತು ಬಡ್ಡಿ ₹22.20 ಕೋಟಿ) ಇದು ರಾಜ್ಯ ಸರ್ಕಾರದ ಪುಸ್ತಕಗಳಲ್ಲಿ ₹23.66 ಕೋಟಿಗಳ (ನಿವ್ವಳ ಕಳೆ) ವ್ಯತಿರಿಕ್ತ ಶಿಲ್ಕನ್ನು ಹಣಕಾಸು ಸಚಿವಾಲಯದ ಹೊರತು ಉಳಿದ ಸಚಿವಾಲಯಗಳಿಗೆ ಸಂಬಂಧಿಸಿದಂತೆ ತೋರಿಸಿದೆ.

ರಾಜ್ಯ ಹಣಕಾಸು ಲೆಕ್ಕಗಳಲ್ಲಿ ತೋರಿಸಿರುವ ಆಸ್ತಿಗಳು (ವಿವರಣಾ ಪಟ್ಟಿ–1 : ಮೀಸಲಿಟ್ಟ ನಿಧಿಗಳಿಂದ ಹೂಡಿಕೆ ₹10,272.21 ಕೋಟಿ) ಕನಿಷ್ಠ ₹317.45 ಕೋಟಿಗಳ ಮಟ್ಟಿಗೆ ಕಡಿಮೆಯಾಗಿ ತೋರಿಸಿದೆ. ಇದು ಋಣ ಪರಿಹಾರ ನಿಧಿಯ ಹೂಡಿಕೆಯ ಮೇಲಿನ ಬಡ್ಡಿಗೆ ಸಂಬಂಧಿಸಿದ್ದು (2012–13) ಸರ್ಕಾರದ ಪುಸ್ತಕಗಳಲ್ಲಿ ಇದರ ಉಲ್ಲೇಖವಿಲ್ಲ.

### 1.9.2 ವಿತ್ತೀಯ ಜವಾಬ್ದಾರಿಗಳು

ರಾಜ್ಯಸರ್ಕಾರದ ಬಾಕಿ ಇರುವ ವಿತ್ತೀಯ ಜವಾಬ್ದಾರಿಗಳ ಪ್ರವೃತ್ತಿಯನ್ನು **ಅನುಬಂಧ 1.4**ರಲ್ಲಿ ನೀಡಿದೆ. 2012–13 ರಿಂದ 2016–17ರ ವರ್ಷಗಳ ಪರಸ್ಪರ ವಿತ್ತೀಯ ಜವಾಬ್ದಾರಿಗಳ ಸಂಯೋಜನೆಯನ್ನು **ನಕ್ಷೆ 1.17**ರಲ್ಲಿ ತೋರಿಸಿದೆ.

**ನಕ್ಷೆ: 1.17: ಬಾಕಿ ಇರುವ ವಿತ್ತೀಯ ಜವಾಬ್ದಾರಿಗಳ ಸಂಯೋಜನೆ ಕೋಟಿ ರೂಪಾಯಿಗಳಲ್ಲಿ)**




*ಆಕರ: ಹಣಕಾಸು ಲೆಕ್ಕಗಳು.*

ರಾಜ್ಯದ ವಿತ್ತೀಯ ಜವಾಬ್ದಾರಿಗಳು, ಅವುಗಳ ವೃದ್ಧಿಯ ದರ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (ರಾಒಆಂಉ) ಈ ಜವಾಬ್ದಾರಿಗಳ ಅನುಪಾತ, ರಾಜಸ್ವ ಸ್ವೀಕೃತಿಗಳು ಮತ್ತು ಸ್ವಂತ ಸಂಪನ್ಮೂಲಗಳು ಅಲ್ಲದೆ ಈ ಪ್ರಮಿತಿಗಳಿಗೆ ಸಂಬಂಧಿಸಿದಂತೆ ವಿತ್ತೀಯ ಜವಾಬ್ದಾರಿಗಳ ಪ್ಲವನತೆಯನ್ನು **ಕೋಷ್ಟಕ 1.35**ರಲ್ಲಿ ತೋರಿಸಿದೆ.

**ಕೋಷ್ಟಕ 1.35: ಆರ್ಥಿಕ ಜವಾಬ್ದಾರಿಗಳು–ಮೂಲ ಪ್ರಮಿತಿಗಳು**

| | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ವಿತ್ತೀಯ ಜವಾಬ್ದಾರಿಗಳು (ಕೋಟಿ ರೂಪಾಯಿಗಳಲ್ಲಿ) | 1,19,273 | 1,38,261 | 1,64,279 | 1,83,322 | 2,21,319 |
| ವೃದ್ಧಿಯ ದರ (ಶೇಕಡ) | 13.7 | 15.9 | 18.8 | 11.6 | 20.7 |
| ವಿತ್ತೀಯ ಜವಾಬ್ದಾರಿಗಳ ಅನುಪಾತ | | | | | |
| ರಾಒಆಂಉಕ್ಕೆ | 0.17 | 0.17 | 0.18 | 0.18 | 0.19 |
| ರಾಜಸ್ವ ಸ್ವೀಕೃತಿಗಳಿಗೆ | 1.53 | 1.54 | 1.58 | 1.54 | 1.66 |
| ಸ್ವಂತ ಸಂಪನ್ಮೂಲಗಳಿಗೆ | 2.07 | 2.07 | 2.19 | 2.27 | 2.49 |
| ವಿತ್ತೀಯ ಜವಾಬ್ದಾರಿಗಳ ಪ್ಲವನತೆ | | | | | |
| ರಾಒಆಂಉಕ್ಕೆ (ಅನುಪಾತ) | 0.94 | 0.87 | 1.48 | 1.02 | 2.35 |
| ರಾಜಸ್ವ ಸ್ವೀಕೃತಿಗಳಿಗೆ | 1.14 | 1.10 | 1.15 | 0.82 | 1.71 |
| ಸ್ವಂತ ಸಂಪನ್ಮೂಲಗಳಿಗೆ | 0.96 | 1.03 | 1.52 | 1.44 | 2.13 |

*ಆಕರ: ಹಣಕಾಸು ಲೆಕ್ಕಗಳು.*

ರಾಜ್ಯ ಸರ್ಕಾರದ ವಿತ್ತೀಯ ಜವಾಬ್ದಾರಿಗಳು 2012–13ರಲ್ಲಿದ್ದ ₹1,19,273 ಕೋಟಿಗಳಿಂದ 2016–17ರಲ್ಲಿ ₹2,21,319 ಕೋಟಿಗಳಿಗೆ ಏರಿ ಶೇಕಡ 86ರಷ್ಟು ಏರಿಕೆಯನ್ನು ಕಂಡಿದ್ದು, ಇದು ಸಂಚಿತ ನಿಧಿ ಜವಾಬ್ದಾರಿಗಳು (₹1,46,283 ಕೋಟಿ) ಮತ್ತು ಸಾರ್ವಜನಿಕ ಲೆಕ್ಕಗಳ ಜವಾಬ್ದಾರಿ (₹64,788 ಕೋಟಿ)ಗಳನ್ನು ಮತ್ತು ಆಯವ್ಯಯದ ಹೊರಗಿನ ಸಾಲಗಳನ್ನು (₹10,248 ಕೋಟಿ) ಒಳಗೊಂಡಿದೆ. 2015–16 ಮತ್ತು 2016–17ರಲ್ಲಿ ಹೆಚ್ಚಿನ ಸಾಲ ಪಡೆದಿದ್ದರಿಂದ ವಿತ್ತೀಯ ಜವಾಬ್ದಾರಿಗಳ ವೃದ್ಧಿಯ ದರವು ಕ್ರಮವಾಗಿ ಶೇಕಡ 12 ಮತ್ತು ಶೇಕಡ 21ರಷ್ಟು ಇತ್ತು. ಅಲ್ಲದೆ, 2016–17ರಲ್ಲಿ ರಾಒಆಂಉಕ್ಕೆ ವಿತ್ತೀಯ ಜವಾಬ್ದಾರಿಗಳ ಅನುಪಾತವು ಶೇಕಡ 19.81ರಲ್ಲಿ ಉಳಿದಿದ್ದು, ರಾಜಸ್ವ ಸ್ವೀಕೃತಿಗಳಿಗೆ ವಿತ್ತೀಯ ಜವಾಬ್ದಾರಿಯ ಪ್ಲವನತೆಯು 2015–16 ಮತ್ತು 2016–17ರಲ್ಲಿ ಕ್ರಮವಾಗಿ 0.82 ಮತ್ತು 1.71ರಷ್ಟಿತ್ತು. ಜೊತೆಗೆ, ಸ್ವಂತ ಸಂಪನ್ಮೂಲಗಳಿಗೆ ವಿತ್ತೀಯ ಜವಾಬ್ದಾರಿಗಳ ಪ್ಲವನತೆಯ ಅನುಪಾತವು 2012–13ರಲ್ಲಿನ 0.96ರಿಂದ 2016–17ರಲ್ಲಿ 2.13ಕ್ಕೆ ಕ್ರಮೇಣವಾಗಿ ಏರಿದೆ.

### 1.9.3 ಆಯವ್ಯಯದ ಹೊರಗಿನ ಸಾಲಗಳು

ಭಾರತದ ಸಂವಿಧಾನದ ಅನುಚ್ಛೇದ 293(1)ರ ಅಡಿಯಲ್ಲಿ ರಾಜ್ಯಸರ್ಕಾರಗಳು ಮಾಡುವ ಸಾಲಗಳನ್ನು ನಿಯಂತ್ರಿಸಲಾಗುತ್ತದೆ. ರಾಜ್ಯ ಸರ್ಕಾರವು ಸರ್ಕಾರಿ ಕಂಪೆನಿಗಳು/ನಿಗಮಗಳು/ಸೊಸೈಟಿಗಳು ಮಾಡಿರುವ ಸಾಲಗಳಿಗೆ ಖಾತರಿ ನೀಡಿವೆ. ಈ ಕಂಪೆನಿಗಳು/ನಿಗಮಗಳು/ಸೊಸೈಟಿಗಳು ಅನೇಕ ರಾಜ್ಯ ಯೋಜನೆಗಳ ಅನುಷ್ಠಾನಕ್ಕೆ ಮಾರುಕಟ್ಟೆ/ಹಣಕಾಸು ಸಂಸ್ಥೆಗಳ ಮೂಲಕ ಸಾಲಗಳನ್ನು ಪಡೆದಿವೆ. ಈ ಕಾರ್ಯಕ್ರಮಗಳ ಅನುಷ್ಠಾನವನ್ನು ಕಂಪೆನಿಗಳು/ನಿಗಮಗಳು/ಸೊಸೈಟಿಗಳು ಆಯವ್ಯಯ ಹೊರಗಿನ ಮೂಲಗಳಿಂದ ಸಂಗ್ರಹಿಸಿದ ಮೊತ್ತಗಳಲ್ಲಿ ಭರಿಸಬೇಕಾಗಿದ್ದರೂ, ವಾಸ್ತವದಲ್ಲಿ ಈ ಸಂಸ್ಥೆಗಳು ಮಾಡಿದ ಸಾಲಗಳು ಅಂತಿಮವಾಗಿ 'ಆಯವ್ಯಯದ ಹೊರಗಿನ ಸಾಲಗಳು' ಎಂದು ಕರೆಯಲ್ಪಡುವ ಜವಾಬ್ದಾರಿಗಳಾಗಿ ಉಳಿದು, ಈ ಕಂಪೆನಿಗಳು/ನಿಗಮಗಳು/ಸೊಸೈಟಿಗಳು ಮಾಡಿದ ಸಾಲಗಳನ್ನು ಬಡ್ಡಿಸಹಿತ ಬಂಡವಾಳ ಲೆಕ್ಕದಡಿ ರಾಜ್ಯಸರ್ಕಾರದ ಆಯವ್ಯಯದ ಮೂಲಕವೇ ಭರಿಸಲಾಗುತ್ತಿದೆ.

2016–17ರಲ್ಲಿ ₹28,150 ಕೋಟಿಗಳ ಬಂಡವಾಳ ವೆಚ್ಚದಲ್ಲಿ ಆಯವ್ಯಯದ ಹೊರಗಿನ ಸಾಲಗಳ ಋಣಸೇವೆಯ ಅಸಲಿಗೆ ಸಂಬಂಧಿಸಿದ ₹455.57 ಕೋಟಿ ಸೇರಿವೆ. ಆದಾಗ್ಯೂ, ಸಂಸ್ಥೆಗಳ ಲೆಕ್ಕಗಳು ₹453.43 ಕೋಟಿಗಳ ಪಾವತಿಗಳನ್ನು ಆಯವ್ಯಯದ ಹೊರಗಿನ ಸಾಲಗಳೆಂದು ತೋರಿಸಿವೆ. **ಕೋಷ್ಟಕ 1.36**ರಲ್ಲಿ 2012–13 ರಿಂದ 2016–17ರ ಅವಧಿಯಲ್ಲಿನ ರಾಜ್ಯ ಸರ್ಕಾರದ ಆಯವ್ಯಯದ ಹೊರಗಿನ ಸಾಲಗಳ ಪ್ರವೃತ್ತಿಯನ್ನು ಸೂಚಿಸಿದ್ದು, **ಕೋಷ್ಟಕ 1.37**ರಲ್ಲಿ 2016–17ರ ಅಂತ್ಯದಲ್ಲಿದ್ದಂತೆ ಸಂಸ್ಥಾವಾರು ಸಾಲಗಳ ಸ್ಥಿತಿಯನ್ನು ಸೂಚಿಸಲಾಗಿದೆ.

### ಕೋಷ್ಟಕ 1.36: ಆಯವ್ಯಯದ ಹೊರಗಿನ ಸಾಲಗಳ ಪ್ರವೃತ್ತಿ

(ಕೋಟಿ ರೂಪಾಯಿಗಳಲ್ಲಿ)

| ವರ್ಷ | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ಸಂಸ್ಥೆಗಳು ತಿಳಿಸಿರುವಂತೆ ಮೊತ್ತಗಳು* | 18.16 | 1,914.50 | 3,081.50 | 2,372.00 | 3,005.16 |

*ಆಕರ: ಸಂಬಂಧಿತ ಸಂಸ್ಥೆಗಳು ವರದಿ ಮಾಡಿದಂತೆ.*

**ಅಂಕಿಗಳನ್ನು ಆಯವ್ಯಯ ಪಕ್ಷಿನೋಟದಲ್ಲಿ ಸೂಚಿಸಿದ ಅಂಕಿಗಳೊಡನೆ ಹೊಂದಾಣಿಕೆ ಮಾಡಬೇಕಿದೆ.*

### ಕೋಷ್ಟಕ 1.37: ಆಯವ್ಯಯದ ಹೊರಗಿನ ಸಾಲಗಳ ಸಂಸ್ಥಾವಾರು ವಿವರಗಳು

(ಕೋಟಿ ರೂಪಾಯಿಗಳಲ್ಲಿ)

| ಕಂಪನಿ/ನಿಗಮ/ಮಂಡಳಿ | ಬಾಕಿಯಿರುವ ಆಯವ್ಯಯದ ಹೊರಗಿನ ಸಾಲಗಳು* | 2016–17ನೇ ವರ್ಷದ ಸಾಲಗಳು | ಮರುಪಾವತಿ 2016–17ನೇ ಸಾಲಿನಲ್ಲಿ | |
|---|---|---|---|---|
| | | | ಅಸಲು | ಬಡ್ಡಿ |
| ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ | 3,880.85 | 1,232.36 | 1.63 | 406.64 |
| ಕರ್ನಾಟಕ ನೀರಾವರಿ ನಿಗಮ ನಿಯಮಿತ | 1,562.32 | 800.00 | 188.20 | 162.78 |
| ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ | 182.36 | 1.00 | 36.19 | 17.92 |
| ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ | 1,185.32 | 271.80 | 201.36 | 108.92 |
| ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ | 5.71 | – | 4.11 | 0.38 |
| ಕನಾಟಕ ರಾಜ್ಯ ಪೊಲೀಸ್ ವಸತಿ ನಿಗಮ ಮತ್ತು ಅಭಿವೃದ್ಧಿ ನಿಗಮ ನಿಯಮಿತ | 44.90 | – | 21.85 | 3.97 |
| ಕಾವೇರಿ ನೀರಾವರಿ ನಿಗಮ ನಿಯಮಿತ | 835.00 | 400.00 | – | 107.06 |
| ವಿಶ್ವೇಶ್ವರಯ್ಯ ಜಲನಿಗಮ ನಿಯಮಿತ | – | 300.00 | – | 0.07 |
| ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ | 0.09 | 0.00 | 0.09 | 0.00 |
| **ಒಟ್ಟು** | **7,696.55** | **3,005.16** | **453.43** | **807.74** |

** ಈ ಸಂಸ್ಥೆಗಳ ಅಂತಿಮ ಶಿಲ್ಕುಗಳಲ್ಲಿ ವ್ಯತ್ಯಾಸಗಳಿದ್ದುದರಿಂದ (2015–16) ಅವುಗಳನ್ನು 2016–17ರ ಅಂತ್ಯಕ್ಕೆ ಸಂಸ್ಥೆಗಳು ತೋರಿಸಿದ ಅಂತಿಮ ಶಿಲ್ಕಿಗೆ ಸರಿದೂಗಿಸಲು ಅಸಲು ಮರುಪಾವತಿಗಳನ್ನು ಹೊಂದಾಣಿಕೆ ಮಾಡಲಾಗಿತ್ತು.*

ಆಯವ್ಯಯದ ಹೊರಗಿನ ಸಾಲಗಳನ್ನು ಲೆಕ್ಕಕ್ಕೆ ತೆಗೆದುಕೊಂಡಲ್ಲಿ ಮಾರ್ಚ್ 2017ರ ಅಂತ್ಯಕ್ಕೆ ತೋರಿಸಿರುವ ಒಟ್ಟು ಜವಾಬ್ದಾರಿಗಳು ₹2,21,319 ಕೋಟಿಗಳಷ್ಟಿತ್ತು. ಆಯವ್ಯಯದ ಹೊರಗಿನ ಸಾಲಗಳೂ ಸೇರಿದಂತೆ ವಿತ್ತೀಯ ಜವಾಬ್ದಾರಿಗಳು ರಾಒಆಉದ ಅನುಪಾತವು ವರ್ಷಾಂತ್ಯದಲ್ಲಿ ಶೇಕಡ 19.81ರಷ್ಟಾಗುತ್ತದೆ.

### 1.9.4 ಮೀಸಲು ನಿಧಿಯಡಿಯ ವ್ಯವಹಾರಗಳು

ಮೀಸಲುಗಳು ಮತ್ತು ಮೀಸಲು ನಿಧಿಗಳನ್ನು ರಾಜ್ಯಸರ್ಕಾರದ ಲೆಕ್ಕಗಳಲ್ಲಿ 'ಜೆ' ವಿಭಾಗದಡಿ (ಸಾರ್ವಜನಿಕ ಲೆಕ್ಕ) ನಿರ್ದಿಷ್ಟವಾದ ಮತ್ತು ಸ್ಪಷ್ಟವಾಗಿ ವಿವರಿಸಿದ ಉದ್ದೇಶಗಳಿಗಾಗಿ ಸ್ಥಾಪಿಸಲಾಗುತ್ತದೆ. ಈ ನಿಧಿಗಳು ಕೇಂದ್ರದ ಅಥವಾ ರಾಜ್ಯದ ಸಂಚಿತ ನಿಧಿಗಳಿಂದ ಅಥವಾ ಹೊರಗಿನ ಏಜೆನ್ಸಿಗಳ ಅನುದಾನಗಳಿಂದ ಪೂರೈಸಲ್ಪಡುತ್ತವೆ. ವಂತಿಗೆಗಳನ್ನು ಸಂಚಿತನಿಧಿಯಡಿ ವೆಚ್ಚವೆಂದು ಪರಿಗಣಿಸಲಾಗುತ್ತದೆ. ಇವುಗಳು ಸಂಚಿತನಿಧಿಗೆ 'ಖರ್ಚು'ಗಳಾಗಿರುತ್ತವೆ. ನಿಧಿಗೆ ಸಂಬಂಧಿಸಿದ ವೆಚ್ಚವನ್ನು ಆರಂಭದಲ್ಲಿ ಸಂಚಿತ ನಿಧಿಯಲ್ಲಿಯೇ ಲೆಕ್ಕ ಮಾಡಿದ್ದು ಇದಕ್ಕೆ ಶಾಸಕಾಂಗದ ಅನುಮೋದನೆಯನ್ನು ಪಡೆಯಲಾಗಿರುತ್ತದೆ. ವರ್ಷದ ಕೊನೆಯಲ್ಲಿ ಲೆಕ್ಕಗಳನ್ನು ಮುಕ್ತಾಯ ಗೊಳಿಸುವಾಗ ಒಟ್ಟು ಆಯವ್ಯಯದ ಪರಿಕಲ್ಪನೆಯಡಿ ಈ ನಿಧಿಗೆ ಸಂಬಂಧಿಸಿದ ವೆಚ್ಚವನ್ನು ಸಾರ್ವಜನಿಕ ಲೆಕ್ಕದಡಿಯ ಲೆಕ್ಕಕ್ಕೆ ವರ್ಗಾಯಿಸಲಾಗುವುದು. ಸಾಧಾರಣವಾಗಿ, ನಿಧಿಗಳನ್ನು "ಬಡ್ಡಿಸಹಿತ ನಿಧಿಗಳು" ಮತ್ತು "ಬಡ್ಡಿರಹಿತ ನಿಧಿಗಳು" ಎಂದು ವರ್ಗೀಕರಿಸಬಹುದು. ಮೀಸಲು ನಿಧಿಗಳನ್ನು, ಅವುಗಳನ್ನು ಭರಿಸುವ ಮೂಲಗಳನ್ನು ಆಧರಿಸಿ ಕೆಳಗಿನ ಮೂರು ವರ್ಗಗಳಡಿ ವಿಂಗಡಿಸಲಾಗಿದೆ.

- ಬೇರೊಂದು ಸರ್ಕಾರದ ಅನುದಾನಗಳಿಂದ ಶೇಖರಿಸಿದ ನಿಧಿಗಳು ಮತ್ತು ಕೆಲವು ಬಾರಿ ಸಾರ್ವಜನಿಕರಿಂದ ಪಡೆದ ಸಹಾಯ;

- ನಿರ್ದಿಷ್ಟ ಉದ್ದೇಶಗಳ ವೆಚ್ಚ ಭರಿಸಲು ಮೀಸಲುಗಳನ್ನು ಸಂದರ್ಭಾನುಸಾರ ಒದಗಿಸಲು ಕೇಂದ್ರ/ರಾಜ್ಯಗಳಿಂದ ಭಾರತದ ಸಂಚಿತ ನಿಧಿ ಅಥವಾ ರಾಜ್ಯದ ಸಂಚಿತ ನಿಧಿಯಿಂದ ಹೊರಗೆ ಇರಿಸಿರುವ ಮೊತ್ತಗಳಿಂದ ಶೇಖರಿಸಿದ ನಿಧಿ, ಉದಾಹರಣೆಗೆ: ಸವಕಳಿನಿಧಿ; ಮತ್ತು

- ರಾಜ್ಯ ಸರ್ಕಾರಕ್ಕೆ ಹೊರಗಿನ ಏಜೆನ್ಸಿಗಳು ನೀಡಿದ ವಂತಿಗೆಯಿಂದ ಶೇಖರಿಸಿದ ನಿಧಿ.

ಪ್ರಸಕ್ತ ವರ್ಷದ ಹಣಕಾಸು ಲೆಕ್ಕಗಳಲ್ಲಿನ "ಲೆಕ್ಕಗಳಿಗೆ ಟಿಪ್ಪಣಿ"ಗಳ ಪ್ರಕಾರ, 31 ಮಾರ್ಚ್ 2017 ರಲ್ಲಿದ್ದಂತೆ ವಿವಿಧ ಮೀಸಲು ನಿಧಿಗಳಡಿ ಒಟ್ಟು ಬಾಕಿಯಿದ್ದ ₹26,656.09 ಕೋಟಿಗಳ ಶಿಲ್ಕಿನಲ್ಲಿ ಕನಾಟಕ ಸರ್ಕಾರವು ₹10,272.21 ಕೋಟಿಗಳನ್ನು ಹೂಡಿಕೆ ಮಾಡಿದೆ (ಶೇಕಡ 39). ಮಹಾಲೇಖಪಾಲರು (ಲೆ ಮತ್ತು ಹ) ಈ ಕೆಳಗಿನ ಎರಡು ನಿಧಿಗಳನ್ನು ಮುಂದುವರೆಸುವ ಅಗತ್ಯವನ್ನು ವಿಶ್ಲೇಷಿಸಲು ರಾಜ್ಯ ಸರ್ಕಾರವನ್ನು ಕೋರಿದ್ದಾರೆ (ಜೂನ್ 2011).

- ರಾಜ್ಯದ ನವೀಕರಿಸಬಹುದಾದ ನಿಧಿ–ಇದರಲ್ಲಿ 1999–2000ದಿಂದ ಯಾವುದೇ ವ್ಯವಹಾರಗಳು ಇರುವುದಿಲ್ಲ; ಮತ್ತು

- ಖಾತರಿ ಮೀಸಲುನಿಧಿ – ಹನ್ನೆರಡನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಇದನ್ನು ಖಾತರಿ ವಿಮೋಚನಾ ನಿಧಿಯೆಂದು ಬದಲಿಸಬೇಕಾಗಿದೆ.

ಸರ್ಕಾರದ ಜವಾಬ್ದಾರಿಗಳ ಮೇಲೆ ಪರಿಣಾಮ ಹೊಂದಿರುವ ಕೇಂದ್ರ ಪ್ರಮುಖ ಮೀಸಲು ನಿಧಿಗಳು, ಅದರ ಹಣದ ಹರಿವು ಮತ್ತು ವೆಚ್ಚವನ್ನು ಈ ಕೆಳಗೆ ನೀಡಲಾಗಿದೆ.

### (ಎ) ಕ್ರೋಢೀಕೃತ ಋಣ ಪರಿಹಾರ ನಿಧಿ:

ಹನ್ನೆರಡನೆಯ ಹಣಕಾಸು ಆಯೋಗದ ಶಿಫಾರಸ್ಸಿನಂತೆ ರಾಜ್ಯ ಸರ್ಕಾರವು ಸಾಲಗಳ ಮರುಪಾವತಿಗಾಗಿ ಕ್ರೋಢೀಕೃತ ಋಣ ಪರಿಹಾರ ನಿಧಿಯನ್ನು (ಸಿಎಸ್‌ಎಫ್) 2012–13ರಲ್ಲಿ ಸ್ಥಾಪಿಸಿತು ಮತ್ತು 2012–13ರಲ್ಲಿ ₹1,000 ಕೋಟಿಗಳನ್ನು ನಿಧಿಯ ಮೂಲಧನಕ್ಕೆ ವರ್ಗಾಯಿಸಿತು. ನಿಧಿಯನ್ನು ಭಾರತೀಯ ರಿಸರ್ವ್ ಬ್ಯಾಂಕು ನಿರ್ವಹಿಸುತ್ತದೆ ಮತ್ತು ಮೂಲಧನವನ್ನು ಭಾರತ ಸರ್ಕಾರದ ಭದ್ರತಾ ಪತ್ರಗಳಲ್ಲಿ ಹೂಡಿಕೆ ಮಾಡಲಾಗಿದೆ. ಸರ್ಕಾರದ ಅಧಿಸೂಚನೆಯಂತೆ (ಫೆಬ್ರವರಿ 2013)ಹಿಂದಿನ ಆರ್ಥಿಕ ವರ್ಷದ ಅಂತ್ಯದಲ್ಲಿದ್ದ ಬಾಕಿ ಜವಾಬ್ದಾರಿಗಳ ಶೇಕಡ 0.50ರಷ್ಟು ಕನಿಷ್ಠ ವಾರ್ಷಿಕ ವಂತಿಗೆಯನ್ನು ರಾಜ್ಯಸರ್ಕಾರವು ನಿಧಿಗೆ ಜಮೆ ಮಾಡಬೇಕು. 2016–17ರಲ್ಲಿ ಅಗತ್ಯವಿದ್ದ ₹878.12 ಕೋಟಿಗಳಿಗೆದುರಾಗಿ ರಾಜ್ಯ ಸರ್ಕಾರವು ಪ್ರಧಾನ ಲೆಕ್ಕಶೀರ್ಷಿಕೆ 2048–ಕ್ರೋಢೀಕೃತ ಋಣ ಪರಿಹಾರ ನಿಧಿಗೆ ವಂತಿಗೆ–ಯಡಿ ₹535 ಕೋಟಿಗಳ ಅವಕಾಶವನ್ನು ಮಾಡಿತ್ತು. ಆದಾಗ್ಯೂ 31 ಮಾರ್ಚ್ 2017ರ ಅಂತ್ಯಕ್ಕೆ ರಾಜ್ಯ ಸರ್ಕಾರವು ₹23,997 ಕೋಟಿಗಳಷ್ಟು ಹೆಚ್ಚಿನ ನಗದು ಶಿಲ್ಕನ್ನು ಹೊಂದಿದ್ದರೂ ಸಹ ಯಾವುದೇ ಹೂಡಿಕೆಯನ್ನು ಮಾಡಿರಲಿಲ್ಲ.

ಹದಿನಾಲ್ಕನೇ ಹಣಕಾಸು ಆಯೋಗವೂ ಸಹ ತನ್ನ ವರದಿಯಲ್ಲಿ ಕ್ರೋಢೀಕೃತ ಋಣ ಪರಿಹಾರ ನಿಧಿಯು ವಿವೇಚನಾಯುಕ್ತ ವಿತ್ತೀಯ ನಿರ್ವಹಣೆಯ ಅವಿಭಾಜ್ಯ ಅಂಗವಾಗಿದೆಯೆಂದು ವಿಶ್ಲೇಷಿಸಿದೆ. ಋಣ ಪರಿಹಾರ ನಿಧಿಯು ವಿತ್ತೀಯ/ಮಾರುಕಟ್ಟೆ ಸಂಕಷ್ಟಗಳ ಸಮಯದಲ್ಲಿ ಸಾಲಗಳ ಮರುಪಾವತಿಗೆ ನೆರವು ನೀಡುತ್ತದೆ ಮತ್ತು ಹೂಡಿಕೆದಾರರ ನಂಬಿಕೆಯನ್ನು ಹೆಚ್ಚಿಸಿ ಸಾಮಾನ್ಯ ಸಮಯಗಳಲ್ಲೂ ಸಹ ಪ್ರಾಥಮಿಕ ಮಾರುಕಟ್ಟೆಯಿಂದ ಸಾಲ ಕೊಳ್ಳಲು ಸಹಕರಿಸುತ್ತದೆ. ವರ್ಷಾಂತ್ಯದಲ್ಲಿ ನಿಧಿಯಡಿಯ ಶಿಲ್ಕು ₹2,070 ಕೋಟಿಗಳಿಗೆ ಉಳಿಯಿತು. ಆದಾಗ್ಯೂ ಭಾರತೀಯ ರಿಸರ್ವ್ ಬ್ಯಾಂಕಿನಿಂದ ನಿಧಿಯಿಂದ ಮಾಡಿದ ಮರುಹೂಡಿಕೆಯಿಂದ ಸ್ವೀಕರಿಸಿದ ₹317.45 ಕೋಟಿಗಳ ಬಡ್ಡಿಯನ್ನು ಲೆಕ್ಕಗಳಲ್ಲಿ ತೋರಿಸಿರಿಲಿಲ್ಲ (2016–17). 28 ಫೆಬ್ರವರಿ 2013ರ ಅಧಿಸೂಚನೆಯಲ್ಲಿ ಹೇಳಿದ ನಿರ್ದೇಶನಗಳನ್ನು ಪಾಲಿಸುವಲ್ಲಿನ ವಿಫಲತೆಯು ಮತ್ತು ಹೂಡಿಕೆ ಮಾಡದಿದ್ದುದು ರಾಜಸ್ವ ವೆಚ್ಚದಲ್ಲಿನ ಸಂಕುಚಿತತೆ ಮತ್ತು ₹878 ಕೋಟಿಗಳಷ್ಟು ರಾಜಸ್ವ/ವಿತ್ತೀಯ ಕೊರತೆಯಾಗುವಲ್ಲಿ ಪರಿಣಮಿಸಿತು.

ಆರ್ಥಿಕ ಇಲಾಖೆಯು, ರಾಜ್ಯ ಸರ್ಕಾರವು ತನ್ನೆಲ್ಲ ವಿತ್ತೀಯ ಅವಶ್ಯಕತೆಗಳನ್ನು ಸರಿದೂಗಿಸ ಬೇಕಿರುವುದರಿಂದ ಕ್ರೋಢೀಕೃತ ಋಣ ಪರಿಹಾರ ನಿಧಿಗೆ ವರ್ಗಾವಣೆ ಮತ್ತದರ ಹೂಡಿಕೆಯು

ಅನಿಶ್ಚತತೆಯಿಂದ ಕೂಡಿದೆ. ಬಾಕಿ ಜವಾಬ್ದಾರಿಗಳ ನಿಶ್ಚಿತ ಶೇಕಡಾವಾರನ್ನು ವಂತಿಗೆಯಾಗಿ ನೀಡುವ ಬದ್ಧತೆಯು ಲಭ್ಯವಿರುವ ರಾಜಸ್ವ/ವಿತ್ತೀಯ ಅವಕಾಶಗಳ ಮೇಲೆ ಅವಲಂಬಿತವಾಗಿದೆ. ಆಯವ್ಯಯ ತಯಾರಿಯ ಸಮಯದಲ್ಲಿ ನಿಧಿಗೆ ಅವಕಾಶವು ಅಂದು ಲಭ್ಯವಿರುವ ವಿತ್ತೀಯ ಅವಕಾಶಗಳ ಮೇಲೆ ಮತ್ತು ಹೂಡಿಕೆಯು ನಗದು ಶಿಲ್ಕಿನ ಮೇಲೆ ಅವಲಂಬಿಸಿರುತ್ತದೆ. ಸರ್ಕಾರವು ಸಾಲಗಳಿಂದ ನಿಧಿಗೆ ವಂತಿಗೆ ನೀಡಲು ಆಗುವುದಿಲ್ಲವೆಂದು ತಿಳಿಸಿತು (ಜುಲೈ 2017 ಮತ್ತು ಡಿಸೆಂಬರ್ 2017).

ವರ್ಷದ ಪ್ರಾರಂಭದಲ್ಲಿ ಹೂಡಿಕೆಯ ಮೇಲಿನ ಬದ್ಧತೆಯು ಆಯವ್ಯಯ ತಯಾರಿಯ ಭಾಗವಾಗಿರಬೇಕಾದ್ದರಿಂದ ಆರ್ಥಿಕ ಇಲಾಖೆಯ ಉತ್ತರವು ಒಪ್ಪಲರ್ಹವಲ್ಲ. ಅದಲ್ಲದೇ, ಭಾರತೀಯ ರಿಸರ್ವ್ ಬ್ಯಾಂಕಿನ ಶಿಫಾರಸ್ಸಿನಂತೆ 3ರಿಂದ 5 ವರ್ಷಗಳ ಸಮಯದ ಚೌಕಟ್ಟಿನಲ್ಲಿ ಒಟ್ಟು ಬಾಕಿ ಜವಾಬ್ದಾರಿಗಳ ಶೇಕಡ 3ರಿಂದ 5ರಷ್ಟು ಕನಿಷ್ಠ ಮೂಲಧನವಾಗುವಂತೆ ವರ್ಷಾನುವರ್ಷದಲ್ಲಿ ಕ್ರಮವಾದ ವಂತಿಗೆಯ ಮೂಲಕ ನಿಧಿಯನ್ನು ಬೆಳೆಸುವುದನ್ನು ವಿವೇಚನಾಯುಕ್ತ ವಿತ್ತೀಯ ನಿರ್ವಹಣೆಯು ಬೇಡುತ್ತದೆ.

### (ಬಿ) ಹಸಿರು ತೆರಿಗೆ

ಕರ್ನಾಟಕ ಸರ್ಕಾರವು ಮೋಟಾರು ವಾಹನ ತೆರಿಗೆ (ತಿದ್ದುಪಡಿ) ಅಧಿನಿಯಮ, 2002ರ ಮೂಲಕ ವಾಯುಮಾಲಿನ್ಯವನ್ನು ನಿಯಂತ್ರಿಸುವ 'ಹಸಿರು ತೆರಿಗೆ' ಎಂಬ ಉಪಕರದ ಸಂಗ್ರಹಣೆಯನ್ನು ಪ್ರಾರಂಭಿಸಿತು. ಹದಿನೈದು ವರ್ಷಗಳನ್ನು ಪೂರೈಸಿರುವ ದ್ವಿಚಕ್ರ ವಾಹನಗಳು ಮತ್ತು ಸಾರಿಗೆಯೇತರ ವಾಹನಗಳು ಮತ್ತು ಏಳು ವರ್ಷ ಪೂರೈಸಿದ ಸಾರಿಗೆ ವಾಹನಗಳ ಮೇಲೆ ನೋಂದಣಿ ಪ್ರಮಾಣಪತ್ರದ ನವೀಕರಣದ ಸಮಯದಲ್ಲಿ ಅಧಿನಿಯಮದಡಿ ವಿಧಿಸಲಾಗುವ ತೆರಿಗೆಯೊಂದಿಗೆ ವಾಯು ಮಾಲಿನ್ಯದ ನಿಯಂತ್ರಣಕ್ಕೆ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ನಿರ್ದಿಷ್ಟಪಡಿಸಿದ ದರದಲ್ಲಿ ಹಳೆಯ ವಾಹನಗಳ ಮೇಲೆ ಹಸಿರು ತೆರಿಗೆ ಉಪಕರವನ್ನು ವಿಧಿಸಲಾಗುತ್ತಿದೆ.

ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ 2016ರ **ಕಂಡಿಕೆ 1.3.1.1**ರಲ್ಲಿ '₹45.90 ಕೋಟಿಗಳ ಹಸಿರು ತೆರಿಗೆ ಉಪಕರದ ತಪ್ಪಾದ ಲೆಕ್ಕ ಹಾಕುವಿಕೆ ಮತ್ತು ಬಳಸದಿರುವುದು' ಎಂಬ ಬಗ್ಗೆ ಹೇಳಲಾಗಿತ್ತು. ಸಂಗ್ರಹಿಸಿದ ಹಸಿರು ತೆರಿಗೆ ಉಪಕರವನ್ನು ರಾಜಸ್ವ ಸ್ವೀಕೃತಿಗಳ ಲೆಕ್ಕ ಶೀರ್ಷಿಕೆ '0041–00–102–0–11–ಹಸಿರು ತೆರಿಗೆ' ಯಡಿ ಲೆಕ್ಕ ಹಾಕಲಾಗಿತ್ತು. ಸಂಗ್ರಹಿಸಿದ ಹಸಿರು ತೆರಿಗೆ ಉಪಕರವನ್ನು ವರ್ಗಾಯಿಸಲು ಅಭಿವೃದ್ಧಿ ಮತ್ತು ಕಲ್ಯಾಣ ನಿಧಿಗಳು–8229–00–200–0–63–ಹಸಿರು ತೆರಿಗೆ' ಯಡಿ ಮೀಸಲು ನಿಧಿಯೊಂದನ್ನು ತೆರೆಯಲಾಗಿದೆ.

2006–07ರಿಂದ 2015–16ರವರೆಗೆ ಸಂಗ್ರಹಿಸಿದ ಉಪಕರ ₹53.52 ಕೋಟಿಗಳಲ್ಲದೇ 2016–17ರ ಸಾಲಿನಲ್ಲಿ ₹4.37 ಕೋಟಿಗಳನ್ನು ರಾಜಸ್ವ ಸ್ವೀಕೃತಿಯ ಲೆಕ್ಕಗಳಡಿ ಸಂಗ್ರಹಿಸಲಾಗಿದೆ. ಆದ್ದರಿಂದ 2016–17ರವರೆಗೆ ಸಂಗ್ರಹಿಸಿದ ಒಟ್ಟು ಹಸಿರು ತೆರಿಗೆ ಉಪಕರದ ₹57.89 ಕೋಟಿಗಳನ್ನು ಮತ್ತು ಸಂಬಂಧಿತ ವೆಚ್ಚಗಳನ್ನು ಸಾರ್ವಜನಿಕ ಲೆಕ್ಕಗಳಲ್ಲಿನ ನಿಧಿಯ ಲೆಕ್ಕಕ್ಕೆ ವರ್ಗಾಯಿಸಬೇಕಿದೆ. ಆದಾಗ್ಯೂ, ಹಸಿರು ತೆರಿಗೆ ಉಪಕರದ ರಾಜಸ್ವ ಸ್ವೀಕೃತಿಯ ಸಂಗ್ರಹಗಳನ್ನಾಗಲೀ ಅಥವಾ ಅದರ ಸಂಬಂಧಿತ ವೆಚ್ಚಗಳನ್ನಾಗಲೀ ಸಾರ್ವಜನಿಕ ಲೆಕ್ಕಗಳಿಗೆ ವರ್ಗಾಯಿಸಿಲ್ಲ. ಇದು ರಾಜಸ್ವ ಸ್ವೀಕೃತಿ/ವೆಚ್ಚವನ್ನು ಅಧಿಕವಾಗಿ ಹೇಳುವಲ್ಲಿ ಪರಿಣಮಿಸಿದೆ.

ಆರ್ಥಿಕ ಇಲಾಖೆಯು, ಸಾರಿಗೆ ಇಲಾಖೆಗೆ 16.10.2017ರಂದು ಒಂದು ಯುಓ ಟಿಪ್ಪಣಿಯನ್ನು ಕಳುಹಿಸಲಾಗಿದ್ದು, ಈ ವಿಷಯವನ್ನು ಇಲಾಖೆಯೊಂದಿಗೆ ಮತ್ತೆ ತೆಗೆದುಕೊಳ್ಳುವುದಾಗಿ ಉತ್ತರಿಸಿದೆ (ಡಿಸೆಂಬರ್ 2017).

### (ಸಿ) ಮೂಲಸೌಕರ್ಯ ಪ್ರಾರಂಭ ನಿಧಿ (ಐಐಎಫ್), ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (ಬಿಎಮ್ಆರ್‌ಸಿಎಲ್) ನಿಧಿ ಮತ್ತು ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ (ಸಿಎಮ್ಆರ್‌ಆರ್‌ಡಿ)

1998ರ ಕರ್ನಾಟಕ ಅಧಿನಿಯಮವು ಮಾರಾಟ ತೆರಿಗೆ, ಅಬಕಾರಿ ಸನ್ನದು ಶುಲ್ಕ, ಮೋಟಾರು ವಾಹನ ತೆರಿಗೆ ಮತ್ತು ನ್ಯಾಯಕೇತರ ಮುದ್ರಾಂಕ ಶುಲ್ಕಗಳ ಮೇಲೆ ಮೂಲಸೌಕರ್ಯ ಉಪಕರವನ್ನು ವಿಧಿಸಲು ಅನುವು ಮಾಡಿತು. ಸಂಗ್ರಹಿಸಲಾದ ಒಟ್ಟು ಉಪಕರವನ್ನು ಐಐಎಫ್ ಮತ್ತು ಬಿಎಮ್ಆರ್‌ಸಿಎಲ್ ನಿಧಿಗಳಿಗೆ ಅನುಪಾತ 2:1ರಲ್ಲಿ ಹಂಚಿಕೆ ಮಾಡಬೇಕಿದ್ದು ಅದನ್ನು 2004ರಲ್ಲಿ ಪರಿಷ್ಕರಿಸಲಾಯಿತು.

ಸಂಗ್ರಹಿಸಲಾದ ಒಟ್ಟು ಮೂಲಸೌಕರ್ಯ ಉಪಕರವನ್ನು ಐಐಎಫ್, ಬಿಎಮ್‌ಆರ್‌ಸಿಎಲ್ ಮತ್ತು ಸಿಎಮ್‌ಆರ್‌ಆರ್‌ಡಿ ನಿಧಿಗಳ ನಡುವೆ ಕ್ರಮವಾಗಿ ಶೇಕಡ 57, 28 ಮತ್ತು 15ರ ಅನುಪಾತದಲ್ಲಿ ಹಂಚಿಕೆ ಮಾಡಬೇಕಿತ್ತು. 2005ರಲ್ಲಿ ಏಕರೂಪ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಪ್ರಾರಂಭವಾದ ನಂತರ ಮೂಲಸೌಕರ್ಯ ಉಪಕರದ ವಿಧಿಸುವಿಕೆಯನ್ನು ನಿಲ್ಲಿಸಲಾಯಿತು ಮತ್ತು ಸರ್ಕಾರವು ನಿಧಿಗೆ ರಾಜ್ಯದ ಸಾಮಾನ್ಯ ರಾಜಸ್ವಗಳಿಂದ ವಂತಿಗೆ ಮಾಡಲು ನಿರ್ಧರಿಸಿತು.

ಮೋಟಾರು ವಾಹನ ತೆರಿಗೆ, ಮುದ್ರಾಂಕ ಮತ್ತು ನೋಂದಣಿ ಶುಲ್ಕ ಮತ್ತು ರಾಜ್ಯ ಅಬಕಾರಿಯಿಂದ 2016–17ರಲ್ಲಿ ಸಂಗ್ರಹಿಸಿದ ಮೂಲಸೌಕರ್ಯ ಉಪಕರವನ್ನು (₹951.53 ಕೋಟಿ) ಐಐಎಫ್, ಬಿಎಮ್‌ಆರ್‌ಸಿಎಲ್ ನಿಧಿ ಮತ್ತು ಸಿಎಮ್‌ಆರ್‌ಆರ್‌ಡಿ ನಿಧಿಗೆ ಹಂಚಿಕೆ ಮಾಡಲಾಗಿತ್ತು. ಹಂಚಿಕೆಯಾದ ಹಣವು ಕ್ರಮವಾಗಿ ₹542.36 ಕೋಟಿ, ₹266.43 ಕೋಟಿ ಮತ್ತು ₹142.74 ಕೋಟಿಗಳಾಗಿದ್ದವು. ಆದಾಗ್ಯೂ, ಸಂಬಂಧಿತ ರಾಜಸ್ವ ಮತ್ತು ಬಂಡವಾಳ ವೆಚ್ಚವನ್ನು ನಿಧಿಗೆ ಖರ್ಚು ಹಾಕದೇ ಸಂಚಿತ ನಿಧಿಯಲ್ಲೇ ಉಳಿದು ರಾಜಸ್ವ ಮತ್ತು ಬಂಡವಾಳ ವೆಚ್ಚವನ್ನು ಅಧಿಕವಾಗಿ ಹೇಳುವಲ್ಲಿ ಪರಿಣಮಿಸಿತು.

ಅದಲ್ಲದೇ ಸಾಮಾನ್ಯ ರಾಜಸ್ವಗಳಡಿ ಲಭ್ಯವಿದ್ದ ₹3,670 ಕೋಟಿಗಳನ್ನು ಕ್ರಮವಾಗಿ ಮೂಲಸೌಕರ್ಯ ಪ್ರಾರಂಭ ನಿಧಿಗೆ ₹2,092 ಕೋಟಿ, ಬಿಎಮ್‌ಆರ್‌ಸಿಎಲ್‌ಗೆ ₹1,027 ಕೋಟಿ ಮತ್ತು ಸಿಎಮ್‌ಆರ್‌ಆರ್‌ಡಿ ನಿಧಿಗೆ ₹551 ಕೋಟಿಗಳನ್ನು ವರ್ಗಾಯಿಸಲಾಯಿತು. ಆದಾಗ್ಯೂ, ನಿಧಿಯಿಂದ ಭರಿಸಬೇಕಿದ್ದ ಮೂಲಸೌಕರ್ಯ ಕಾಮಗಾರಿಗಳಿಗಿನ ವೆಚ್ಚವನ್ನು ಐಐಎಫ್, ಬಿಎಮ್‌ಆರ್‌ಸಿಎಲ್ ಮತ್ತು ಸಿಎಮ್‌ಆರ್‌ಆರ್‌ಡಿ ನಿಧಿಗಳಿಗೆ ವರ್ಗಾವಣೆ ಮಾಡಲಿಲ್ಲ. ಹಣದ ವರ್ಗಾವಣೆಯು ರಾಜಸ್ವ ವೆಚ್ಚ ಮತ್ತು ವಿತ್ತೀಯ ಕೊರತೆಯನ್ನು ಹಿಗ್ಗಿಸುವ ಪರಿಣಾಮವನ್ನು ಹೊಂದಿತ್ತು. ಮುಂದುವರೆದು, ಅದು ಸಾರ್ವಜನಿಕ ಲೆಕ್ಕಗಳಲ್ಲಿನ ಜವಾಬ್ದಾರಿಗಳನ್ನು ಹೆಚ್ಚಿಸುವಲ್ಲಿ ಪರಿಣಮಿಸಿತಲ್ಲದೇ ಆ ಹಣವು ಸಾರ್ವಜನಿಕ ಲೆಕ್ಕದಲ್ಲಿನ ಹೆಚ್ಚಳದಿಂದ ವಿತ್ತೀಯ ಕೊರತೆಯನ್ನು ಪೂರೈಸಲು ಬಳಸಲ್ಪಟ್ಟಿತು.

### (ಡಿ) ರಾಜ್ಯ ನಗರ ಸಾರಿಗೆ ನಿಧಿ (ಎಸ್‌ಯುಟಿಎಫ್)

ಭಾರತ ಸರ್ಕಾರದ ನಗರಾಭಿವೃದ್ಧಿ ಮಂತ್ರಾಲಯದ ಶಿಫಾರಸ್ಸಿನ ಆಧಾರದ ಮೇಲೆ ಕರ್ನಾಟಕ ಸರ್ಕಾರವು ರಾಜ್ಯ ಹಣಕಾಸು ಆಯೋಗದ ಅನುದಾನಗಳಿಂದ ₹10 ಕೋಟಿ ಮೂಲಧನದೊಂದಿಗೆ ನವೆಂಬರ್ 2010ರಲ್ಲಿ ಎಸ್‌ಯುಟಿಎಫ್‌ಅನ್ನು ರಚಿಸಿತು. ಆರಂಭದಲ್ಲಿ ನಿಧಿಯನ್ನು ನಗರ ಸಾರಿಗೆ ಪ್ರಕ್ರಿಯೆಗಳಿಗೆ ಸಹಾಯ ನೀಡಲು ಬಡ್ಡಿಯಿರುವ ಠೇವಣಿಗಳಡಿ ರಚಿಸಲಾಯಿತು. ಮಾರ್ಚ್ 2012ರಲ್ಲಿ ಮೀಸಲು ನಿಧಿಯಡಿ ಪ್ರಧಾನ ಶೀರ್ಷಿಕೆ '8229–ಅಭಿವೃದ್ಧಿ ಮತ್ತು ಕಲ್ಯಾಣ ನಿಧಿ'ಅಡಿ (ಬಡ್ಡಿ ಹೊಂದದ) ಆಯವ್ಯಯ ಅನುದಾನ, ಮೋಟಾರು ವಾಹನ ನೋಂದಣಿ ಮೇಲಿನ ಉಪಕರ (ಶೇಕಡ ಒಂದು) ಮತ್ತು ಆಸ್ತಿ ತೆರಿಗೆ ಮೇಲಿನ ಉಪಕರಗಳಿಂದ ಬರುವ ಪ್ರಾಪ್ತಿಗಳಿಂದ ಮತ್ತೊಂದು ನಿಧಿಯನ್ನು ರಚಿಸಲಾಯಿತು.

2016–17ರಲ್ಲಿ ₹40.48 ಕೋಟಿಗಳಷ್ಟು ಪ್ರಾರಂಭಿಕ ಜಮಾಶಿಲ್ಕನ್ನು ಹೊಂದಿದ ನಿಧಿಗೆ ಮೋಟಾರು ವಾಹನ ತೆರಿಗೆಯ ಮೇಲಿನ ಉಪಕರದಿಂದ ₹43.82 ಕೋಟಿ, ಆಸ್ತಿ ತೆರಿಗೆಯ ಮೇಲಿನ ಉಪಕರದಿಂದ ₹3.59 ಕೋಟಿ ಮತ್ತು ಸಾಮಾನ್ಯ ರಾಜಸ್ವಗಳಿಂದ ₹13.49 ಕೋಟಿಗಳನ್ನು ಜಮೆ ಮಾಡಲಾಯಿತು. ಹೀಗೆ, ₹60.90 ಕೋಟಿಗಳನ್ನು ನಿಧಿ ಲೆಕ್ಕಕ್ಕೆ ವರ್ಗಾಯಿಸಲಾಯಿತು. ಆದಾಗ್ಯೂ, ಬಂಡವಾಳ ಶೀರ್ಷಿಕೆಯಡಿ ಭರಿಸಿದ ವೆಚ್ಚವನ್ನು ನಿಧಿಯ ಲೆಕ್ಕಕ್ಕೆ ವರ್ಗಾಯಿಸದಿದ್ದರಿಂದ 31 ಮಾರ್ಚ್ 2017ರಂದು ₹101.38 ಕೋಟಿಗಳಷ್ಟು ಶಿಲ್ಕು ಉಳಿಯಿತು. ಇದು ಬಂಡವಾಳ ವೆಚ್ಚ, ವಿತ್ತೀಯ ಕೊರತೆ ಮತ್ತು ರಾಜಸ್ವ ಹೆಚ್ಚಳವನ್ನು ಅಧಿಕವಾಗಿ ಹೇಳುವಲ್ಲಿ ಪರಿಣಮಿಸಿತು.

ಇದಕ್ಕೆ ಉತ್ತರವಾಗಿ ಆರ್ಥಿಕ ಇಲಾಖೆಯು (ಡಿಸೆಂಬರ್ 2017), ಒಂದು ನಿಧಿಗೆ ಹಣದ ವರ್ಗಾವಣೆ ಅಥವಾ ಇಲ್ಲ ಎಂಬುದು ರಾಜ್ಯ ಸರ್ಕಾರದ ನಿರ್ಧಾರ ಹಾಗೂ ಇದು ಅಂದಿನ ವಿತ್ತೀಯ ಸ್ಥಿತಿಯನ್ನು ಅವಲಂಬಿಸಿರುತ್ತದೆ. ವೆಚ್ಚವನ್ನು ನಿಧಿ ಲೆಕ್ಕದಿಂದ ಭರಿಸದಿದ್ದುದರಿಂದ ವೆಚ್ಚವನ್ನು ಹೆಚ್ಚಾಗಿ ಅಥವಾ ಕಡಿಮೆಯಾಗಿ ಹೇಳಿದೆ ಎನ್ನುವುದು ಸರಿಯಲ್ಲ ಎಂದು ಹೇಳಿದೆ. ಪ್ರಸ್ತುತ ಸಂದರ್ಭದಲ್ಲಿ ಆದಾಯದ ವರ್ಗಾವಣೆ ಮತ್ತು ಅದಕ್ಕೆ ಸಂಬಂಧಿಸಿದ ವೆಚ್ಚಕ್ಕೆ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿರುವುದರಿಂದ ಆರ್ಥಿಕ ಇಲಾಖೆಯ ಉತ್ತರವು ತೃಪ್ತಿಕರವಲ್ಲ. ಯಾವುದೇ ಹೂಡಿಕೆಯ ವ್ಯವಹಾರ ನಡೆಯದೇ ಇರುವುದರಿಂದ ಕೇವಲ ಆದಾಯದ ವರ್ಗಾವಣೆಯಿಂದ ಸಾರ್ವಜನಿಕ ಲೆಕ್ಕದಡಿ ಜವಾಬ್ದಾರಿಯು

ಅಧಿಕವಾಗಿದೆ. ಆಯವ್ಯಯದಲ್ಲಿ ಸಂಬಂಧಿಸಿದ ವೆಚ್ಚಕ್ಕೆ ಅನುವು ಮಾಡಿರುವುದರಿಂದ ನಿಧಿಗೆ ಸಂಬಂಧಿಸಿದ ವೆಚ್ಚವು ಸಂಚಿತ ನಿಧಿಯಲ್ಲಿಯೇ ಉಳಿದು ವೆಚ್ಚವನ್ನು ಹಿಗ್ಗಿಸಿದಂತಾಗಿದೆ.

### ನಿಷ್ಕ್ರಿಯ ಮೀಸಲು ನಿಧಿಗಳು

ಮಾರ್ಚ್ 31, 2017ರ ಅಂತ್ಯದಲ್ಲಿದ್ದಂತೆ 43 ಮೀಸಲು ನಿಧಿಗಳ ಪೈಕಿ 33 ನಿಧಿಗಳು ₹7,784.40 ಕೋಟಿಗಳ ಶಿಲ್ಕಿನೊಂದಿಗೆ ನಿಷ್ಕ್ರಿಯವಾಗಿ ಉಳಿದಿದ್ದವು.

### 1.9.5. ಸಾಂದರ್ಭಿಕ ಜವಾಬ್ದಾರಿಗಳು

### 1.9.5.1. ಖಾತರಿಗಳ ಸ್ಥಿತಿ

ಸರ್ಕಾರವು ಖಾತರಿ ನೀಡಿದ ಸಾಲಗಾರರು ಸಾಲ ತೀರಿಸದಿದ್ದಲ್ಲಿ ಖಾತರಿಗಳು ರಾಜ್ಯದ ಸಾಂದರ್ಭಿಕ ಜವಾಬ್ದಾರಿಗಳಾಗುತ್ತವೆ. ಹಿಂದಿನ ಐದು ವರ್ಷಗಳ ವಿವರಗಳನ್ನು **ಕೋಷ್ಟಕ 1.38**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.38: ರಾಜ್ಯ ಸರ್ಕಾರವು ನೀಡಿದ ಖಾತರಿಗಳು**

**(ಕೋಟಿ ರೂಪಾಯಿಗಳಲ್ಲಿ)**

| | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ಖಾತರಿ ನೀಡಿದ ಗರಿಷ್ಠ ಮೊತ್ತ | 14,306 | 16,145 | 16,869 | 18,358 | 21,115 |
| 1ನೇ ಏಪ್ರಿಲ್ ಗೆ ಬಾಕಿಯಿರುವ ಖಾತರಿ ಮೊತ್ತ (ಬಡ್ಡಿಯು ಸೇರಿ) | 6,688 | 7,783 | 11,033 | 11,327 | 13,310 |
| ಬಾಕಿ ಇರುವ ಖಾತರಿ ನೀಡಿದ ಹಣ ಮತ್ತು ಹಿಂದಿನ ಎರಡನೇ ವರ್ಷದ ಒಟ್ಟು ರಾಜಸ್ವ ಸ್ವೀಕೃತಿಗಳ ಶೇಕಡಾವಾರು | 11 | 11 | 14 | 13 | 13 |

*ಆಕರ:ಹಣಕಾಸು ಲೆಕ್ಕಗಳು.*

ಕರ್ನಾಟಕ ಖಾತರಿಗಳ ಮೇಲಿನ ಮಿತಿ ಕಾಯಿದೆ, 1999 ಯು ಯಾವುದೇ ವರ್ಷದ ಕೊನೆಗೆ ಸರ್ಕಾರವು ನೀಡಿದ ಖಾತರಿ ಬಾಕಿಯು ಹಿಂದಿನ ಎರಡನೇ ವರ್ಷದಲ್ಲಿನ ರಾಜ್ಯ ರಾಜಸ್ವ ಸ್ವೀಕೃತಿಗಳ ಶೇಕಡ 80ರಷ್ಟನ್ನು ಮೀರಬಾರದೆಂಬ ಮಿತಿಯನ್ನು ವಿಧಿಸುತ್ತದೆ, ಪ್ರತಿ ವರ್ಷದ ಏಪ್ರಿಲ್ 1ರಂದು ಬಾಕಿ ಇರುವ ಖಾತರಿಗಳು ನಿಗದಿಪಡಿಸಿದ ಮಿತಿಯ ಒಳಗಿದೆ.

2016–17ರ ಅಂತ್ಯಕ್ಕೆ ಬಾಕಿ ಇದ್ದ ₹15,392 ಕೋಟಿ (ಅಸಲು+ಬಡ್ಡಿ) ನೀರಾವರಿ (₹8,522 ಕೋಟಿ), ಸಹಕಾರ (₹1,476 ಕೋಟಿ), ಹಣಕಾಸು (₹1,489 ಕೋಟಿ), ಇಂಧನ (₹564 ಕೋಟಿ), ವಸತಿ (₹2,493 ಕೋಟಿ) ಸಾರಿಗೆ (₹147 ಕೋಟಿ) ಮತ್ತಿತರ ವಲಯಗಳ (₹701 ಕೋಟಿ) ಕೆಳಗೆ ಬರುವ 169 ಸಂಸ್ಥೆಗಳು/ಕಂಪನಿಗಳಿಗೆ ನೀಡಿದ ಖಾತರಿಯನ್ನು ಒಳಗೊಂಡಿದೆ.

ಸರ್ಕಾರವು ವರದಿ ಮಾಡಿದಂತೆ ಅಂದಾಜಿಸಿದ ಒಟ್ಟು ಖಾತರಿ ಶುಲ್ಕ ₹362.52 ಕೋಟಿಗಳ ಬದಲಾಗಿ ಕೇವಲ ₹166.32 ಕೋಟಿ ಮಾತ್ರ 2016–17ನೇ ವರ್ಷದಲ್ಲಿ ಸ್ವೀಕೃತಿಯಾಗಿತ್ತು. ಈ ರೀತಿ ಸ್ವೀಕರಿಸಿದ ಖಾತರಿ ಶುಲ್ಕವು ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ (₹0.04 ಕೋಟಿ) ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ (₹24.22 ಕೋಟಿ), ಕರ್ನಾಟಕ ರಾಜ್ಯ ಸಹಕಾರ ಮಾರುಕಟ್ಟೆ ಒಕ್ಕೂಟ ನಿಯಮಿತ (₹22.64 ಕೋಟಿ) ಮತ್ತು ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮ (₹0.93 ಕೋಟಿ) ಸಹಾಯಧನ/ಸಹಾಯಾನುದಾನ/ಹಣಕಾಸು ಸಹಾಯ ರೀತಿಯಲ್ಲಿ ಪುಸ್ತಕ ಹೊಂದಾಣಿಕೆ ಮಾಡಿದ ರಾಜ್ಯ ಸರ್ಕಾರಕ್ಕೆ ಪಾವತಿಮಾಡಬೇಕಿದ್ದ ಖಾತರಿ ಶುಲ್ಕವನ್ನು ಸಹ ಒಳಗೊಂಡಿತ್ತು. ತತ್ಪರಿಣಾಮವಾಗಿ ಸ್ವೀಕರಿಸಿದ ಖಾತರಿ ಶುಲ್ಕದ ನಿವ್ವಳ ಕೊರತೆಯು ₹244.03 ಕೋಟಿಗಳಷ್ಟಿತ್ತು (ಪುಸ್ತಕ ಹೊಂದಾಣಿಕೆಯ ₹47.83 ಕೋಟಿಗಳನ್ನು ಬಿಟ್ಟು ₹362.52 ಕೋಟಿಗಳಿಂದ ₹118.49 ಕೋಟಿಗಳನ್ನು ಕಳೆದಿರುವುದು).

ಶಾಸಕಾಂಗಗಳ ಮುಂದೆ ಮಂಡಿಸಿದ ಮಧ್ಯಮಾವಧಿ ವಿತ್ತೀಯ ಯೋಜನೆ (2016–20)ಗಳಲ್ಲಿ, ಖಾತರಿಗಳು ಸಾಂದರ್ಭಿಕ ಜವಾಬ್ದಾರಿಗಳನ್ನು ಹೆಚ್ಚಿಸುವುದರಿಂದ ಅವುಗಳನ್ನು, ಸಾಲಗಾರನ ಸಾಲ

ತೀರಿಸುವ ಸಾಮರ್ಥ್ಯ, ಖಾತರಿಯ ಮೂಲಕ ಒಳಗೊಳ್ಳುವ ಮೊತ್ತ ಮತ್ತು ಅಪಾಯಗಳು, ಸಾಲದ ಷರತ್ತುಗಳು, ಸಾರ್ವಜನಿಕ ಕಾರಣ ಮತ್ತು ಸಮರ್ಥನೆ, ವಿವಿಧ ಬದ್ಧತೆಗಳು, ಬಾಕಿಯಾಗುವ ಸಾಧ್ಯತೆಗಳು ಮತ್ತು ಅಂತಹ ಜವಾಬ್ದಾರಿಗಳ ಬೆಲೆಯಂಥವುಗಳನ್ನು ಗಣನೆಗೆ ತೆಗೆದುಕೊಳ್ಳುವ ಮೂಲಕ ಸಾಲದ ಪ್ರಸ್ತಾವನೆಯನ್ನು ಪರೀಕ್ಷಿಸುವ ರೀತಿಯಲ್ಲಿಯೇ ಪರಿಶೀಲಿಸಬೇಕು. ಕಾರ್ಯಶೀಲ ಖಾತರಿ ಮೀಸಲು ನಿಧಿ ಮತ್ತು ಖಾತರಿ ಕಾರ್ಯನೀತಿಯ ಉಪಯುಕ್ತತೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಸರ್ಕಾರವು ಹೇಳಿದೆ.

ಸಾರ್ವಜನಿಕ ಲೆಕ್ಕ ಸಮಿತಿಯೂ (ಜುಲೈ 2015) ಸಹ ಖಾತರಿ ಮೀಸಲು ನಿಧಿಯನ್ನು ಕಾರ್ಯಶೀಲಗೊಳಿಸಿ ಮುಂದುವರಿಸಲು ಕ್ರಮ ವಹಿಸಬೇಕೆಂದು ಶಿಫಾರಸ್ಸು ಮಾಡಿದೆ.

### 1.9.5.2 ಖಾತರಿಗಳ ಬಗ್ಗೆ ಬಹಿರಂಗಪಡಿಸುವಿಕೆಯಲ್ಲಿ ಪರ್ಯಾಪ್ತತೆ

"ಭಾರತ ಸರ್ಕಾರದ ಲೆಕ್ಕ ಮಾನದಂಡಗಳು–1–ಸರ್ಕಾರವು ನೀಡಿದ ಖಾತರಿಗಳು"– (ಐಜಿಎಎಸ್) ಅನ್ವಯ ಸರ್ಕಾರವು ನೀಡಿದ ಖಾತರಿಗಳ ಬಗೆಗಿನ ಮಾಹಿತಿಯನ್ನು ತನ್ನ ಹಣಕಾಸು ಪಟ್ಟಿಗಳ ಭಾಗವಾಗಿ ತೋರಿಸಬೇಕೆಂದು ಭಾರತ ಸರ್ಕಾರವು ಅಧಿಸೂಚಿಸಿದೆ ಮತ್ತು ಅದನ್ನು ಬಹಿರಂಗಪಡಿಸಲು ನಮೂನೆಯನ್ನು ಒದಗಿಸಿದೆ. 2016–17ರ ಹಣಕಾಸು ಲೆಕ್ಕಗಳ ಪಟ್ಟಿ ಸಂಖ್ಯೆ–9ರ ಅವಗಾಹನೆಯು ಇತರ ಮೂಲಭೂತ ಸೌಕರ್ಯಗಳ ವಲಯದಲ್ಲಿ, ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಆರ್ಐಡಿಸಿಎಲ್) ಎಂಬ ಸಂಸ್ಥೆಗೆ ನೀಡಿದ ಗರಿಷ್ಠ ಮೊತ್ತ ಮತ್ತು ಸ್ವೀಕರಿಸಬೇಕಿರುವ ಶುಲ್ಕವನ್ನು ಮಾತ್ರ ತೋರಿಸಲಾಗಿದೆ.

ಕೆಆರ್ಐಡಿಸಿಎಲ್ ಸಂಸ್ಥೆಯು ಸರ್ಕಾರದ ಖಾತರಿಯ ಮೇಲೆ ಹುಡ್ಕೋ ಸಂಸ್ಥೆಯಿಂದ ಪಡೆದ ಸಾಲವನ್ನು ತೀರುವಳಿ ಮಾಡಿದೆಯೆಂದು ಉತ್ತರಿಸಿತು (ಸೆಪ್ಟಂಬರ್ 2017). ಹುಡ್ಕೋ ಸಂಸ್ಥೆಯಿಂದ ಬೇಬಾಕಿ ಪ್ರಮಾಣಪತ್ರವನ್ನು ನಿರೀಕ್ಷಿಸಲಾಗಿದೆ. ಬರಬೇಕಾದ ಖಾತರಿ ಶುಲ್ಕವನ್ನು ನಿಗಮವು ಸರಿಪಡಿಸಿದೆ ಮತ್ತದು ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ಕಡಿಮೆಯಿದೆ. ವರದಿಯ ಅವಧಿಯಲ್ಲಿ ಅಸಲು ಮತ್ತು ಬಡ್ಡಿಯು ಶೂನ್ಯವಾಗಿದ್ದರೂ ಖಾತರಿ ನೀಡಿದ ಗರಿಷ್ಠ ಮೊತ್ತವನ್ನು ತೋರಿಸುವ ಮೂಲಕ ಖಾತರಿಯ ಸ್ಥಿತಿಗತಿಯನ್ನು ಹಾಗೆ ಉಳಿಸಿಕೊಳ್ಳಲಾಗಿದೆ. ಮೇಲೆ ತೋರಿಸಿದಂತೆ, ಇಲಾಖೆಯು ನೀಡಿದ ಖಾತರಿಗಳ ವರದಿಯು ನಿಖರವಾಗಿಲ್ಲ.

## 1.10 ಋಣ ನಿರ್ವಹಣೆ

### 1.10.1 ಋಣ ಚಿತ್ರಣ

ಸರ್ಕಾರದ ಆದಾಯವು ಎರಡು ರೀತಿಯಲ್ಲಿರುತ್ತದೆ. ರಾಜಸ್ವ ಸ್ವೀಕೃತಿಗಳು ಎಂದು ಕರೆಯಲ್ಪಡುವ ಪ್ರಸಕ್ತ ಆದಾಯಗಳು ತೆರಿಗೆಗಳ ನಿರ್ವಹಣೆ, ಬಳಕೆದಾರರ ಶುಲ್ಕ ಮತ್ತು ಕೇಂದ್ರ ಸರ್ಕಾರದಿಂದ ಬರುವ ಅನುದಾನಗಳ ಮೂಲಕ ಸಂಗ್ರಹವಾಗುತ್ತದೆ. ಬಂಡವಾಳ ಸ್ವೀಕೃತಿಗಳು, ಸಾಲಗಳು, ಋಣೇತರ ಸ್ವೀಕೃತಿಗಳು ಮತ್ತು ಸಾರ್ವಜನಿಕ ಲೆಕ್ಕಗಳಲ್ಲಿನ ಅಧಿಕ್ಯವನ್ನು ಒಳಗೊಂಡಿವೆ. ಋಣಗಳನ್ನು ಲೆಕ್ಕ ಹಾಕಲು ಕೆಲವು ಪುಸ್ತಕ ಹೊಂದಾಣಿಕೆಗಳನ್ನು ನಗದು ರೂಪದ ವ್ಯವಹಾರಗಳ ಹಾಗೆಯೇ ಎಂಬಂತೆ ಪರಿಗಣಿಸಲಾಗುತ್ತದೆ. ಇಂತಹ ವ್ಯವಹಾರಗಳು, ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳ ಬಾಕಿ, ವಿದ್ಯಾರ್ಥಿಗಳಿಗೆ/ಹಿರಿಯರಿಗೆ ರಿಯಾಯಿತಿ ಪಾಸುಗಳ ನೀಡಿಕೆ ಮುಂತಾದ ಸಹಾಯಧನದ ರೂಪದಲ್ಲಿದ್ದು, ಇವುಗಳನ್ನು ಒಂದು ಕಡೆ ವೆಚ್ಚವೆಂದು, ಮತ್ತೊಂದು ಕಡೆ ಆದಾಯವೆಂದು ಆಯಾ ಸ್ವೀಕೃತಿ ಶೀರ್ಷಿಕೆಗಳಡಿ (ತೆರಿಗೆ/ತೆರಿಗೆಯೇತರ) ತೋರಿಸಲಾಗುತ್ತದೆ. 2016–17ನೇ ವರ್ಷದಲ್ಲಿ ಈ ರೀತಿಯ ವ್ಯವಹಾರದ ಮೊತ್ತವು ₹1,620 ಕೋಟಿಗಳಷ್ಟಿದೆ. ಈ ವ್ಯವಹಾರಗಳು ವಾಸ್ತವವಾಗಿ ಸ್ವೀಕೃತಿಯಿಲ್ಲದೆ ತೆರಿಗೆ/ತೆರಿಗೆಯೇತರ ಆದಾಯವನ್ನು ತೋರಿಸಿರುವ ಪರಿಣಾಮವನ್ನು ಉಂಟು ಮಾಡಿದೆ. ಪುಸ್ತಕ ಹೊಂದಾಣಿಕೆಯ ಮೂಲಕ ಲೆಕ್ಕಮಾಡಲಾದ ಮೊತ್ತವು ₹1,516 ಕೋಟಿ (ತೆರಿಗೆ ಆದಾಯ) ಮತ್ತು ₹94 ಕೋಟಿ (ತೆರಿಗೆಯೇತರ ಆದಾಯ) ವಾಗಿದ್ದು ಒಟ್ಟು ರಾಜಸ್ವ ಸ್ವೀಕೃತಿಗಳ ಶೇಕಡ 1.2ರಷ್ಟಿತ್ತು.

**ಕೋಷ್ಟಕ 1.39**ರಲ್ಲಿ ಸರ್ಕಾರದ ಸಂಚಿತ ನಿಧಿಯಲ್ಲಿ ಮತ್ತು ಸಾರ್ವಜನಿಕ ಲೆಕ್ಕದಲ್ಲಿನ ಬಾಕಿ ಇರುವ ವಿತ್ತೀಯ ಜವಾಬ್ದಾರಿಗಳ ವಿವರಗಳನ್ನು ತಲಾ ಜವಾಬ್ದಾರಿಗೆ ಹೋಲಿಸಿದಂತೆ ನೀಡಲಾಗಿದೆ.

**ಕೋಷ್ಟಕ 1.39: ರಾಜ್ಯದ ಋಣ ಚಿತ್ರಣ**

(ಕೋಟಿ ರೂಪಾಯಿಗಳಲ್ಲಿ)

| ಸಾಲದ ಮೂಲ | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ಮುಕ್ತ ಮಾರುಕಟ್ಟೆ ಸಾಲಗಳು | 39,920 | 53,326 | 69,419 | 84,334 | 1,08,359 |
| ಸಮಾಲೋಚಿತ ಸಾಲಗಳು | 3,425 | 3,372 | 3,318 | 3,482 | 3,973 |
| ರಾಷ್ಟ್ರೀಯ ಸಣ್ಣ ಉಳಿತಾಯ ನಿಧಿ ಸಾಲಗಳು | 20,074 | 19,730 | 20,167 | 21,729 | 20,157 |
| ಭಾರತ ಸರ್ಕಾರದಿಂದ ಪಡೆದ ಸಾಲಗಳು | 11,634 | 12,094 | 12,681 | 13,002 | 13,794 |
| ಸಾರ್ವಜನಿಕ ಲೆಕ್ಕ ಸಾಲಗಳು | 41,714 | 46,796 | 52,968 | 53,076 | 64,788 |
| ಆಯವ್ಯಯದ ಹೊರಗಿನ ಸಾಲಗಳು | 2,506 | 2,943 | 5,726 | 7,699 | 10,248 |
| **ಒಟ್ಟು ವಿತ್ತೀಯ ಜವಾಬ್ದಾರಿಗಳು** | **1,19,273** | **1,38,261** | **1,64,279** | **1,83,322** | **2,21,319** |
| ಜನಸಂಖ್ಯೆ (ಕೋಟಿಗಳಲ್ಲಿ) | 6.11 | 6.11 | 6.11 | 6.11 | 6.11 |
| ತಲಾ ಸಾಲದ ಅನುಪಾತ (ರೂಪಾಯಿಗಳಲ್ಲಿ) | 19,521 | 22,629 | 26,887 | 30,004 | 36,222 |

*ಆಕರ: ಹಣಕಾಸು ಲೆಕ್ಕಗಳು.*

2012–13ರಲ್ಲಿ ₹19,521ರಷ್ಟಿದ್ದ ತಲಾ ಸಾಲವು 2016–17ರಲ್ಲಿ ₹36,222 ಗಣನೀಯವಾಗಿ ಏರಿದ್ದು ಶೇಕಡ 86ರಷ್ಟು ಹೆಚ್ಚಾಗಿದೆ.

### 1.10.2 ಋಣ ಸಹಿಷ್ಣುತೆ

ರಾಜ್ಯ ಸರ್ಕಾರದ ಋಣ ಮೊತ್ತಗಳ ಪ್ರಮಾಣಗಳಲ್ಲದೆ ರಾಜ್ಯದ ಋಣ ಸಹಿಷ್ಣುತೆಯನ್ನು ನಿರ್ಧರಿಸುವ ವಿವಿಧ ಸೂಚಕಗಳನ್ನು ವಿಶ್ಲೇಷಿಸಬೇಕಾಗುತ್ತದೆ. ಋಣ ಸಹಿಷ್ಣುತೆಯು ಕಾಲಕಾಲಕ್ಕೆ ಋಣ–ರಾಒಆಂಉದ ಸ್ಥಿರ ಅನುಪಾತವನ್ನು ಕಾಯ್ದುಕೊಳ್ಳುವ ಸಾಮರ್ಥ್ಯವನ್ನು ಸೂಚಿಸುತ್ತದೆ ಮತ್ತು ಅದರ ಋಣ ಸೇವೆಯ ಕಾಳಜಿಯನ್ನು ಮೂರ್ತಗೊಳಿಸುತ್ತದೆ. ಈ ವಿಭಾಗವು ರಾಒಆಂಉದ ಶತಾಂಶವಾಗಿ ಋಣ, ಬಾಕಿ ಇರುವ ಋಣದ ವೃದ್ಧಿಯ ದರ, ಬಡ್ಡಿ ಪಾವತಿಗಳು/ರಾಜಸ್ವ ಸ್ವೀಕೃತಿಗಳ ಅನುಪಾತ, ಮತ್ತು ನಿವ್ವಳ ಋಣಗಳ ಲಭ್ಯತೆಯ ಮೂಲಕ ರಾಜ್ಯದ ಋಣಸಹಿಷ್ಣುತೆಯನ್ನು ನಿರ್ಣತಿಸುತ್ತದೆ. **ಕೋಷ್ಟಕ 1.40**ರಲ್ಲಿ 2012–13 ರಿಂದ 2016–17ರ ಅವಧಿಯಲ್ಲಿನ ರಾಜ್ಯದ ಋಣ ಸಹಿಷ್ಣುತೆಯನ್ನು ಈ ಸೂಚಕಗಳನ್ವಯ ವಿಶ್ಲೇಷಿಸಲಾಗಿದೆ.

**ಕೋಷ್ಟಕ 1.40: ಋಣಸಹಿಷ್ಣುತೆ–ಸೂಚಕಗಳು ಮತ್ತು ಪ್ರವೃತ್ತಿಗಳು**

(ಶೇಕಡಾವಾರಿನಲ್ಲಿ)

| ಋಣ ಸಹಿಷ್ಣುತೆಯ ಸೂಚಕಗಳು | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ಋಣ*/ರಾಒಆಂಉ | 10.85 | 10.82 | 11.45 | 11.93 | 13.09 |
| ಋಣದ ವೃದ್ಧಿಯ ದರ | 14.91 | 17.95 | 19.28 | 16.06 | 19.37 |
| ರಾಒಆಂಉವೃದ್ಧಿಯ ದರ | 14.56 | 18.24 | 12.70 | 11.42 | 8.79 |
| ಋಣದ ಸರಾಸರಿ ಬಡ್ಡಿ ದರ [ಬಡ್ಡಿಯ ಪಾವತಿಗಳು/(ಸಾರ್ವಜನಿಕ ಋಣದ ಆರಂಭಿಕ ಶಿಲ್ಕು + ಸಾರ್ವಜನಿಕ ಋಣದ ಅಂತಿಮ ಶಿಲ್ಕು/2)] | 10.62 | 9.81 | 10.10 | 9.94 | 9.56 |
| ಬಡ್ಡಿ / ರಾಜಸ್ವ ಸ್ವೀಕೃತಿಗಳು | 9.53 | 8.96 | 9.41 | 9.55 | 9.65 |
| ಋಣ ಮರುಪಾವತಿ/ಋಣ ಸ್ವೀಕೃತಿಗಳು | 27.68 | 22.08 | 22.00 | 19.50 | 23.82 |
| ರಾಜ್ಯದ ನಿವ್ವಳ ಋಣ ಲಭ್ಯತೆ (ಕೋಟಿ ರೂಪಾಯಿಗಳಲ್ಲಿ) | 9,738 | 13,470 | 17,062 | 16,962 | 23,736 |

*ಆಕರ: ಹಣಕಾಸು ಲೆಕ್ಕಗಳು.*

* *ಸಾರ್ವಜನಿಕ ಲೆಕ್ಕ ಜವಾಬ್ದಾರಿಗಳು ಮತ್ತು ಆಯವ್ಯಯ ಹೊರಗಿನ ಸಾಲಗಳನ್ನು ಬಿಟ್ಟು*

- 2016–17ರಲ್ಲಿ ಬಾಕಿ ಇರುವ ಋಣದ ವೃದ್ಧಿಯ ದರವು ಶೇಕಡ 19.37ರಷ್ಟಿದ್ದು, ಇದು 2012–13 (ಶೇಕಡ 14.91) ಕ್ಕಿಂತಲೂ ಶೇಕಡ 4ರಷ್ಟು ಹೆಚ್ಚಾಗಿದೆ;
- 2016–17ನೇ ವರ್ಷದಲ್ಲಿ ಋಣ ಹಾಗೂ ಇತರ ಜವಾಬ್ದಾರಿಗಳ ಮೇಲಿನ ಬಡ್ಡಿ ಪಾವತಿಯು ₹12,850 ಕೋಟಿಗಳಷ್ಟಿದ್ದು, ರಾಜಸ್ವ ಸ್ವೀಕೃತಿಗಳ ಶೇಕಡ 9.6ರಷ್ಟಾಗಿ, ಹಿಂದಿನ ವರ್ಷಕ್ಕಿಂತ ಶೇಕಡ 0.09ರಷ್ಟು ಹೆಚ್ಚಾಗಿದೆ. ಬಡ್ಡಿ ಪಾವತಿ/ರಾಜಸ್ವ ಸ್ವೀಕೃತಿಗಳ ಅನುಪಾತವು 2015–16

ಮತ್ತು 2016–17ರಲ್ಲಿ 9.6ರಲ್ಲೇ ಉಳಿದಿದ್ದು, ಇದು 2016–17ನೇ ವರ್ಷದಲ್ಲಿ ರಾಜಸ್ವ ಸ್ವೀಕೃತಿಗಳಿಗೆ ಹೋಲಿಸಿದರೆ, (ಶೇಕಡ 12.11) ಬಡ್ಡಿ ಪಾವತಿಗಳಲ್ಲಿನ ಹೆಚ್ಚಳದಿಂದ (ಶೇಕಡ 13.29ರಷ್ಟು) ಉಂಟಾಗಿದೆ;

- ಋಣ ಮರುಪಾವತಿ/ಋಣ ಸ್ವೀಕೃತಿಗಳ ಅನುಪಾತದಲ್ಲಿನ ಹೆಚ್ಚಳವು ಮುಖ್ಯವಾಗಿ ಒಟ್ಟು ಋಣ ಸ್ವೀಕೃತಿಗಳಲ್ಲಿ ₹10,084 ಕೋಟಿಗಳಷ್ಟು ಏರಿಕೆಯಾಗಿದ್ದು, 2016–17ನೇ ವರ್ಷದ ಋಣ ಮರುಪಾವತಿಯು ₹3,310 ಕೋಟಿಗಳಷ್ಟು ಹೆಚ್ಚಾದ್ದರಿಂದ ಉಂಟಾಗಿದೆ; ಮತ್ತು

- ರಾಜ್ಯಕ್ಕೆ ನಿವ್ವಳ ಋಣ ಲಭ್ಯತೆಯಲ್ಲಿನ ಏರಿಕೆಗೆ, 2015–16ರಲ್ಲಿ ₹19,801 ಕೋಟಿಯಷ್ಟಿದ್ದ ಆಂತರಿಕ ಋಣ ಸ್ವೀಕೃತಿಯು 2016–17ರಲ್ಲಿ ₹29,238 ಕೋಟಿಗೆ ಏರಿದ್ದು (**ಅನುಬಂಧ 1.4**) ಮತ್ತು ಭಾರತ ಸರ್ಕಾರದ ಸಾಲ ಮತ್ತು ಮುಂಗಡಗಳು ₹647 ಕೋಟಿಯಷ್ಟು ಏರಿಕೆಯಾಗಿದ್ದು ಮುಖ್ಯ ಕಾರಣವಾಗಿದೆ.

### 1.10.3. ಋಣ ಸ್ಥಿರತೆ

ಸರ್ಕಾರವು ಭವಿಷ್ಯದಲ್ಲಿ ಎದುರಾಗುವಂತಹ ಜವಾಬ್ದಾರಿಗಳಿಗೆ ನೆರವು ನೀಡಲು ಸಾಧ್ಯವಾದರೆ ಮತ್ತು ಋಣ–ರಾಒಆಂಉದ ಅನುಪಾತವು ನಿರ್ವಹಿಸಲಾಗದ ಪ್ರಮಾಣಕ್ಕೆ ವೃದ್ಧಿಸದಿದ್ದರೆ ವಿತ್ತೀಯ ಜವಾಬ್ದಾರಿಗಳು ಸಹಿಷ್ಣುವೆಂದು ಪರಿಗಣಿಸಬಹುದಾಗಿದೆ. ಸ್ಥಿರತೆಗೆ ಒಂದು ಅವಶ್ಯಕವಾದ ನಿಬಂಧನೆಯೆಂದರೆ ಅರ್ಥವ್ಯವಸ್ಥೆಯ ವೃದ್ಧಿದರವು ಸಾಲಗಳ ಹೊಣೆಯನ್ನು ಮೀರಿದ್ದರೆ, ಪ್ರಾಥಮಿಕ ಶಿಲ್ಕುಗಳು ಧನಾತ್ಮಕ/ಸೊನ್ನೆ/ಅತಿಯಾಗದ ಋಣಾತ್ಮಕವಾಗಿದ್ದ ಪಕ್ಷದಲ್ಲಿ ಋಣ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತವು ಸ್ಥಿರವಾಗಿರುತ್ತದೆ. ಪ್ರಾಥಮಿಕ ರಾಜಸ್ವ ಶಿಲ್ಕು ರಾಜಸ್ವ ಸ್ವೀಕೃತಿಗಳು ಮತ್ತು ಪ್ರಾಥಮಿಕ ರಾಜಸ್ವ ವೆಚ್ಚ ಇವುಗಳ ವ್ಯತ್ಯಾಸವಾಗಿದ್ದು ಪ್ರಸಕ್ತ ರಾಜಸ್ವ ವೆಚ್ಚವನ್ನು ಭರಿಸಿದ ನಂತರ ಉಳಿದಿರುವ ರಾಜಸ್ವ ಸ್ವೀಕೃತಿಯ ಶಿಲ್ಕು, ಬಡ್ಡಿ ವೆಚ್ಚವನ್ನು ಭರಿಸಲು ಸಾಕಷ್ಟಿದೆಯೆ ಎಂಬುದನ್ನು ಸೂಚಿಸುತ್ತವೆ. 2012–13ರಿಂದ 2016–17ರ ಅವಧಿಯಲ್ಲಿ ಪ್ರಾಥಮಿಕ ರಾಜಸ್ವ ಶಿಲ್ಕು ಧನಾತ್ಮಕವಾಗಿದ್ದು, ವೃದ್ಧಿತ ಬಡ್ಡಿ ವೆಚ್ಚವನ್ನು ಭರಿಸಲು ಸಾಕಷ್ಟಿತ್ತು.

### 1.10.4 ವೃದ್ಧಿತ ಋಣೇತರ ಸ್ವೀಕೃತಿಗಳ ಪರ್ಯಾಪ್ತತೆ

ಋಣ ಸಹಿಷ್ಣುತೆಯ ಮತ್ತೊಂದು ಸೂಚಕವು ಬಡ್ಡಿ ಜವಾಬ್ದಾರಿಯ ಹೆಚ್ಚಳ ಮತ್ತು ಪ್ರಾಥಮಿಕ ವೆಚ್ಚದ ಹೆಚ್ಚಳಗಳನ್ನು ಭರಿಸಲು ರಾಜ್ಯದ ಋಣೇತರ ಸ್ವೀಕೃತಿಗಳ ಹೆಚ್ಚಳವು ಸಾಕಷ್ಟಿರುವುದು. ಬಡ್ಡಿಯ ಹೊರೆಯ ಹೆಚ್ಚಳ ಮತ್ತು ಪ್ರಾಥಮಿಕ ವೆಚ್ಚದ ಹೆಚ್ಚಳವನ್ನು ಋಣೇತರ ಸ್ವೀಕೃತಿಗಳ ಹೆಚ್ಚಳವು ಭರಿಸುವಂತಾದರೆ ಋಣ ಸಹಿಷ್ಣುತೆಗೆ ಅನುಕೂಲವಾಗುತ್ತದೆ. ಋಣಾತ್ಮಕ ಸಂಪನ್ಮೂಲ ಅಂತರವು ಋಣದ ಅಸಹಿಷ್ಣುತೆಯನ್ನು ಸೂಚಿಸಿದರೆ ಧನಾತ್ಮಕ ಸಂಪನ್ಮೂಲಾಂತರವು ಋಣ ಸಹಿಷ್ಣುತೆಯನ್ನು ಸೂಚಿಸುತ್ತದೆ. **ಕೋಷ್ಟಕ 1.41**ರಲ್ಲಿ ಕಳೆದ ಐದು ವರ್ಷಗಳ ವಿವರಗಳನ್ನು ಸೂಚಿಸಿದೆ.

**ಕೋಷ್ಟಕ 1.41: ಋಣೇತರ ಸ್ವೀಕೃತಿಗಳ ಹೆಚ್ಚಳದ ಪರ್ಯಾಪ್ತತೆ**

(ಕೋಟಿ ರೂಪಾಯಿಗಳಲ್ಲಿ)

| ಕ್ರಮ ಸಂಖ್ಯೆ | | 2012–13 | 2013–14 | 2014–15 | 2015–16 | 2016–17 |
|---|---|---|---|---|---|---|
| 1 | ಸಾಲವಲ್ಲದ ಸ್ವೀಕೃತಿಗಳ ವೆಚ್ಚ | 8,231 | 11,372 | 14,497 | 14,993 | 14,112 |
| 2 | ಬಡ್ಡಿಪಾವತಿಗಳ ಹೆಚ್ಚಳ | 850 | 573 | 1,777 | 1,539 | 1,507 |
| 3 | ಪ್ರಾಥಮಿಕ ವೆಚ್ಚದ ಹೆಚ್ಚಳ | 9,588 | 13,384 | 15,204 | 13,047 | 22,101 |
| 4 | ಸಂಪನ್ಮೂಲ ಅಂತರ | (–) 2,207 | (–) 2,585 | (–) 2,484 | 407 | (–) 9,496 |

2012–13ರಿಂದ 2014–15ರವರೆಗೆ ಋಣಾತ್ಮಕವಾಗಿದ್ದ ಸಂಪನ್ಮೂಲಾಂತರವು 2015–16ರಲ್ಲಿ ಮತ್ತೆ ಧನಾತ್ಮಕವಾಗಿ ಮತ್ತೆ 2016–17ರಲ್ಲಿ ಋಣಾತ್ಮಕವಾಯಿತು. ಇದಕ್ಕೆ ರಾಜಸ್ವ ಸ್ವೀಕೃತಿಗಳ ವೃದ್ಧಿ ಅಷ್ಟೇ ಇದ್ದುದು ಮುಖ್ಯ ಕಾರಣವಾಗಿತ್ತು. ಅಂದರೆ, ರಾಜ್ಯವು ಪ್ರಸಕ್ತ ಸಾಲಿನ ರಾಜಸ್ವ ಮತ್ತು ಬಂಡವಾಳ ವೆಚ್ಚವನ್ನು ಭರಿಸಲು ಸಾಲದ ಹಣದ ಮೇಲೆ ಅವಲಂಬಿತವಾಗಿತ್ತು.

### 1.10.5 ಸಾಲಗಳ ಮೂಲಕ ಪಡೆದ ಮೊತ್ತಗಳ ನಿವ್ವಳ ಲಭ್ಯತೆ

ಋಣ ಸಹಿಷ್ಣುತೆಯು, ಋಣ ವಿಮೋಚನೆ (ಅಸಲು ಮತ್ತು ಬಡ್ಡಿ ಪಾವತಿಗಳು) ಮತ್ತು ಒಟ್ಟು ಋಣ ಸ್ವೀಕೃತಿಗಳ ಅನುಪಾತವನ್ನು ಮತ್ತು ಸಾಲವಾಗಿ ಪಡೆದ ಲಭ್ಯ ಮೊತ್ತಗಳ ಅನ್ವಯವನ್ನು ಅವಲಂಬಿಸಿರುತ್ತವೆ. ಋಣ ವಿಮೋಚನೆ ಮತ್ತು ಋಣ ಸ್ವೀಕೃತಿಗಳ ಅನುಪಾತವು ಋಣ ಸ್ವೀಕೃತಿಗಳು ಎಷ್ಟರ ಮಟ್ಟಿಗೆ ಋಣ ವಿಮೋಚನೆಗೆ ಬಳಸಲ್ಪಟ್ಟಿದೆ ಮತ್ತು ಬಂಡವಾಳ ವೆಚ್ಚಕ್ಕೆ ಸಾಲವಾಗಿ ಪಡೆದ ಮೊತ್ತಗಳ ನಿವ್ವಳ ಲಭ್ಯತೆ ಎಷ್ಟಿದೆ ಎಂಬುದನ್ನು ಸೂಚಿಸುತ್ತದೆ. ಋಣ ವಿಮೋಚನೆಯ ಅನುಪಾತವು 2012–13ರಿಂದ 2016–17ರ ಅವಧಿಯಲ್ಲಿ ಶೇಕಡ 19.5 ಮತ್ತು ಶೇಕಡ 27.68 ನಡುವೆ ಇತ್ತು. 2016–17ನೇ ಸಾಲಿನಲ್ಲಿ ಋಣ ವಿಮೋಚನಾ ಅನುಪಾತವು ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ಶೇಕಡ 4.3ರಷ್ಟು ಏರಿತ್ತು.

#### 1.10.5.1 ಹದಿಮೂರನೇ ಹಣಕಾಸು ಆಯೋಗದಲ್ಲಿ ನೀಡಿರುವ ಎನ್‌ಎಸ್‌ಎಸ್‌ಎಫ್ ಸಾಲಗಳ ಮೇಲಿನ ಬಡ್ಡಿ ಪರಿಹಾರದ ಕಡಿಮೆ ಸ್ವೀಕೃತಿ–₹192.42 ಕೋಟಿ

ರಾಷ್ಟ್ರೀಯ ಸಣ್ಣ ಉಳಿತಾಯ ನಿಧಿಗಳನ್ನು (ಎನ್‌ಎಸ್‌ಎಸ್‌ಎಫ್) ನಿಧಿಯ ಸ್ಥಾಪನೆಯ ದಿನಾಂಕದಿಂದ ಬಾಕಿಯಿದ್ದ ಸಣ್ಣ ಉಳಿತಾಯ ಠೇವಣಿಗಳನ್ನು ತೀರುವಳಿ ಮಾಡಲು ಕೇಂದ್ರ ಸರ್ಕಾರವು ಜವಾಬ್ದಾರಿ ವಹಿಸಿಕೊಳ್ಳುವಂತೆ ಏಪ್ರಿಲ್ 1999ರಿಂದ ಸಾರ್ವಜನಿಕ ಲೆಕ್ಕಗಳಲ್ಲಿ ಸೃಜಿಸಲಾಯಿತು. ಎನ್‌ಎಸ್‌ಎಸ್‌ಎಫ್‌ನ ಸೃಷ್ಟಿಯ ಪೂರ್ವದಲ್ಲಿ ಏಪ್ರಿಲ್ 1999ರಂದು ಬಾಕಿಯಿದ್ದ ಠೇವಣಿಗೆದುರಿನ ಸಾಲಗಳನ್ನು ಭಾರತದ ಸಂಚಿತ ನಿಧಿಯಿಂದ ರಾಜ್ಯ ಸರ್ಕಾರಗಳಿಗೆ ನೀಡಿದ್ದರಿಂದ ರಾಜ್ಯ ಸರ್ಕಾರದಿಂದ ಅಂತಹ ಸಾಲಗಳ ಮೇಲೆ ಬಂದ ಬಡ್ಡಿಯನ್ನು ಭಾರತದ ಸಂಚಿತ ನಿಧಿಗೆ ಜಮೆಯಾಗಿದ್ದು ಭಾರತ ಸರ್ಕಾರದ ತೆರಿಗೆಯೇತರ ಸ್ವೀಕೃತಿಯಾಗಿ ಲೆಕ್ಕ ಹಾಕಲಾಗಿದೆ.

2001–02ರವರೆಗೂ ರಾಜ್ಯದಲ್ಲಿನ ನಿವ್ವಳ ಸಣ್ಣ ಉಳಿತಾಯ ಸಂಗ್ರಹಣೆಯು (ಒಟ್ಟು ಸಂಗ್ರಹಣೆಯಿಂದ ಠೇವಣಿದಾರರಿಗೆ ಮಾಡಿದ ಮರುಪಾವತಿಯನ್ನು ಕಳೆದು) ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಡುವೆ ಹಂಚಿಕೆಯಾಗುತ್ತದೆ. ರಾಜ್ಯ ಸರ್ಕಾರದ ಪಾಲು 1 ಏಪ್ರಿಲ್ 1987ರಿಂದ ಸತತವಾಗಿ ಶೇಕಡ 66.66ರಿಂದ ಶೇಕಡ 75ರವರೆಗೆ ಹೆಚ್ಚಾಗಿದ್ದು ಏಪ್ರಿಲ್ 2000ದಿಂದ ಶೇಕಡ 80ಕ್ಕೆ ಏರಿತು. 01.04.2002ರಿಂದ 31.03.2007ರವರೆಗೆ ರಾಜ್ಯದ ಸಂಪೂರ್ಣನಿವ್ವಳ ಸಂಗ್ರಹಣೆಯನ್ನು ರಾಜ್ಯ ಸರ್ಕಾರವು ಜಾರಿ ಮಾಡಿದ ವಿಶೇಷ ಭದ್ರತೆಗಳಲ್ಲಿ ಹೂಡಿಕೆಯಾಗುತ್ತಿತ್ತು. ಆದಾಗ್ಯೂ, 2007–08ರಿಂದ ರಾಜ್ಯದ ಕಡ್ಡಾಯ ಪಾಲನ್ನು ಶೇಕಡ 80ಕ್ಕೆ ಇಳಿಸಲಾಗಿದ್ದು ಶೇಕಡ 100ರವರೆಗೆ ಹೋಗಲು ಅವಕಾಶವಿದೆ. ನಿಧಿಯ ನಿರ್ವಹಣೆಯು ಭಾರತೀಯ ರಿಸರ್ವ್ ಬ್ಯಾಂಕಿನೊಂದಿಗಿದೆ.

ಹದಿಮೂರನೇ ಹಣಕಾಸು ಆಯೋಗವು ಕಂಡಿಕೆ 9.106ರಲ್ಲಿ 2006–07ರವರೆಗೂ ರಾಜ್ಯಗಳಿಗೆ ನೀಡಿದ ಮತ್ತು 2009–10ರ ಅಂತ್ಯಕ್ಕೆ ಬಾಕಿ ಇರುವ ಎನ್‌ಎಸ್‌ಎಸ್‌ಎಫ್ ಸಾಲಗಳನ್ನು ಶೇಕಡ 9ರ ಬಡ್ಡಿ ದರಕ್ಕೆ ಪುನ: ಅಳವಡಿಸಲು ಶಿಫಾರಸ್ಸು ಮಾಡಿತ್ತು ಮತ್ತು ವಿತ್ತೀಯ ಜವಾಬ್ದಾರಿ ಮತ್ತು ಆಯವ್ಯಯ ನಿರ್ವಹಣೆ ಕಾಯಿದೆಯು ಚಾಲ್ತಿಯಲ್ಲಿರುವ ರಾಜ್ಯಗಳು ಕಂಡಿಕೆ 9.82ರಲ್ಲಿ ಆಯೋಗವು ಸೂಚಿಸಿರುವಂತೆ ತಿದ್ದುಪಡಿ ಮಾಡುವುದು, ಹಣಕಾಸು ಆಯೋಗವು ಕಂಡಿಕೆ 9.85ರಲ್ಲಿ ಸೂಚಿಸಿರುವ ರಾಜ್ಯಗಳಿಗೆ ಸಾಲಮಿತಿಗಳನ್ನು ನಿರ್ದಿಷ್ಟಪಡಿಸುವ ಮತ್ತು ಮುಕ್ತ ಮಾರುಕಟ್ಟೆ ಸಾಲಗಳನ್ನು ಪರಿಮಿತಿಸುವ ವ್ಯವಸ್ಥೆಯು ಪರಿಣಾಮಕಾರಿ ಅಸ್ತ್ರದಂತೆ ಕೆಲಸ ಮಾಡುವುದರಿಂದ ಗುರಿಯನ್ನು ಪಾಲಿಸುವಲ್ಲಿ ಮತ್ತಾವ ನಿಬಂಧನೆಗಳನ್ನು ನಿಗದಿಪಡಿಸಲಿಲ್ಲ.

30 ಡಿಸೆಂಬರ್ 2009ರಂದು ಹದಿಮೂರನೇ ಹಣಕಾಸು ಆಯೋಗವು ಮಾಡಿದ ಶಿಫಾರಸ್ಸಿನ ಮೇಲೆ ಕೈಗೊಂಡ ಕ್ರಮದ ಬಗ್ಗೆ ಭಾರತ ಸರ್ಕಾರದ ಆರ್ಥಿಕ ಮಂತ್ರಾಲಯ, ಆರ್ಥಿಕ ಕಾರ್ಯವಿಭಾಗ ಇಲಾಖೆಯು ರಾಷ್ಟ್ರಪತಿಗಳಿಗೆ ಸಲ್ಲಿಸಿದ ವರದಿಯಲ್ಲಿ ರಾಜ್ಯಗಳಿಗೆ ನೀಡಿದ ಎನ್‌ಎಸ್‌ಎಸ್‌ಎಫ್ ಸಾಲಗಳ ಮೇಲಿನ ಬಡ್ಡಿಯನ್ನು ಪರಿಷ್ಕರಿಸಿದ ಶಿಫಾರಸ್ಸಿಗೆ ಸರ್ಕಾರವು ತಾತ್ವಿಕ ಒಪ್ಪಿಗೆ ನೀಡಿದೆಯೆಂದು ಹೇಳಿತು. ಆದಾಗ್ಯೂ, ಶಿಫಾರಸ್ಸುಗಳು ಸಮಗ್ರವಾಗಿರುವುದಿರಂದ ಮತ್ತು ಬಡ್ಡಿ ಹೊಂದಾಣಿಕೆಯಿಲ್ಲ ದಿರುವುದು ಅವಧಿಯ ಹೊಂದಾಣಿಕೆಯಿಲ್ಲದಿರುವುದು ಮತ್ತಿತರ ಆಡಳಿತಾತ್ಮಕ ವಿಷಯಗಳನ್ನು ಒಳಗೊಂಡಿರುವುದರಿಂದ ಆರ್ಥಿಕ ಮಂತ್ರಾಲಯವು ಶಿಫಾರಸ್ಸಿನ ಅನುಷ್ಠಾನಕ್ಕೆ ವಿವರವಾದ ರೂಪುರೇಷೆಗಳನ್ನು ಸಿದ್ಧಪಡಿಸಲು ಸಮಿತಿಯೊಂದನ್ನು ರಚಿಸಲಾಗುವುದು.

ಭಾರತೀಯ ರಿಸರ್ವ್ ಬ್ಯಾಂಕ್ ಒದಗಿಸಿದ ಹದಿಮೂರನೇ ಹಣಕಾಸು ಆಯೋಗದ ಶಿಫಾರಸ್ಸಿನ ಮೇರೆಗೆ ರಾಜ್ಯ ಸರ್ಕಾರಕ್ಕೆ ದೊರೆತ ಬಡ್ಡಿ ಪರಿಹಾರದ ದತ್ತಾಂಶ ಮತ್ತು ಲೆಕ್ಕಗಳಿಂದ ಪರಿಶೀಲಿಸಿದಂತೆ, ಶಿಫಾರಸ್ಸು ಮಾಡಿದ ₹589.96 ಕೋಟಿಗಳಿಗೆದುರಾಗಿ ಕೇವಲ ₹397.54 ಕೋಟಿ ಮಾತ್ರ ರಾಜ್ಯ ಸರ್ಕಾರದಿಂದ ಸ್ವೀಕೃತವಾಗಿದ್ದು **ಕೋಷ್ಟಕ 1.42**ರಲ್ಲಿ ವಿವರಿಸಿರುವಂತೆ, ₹192.42 ಕೋಟಿಗಳಷ್ಟು ಕಡಿಮೆಯಿದ್ದಿತು.

**ಕೋಷ್ಟಕ 1.42: 2010–11ರಿಂದ 2014–15ವರೆಗೆ ಕಡಿಮೆ ಸ್ವೀಕರಿಸಿದ ಬಡ್ಡಿ ಪರಿಹಾರ**

(ಕೋಟಿ ರೂಪಾಯಿಗಳಲ್ಲಿ)

| ವರ್ಷ | ಹದಿಮೂರನೇ ಹಣಕಾಸು ಆಯೋಗವು ಶಿಫಾರಸ್ಸು ಮಾಡಿದ ಬಡ್ಡಿ ಪರಿಹಾರ | ದೊರೆತ ಬಡ್ಡಿ ಪರಿಹಾರ | ಬರಬೇಕಾದ ಬಡ್ಡಿ ಪರಿಹಾರ |
|---|---|---|---|
| 1 | 2 | 3 | 2–3=4 |
| 2010–11 | 132.77 | 45.17 | 87.60 |
| 2011–12 | 125.77 | 123.78 | 1.99 |
| 2012–13 | 118.12 | 118.12 | 0.00 |
| 2013–14 | 110.47 | 110.47 | 0.00 |
| 2014–15 | 102.83 | 0.00 | 102.83 |
| ಒಟ್ಟು | **589.96** | **397.54** | **192.42** |

2010–11 ಮತ್ತು 2011–12ರ ಅವಧಿಯಲ್ಲಿ ಆಯೋಗವು ಶಿಫಾರಸ್ಸು ಮಾಡಿದ ಪರಿಹಾರದ ಮೊತ್ತವು ಮತ್ತು ನೀಡಲಾದ ಬಡ್ಡಿ ಪರಿಹಾರವು ತಾಳೆಯಾಗದಿದ್ದುದರಿಂದ ನೀಡಲಾದ ಬಡ್ಡಿ ಪರಿಹಾರವು ಕಡಿಮೆಯಿದ್ದಿತು. ರಾಜ್ಯ ಸರ್ಕಾರವು ಹದಿಮೂರನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ವಿತ್ತೀಯ ಜವಾಬ್ದಾರಿ ಅಧಿನಿಯಮಕ್ಕೆ ತಿದ್ದುಪಡಿ ಮಾಡಿತು ಮತ್ತು ಅಧಿನಿಯಮದ ಅನುವುಗಳಿಗೆ ಬದ್ಧವಾಗಿತ್ತು ಮತ್ತು ವಿತ್ತೀಯ ಕ್ರೋಢೀಕರಣದ ಹಾದಿಯಿಂದ ಮಾರ್ಗಪಲ್ಲಟವಾಗಿರಲಿಲ್ಲ.

ಈ ವಿಷಯವನ್ನು ರಾಜ್ಯ ಸರ್ಕಾರದ ಗಮನಕ್ಕೆ ಅಭಿಪ್ರಾಯಕ್ಕಾಗಿ ತರಲಾಯಿತು (ಏಪ್ರಿಲ್ 2017). ಆರ್ಥಿಕ ಇಲಾಖೆಯು ಭಾರತ ಸರ್ಕಾರದ ಆರ್ಥಿಕ ಮಂತ್ರಾಲಯ, ಆರ್ಥಿಕ ಕಾರ್ಯ ವಿಭಾಗದ ಬರೆದ ಪತ್ರದಲ್ಲಿ ಬಡ್ಡಿ ಪರಿಹಾರವು ಶಿಫಾರಸ್ಸು ಮಾಡಿದ ಎರಡು ವರ್ಷಗಳ ಬಳಿಕ ಜನವರಿ 2013ರಿಂದ ಸ್ವೀಕೃತವಾಗಲು ಪ್ರಾರಂಭವಾಗಿದ್ದು ಆ ಪತ್ರದ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಲಾಗಿದೆ (ಜುಲೈ 2017). ಇದು ಬಡ್ಡಿ ಪರಿಹಾರದ ಲಾಭವು ತಡವಾಗಿ ತಲುಪುವುದರಲ್ಲಿ ಪರಿಣಮಿಸಿತು. ಅದಲ್ಲದೆ, ₹397.54 ಕೋಟಿಗಳ ಬಡ್ಡಿ ಪರಿಹಾರವು ಆರ್ಥಿಕ ವರ್ಷ 2013–14ರವರೆಗೆ ಮಾತ್ರ ಒಳಗೊಂಡಿತ್ತು. ಆದರೆ ಆಯೋಗವು 2014–15ರ ಸಾಲಿಗೆ ಲೆಕ್ಕ ಮಾಡಿದ ₹102.83 ಕೋಟಿಗಳ ಬಡ್ಡಿ ಪರಿಹಾರವನ್ನು ವಿಸ್ತರಿಸಲಾಗಿಲ್ಲ.

ಭಾರತ ಸರ್ಕಾರದ ಆರ್ಥಿಕ ಮಂತ್ರಾಲಯ, ಆರ್ಥಿಕ ಕಾರ್ಯವಿಭಾಗ (ಆಯವ್ಯಯ ವಿಭಾಗ) ತನ್ನ ಉತ್ತರದಲ್ಲಿ (ಜುಲೈ 2017) ರಾಜ್ಯಕ್ಕೆ ಹಣವು ಬಿಡುಗಡೆಯಾದ ದಿನದಿಂದ ಬಾಕಿಯಿರುವ ಬಡ್ಡಿ ಪರಿಹಾರವನ್ನು ವಾರ್ಷಿಕ ಆಧಾರದ ಮೇಲೆ ಲೆಕ್ಕ ಹಾಕಬೇಕು. ಆದ್ದರಿಂದ ಹದಿಮೂರನೇ ಹಣಕಾಸು ಆಯೋಗವು ಲೆಕ್ಕ ಹಾಕಿದ ಮೊತ್ತಕ್ಕೂ ಮತ್ತು ಕರ್ನಾಟಕದಿಂದ ಸ್ವೀಕರಿಸಿದ ಬಡ್ಡಿ ಪರಿಹಾರಕ್ಕೂ ವ್ಯತ್ಯಾಸವಿದೆ. ಅದಲ್ಲದೇ, 2014–15ನೇ ಸಾಲಿಗೆ ಕರ್ನಾಟಕಕ್ಕೆ ಬಡ್ಡಿ ಪರಿಹಾರವನ್ನು ನೀಡಲು ಭಾರತೀಯ ರಿಸರ್ವ್ ಬ್ಯಾಂಕಿಗೆ ಹೇಳಲಾಗಿದೆಯೆಂದು ಹೇಳಿತು.

## 1.11 ವಿತ್ತೀಯ ಅಸಮತೆಗಳು

ರಾಜಸ್ವ, ವಿತ್ತೀಯ ಮತ್ತು ಪ್ರಾಥಮಿಕ ಕೊರತೆಗಳಾದ ಮೂರು ಪ್ರಮುಖ ವಿತ್ತೀಯ ಪ್ರಮಿತಿಗಳು ನಿರ್ದಿಷ್ಟ ಅವಧಿಯೊಂದರಲ್ಲಿ ರಾಜ್ಯಸರ್ಕಾರದ ಒಟ್ಟು ವಿತ್ತೀಯ ಅಸಮತೆಗಳ ವ್ಯಾಪ್ತಿಯನ್ನು ಸೂಚಿಸುತ್ತದೆ. ಸರ್ಕಾರಿ ಲೆಕ್ಕದಲ್ಲಿ ಕೊರತೆಯು ಅದರ ಸ್ವೀಕೃತಿ ಮತ್ತು ವೆಚ್ಚಗಳಲ್ಲಿನ ಅಂತರವನ್ನು ಬಿಂಬಿಸುತ್ತದೆ. **ನಕ್ಷೆ 1.18** ಸರ್ಕಾರವು ಆಯವ್ಯಯವನ್ನು ಸರಿದೂಗಿಸಲು ಸಾಲಗಳನ್ನು ಕೊಂಡರೆ ಆಗುವ ವಿವಿಧ ಮಾದರಿಯ ಕೊರತೆಗಳನ್ನು ಸೂಚಿಸುತ್ತದೆ.

**ನಕ್ಷೆ 1.18 ವಿವಿಧ ಕೊರತೆಗಳು**




ಕೊರತೆಯ ಸ್ವರೂಪವು ಸರ್ಕಾರದ ವಿತ್ತೀಯ ನಿರ್ವಹಣೆಯ ವಿವೇಚನೆಯ ಸೂಚಕವಾಗಿದೆ. ಅದಲ್ಲದೆ, ಕೊರತೆಯನ್ನು ತುಂಬುವ ಮತ್ತು ಹೊಂದಿಸಿದ ಸಂಪನ್ಮೂಲಗಳನ್ನು ಬಳಸುವ ರೀತಿಗಳು ರಾಜ್ಯದ ವಿತ್ತೀಯ ಸ್ವಾಸ್ಥ್ಯದ ಪ್ರಮುಖ ಸೂಚಕಗಳಾಗಿದೆ. ಈ ವಿಭಾಗವು ಕೊರತೆಗಳ ಪ್ರವೃತ್ತಿ, ಸ್ವಭಾವ ಮತ್ತು ಗಾತ್ರಗಳನ್ನು ಹಾಗೂ ಅವುಗಳ ಪೂರೈಕೆಯ ವಿಧಾನವನ್ನು ತೋರಿಸುತ್ತದೆ ಹಾಗೂ 2016–17ರಲ್ಲಿ ರಾಜಸ್ವ ಮತ್ತು ವಿತ್ತೀಯ ಕೊರತೆಗಳ ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮದ ಗುರಿಗಳು ಹಾಗೂ ಅವುಗಳ ನೈಜ ಸ್ತರಗಳ ತುಲನೆಯನ್ನು ಸಹ ನೀಡುತ್ತದೆ.

### 1.11.1 ಕೊರತೆಗಳ ಪ್ರವೃತ್ತಿಗಳು

**ನಕ್ಷೆ 1.19** ಮತ್ತು **ನಕ್ಷೆ 1.20**ಗಳು 2012–13 ರಿಂದ 2016–17ರ ಅವಧಿಯಲ್ಲಿ ಕೊರತೆ ಸೂಚಕಗಳಲ್ಲಿನ ಪ್ರವೃತ್ತಿಗಳನ್ನು ಸೂಚಿಸುತ್ತವೆ.

**ನಕ್ಷೆ 1.19: ವಿತ್ತೀಯ ಸೂಚಕಗಳ ಪ್ರವೃತ್ತಿ**



ನಕ್ಷೆ 1.20: ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಾಪೇಕ್ಷವಾಗಿ ಕೊರತೆ ಸೂಚಿಗಳ ಪ್ರವೃತ್ತಿ




ಹದಿಮೂರನೇ ಹಣಕಾಸು ಆಯೋಗದ ಮತ್ತು ಹದಿನಾಲ್ಕನೇ ಹಣಕಾಸು ಆಯೋಗದ ಅವಧಿಗೆ ನಿಗದಿಪಡಿಸಿದ ರಾಜಸ್ವ ಮತ್ತು ವಿತ್ತೀಯ ಕೊರತೆಗಳ ಗುರಿಗಳು ಮತ್ತವುಗಳ ವಾಸ್ತವ ಸ್ತರಗಳನ್ನು **ಕೋಷ್ಟಕ 1.43**ರಲ್ಲಿ ನೀಡಲಾಗಿದೆ.

### ಕೋಷ್ಟಕ 1.43: ವಿತ್ತೀಯ ಜವಾಬ್ದಾರಿ ಅಧಿನಿಯಮದಡಿ ಗುರಿಗಳಿಗೆ ಪ್ರತಿಯಾಗಿ ಸಾಧನೆಗಳು

| ಅವಧಿ | ರಾಜಸ್ವ ಕೊರತೆ/ಹೆಚ್ಚಳ | | ವಿತ್ತೀಯ ಕೊರತೆ (ಶೇಕಡಾವಾರು) | |
|---|---|---|---|---|
| | ವಿಜುಆರಂತೆ ಗುರಿಗಳು | ವಾಸ್ತವ | ವಿ.ಜು.ಆ.ರಂತೆ ಗುರಿಗಳು | ವಾಸ್ತವ |
| **ಹದಿಮೂರನೇ ಹಣಕಾಸು ಆಯೋಗ (2010–15)** | | | | |
| 2012–13 | ರಾಜಸ್ವ ಹೆಚ್ಚಳ ಮುಂದುವರಿಕೆ | ಗುರಿಯನ್ನು ಮುಟ್ಟಲಾಗಿದೆ | 3.00 | 2.10 |
| 2013–14 | | | 3.00 | 2.09 |
| 2014–15 | | | 3.00 | 2.12 |
| **ಹದಿನಾಲ್ಕನೇ ಹಣಕಾಸು ಆಯೋಗ (2015–20)** | | | | |
| 2015–16 | ರಾಜಸ್ವ ಹೆಚ್ಚಳ ಮುಂದುವರಿಕೆ | ಗುರಿಯನ್ನು ಮುಟ್ಟಲಾಗಿದೆ | 3.00 | 1.87 |
| 2016–17 | | | 3.00 | 2.57 |

ರಾಜ್ಯ ಸರ್ಕಾರವು 2012–13 ರಿಂದ 2016–17ರ ಅವಧಿಯಲ್ಲಿ ರಾಜಸ್ವ ಹೆಚ್ಚಳವನ್ನು ನಿರ್ವಹಿಸುವಲ್ಲಿ ಸಫಲವಾಗಿದೆ. ವಿತ್ತ ಸುಧಾರಣಾ ಕಾಯಿದೆಯಲ್ಲಿ ನಿಗದಿಪಡಿಸಿದ್ದಂತೆ ಮಾರ್ಚ್ 2006ರೊಳಗೆ ರಾಜಸ್ವ ಕೊರತೆಯನ್ನು ತೊಡೆದು ಹಾಕುವ ಗುರಿಯನ್ನು ರಾಜ್ಯಸರ್ಕಾರವು ಒಂದು ವರ್ಷ ಮುಂಚಿತವಾಗಿಯೇ, 2004–05ರಲ್ಲಿಯೇ ಸಾಧಿಸಿದ್ದು ಪ್ರಶಂಸನೀಯವಾಗಿದೆ. ನಂತರ ರಾಜ್ಯ ಸರ್ಕಾರವು 2016–17ರವರೆಗೂ ಅಂತರ್‌ವರ್ಷ ವ್ಯತ್ಯಯದೊಂದಿಗೆ ರಾಜಸ್ವ ಹೆಚ್ಚಳವನ್ನು ಕಾಯ್ದುಕೊಂಡು ಬಂದಿದೆ. 2015–16ರಲ್ಲಿ ರಾಜಸ್ವ ಹೆಚ್ಚಳವು ಹಿಂದಿನ ವರ್ಷಕ್ಕಿಂತ ₹1,261 ಕೋಟಿಗಳಷ್ಟು ಹೆಚ್ಚಾಗಿ ₹1,789 ಕೋಟಿಗಳಷ್ಟಿತ್ತು. ಆದಾಗ್ಯೂ, 2016–17ನೇ ವರ್ಷದಲ್ಲಿ ರಾಜಸ್ವ ಹೆಚ್ಚುವರಿ ಕಡಿಮೆಯಾಗಿದ್ದು ₹1,293 ಕೋಟಿಗಳಷ್ಟಿತ್ತು.

ವಿತ್ತೀಯ ಜವಾಬ್ದಾರಿ ಅಧಿನಿಯಮದ ಗುರಿಯಾದ ರಾಒಆಂಉಕ್ಕೆ ವಿತ್ತೀಯ ಕೊರತೆಯನ್ನು ಶೇಕಡ ಮೂರಕ್ಕಿಂತ ಕಡಿಮೆಯಿರುವುದನ್ನು ಸಾಧಿಸಲಾಯಿತು. 2016–17ರಲ್ಲಿ, ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ರಾಒಆಂಉ ಕ್ಕೆ ವಿತ್ತೀಯ ಕೊರತೆಯ ಅನುಪಾತದಲ್ಲಿ ಏರಿಕೆಯಾಗಿ ಶೇಕಡ 2.57ರಷ್ಟು ರಾಜ್ಯ ಸರ್ಕಾರದಿಂದ ತಿಳಿಸಲಾದ ರಾಒಆಂಉದ ಅಂಕಿಯನ್ನು (₹11,17,334 ಕೋಟಿ) ಪರಿಗಣಿಸಿದಲ್ಲಿ ನಿಗದಿತ ಗುರಿಯಾದ ಶೇಕಡ 3ರ ಒಳಗಿತ್ತು.

### ರಾಜಸ್ವ ಹೆಚ್ಚಳ

ರಾಜಸ್ವ ಹೆಚ್ಚಳವು, ರಾಜಸ್ವ ಸ್ವೀಕೃತಿಗಳು ಮತ್ತು ರಾಜಸ್ವ ವೆಚ್ಚದ ನಡುವಿನ ಅಂತರವನ್ನು ಪ್ರತಿನಿಧಿಸುತ್ತದೆ. ರಾಜಸ್ವ ಹೆಚ್ಚಳವು ಸಾಲಗಳನ್ನು ಕಡಿಮೆಗೊಳಿಸಲು ಸಹಾಯ ಮಾಡುತ್ತದೆ. ರಾಜಸ್ವ ಹೆಚ್ಚಳವು 2012–13ರಲ್ಲಿದ್ದ ₹1,883 ಕೋಟಿಯಿಂದ 2013–14ರಲ್ಲಿ ₹353 ಕೋಟಿಗೆ ತೀವ್ರವಾಗಿ

ಇಳಿದಿದ್ದು ಇದು ರಾಜಸ್ವ ಲೆಕ್ಕದಲ್ಲಿನ ಬದ್ಧ ವೆಚ್ಚಗಳಾದ ಸಂಬಳ, ವಿಶ್ರಾಂತಿ ವೇತನ, ಬಡ್ಡಿ, ಸಹಾಯಧನ ಮತ್ತು ವಿತ್ತೀಯ ಅಂತರವನ್ನು ಪ್ರಭಾವಿಸುವ ನಿಧಿ ವರ್ಗಾವಣೆಗಳಿಂದ ಉಂಟಾಗಿತ್ತು. 2016–17ರಲ್ಲಿ ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ ರಾಜ್ಯದ ಪಾಲಿನಲ್ಲಿನ ಹೆಚ್ಚಳ ಮತ್ತು ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆಯಲ್ಲಿನ ಹೆಚ್ಚಳದಿಂದ (₹1,031.71 ಕೋಟಿ) ರಾಜಸ್ವ ಹೆಚ್ಚಳವು ₹940 ಕೋಟಿಯಷ್ಟು ಹೆಚ್ಚಾಗಿ ₹1,293 ಕೋಟಿಯಷ್ಟಿತ್ತು. ಇದು ಸರ್ಕಾರವು ಹೆಚ್ಚಳವನ್ನು ಕಾಯ್ದು ಕೊಳ್ಳುವಲ್ಲಿ ನೆರವಾಯಿತು.

2016–17ರಲ್ಲಿ ರಾಜಸ್ವ ಸ್ವೀಕೃತಿಗಳ ಮತ್ತು ರಾಜಸ್ವ ವೆಚ್ಚದ ವೃದ್ಧಿಯು ಶೇಕಡ 12 ಮತ್ತು 13ರಷ್ಟಿತ್ತು. ಆದ್ದರಿಂದ ರಾಜಸ್ವ ಹೆಚ್ಚಳವು ಗಮನೀಯವಾಗಿ ಹೆಚ್ಚಳವಾಗಿ ರಾಜಸ್ವ ಲೆಕ್ಕದಲ್ಲಿನ ಹೆಚ್ಚಳಕ್ಕೆ ಹೊಣೆಯಾದ ಅಂಶಗಳ ಬಗ್ಗೆ **ಕಂಡಿಕೆ 1.1.2**ರಲ್ಲಿ ಚರ್ಚಿಸಲಾಗಿದೆ.

ರಾಜ್ಯ ಸರ್ಕಾರವು ಮಧ್ಯಮಾವಧಿ ವಿತ್ತೀಯ ಯೋಜನೆ (2016–20)ರಲ್ಲಿ, ರಾಜ್ಯದ ಆಯವ್ಯಯ ಗಾತ್ರವು ವರ್ಷಾವರ್ಷ ಹೆಚ್ಚಾಗಿದ್ದು, ಅದು ಬಹುತೇಕ ಬದ್ಧ ವೆಚ್ಚಗಳಿಂದ ಕೂಡಿದೆ ಎಂದು ಹೇಳಿದೆ. ಇದು ರಾಜ್ಯಕ್ಕೆ ವೆಚ್ಚದ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿನ ಹಾದಿಯನ್ನು ಕಡಿಮೆಗೊಳಿಸುತ್ತದೆ ಮತ್ತು ಬದ್ಧವೆಚ್ಚಗಳನ್ನು ಭರಿಸಿದ ನಂತರ ಸೀಮಿತ ರಾಜಸ್ವ ಅವಕಾಶವಿರುತ್ತದೆ. ಆದ್ದರಿಂದ ರಾಜ್ಯ ಸರ್ಕಾರವು ವೆಚ್ಚದ ಭಾಗದಲ್ಲಿ ಅಂತಹ ಬದ್ಧ ವೆಚ್ಚಗಳನ್ನು ಸುಧಾರಿಸಲು, ಮಧ್ಯಮಾವಧಿ ತಿದ್ದುಪಡಿಗಳನ್ನು ಮಾಡುವ ಅವಶ್ಯಕತೆಯಿದೆ.

### ವಿತ್ತೀಯ ಕೊರತೆ

ವಿತ್ತೀಯ ಕೊರತೆ ಸರ್ಕಾರದ ನಿವ್ವಳ ಜವಾಬ್ದಾರಿಗಳ ಹೆಚ್ಚಳ ಅಥವಾ ಅದರ ಹೆಚ್ಚುವರಿ ಸಾಲಗಳನ್ನು ಸೂಚಿಸುತ್ತದೆ. ಈ ಕೊರತೆಯನ್ನು ಹೆಚ್ಚುವರಿ ಸಾರ್ವಜನಿಕ ಋಣ (ಆಂತರಿಕ ಅಥವಾ ಹೊರಗಿನ) ಅಥವಾ ಸಾರ್ವಜನಿಕ ಲೆಕ್ಕದಿಂದ ಹೆಚ್ಚುವರಿ ನಿಧಿಗಳನ್ನು ಬಳಸುವುದರ ಮೂಲಕ ಪೂರೈಸಬಹುದು. ಪ್ರಮುಖ ಅಂಶಗಳಿಗೆ ಸಂಬಂಧಿಸಿದ ಕೊರತೆಯ ಪ್ರವೃತ್ತಿಗಳೊಂದಿಗೆ ವಿತ್ತೀಯ ಕೊರತೆಯ ಪ್ರವೃತ್ತಿಗಳನ್ನು **ಕೋಷ್ಟಕ 1.44**ರಲ್ಲಿ ಸೂಚಿಸಿದೆ.

**ಕೋಷ್ಟಕ 1.44: ವಿತ್ತೀಯ ಕೊರತೆ ಮತ್ತು ಅದರ ಪ್ರಮಿತಿಗಳು**

(ಕೋಟಿ ರೂಪಾಯಿಗಳಲ್ಲಿ)

| ಅವಧಿ | ಋಣವಲ್ಲದ ಸ್ವೀಕೃತಿಗಳು | ಒಟ್ಟು ವೆಚ್ಚ | ವಿತ್ತೀಯ ಕೊರತೆ | ವಿತ್ತೀಯ ಕೊರತೆಯ ಶತಾಂಶವಾಗಿ | | |
|---|---|---|---|---|---|---|
| | | | | ರಾಒಆಉ | ಋಣವಲ್ಲದ ಸ್ವೀಕೃತಿ | ಒಟ್ಟು ವೆಚ್ಚ |
| 2012–13 | 78.367 | 92,874 | 14,507 | 2.10 | 18.51 | 15.62 |
| 2013–14 | 89,739 | 1,06,831 | 17,092 | 2.09 | 19.50 | 16.00 |
| 2014–15 | 1,04,236 | 1,23,812 | 19,576 | 2.12 | 18.78 | 15.81 |
| 2015–16 | 1,19,229 | 1,38,398 | 19,169 | 1.87 | 16.08 | 13.85 |
| 2016–17 | 1,33,341 | 1,62,005 | 28,664 | 2.57 | 21.50 | 17.69 |

*ಆಕರ: ಹಣಕಾಸು ಲೆಕ್ಕಗಳು.*

2012–13 ರಿಂದ 2016–17ರ ಅವಧಿಯಲ್ಲಿ ವಿತ್ತೀಯ ಕೊರತೆಯು ರಾಒಆಉದ ಶತಾಂಶವಾಗಿ ಸ್ವಲ್ಪ ಸ್ವಲ್ಪವಾಗಿ ಶೇಕಡ 2.10ರಿಂದ ಶೇಕಡ 2.57ಕ್ಕೆ ಅಂತಾವರ್ಷದ ವ್ಯತ್ಯಯಗಳಿಂದ ಏರಿಕೆಯಾಗಿದೆ. ವಿತ್ತೀಯ ಕೊರತೆಯು ರಾಒಆಉದ, ಋಣೇತರ ಸ್ವೀಕೃತಿಗಳ ಮತ್ತು ಒಟ್ಟು ವೆಚ್ಚದ ಶತಾಂಶವಾಗಿ 2016–17ರಲ್ಲಿ ಹಿಂದಿನ ವರ್ಷಕ್ಕಿಂತ ಏರಿಕೆಯಾಗಿದ್ದು, ಇದು ಹೆಚ್ಚಿದ ಸಾಲಗಳು/ಕಡಿಮೆಯಾದ ರಾಜಸ್ವ ಹೆಚ್ಚಳದಿಂದ ಉಂಟಾಗಿದೆ.

### ಪ್ರಾಥಮಿಕ ಕೊರತೆ

ವಿತ್ತೀಯ ಕೊರತೆಯು, ಸಾಮಾನ್ಯವಾಗಿ ಹೆಚ್ಚುವರಿ ಸಂಪನ್ಮೂಲಗಳ ಅವಶ್ಯಕತೆಯನ್ನು ಪ್ರತಿನಿಧಿಸಿದರೆ, ಅಂತಹ ಸಂಪನ್ಮೂಲಗಳ ಒಂದು ಭಾಗವು ರಾಜಸ್ವ ಲೆಕ್ಕಗಳಲ್ಲಿ ಕೊರತೆಯಿರುವ ರಾಜ್ಯಗಳಿಗೆ ಬಡ್ಡಿ ಪಾವತಿಗೆ ಅನುವು ಮಾಡಿಕೊಡುತ್ತವೆ. ಬಡ್ಡಿ ಪಾವತಿಗಳು ಹಿಂದಿನ ವರ್ಷಗಳ ಹೊಣೆಗಾರಿಕೆಗೆ ಸಂಬಂಧಿಸಿದ ವೆಚ್ಚವಾಗಿದ್ದು, ಪ್ರಸಕ್ತ ವೆಚ್ಚಗಳಿಗೆ ಹೊರತಾಗಿರುತ್ತದೆ. ಹಾಲಿ ಇರುವ ಅಸಮತೆಗಳ ಸ್ವರೂಪವನ್ನು ಕಾಣಬೇಕಾದಲ್ಲಿ, ಈ ಪಾವತಿಗಳನ್ನು ಪ್ರತ್ಯೇಕಿಸುವ ಅಗತ್ಯವಿದ್ದು ಒಟ್ಟು ಅಸಮತೆಗಳಿಂದ

ಕಳೆಯಬೇಕಾಗುತ್ತದೆ. ಕಳೆದ ಐದು ವರ್ಷಗಳ ಪ್ರಾಥಮಿಕ ಕೊರತೆ ಮತ್ತು ಅವುಗಳ ಪ್ರಮಿತಿಗಳ ವಿವರಗಳನ್ನು **ಕೋಷ್ಟಕ 1.45**ರಲ್ಲಿ ನೀಡಿದೆ.

### ಕೋಷ್ಟಕ 1.45: ಪ್ರಾಥಮಿಕ ಕೊರತೆ ಮತ್ತು ಅದರ ಪ್ರಮಿತಿಗಳು

**(ಕೋಟಿ ರೂಪಾಯಿಗಳಲ್ಲಿ)**

| ಅವಧಿ | ವಿತ್ತೀಯ ಕೊರತೆ | ಬಡ್ಡಿ ಪಾವತಿಗಳು | ಪ್ರಾಥಮಿಕ ಕೊರತೆ |
|---|---|---|---|
| 2012–13 | 14,507 | 7,454* | 7,053 |
| 2013–14 | 17,092 | 8,027* | 9,065 |
| 2014–15 | 19,576 | 9,804* | 9,772 |
| 2015–16 | 19,169 | 11,343* | 7,826 |
| 2016–17 | 28,664 | 12,850* | 15,814 |

*ಆಕರ: ಹಣಕಾಸು ಲೆಕ್ಕಗಳು.*

** 2012–13, 2013–14, 2014–15, 2015–16 ಮತ್ತು 2016–17ನೇ ಸಾಲಿನ ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ ಕ್ರಮವಾಗಿ ₹621 ಕೋಟಿ, ₹190 ಕೋಟಿ, ₹400 ಕೋಟಿ, ₹597 ಕೋಟಿ ಮತ್ತು ₹817 ಕೋಟಿಗಳನ್ನು ಒಳಗೊಂಡಿದೆ.*

2012–13 ರಿಂದ 2016–17ರ ಅವಧಿಯಲ್ಲಿ ವಿತ್ತೀಯ ಕೊರತೆಯು ಬಹುಪಾಲು ಬಡ್ಡಿ ಪಾವತಿಯ ಎರಡರಷ್ಟಿತ್ತು. ರಾಜಸ್ವ ವೆಚ್ಚದ ಅಧಿಕ ಭಾಗವಾದ ಬದ್ಧ ವೆಚ್ಚಗಳನ್ನು ಕಡಿಮೆ ಮಾಡಿದರೆ ರಾಜ್ಯ ಸರ್ಕಾರವು ರಾಜಸ್ವ ಲೆಕ್ಕದಲ್ಲಿ ಗಣನಾರ್ಹ ಅಧಿಕ್ಯವನ್ನು ಸಾಧಿಸಲು ಸಾಧ್ಯವಾಗುತ್ತದೆ. ಸಂಬಳ, ವಿಶ್ರಾಂತಿ ವೇತನ ಹಾಗೂ ಬಡ್ಡಿ ಪಾವತಿಗಳು ಬದಲಾಯಿಸಲಾಗದ ವೆಚ್ಚಗಳಾಗಿದ್ದು, ಸ್ಥಿರವಾಗಿ ಹೆಚ್ಚುತ್ತಿರುವ ಸಹಾಯಧನ ಮತ್ತು ಸ್ಥಳೀಯ ಸಂಸ್ಥೆಗಳನ್ನು ಹೊರತುಪಡಿಸಿ ಇತರರಿಗೆ ನೀಡುತ್ತಿರುವ ಸಹಾಯಾನುದಾನಗಳ ಕಡೆಗೆ ರಾಜ್ಯ ಸರ್ಕಾರವು ಹೆಚ್ಚು ಗಮನ ಹರಿಸುವುದು ಅವಶ್ಯವಾಗಿದೆ.

### 1.11.2 ವಿತ್ತೀಯ ಕೊರತೆಯ ಸಂಯೋಜನೆ ಮತ್ತು ಅದರ ಪೂರೈಕೆಯ ವಿಧಾನ

ವಿತ್ತೀಯ ಕೊರತೆಯನ್ನು ತುಂಬುವ ಹಣಕಾಸಿನ ವಿಧಾನವು **ಕೋಷ್ಟಕ 1.46**ರಲ್ಲಿ ತೋರಿಸಿರುವಂತೆ ಸಂಯೋಜಿತ ಪಲ್ಲಟಗಳಿಗೆ ಈಡಾಗಿದೆ. ವಿತ್ತೀಯ ಕೊರತೆಯ ವಿಭಜನೆಯು, ರಾಜಸ್ವ ಮತ್ತು ಋಣೇತರ ಸ್ವೀಕೃತಿಗಳನ್ನು ಮೀರಿದ ಅಗತ್ಯಗಳನ್ನು ಪೂರೈಸಲು ರಾಜ್ಯ ಸರ್ಕಾರವು ಎಷ್ಟರಮಟ್ಟಿಗೆ ವಿವಿಧ ಸಾಲಗಳನ್ನು ಅವಲಂಬಿಸಿತ್ತು ಎಂಬುದನ್ನು ತೋರಿಸುತ್ತದೆ.

### ಕೋಷ್ಟಕ 1.46: ವಿತ್ತೀಯ ಕೊರತೆಗಳ ಭಾಗಗಳು ಮತ್ತು ಅವುಗಳ ಪೂರೈಕೆಯ ವಿಧಾನಗಳು

**(ಕೋಟಿ ರೂಪಾಯಿಗಳಲ್ಲಿ)**

| | | 2012–13 | | 2013–14 | | 2014–15 | | 2015–16 | | 2016–17 | |
|---|---|---|---|---|---|---|---|---|---|---|---|
| ವಿತ್ತೀಯ ಕೊರತೆಯ ವಿಭಜನೆ | | ಮೊತ್ತ (–) 14,507 | ರಾಒ ಆಂಉದ ಶೇಕಡಾವಾರು 2.10 | ಮೊತ್ತ (–) 17,092 | ರಾಒ ಆಂಉದ ಶೇಕಡಾವಾರು 2.09 | ಮೊತ್ತ (–) 19,576 | ರಾಒ ಆಂಉದ ಶೇಕಡಾವಾರು 2.12 | ಮೊತ್ತ (–) 19,169 | ರಾಒ ಆಂಉದ ಶೇಕಡಾವಾರು 1.87 | ಮೊತ್ತ (–) 28,664 | ರಾಒ ಆಂಉದ ಶೇಕಡಾವಾರು 2.57 |
| 1 | ರಾಜಸ್ವ ಹೆಚ್ಚಳ | 1,883 | 0.27 | 353 | 0.04 | 528 | 0.06 | 1,789 | 0.17 | 1,293 | 0.11 |
| 2 | ನಿವ್ವಳ ಬಂಡವಾಳ ವೆಚ್ಚ | 15,446 | 2.23 | 16,859 | 2.06 | 19,612 | 2.13 | 20,361 | 1.98 | 28,123 | 2.52 |
| 3 | ನಿವ್ವಳ ಸಾಲಗಳು ಮತ್ತು ಮುಂಗಡಗಳು | 944 | 0.14 | 586 | 0.07 | 492 | 0.05 | 597 | 0.06 | 1,834 | 0.16 |
| ವಿತ್ತೀಯ ಕೊರತೆಯನ್ನು ಪೂರೈಸಿದ ವಿಧಾನಗಳು* | | | | | | | | | | | |
| 1 | ಮಾರುಕಟ್ಟೆ ಸಾಲಗಳು | 9,149 | 1.32 | 13,406 | 1.64 | 16,093 | 1.74 | 14,914 | 1.45 | 24,026 | 2.15 |
| 2 | ಭಾರತ ಸರ್ಕಾರದ ಸಾಲಗಳು | 652 | 0.09 | 461 | 0.05 | 586 | 0.06 | 321 | 0.03 | 791 | 0.07 |
| 3 | ಎನ್‌ಎಸ್‌ಎಸ್‌ಎಫ್‌ಗೆ ನೀಡಿದ ವಿಶೇಷ ಭದ್ರತೆಗಳು | (–) 517 | (–) 0.07 | (–) 344 | (–) 0.04 | 437 | 0.05 | 1,563 | 0.15 | (–) 1,573 | (–) 0.14 |
| 4 | ಹಣಕಾಸು ಸಂಸ್ಥೆಗಳಿಂದ ಸಾಲಗಳು | 454 | 0.07 | (–) 53 | (–) 0.01 | (–) 54 | – | 164 | 0.02 | 491 | 0.04 |
| 5 | ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ ಇತ್ಯಾದಿ | 1,732 | 0.25 | 2,107 | 0.26 | 2,156 | 0.23 | 2,086 | 0.20 | 2,657 | 0.24 |
| 6 | ಠೇವಣಿಗಳು ಮತ್ತು ಮುಂಗಡಗಳು | 2,511 | 0.36 | 2,840 | 0.35 | 3,702 | 0.40 | 284 | 0.03 | 3,041 | 0.27 |

| ವಿತ್ತೀಯ ಕೊರತೆಯ ವಿಭಜನೆ | | 2012–13 | | 2013–14 | | 2014–15 | | 2015–16 | | 2016–17 | |
|---|---|---|---|---|---|---|---|---|---|---|---|
| | | ಮೊತ್ತ (–) 14,507 | ರಾಒ ಆಂಉದ ಶೇಕಡಾವಾರು 2.10 | ಮೊತ್ತ (–) 17,092 | ರಾಒ ಆಂಉದ ಶೇಕಡಾವಾರು 2.09 | ಮೊತ್ತ (–) 19,576 | ರಾಒ ಆಂಉದ ಶೇಕಡಾವಾರು 2.12 | ಮೊತ್ತ (–) 19,169 | ರಾಒ ಆಂಉದ ಶೇಕಡಾವಾರು 1.87 | ಮೊತ್ತ (–) 28,664 | ರಾಒ ಆಂಉದ ಶೇಕಡಾವಾರು 2.57 |
| 7 | ಅಮಾನತ್ತು ಮತ್ತು ಇತರೆ | 98 | 0.01 | 2,671 | 0.33 | 3,282 | 0.35 | 990 | 0.10 | 491 | 0.04 |
| 8 | ಇರಸಾಲುಗಳು | (–) 32 | – | (–) 12 | – | (–) 32 | – | (–) 17 | – | (–) 38 | – |
| 9 | ಮೀಸಲು ನಿಧಿಗಳು | 1,362 | 0.20 | 135 | 0.01 | 1,547 | 0.17 | 2,081 | 0.20 | 6,013 | 0.54 |
| 10 | ನಗದು ಶಿಲ್ಕಿನಲ್ಲಿ ಹೆಚ್ಚಳ (–)/ ಇಳಿಕೆ(+) | (–) 902 | (–) 0.13 | (–) 4,119 | (–) 0.50 | (–) 8,141 | (–) 0.88 | (–) 3,217 | (–) 0.31 | (–) 7,235 | (–) 0.64 |
| 11 | ಸಾದಿಲ್ವಾರು ನಿಧಿ ವಹಿವಾಟುಗಳು ನಿವ್ವಳ | – | – | – | – | – | – | – | – | – | – |
| | **ಒಟ್ಟು** | **14,507** | **2.10** | **17,092** | **2.09** | **19,576** | **2.12** | **19,169** | **1.87** | **28,664** | **2.57** |

*ಆಕರ: ಹಣಕಾಸು ಲೆಕ್ಕಗಳು.*

** ಈ ಎಲ್ಲಾ ಅಂಕಿಗಳು ಪ್ರಸಕ್ತ ವರ್ಷದ ನಿವ್ವಳ ವಿತರಣೆಗಳು/ಹೊರಹರಿವುಗಳು.*

ವಿತ್ತೀಯ ಕೊರತೆಯ ಭಾಗಗಳು, ರಾಜಸ್ವ ಹೆಚ್ಚಳ ಕಳೆಯುವಿಕೆ, ನಿವ್ವಳ ಬಂಡವಾಳ ವೆಚ್ಚ ಮತ್ತು ನಿವ್ವಳ ಸಾಲ ಮತ್ತು ಮುಂಗಡಗಳಾಗಿವೆ. ರಾಜ್ಯವು ರಾಜಸ್ವ ಹೆಚ್ಚಳವನ್ನು 2004–05ರಲ್ಲಿಯೇ ಸಾಧಿಸಿದ್ದ ಕಾರಣ, ರಾಜಸ್ವ ಲೆಕ್ಕದಲ್ಲಿನ ಹೆಚ್ಚಳವನ್ನು ಮಾರುಕಟ್ಟೆ ಸಾಲಗಳು, ಭಾರತ ಸರ್ಕಾರದಿಂದ ಬಂದ ಸಾಲಗಳೂ ಸೇರಿದಂತೆ ಬಂಡವಾಳ ವೆಚ್ಚಕ್ಕೆ ಬಳಸಲಾಗಿತ್ತು. 2012–13, 2013–14 ಮತ್ತು 2014–15ರಲ್ಲಿ ರಾಜಸ್ವ ಹೆಚ್ಚಳದಿಂದ ಕ್ರಮವಾಗಿ ಬಂಡವಾಳ ವೆಚ್ಚದ ಶೇಕಡ 12, ಎರಡು ಮತ್ತು ಮೂರರಷ್ಟನ್ನು ಭರಿಸಲಾಗಿತ್ತು. 2015–16 ಮತ್ತು 2016–17ರಲ್ಲಿ ರಾಜಸ್ವ ಹೆಚ್ಚಳವು ಶೇಕಡ ಒಂಭತ್ತು ಮತ್ತು ಶೇಕಡ ಐದರಷ್ಟು ಬಂಡವಾಳ ವೆಚ್ಚವನ್ನು ಭರಿಸಿತ್ತು.

2016–17ರಲ್ಲಿ ಮಾರುಕಟ್ಟೆ ಸಾಲಗಳಲ್ಲಿ ಸಾಕಷ್ಟು ಏರಿಕೆಯಾಗಿದ್ದು, ವಿತ್ತೀಯ ಕೊರತೆಯನ್ನು ತುಂಬುವ ಅದರ ಪಾಲು ಶೇಕಡ 84ಕ್ಕೆ ಏರಿತು. ಆದ್ದರಿಂದ ಹಿಂದಿನ ವರ್ಷಕ್ಕೆ ಹೋಲಿಸಿದರೆ, ಸಣ್ಣ ಉಳಿತಾಯ, ಭವಿಷ್ಯನಿಧಿ ಇತ್ಯಾದಿ, ಠೇವಣಿ ಮತ್ತು ಮುಂಗಡಗಳಲ್ಲಿ ಇಳಿಕೆಯಾಗಿದ್ದವು ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲವು ಹೆಚ್ಚಾಗಿತ್ತು. ಅಮಾನತ್ತು ಮತ್ತು ಇತರ ಶಿಲ್ಕುಗಳಲ್ಲಿ ಇಳಿಕೆಯಾಗಿದ್ದು, ಇದು ಪ್ರಮುಖವಾಗಿ ಚೆಕ್ಕುಗಳು ಮತ್ತು ಬಿಲ್ಲುಗಳಿಗೆ ಸಂಬಂಧಿಸಿದ್ದು, ಇವುಗಳ ವ್ಯವಹಾರಗಳ ನಿವ್ವಳವನ್ನು ವಿತ್ತೀಯ ಕೊರತೆಯನ್ನು ಭರಿಸಲು ಕೂಡಿಸಲಾಗಿದೆ. 2016–17ರಲ್ಲಿ ಎನ್ಎಸ್ಎಸ್ಎಫ್‌ಗೆ ನೀಡಿದ ವಿಶೇಷ ಭದ್ರತೆಗಳಡಿಯ ಸ್ವೀಕೃತಿಗಳಲ್ಲಿ ಗಣನೀಯವಾದ ಇಳಿಕೆಯಾಗಿತ್ತು.

### 1.11.3 ಹೆಚ್ಚಳ/ಕೊರತೆಗಳ ಗುಣಮಟ್ಟ

**ಕೋಷ್ಟಕ 1.47**ರಲ್ಲಿ ಪ್ರಾಥಮಿಕ ಕೊರತೆಯ ಸ್ಥಿತಿಯನ್ನು ಅದರ ಅಂಶಗಳ ವಿಭಜನೆಯೊಂದಿಗೆ ನೀಡಲಾಗಿದೆ.

**ಕೋಷ್ಟಕ 1.47: ಪ್ರಾಥಮಿಕ ಕೊರತೆ/ಹೆಚ್ಚಳ–ಅಂಶಗಳ ವಿಭಜನೆ**

**(ಕೋಟಿ ರೂಪಾಯಿಗಳಲ್ಲಿ)**

| ವರ್ಷ | ಋಣವಲ್ಲದ ಸ್ವೀಕೃತಿಗಳು | ಪ್ರಾಥಮಿಕ ರಾಜಸ್ವ ವೆಚ್ಚ | ಬಂಡವಾಳ ವೆಚ್ಚ | ಸಾಲಗಳು ಮತ್ತು ಮುಂಗಡಗಳು | ಪ್ರಾಥಮಿಕ ವೆಚ್ಚ | ಪ್ರಾಥಮಿಕ ರಾಜಸ್ವ ಕೊರತೆ (–) ಹೆಚ್ಚಳ (+) | ಪ್ರಾಥಮಿಕ ಕೊರತೆ (–) ಹೆಚ್ಚಳ (+) |
|---|---|---|---|---|---|---|---|
| **1** | **2** | **3** | **4** | **5** | **3+4+5=6** | **2–3=7** | **2–6=8** |
| 2012–13 | 78,367 | 68,839 | 15,479 | 1,102 | 85,420 | 9,528 | (–) 7,053 |
| 2013–14 | 89,739 | 81,162 | 16,947 | 695 | 98,804 | 8,577 | (–) 9,065 |
| 2014–15 | 1,04,236 | 93,810 | 19,622 | 576 | 1,14,008 | 10,426 | (–) 9,772 |
| 2015–16 | 1,19,229 | 1,05,686 | 20,713 | 657 | 1,27,054 | 13,544 | (–) 7,826 |
| 2016–17 | 1,33,341 | 1,19,071 | 28,150 | 1,934 | 1,49,155 | 14,270 | (–) 15,814 |

*ಆಕರ: ಹಣಕಾಸು ಲೆಕ್ಕಗಳು.*

2012–13ರಲ್ಲಿ ₹7,053 ಕೋಟಿಗಳಷ್ಟಿದ್ದ ಪ್ರಾಥಮಿಕ ಕೊರತೆಯು 2016–17ರಲ್ಲಿ ₹15,814 ಕೋಟಿಗಳಷ್ಟಾಗಿದೆ. 2016–17ನೇ ವರ್ಷದಲ್ಲಿ ವಿತ್ತೀಯ ಕೊರತೆಗೆ ಬಡ್ಡಿ ಪಾವತಿಯ ಶತಾಂಶವು 45ರಷ್ಟಿತ್ತು.

## 1.12 ಅನುಸರಣೆ

2009–10ನೇ ವರ್ಷದ ರಾಜ್ಯ ಹಣಕಾಸು ವ್ಯವಹಾರಗಳ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಮೇ 2011ರಿಂದ ಆಗಸ್ಟ್ 2011ರ ನಡುವಿನ ಅವಧಿಯಲ್ಲಿ ಚರ್ಚಿಸಿತು. ಶಿಫಾರಸ್ಸುಗಳನ್ನು ಒಳಗೊಂಡ ವರದಿಯನ್ನು ಡಿಸೆಂಬರ್ 2011ರಲ್ಲಿ ಶಾಸನಸಭೆಯ ಮುಂದೆ ಮಂಡಿಸಲಾಯಿತು. ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸ್ಸುಗಳಿಗೆ ಸಂಬಂಧಿಸಿದಂತೆ ಕ್ರಮ ತೆಗೆದುಕೊಂಡ ವರದಿಯನ್ನು ಸೆಪ್ಟೆಂಬರ್ 2014ರಲ್ಲಿ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಮುಂದೆ ಮಂಡಿಸಲಾಗಿದೆ. ಸಾರ್ವಜನಿಕ ಲೆಕ್ಕ ಸಮಿತಿಯು ಸರ್ಕಾರವು ಮಂಡಿಸಿದ ಕ್ರಮ ತೆಗೆದುಕೊಂಡ ವರದಿಯನ್ನು ಐದು ಸಭೆಗಳಲ್ಲಿ ಚರ್ಚಿಸಿ ಕ್ರಮ ತೆಗೆದುಕೊಂಡ ಟಿಪ್ಪಣಿಯ ಮೇಲಿನ ತನ್ನ ವರದಿಯನ್ನು 20–07–2015ರಂದು ಸಲ್ಲಿಸಿತು.

## 1.13 ಸಮಾಪನ ಅಭಿಪ್ರಾಯಗಳು ಮತ್ತು ಶಿಫಾರಸ್ಸುಗಳು

**ವಿತ್ತೀಯ ಸ್ಥಿತಿ**

2012–13 ರಿಂದ 2016–17ರ ಅವಧಿಯಲ್ಲಿ ರಾಜ್ಯವು ರಾಜಸ್ವ ಹೆಚ್ಚಳವನ್ನು ಕಾಯ್ದುಕೊಂಡಿದ್ದು, ರಾಒಆಂಉದ ಸಾಪೇಕ್ಷವಾಗಿ ವಿತ್ತೀಯ ಕೊರತೆಯನ್ನು ಕರ್ನಾಟಕ ಹಣಕಾಸು ಜವಾಬ್ದಾರಿ ಕಾಯಿದೆಯಡಿಯಲ್ಲಿ ಸೂಚಿಸಿದ್ದ ಮಿತಿಯ ಒಳಗೆ ನಿರ್ವಹಿಸಿದೆ.

ಆಯವ್ಯಯದ ಅವಕಾಶವನ್ನು ಸಾರ್ವಜನಿಕ ಲೆಕ್ಕದ ಸಂಚಿತ ಋಣ ಪರಿಹಾರ ನಿಧಿಗೆ ಹೊಂದಾಣಿಕೆ ಮಾಡದಿದ್ದುದರಿಂದ (₹878 ಕೋಟಿ) ರಾಜ್ಯದ ಲೆಕ್ಕದಲ್ಲಿ ಹೆಚ್ಚಳವನ್ನು ಕಾಯ್ದುಕೊಳ್ಳಲು ಸಾಧ್ಯವಾಗಿದೆ.

2016–17ರಲ್ಲಿ ವಿತ್ತೀಯ ಕೊರತೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (₹11,17,334 ಕೋಟಿ) ಶೇಕಡ 2.57 ರಷ್ಟಿದ್ದು ಇದು ವಿತ್ತೀಯ ಜವಾಬ್ದಾರಿ ಕಾಯಿದೆ ನಿಗದಿಪಡಿಸಿದ ಮಿತಿಯೊಳಗೆ ಇದೆ.

*ಶಿಫಾರಸ್ಸು: ವಿತ್ತೀಯ ಮಾನದಂಡಗಳ ನೈಜ ಮತ್ತು ನಿಷ್ಪಕ್ಷಪಾತವಾದ ಚಿತ್ರವನ್ನು ನೀಡಲು ಸಕಾಲಿಕ ಮತ್ತು ಸರಿಯಾದ ಲೆಕ್ಕ ಹೊಂದಾಣಿಕೆಗಳನ್ನು ಮಾಡಬೇಕಾಗಿದೆ.*

*ಮಂಜೂರಾತಿಗಳು/ನಿಧಿಗಳು ಬಿಡುಗಡೆಯಾಗದೇ ಉಳಿಯುವುದನ್ನು ತಪ್ಪಿಸಲು ಆಯವ್ಯಯದಲ್ಲಿ ಮಾಡಿದ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಬೇಕು.*

*ಲೆಕ್ಕಹೊಂದಾಣಿಕೆಗಳು ಹೊಂದಾಣಿಕೆಗಳನ್ನು ರೂಪಿಸುವ ಸೂತ್ರಗಳನ್ನು ಅನುಸರಿಸಬೇಕಿದ್ದು ಭಾಗಶಃ ಲೆಕ್ಕ ಹೊಂದಾಣಿಕೆಗಳನ್ನು ಮಾಡುವುದನ್ನು ತಪ್ಪಿಸಬೇಕು.*

**ರಾಜ್ಯದ ಸ್ವಂತ ಸಂಪನ್ಮೂಲಗಳು**

ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ರಾಜ್ಯದ ತೆರಿಗೆ ಆದಾಯದ ಅನುಪಾತವು 2012–13 ರಲ್ಲಿ ಶೇಕಡ 7.80ರಷ್ಟಿದ್ದು 2016–17ರಲ್ಲಿ ಶೇಕಡ 7.42ರಷ್ಟಾಗಿ ಇಳಿಮುಖವಾಗಿದೆ. ಆದರೆ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ತೆರಿಗೆಯೇತರ ಆದಾಯದ ಅನುಪಾತದಲ್ಲಿ ಯಾವುದೇ ಸುಧಾರಣೆ ಕಂಡುಬಾರದೆ ಅದು 2012–13 ರಿಂದ 2016–17ರ ಅವಧಿಯಲ್ಲಿಯೂ ಶೇಕಡ ಒಂದಕ್ಕಿಂತ ಕಡಿಮೆಯಿದೆ.

*ಶಿಫಾರಸ್ಸುಗಳು: ವಿತ್ತೀಯ ನಿರ್ವಹಣಾ ಪರಿಶೀಲನಾ ಸಮಿತಿ (ಮಧ್ಯಂತರ ಅವಧಿ ವಿತ್ತೀಯ ಯೋಜನೆ 2017–21) ಮತ್ತು ವೆಚ್ಚ ಸುಧಾರಣೆಗಳ ಆಯೋಗದ ಶಿಫಾರಸ್ಸಿನಂತೆ ತೆರಿಗೆಯೇತರದ ಆಕರಗಳಾದ ಬಳಕೆದಾರರ ಶುಲ್ಕಗಳ ದರವನ್ನು ಕಾಲಕಾಲಕ್ಕೆ ಪರಿಷ್ಕರಿಸುವುದರ ಮತ್ತದನ್ನು ಪರಿಶೀಲಿಸುವ ಮೂಲಕ ವಿಶೇಷ ಒತ್ತು ನೀಡುವ ಅಗತ್ಯವಿದೆ.*

**ರಾಜಸ್ವ ವೆಚ್ಚ**

ಹಿಂದಿನ ವರ್ಷಕ್ಕೆ ಹೋಲಿಸಿದರೆ ಸಾಮಾಜಿಕ ವಲಯದಡಿಯ ವೃದ್ಧಿಯು 2016–17ನೇ ಸಾಲಿನಲ್ಲಿ ಶೇಕಡ 18ರಷ್ಟಿದ್ದು ಒಟ್ಟು ವೆಚ್ಚದಲ್ಲಿ ಸಾಮಾಜಿಕ ಸೇವೆಗಳ ವೆಚ್ಚದ ಪಾಲು ಹಿಂದಿನ ವರ್ಷಕ್ಕಿಂತ ಶೇಕಡ ಎರಡರಷ್ಟು ಏರಿಕೆಯಾಗಿ 2016–17ರಲ್ಲಿ ಇದು ಶೇಕಡ 41ರಷ್ಟಿತ್ತು. ಅಲ್ಲದೆ, 2015–16ರಲ್ಲಿ ಆರ್ಥಿಕ ಸೇವೆಗಳ ಮೇಲಿನ ವೆಚ್ಚದ ವೃದ್ಧಿಯು ಶೇಕಡ 13ರಷ್ಟಿದ್ದು 2016–17ರಲ್ಲಿ ಶೇಕಡ 19ರಷ್ಟಿತ್ತು.

ಒಟ್ಟು ರಾಜಸ್ವ ವೆಚ್ಚಕ್ಕೆ ಯೋಜನೆ ರಾಜಸ್ವ ವೆಚ್ಚವು 2015–16ರಲ್ಲಿನ ಶೇಕಡ 34ರಿಂದ 2016–17ರಲ್ಲಿ ಶೇಕಡ 36ಕ್ಕೆ ಹೆಚ್ಚಿದೆ.

ರಾಜಸ್ವ ವೆಚ್ಚದ ಶೇಕಡ 80ರಷ್ಟು ಭಾಗವು, ಸಂಬಳ, ವಿಶ್ರಾಂತಿ ವೇತನ, ಬಡ್ಡಿ ಪಾವತಿಗಳು, ಸಹಾಯಧನಗಳು, ಸಹಾಯಾನುದಾನಗಳು ಮತ್ತು ಆರ್ಥಿಕ ನೆರವು, ಆಡಳಿತಾತ್ಮಕ ವೆಚ್ಚಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮುಂತಾದ ಬದ್ಧ ವೆಚ್ಚಗಳನ್ನೊಳಗೊಂಡಿತ್ತು. ₹18,101 ಕೋಟಿಗಳ ಸಹಾಯಧನವು ₹3,714 ಕೋಟಿಗಳ ಪರೋಕ್ಷ ಸಹಾಯಧನವನ್ನು ಒಳಗೊಂಡಿದ್ದು ಸಾಮಾಜಿಕ ಆರ್ಥಿಕ ಸೇವೆಗಳಡಿಯ ವಿವಿಧ ಯೋಜನೆಗಳಿಗೆ ಆರ್ಥಿಕ ನೆರವಿನ ರೂಪದಲ್ಲಿದ್ದವು. ಸಂಚಿತ ನಿಧಿಯಿಂದ ನಿಗಮಗಳಿಗೆ ಬಿಡುಗಡೆಯಾಗುವ ಮೊತ್ತಗಳು ಅಗತ್ಯತೆಯನ್ನು ಆಧರಿಸಬೇಕು.

*ಶಿಫಾರಸ್ಸುಗಳು: **2016–17**ರಲ್ಲಿ ಆರೋಗ್ಯ ಮತ್ತು ಶಿಕ್ಷಣ ವಿಭಾಗಗಳಲ್ಲಿನ ಅನುಪಾತಗಳು ಸಾಮಾನ್ಯವರ್ಗ ರಾಜ್ಯಗಳ ಸರಾಸರಿಗಿಂತ ಕಡಿಮೆಯಿರುವುದರಿಂದ ಈ ಎರಡೂ ವಿಭಾಗಗಳಿಗೆ ಸಾಕಷ್ಟು ಆದ್ಯತೆಯನ್ನು ನೀಡಬೇಕಾಗಿದೆ.*

*ಸಂಬಳ, ಪಿಂಚಣಿ ಮತ್ತು ಬಡ್ಡಿಪಾವತಿಗಳ ಮೇಲಿನ ವೆಚ್ಚವು ಅನಮ್ಯವಾಗಿರುವುದರಿಂದ, ಸತತವಾಗಿ ಏರುತ್ತಿರುವ ಸಹಾಯಧನಗಳ ಮೇಲಿನ ವೆಚ್ಚ, ಸ್ಥಳೀಯ ಸಂಸ್ಥೆಗಳನ್ನು ಹೊರತುಪಡಿಸಿ ಇತರರಿಗೆ ನೀಡುತ್ತಿರುವ ಅನುದಾನಗಳ ಕಡೆಗೆ ರಾಜ್ಯ ಸರ್ಕಾರವು ಹೆಚ್ಚಿನ ಗಮನಕೊಡುವ ಅಗತ್ಯವಿದೆ.*

*ರಾಜಸ್ವ ವೆಚ್ಚದ ಬಹುತೇಕ ಭಾಗವಾಗಿರುವ ಬದ್ಧ ವೆಚ್ಚಗಳನ್ನು ನಿಯಂತ್ರಿಸುವುದು ರಾಜ್ಯ ಸರ್ಕಾರಕ್ಕೆ ರಾಜಸ್ವ ಲೆಕ್ಕಗಳಲ್ಲಿ ಸಾಕಷ್ಟು ಮಟ್ಟದ ಹೆಚ್ಚಳವನ್ನು ಸಾಧಿಸಲು ಶಕ್ಯವಾಗಿಸುತ್ತದೆ.*

*ವಿಶೇಷವಾಗಿ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದ ನಿಧಿಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳು ಅಥವಾ ಠೇವಣಿ ಲೆಕ್ಕಗಳಲ್ಲಿ ನಿರ್ಬಂಧಿಸುವುದನ್ನು ತಪ್ಪಿಸಬೇಕು.*

**ವೆಚ್ಚದ ಗುಣಮಟ್ಟ**

2016–17ರಲ್ಲಿ ಒಟ್ಟು ವೆಚ್ಚಕ್ಕೆ ಬಂಡವಾಳ ವೆಚ್ಚದ ಪಾಲು (ಶೇಕಡ 19) ಹಿಂದಿನ ವರ್ಷಕ್ಕಿಂತ ಶೇಕಡ ನಾಲ್ಕರಷ್ಟು ಏರಿಕೆಯಾಯಿತು. ಒಟ್ಟು ವೆಚ್ಚಕ್ಕೆ ಅಭಿವೃದ್ಧಿ ವೆಚ್ಚದ ಶೇಕಡಾವಾರು 2015–16ರಲ್ಲಿದ್ದ ಶೇಕಡ 73ರಿಂದ 2016–17ರಲ್ಲಿ ಶೇಕಡ 77ಕ್ಕೆ ಏರಿಕೆಯಾಯಿತು.

2016–17ರ ಅಂತ್ಯಕ್ಕೆ ₹2,027 ಕೋಟಿಗಳಷ್ಟು ಮೊತ್ತವು ಅಪೂರ್ಣ ಕಾಮಗಾರಿಗಳಲ್ಲಿ ತೊಡಗಿಸಿದ್ದು ಫಲಪ್ರದವಿಲ್ಲದೆ ನಿರ್ಬಂಧಿತವಾಗಿತ್ತು.

31 ಮಾರ್ಚ್ 2017ರ ಅಂತ್ಯಕ್ಕೆ ಕಂಪೆನಿಗಳು/ನಿಗಮಗಳಲ್ಲಿ ತೊಡಗಿಸಿದ್ದ ₹63,115 ಕೋಟಿ ಹೂಡಿಕೆಗಳ ಮೇಲಿನ ಪ್ರತಿಫಲವು ಶೇಕಡಾ 0.1ರಷ್ಟಿತ್ತು (₹82.50 ಕೋಟಿ). ಹೂಡಿಕೆಯು ಸತತವಾಗಿ ನಷ್ಟದಲ್ಲಿರುವ ಕಂಪೆನಿ/ನಿಗಮಗಳಲ್ಲಿ ಹೂಡಿರುವ ₹24,474 ಕೋಟಿಗಳನ್ನು (ಶೇಕಡ 39) ಒಳಗೊಂಡಿತ್ತು.

*ಶಿಫಾರಸ್ಸುಗಳು: ರಾಜ್ಯಸರ್ಕಾರವು ಅಪೂರ್ಣ ಕಾಮಗಾರಿಗಳನ್ನು ಕ್ಷಿಪ್ರಗತಿಯಲ್ಲಿ ಪೂರ್ಣಗೊಳಿಸಲು ಮಾರ್ಗಸೂಚಿಗಳನ್ನು ರೂಪಿಸಬೇಕು ಮತ್ತು ನಿವಾರಣಾ ಕ್ರಮಗಳನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಸಮಯ ಮತ್ತು ವೆಚ್ಚ ಹೆಚ್ಚಳಗಳಿಗೆ ಕಾರಣಗಳನ್ನು ಕಟ್ಟುನಿಟ್ಟಾಗಿ ಪರಿಶೀಲಿಸಬೇಕು.*

*ರಾಜ್ಯ ಸರ್ಕಾರವು ಅಧಿಕ ನಷ್ಟಗಳನ್ನು ಅನುಭವಿಸುತ್ತಿರುವ ರಾಜ್ಯದ ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಯವೈಖರಿಯನ್ನು ಸಮೀಕ್ಷಿಸಿ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು.*

**ನಿಧಿಗಳು ಮತ್ತಿತರ ಜವಾಬ್ದಾರಿಗಳು**

ಖಾತರಿ ವಿಮೋಚನಾ ನಿಧಿಯ ಮೂಲ ನಿಧಿಗಳಂತಹ ರಾಜ್ಯದ ಮೀಸಲು ನಿಧಿಗಳು ರಚಿತ ವಾಗಿರಲಿಲ್ಲ/ಪುನಶ್ಚೇತನಗೊಂಡಿರಲಿಲ್ಲ. 2016–17ನೇ ಸಾಲಿನಲ್ಲಿ ಕ್ರೋಢೀಕೃತ ಋಣ ಪರಿಹಾರ ನಿಧಿಯ ವ್ಯವಹಾರಗಳು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಮಾಡಿದ ಮರುಹೂಡಿಕೆಯ ಮೇಲಿನ ₹317.45 ಕೋಟಿಗಳ ಬಡ್ಡಿಯನ್ನೊಳಗೊಂಡಿದ್ದು, ಅದು ಲೆಕ್ಕಗಳ ಮೂಲಕ ಹಾದು ಹೋಗಿರಲಿಲ್ಲ. ಕ್ರೋಢೀಕೃತ ಋಣಪರಿಹಾರ ನಿಧಿಯಲ್ಲಿ (₹878.12 ಕೋಟಿ) ಹೂಡಿಕೆ ಮಾಡದಿದ್ದುದು ಹಸಿರು ತೆರಿಗೆ ಸಂಗ್ರಹಣೆ ₹57.89 ಕೋಟಿಗಳನ್ನು ನಿಧಿ ಲೆಕ್ಕಕ್ಕೆ ವರ್ಗಾವಣೆ ಮಾಡಿರಲಿಲ್ಲ. ಸಾರ್ವಜನಿಕ ಲೆಕ್ಕದಡಿಯ ನಿಧಿ ಲೆಕ್ಕದ ಶಿಲ್ಕುಗಳನ್ನು ತೀರುವಳಿ ಮಾಡಲು ಸೂಕ್ತ ಅವಕಾಶ ಕಲ್ಪಿಸಿ ಮತ್ತು ವೆಚ್ಚ ಮಾಡುವುದರ ಮೂಲಕ ಪ್ರಯತ್ನಗಳನ್ನು ಮಾಡಬೇಕು.

***ಶಿಫಾರಸ್ಸುಗಳು: ವಿವಿಧ ಮೀಸಲು ನಿಧಿಗಳ ನಿರ್ವಹಣೆ ಮತ್ತು ಹೂಡಿಕೆ ರೀತಿಗಳ ಸಂಬಂಧದಲ್ಲಿ ನಿಯಮಗಳನ್ನು ರೂಪಿಸುವ ಅಗತ್ಯವಿದೆ.***

***ಅಲ್ಲದೆ ಯುಕ್ತ ಕಾಲಾವಧಿಯಲ್ಲಿ ಬಾಕಿಗಳನ್ನು ತೀರುವಳಿ ಮಾಡಲು ವೆಚ್ಚವು ಆದಾಯಕ್ಕೆ ಪೂರಕವಾಗಿರಬೇಕು.***

**ಋಣ ಸಹಿಷ್ಣುತೆ**

ರಾಜ್ಯದ ಒಟ್ಟು ವಿತ್ತೀಯ ಜವಾಬ್ದಾರಿಗಳಲ್ಲಿ ಮುಕ್ತ ಮಾರುಕಟ್ಟೆ ಸಾಲಗಳು ಪ್ರಮುಖ ಪಾಲನ್ನು ಹೊಂದಿದ್ದವು (ಶೇಕಡ 49). 2012–13 ರಿಂದ 2016–17ರ ಅವಧಿಯಲ್ಲಿ ಬಡ್ಡಿ ಪಾವತಿಗೆ ರಾಜಸ್ವ ಸ್ವೀಕೃತಿಗಳ (ಐಪಿ/ಆರ್‌ಆರ್) ಅನುಪಾತದಿಂದ ಅಳೆಯಲ್ಪಡುವ ಬಡ್ಡಿ ಪಾವತಿಯ ಹೊರೆಯು ಶೇಕಡ 9 ಮತ್ತು ಶೇಕಡ 9.6ರ ನಡುವೆ ಇದ್ದಿತು. ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ 2016–17ನೇ ಸಾಲಿನಲ್ಲಿ ರಾಜ್ಯಕ್ಕೆ ಲಭ್ಯವಿದ್ದ ನಿವ್ವಳ ಋಣವು (₹23,736 ಕೋಟಿ) ಶೇಕಡ 40ರಷ್ಟು ಏರಿಕೆಯಾಯಿತು. ಹದಿಮೂರನೇ ಹಣಕಾಸು ಆಯೋಗವು ಶಿಫಾರಸ್ಸಿನಂತೆ ಎನ್‌ಎಸ್‌ಎಸ್‌ಎಫ್ ಸಾಲಗಳ ಮೇಲಿನ ಬಡ್ಡಿ ಪರಿಹಾರವು ₹192.42 ಕೋಟಿಗಳಷ್ಟು ಕಡಿಮೆಯಿದ್ದಿತು.

***ಶಿಫಾರಸ್ಸು: ಆಯವ್ಯಯ ಹೊರಗಿನ ಸಾಲಗಳ ಮೇಲಿನ ಬಡ್ಡಿಯು ಐಪಿ/ಆರ್‌ಆರ್ ಅನುಪಾತದ ಲೆಕ್ಕಾಚಾರದ ಭಾಗವಾಗಬೇಕು.***

# ಅಧ್ಯಾಯ - II

# ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ನಿಯಂತ್ರಣ

# ಅಧ್ಯಾಯ – 2

## ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ನಿಯಂತ್ರಣ

## 2.1 ಪೀಠಿಕೆ

**2.1.1** ಧನವಿನಿಯೋಗ ಲೆಕ್ಕಗಳು ಸರ್ಕಾರದ ಪ್ರತಿ ಆರ್ಥಿಕ ವರ್ಷದ ಧನವಿನಿಯೋಗ ಅಧಿನಿಯಮಗಳಿಗೆ ಸಹಬಂಧಗೊಳಿಸಿದ ಅನುಸೂಚಿಗಳಲ್ಲಿ ನಿಗದಿಪಡಿಸಲಾದ ವಿವಿಧ ಉದ್ದೇಶಗಳ ಪುರಸ್ಕೃತ ಅನುದಾನ ಮತ್ತು ಪ್ರಭೃತ ವಿನಿಯೋಗಗಳಿಗೆ ಹೋಲಿಸಿದ ಪುರಸ್ಕೃತ ಮತ್ತು ಪ್ರಭೃತ ವೆಚ್ಚಗಳ ಲೆಕ್ಕಗಳಾಗಿವೆ. ಈ ಲೆಕ್ಕಗಳು ಮೂಲ ಆಯವ್ಯಯ ಅಂದಾಜುಗಳು, ಪೂರಕ ಅನುದಾನಗಳು, ಅಧ್ಯರ್ಪಣೆಗಳು ಮತ್ತು ಪುನರ್ವಿನಿಯೋಗಗಳನ್ನು ಸ್ಪಷ್ಟವಾಗಿ ಪಟ್ಟಿಮಾಡಿ, ಧನವಿನಿಯೋಗ ಕಾಯಿದೆಯಲ್ಲಿ ಅಧಿಕೃತಗೊಳಿಸಿದ ಪುರಸ್ಕೃತ ಮತ್ತು ಪ್ರಭೃತ ಆಯವ್ಯಯ ಬಾಬ್ತುಗಳಿಗೆ ಪ್ರತಿಯಾಗಿ ವಿವಿಧ ನಿರ್ದಿಷ್ಟ ಸೇವೆಗಳ ಮೇಲಿನ ವಾಸ್ತವ ಬಂಡವಾಳ ಮತ್ತು ರಾಜಸ್ವ ವೆಚ್ಚಗಳನ್ನು ಸೂಚಿಸುತ್ತವೆ. ಕರ್ನಾಟಕ ಆಯವ್ಯಯ ಕೈಪಿಡಿಯು ಆಯವ್ಯಯ ಅಂದಾಜುಗಳನ್ನು ತಯಾರಿಸಲು ಅನುಸರಿಸಬೇಕಾದ ವಿಧಾನಗಳು, ಅನುದಾನಗಳ ಸಂವಹನದ ಕ್ರಮ ಹಾಗೂ ಅನುದಾನದ ವಿತರಣೆ, ವಾಸ್ತವಿಕ ವೆಚ್ಚದ ಪ್ರಗತಿಯ ಗಮನಿಸುವಿಕೆ ಮತ್ತು ಅದರ ಮೇಲಿನ ನಿಯಂತ್ರಣಕ್ಕೆ ಸಂಬಂಧಿಸಿದ ಕ್ರಮಗಳನ್ನು ಒಳಗೊಂಡಿದೆ.

**2.1.2** ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ನಡೆಸಲ್ಪಡುವ ಧನವಿನಿಯೋಗದ ಲೆಕ್ಕ ಪರಿಶೋಧನೆಯು ವಿವಿಧ ಅನುದಾನಗಳಡಿ ಮಾಡಿದ ವಾಸ್ತವ ವೆಚ್ಚವು ಧನವಿನಿಯೋಗ ಅಧಿನಿಯಮದಡಿ ನೀಡಿದ ಅಧಿಕಾರದ ಪರಿಮಿತಿಯೊಳಗೆ ಇದೆಯೇ ಮತ್ತು ಸಂವಿಧಾನದ ಉಪಬಂಧಗಳ ಮತ್ತು ವಿಧಾನಸಭೆಯ ವಿವಿಧ ಶಾಸನಗಳ ಅಡಿಯಲ್ಲಿ ಪ್ರಭೃತಗೊಳಿಸಬೇಕಾದ ವೆಚ್ಚವನ್ನು ಹಾಗೆ ಪ್ರಭೃತಗೊಳಿಸಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಬಯಸುತ್ತದೆ. ಅಲ್ಲದೆ, ಹಾಗೆ ಮಾಡಿದ ವೆಚ್ಚವು ಸಂಬಂಧಿಸಿದ ಕಾನೂನು, ನಿಯಮಗಳು, ನಿಬಂಧನೆಗಳು ಮತ್ತು ನಿರ್ದೇಶನಗಳಿಗೆ ಅನುಗುಣವಾಗಿದೆಯೇ ಎಂಬುದನ್ನು ಸಹ ಖಚಿತಪಡಿಸಿಕೊಳ್ಳುತ್ತದೆ.

## 2.2 ಧನವಿನಿಯೋಗ ಲೆಕ್ಕಗಳ ಸಾರಾಂಶ

**2.2.1** 2016–17ನೇ ವರ್ಷದಲ್ಲಿ 29 ಅನುದಾನ/ವಿನಿಯೋಗಗಳಿಗೆ ಪ್ರತಿಯಾಗಿ ವಾಸ್ತವ ವೆಚ್ಚದ ಸಂಕ್ಷಿಪ್ತ ಸ್ಥಿತಿಯನ್ನು **ಕೋಷ್ಟಕ 2.1**ರಲ್ಲಿ ನೀಡಿದೆ.

**ಕೋಷ್ಟಕ 2.1: ಮೂಲ/ಪೂರಕ ಅವಕಾಶಗಳಿಗೆ ಪ್ರತಿಯಾಗಿ ವಾಸ್ತವ ವೆಚ್ಚದ ಸಂಕ್ಷಿಪ್ತ ಸ್ಥಿತಿ**

**(ಕೋಟಿ ರೂಪಾಯಿಗಳಲ್ಲಿ)**

| ವೆಚ್ಚದ ಸ್ವರೂಪ | | ಮೂಲ ಅನುದಾನ/ ವಿನಿಯೋಗ | ಪೂರಕ ಅನುದಾನ/ ವಿನಿಯೋಗ | ಒಟ್ಟು | ವಾಸ್ತವ ವೆಚ್ಚ | ಬಳಕೆಯಾಗದ ಅವಕಾಶ(–)/ ಅವಕಾಶಕ್ಕಿಂತ ಅಧಿಕ ವೆಚ್ಚ(+) | ಅಧ್ಯರ್ಪಣೆ ಮಾಡಿದ ಮೊತ್ತ | ಮಾರ್ಚಿ 31ರಂದು ಅಧ್ಯರ್ಪಣೆ ಮಾಡಿದ ಮೊತ್ತ | ಮಾರ್ಚಿ 31ರಂದು *ಶೇಕಡ ವಾರು ಉಳಿಕೆಯ ಅಧ್ಯರ್ಪಣೆ* |
|---|---|---|---|---|---|---|---|---|---|
| ಪುರಸ್ಕೃತ | I ರಾಜಸ್ವ | 1,19,836.38 | 9,310.29 | 1,29,146.67 | 1,22,025.63 | (-)7,121.04 | 1,470.74 | 1,470.74 | 100 |
| | II ರಾಜಸ್ವ ಸಾರ್ವಜನಿಕ ಋಣ | 0.00 | 0.88 | 0.88 | 0.88 | 0.00 | 0.00 | 0.00 | 0 |
| | III ಬಂಡವಾಳ | 28,733.59 | 3,562.37 | 32,295.96 | 27,887.15 | (-)4,408.81 | 833.07 | 833.07 | 100 |
| | IV ಸಾಲಗಳು ಮತ್ತು ಮುಂಗಡಗಳು | 1,625.19 | 529.69 | 2,154.88 | 1,934.38 | (-)220.50 | 7.04 | 7.04 | 100 |

| ವೆಚ್ಚದ ಸ್ವರೂಪ | | ಮೂಲ ಅನುದಾನ/ ವಿನಿಯೋಗ | ಪೂರಕ ಅನುದಾನ/ ವಿನಿಯೋಗ | ಒಟ್ಟು | ವಾಸ್ತವ ವೆಚ್ಚ | ಬಳಕೆಯಾಗದ ಅವಕಾಶ(–)/ ಅವಕಾಶಕ್ಕಿಂತ ಅಧಿಕ ವೆಚ್ಚ(+) | ಅಧ್ಯರ್ಪಣೆ ಮಾಡಿದ ಮೊತ್ತ | ಮಾರ್ಚ್ 31ರಂದು ಅಧ್ಯರ್ಪಣೆ ಮಾಡಿದ ಮೊತ್ತ | ಮಾರ್ಚ್ 31ರಂದು *ಶೇಕಡ ವಾರು ಉಳಿಕೆಯ ಅಧ್ಯರ್ಪಣೆ* |
|---|---|---|---|---|---|---|---|---|---|
| ಒಟ್ಟು ಪುರಸ್ಕೃತ | | **1,50,195.16** | **13,403.23** | **1,63,598.39** | **1,51,848.04** | **(-)11,750.35** | **2,310.85** | **2,310.85** | **100** |
| ಪ್ರಭೃತ | *V ರಾಜಸ್ವ* | *14,594.25* | *130.04* | *14,724.29* | *13,327.32* | *(-)1,396.97* | *179.32* | *179.32* | *100* |
| | *VI ಸಾರ್ವಜನಿಕ ಋಣ ಪಾವತಿ* | *6,841.41* | *417.41* | *7,258.82* | *7,420.24* | *(+)161.42* | *0.01* | *0.01* | *100* |
| | *VII ಬಂಡವಾಳ* | *466.34* | *4.50* | *470.84* | *449.42* | *(-)21.42* | *14.08* | *14.08* | *100* |
| ಒಟ್ಟು ಪ್ರಭೃತ | | ***21,902.00*** | ***551.95*** | ***22,453.95*** | ***21,196.98*** | ***(-)1,256.97*** | ***193.41*** | ***193.41*** | ***100*** |
| ಒಟ್ಟು ಮೊತ್ತ | | **1,72,097.16** | **13,955.18** | **1,86,052.34** | **1,73,045.02** | **(-)13,007.32** | **2,504.26** | **2,504.26** | **100** |

*ಆಕರ: ಧನವಿನಿಯೋಗ ಲೆಕ್ಕಗಳು*

**2.2.2** ವಿಧಾನಮಂಡಲದ ಮುಂದೆ ಮಂಡಿಸಲಾಗುವ ಅನುದಾನಗಳ ಬೇಡಿಕೆಯ ಸಾರಾಂಶವು ಆ ವರ್ಷದಲ್ಲಿ ಬೇಡಿಕೆಯೊಂದಿಗೆ ಲಗತ್ತಿಸಿದ ಅನುಸೂಚಿಗಳಲ್ಲಿ ತೋರಿಸಿದ ವಿವಿಧ ನಿರ್ದಿಷ್ಟ ಸೇವೆಗಳ ಮೇಲಿನ ವೆಚ್ಚಕ್ಕೆ ಅನುಮೋದನೆಯನ್ನು ಬಯಸುತ್ತದೆ. ಬೇಡಿಕೆಗೆ ಪ್ರತಿಯಾಗಿ ತೋರಿಸಿದ ವೆಚ್ಚಗಳು ಆಯಾ ಉದ್ದೇಶಗಳಿಗೆ ವಿನಿಯೋಗವಾಗಿದೆ ಎಂಬುದನ್ನು ಧ್ವನಿಸುತ್ತದೆ. ಆದರೂ, ಲೆಕ್ಕಪರಿಶೋಧನೆಯ ಪರೀಕ್ಷಾ ತನಿಖೆಯಲ್ಲಿ ಇಲ್ಲಿ ಸೂಚಿಸಲಾದ ವೆಚ್ಚಗಳು ಇಂಗಿತ ಉದ್ದೇಶವನ್ನು ತಲುಪಿಲ್ಲ ಎಂಬುದಾಗಿ ಕಂಡುಬಂದಿರುವುದನ್ನು ಈ ಕೆಳಗೆ ಚರ್ಚಿಸಲಾಗಿದೆ:

ಒಟ್ಟು ವೆಚ್ಚವು, ವೆಚ್ಚದ ವಿವರಣೆಗಳ ಲಭ್ಯವಿಲ್ಲದೆ ಈ ಕೆಳಗೆ ತೋರಿಸಿರುವಷ್ಟರ ಮಟ್ಟಿಗೆ ಅಧಿಕವಾಗಿ ತೋರಿಸಲ್ಪಟ್ಟಿದೆ;

ಸಾದಿಲ್ವಾರು ವೆಚ್ಚ ಕೈಪಿಡಿ 1958ರ ಪ್ಯಾರಾ 37(ಬಿ)(3)ರ ಅನ್ವಯ ಬಟವಾಡೆ ಅಧಿಕಾರಿಗಳು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಸೆಳೆದ ₹42.05 ಕೋಟಿಗಳಿಗೆ ಸಂಬಂಧಿಸಿದ ಸವಿವರ ವೆಚ್ಚಗಳನ್ನು ಸಲ್ಲಿಸಿರುವುದಿಲ್ಲ. ಪಾವತಿಯಾಗದ ಸವಿವರ ಸಾದಿಲ್ವಾರು ಬಿಲ್ಲುಗಳು ಸಲ್ಲಿಕೆಯಾಗದ ಕಾರಣದಿಂದ ವೆಚ್ಚದ ಯಥಾರ್ಥತೆಯನ್ನು ದೃಢಪಡಿಸಲಾಗುವುದಿಲ್ಲ. 31 ಮಾರ್ಚ್ 2017ರಲ್ಲಿ ಬಾಕಿ ಇರುವ ಒಟ್ಟು ಬಿಲ್ಲುಗಳ ಸಂಖ್ಯೆ 3,272. ಇದಕ್ಕೆ ಉತ್ತರವಾಗಿ ಆರ್ಥಿಕ ಇಲಾಖೆಯು (ಡಿಸೆಂಬರ್ 2017) ಹಣ ಸೆಳೆಯುವ ಬಟವಾಡೆ ಅಧಿಕಾರಿವಾರು ಬಾಕಿಯಿರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ವಿವರಗಳು ಮಹಾಲೇಖಾಪಾಲರಿಂದ ಬಂದ ನಂತರ, ಬಾಕಿಯಿರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ವಿಲೇವಾರಿಗಾಗಿ ಸಂಬಂಧಪಟ್ಟ ಇಲಾಖೆಗಳಿಗೆ ಆರ್ಥಿಕ ಇಲಾಖೆಯಿಂದ ಸೂಚನೆಗಳು ಜಾರಿಯಾಗಿವೆ ಎಂದು ತಿಳಿಸಿದೆ.

### 2.2.3 ಈ ಕೆಳಗಿನ ಪ್ರಸಂಗಗಳಲ್ಲಿ ಒಟ್ಟು ವೆಚ್ಚವನ್ನು ಅಧಿಕವಾಗಿ ತೋರಿಸಲಾಗಿದೆ:

- ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್‌ಗಳಿಗೆ ಬಿಡುಗಡೆಯಾದ ಮೊತ್ತದಲ್ಲಿ ನಿಧಿ–IIರಲ್ಲಿ (ಸಾರ್ವಜನಿಕ ಲೆಕ್ಕ) ಜಿಲ್ಲಾ ಪಂಚಾಯತ್ ಅಡಿಯಲ್ಲಿ ₹473.66 ಕೋಟಿ ಮತ್ತು ತಾಲ್ಲೂಕು ಪಂಚಾಯತ್ ಅಡಿಯಲ್ಲಿ ₹906.95 ಕೋಟಿ ಬಳಕೆಯಾಗದೆ ಉಳಿದಿದೆ;
- ಸಾರ್ವಜನಿಕ ಲೆಕ್ಕದಡಿಯ ಬಂಡವಾಳ ವಿಭಾಗ (ಪ್ರಧಾನಶೀರ್ಷಿಕೆ 4217) ದಲ್ಲಿನ ₹60.90 ಕೋಟಿ ವೆಚ್ಚವು ರಾಜ್ಯ ನಗರ ಸಾರಿಗೆ ನಿಧಿಗೆ ವರ್ಗಾಯಿಸಬೇಕಿದ್ದ ನಿಧಿಯ ಲೆಕ್ಕಕ್ಕೆ ವರ್ಗಾವಣೆಯಾಗಿರುವುದಿಲ್ಲ **(ಕಂಡಿಕೆ ಸಂಖ್ಯೆ 1.9.4ರಲ್ಲಿ ವಿವರವಿದೆ);**
- 2016–17ನೇ ವರ್ಷದಲ್ಲಿ ಮೂಲಭೂತ ಸೌಕರ್ಯ ಉಪಕರ ವಸೂಲಿಗೆ ಸಂಬಂಧಿಸಿದ ₹951.53 ಕೋಟಿ ಮೊತ್ತವು ಸಾರ್ವಜನಿಕ ಲೆಕ್ಕದಲ್ಲಿನ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಧಿಗೆ ವರ್ಗಾಯಿಸಲ್ಪಟ್ಟಿರುತ್ತದೆ. ಆದರೆ, ಬಂಡವಾಳ/ರಾಜಸ್ವ ಶೀರ್ಷಿಕೆಯಲ್ಲಿ ಉಂಟಾದ

ವೆಚ್ಚವು ನಿಧಿಯ ಲೆಕ್ಕಕ್ಕೆ ವರ್ಗಾವಣೆಯಾಗದೆ ಇರುವುದರಿಂದ ₹951.53 ಕೋಟಿಗಳಷ್ಟು ಅಧಿಕವೆಚ್ಚವಾಗಿ ತೋರಿಸಿರುವುದರಲ್ಲಿ ಫಲಿತವಾಗಿದೆ. ಅಷ್ಟೇ ಅಲ್ಲದೆ, ಸಂಚಿತ ನಿಧಿಯಿಂದ ನಿಧಿಯ ಲೆಕ್ಕಕ್ಕೆ ₹3,670 ಕೋಟಿಗಳ ಮೊತ್ತವು ವರ್ಗಾವಣೆಯಾಗಿರುತ್ತದೆ ಎಂದು ತಿಳಿಸಲಾಗಿದೆ. ಸಾರ್ವಜನಿಕ ಲೆಕ್ಕದ ನಿಧಿಯ ಶೀರ್ಷಿಕೆಯ ಅಡಿಯಲ್ಲಿ ಸಂಬಂಧಿಸಿದ ರಾಜಸ್ವ/ಬಂಡವಾಳಗಳ ವೆಚ್ಚಗಳನ್ನು ತೋರಿಸದೆ ಇರುವುದರಿಂದ ವೆಚ್ಚವನ್ನು ಅಧಿಕವಾಗಿ ತೋರಿಸಿದಂತಾಗಿದೆ **(ಕಂಡಿಕೆ ಸಂಖ್ಯೆ 1.9.4ರಲ್ಲಿ ವಿವರವಿದೆ);**

- ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ(ಆರ್‌ಎಸ್‌ಬಿವೈ)ಯ ಅನುಷ್ಠಾನದ ಸಲುವಾಗಿ ರಚಿಸಲ್ಪಟ್ಟ ಸಂಘವಾದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟಿಗೆ ಬಿಡುಗಡೆಯಾದ ₹106 ಕೋಟಿಗಳ ಮೊತ್ತವು ಬಳಕೆಯಾಗದೆ ಉಳಿದಿದೆ **(ಕಂಡಿಕೆ 3.10.2ರಲ್ಲಿ ವಿವರವಿದೆ);**

- ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ 'ಮಹಿಳಾ ಉದ್ಯಮಿಗಳ ತರಬೇತಿ ಕಾರ್ಯಕ್ರಮ' ಎಂಬ 'ಎ' ವರ್ಗದ ಯೋಜನೆಯ ಅನುಷ್ಠಾನಕ್ಕಾಗಿ 2016–17ನೇ ವರ್ಷದಲ್ಲಿ ಬಿಡುಗಡೆಯಾದ (₹4.16 ಕೋಟಿ) ಮೊತ್ತದಲ್ಲಿ ₹1.38 ಕೋಟಿಯಷ್ಟು ಬಳಕೆಯಾಗದೆ ಉಳಿದಿತ್ತು **(ಕಂಡಿಕೆ 1.1.5ರಲ್ಲಿ ವಿವರವಿದೆ);**

- 4401-00-001-1-01-436 - ನಬಾರ್ಡ್ ಕಾಮಗಾರಿ ಲೆಕ್ಕ ಶೀರ್ಷಿಕೆಯಡಿ ರೈತ ಸಂಪರ್ಕ ಕೇಂದ್ರದ ಕಾಮಗಾರಿಗಾಗಿ ಕಾರ್ಯನಿರ್ವಾಹಕ ಎಂಜಿನಿಯರ್ ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗ, ಜಿಲ್ಲಾ ಪಂಚಾಯತ್ ಇವರಿಗೆ ಬಿಡುಗಡೆಯಾಗಿದ ಮೊತ್ತದಲ್ಲಿ ಬಳಕೆಯಾಗದೆ ಉಳಿದ ₹6.89 ಕೋಟಿಯಷ್ಟು ಮೊತ್ತವು ಸರಕಾರದ ಲೆಕ್ಕಕ್ಕೆ ಸಂದಾಯವಾಗಿರುವುದಿಲ್ಲ. ಇಲಾಖಾ ಅಧಿಕಾರಿಗಳ ಬಳಿ ಬಳಕೆಯಾಗದೆ ಉಳಿದ ಶಿಲ್ಕುಗಳ ಮೊತ್ತ ಪ್ರಸಕ್ತ ವರ್ಷದ ಲೆಕ್ಕದಲ್ಲಿಯೇ ಸಂಬಂಧಿಸಿದ ಒಳಶೀರ್ಷಿಕೆಯಡಿ ವೆಚ್ಚದ ಇಳಿಕೆ ಎಂಬುದಾಗಿ ಹೊಂದಾಣಿಕೆಯಾಗಬೇಕಿತ್ತು; ಹಾಗೂ

- ಅಲ್ಪಸಂಖ್ಯಾತ ನಿರ್ದೇಶನಾಲಯದ ವೈಯಕ್ತಿಕ ಠೇವಣಿ ಲೆಕ್ಕದಲ್ಲಿ ಇಟ್ಟಿದ್ದ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ₹260.29 ಕೋಟಿಗಳ ಮೊತ್ತವು ವಿತರಣೆಯಾಗದೆ ಉಳಿದಿರುತ್ತದೆ **(ಕಂಡಿಕೆ 3.8.2ರಲ್ಲಿ ವಿವರವಿದೆ).**

### 2.2.4 ಈ ಕೆಳಗಿನ ಪ್ರಸಂಗಗಳಲ್ಲಿ ಒಟ್ಟು ವೆಚ್ಚವನ್ನು ಕಡಿಮೆಯಾಗಿ ತೋರಿಸಲಾಗಿದೆ.

- ಹಸಿರು ತೆರಿಗೆ ಉಪಕರದಡಿ ಸಂಗ್ರಹವಾದ ₹4.37 ಕೋಟಿ ಸಾರ್ವಜನಿಕ ನಿಧಿ ಲೆಕ್ಕಕ್ಕೆ ವರ್ಗಾವಣೆಯಾಗದಿರುವುದು **(ಕಂಡಿಕೆ 1.9.4ರಲ್ಲಿ ವಿವರವಿದೆ);** ಹಾಗೂ

- ₹535 ಕೋಟಿಯಷ್ಟು ಮೊತ್ತವು ಸಂಚಿತ ಋಣಪರಿಹಾರ ನಿಧಿಗೆ ಹೂಡಿಕೆಯಾಗದೆ ಮತ್ತು ಹೊಂದಾಣಿಕೆಯಾಗದೆ ಇರುವುದು **(ಕಂಡಿಕೆ 1.9.4ರಲ್ಲಿ ವಿವರವಿದೆ);**

ಮೇಲಿನಂತೆ, ₹5,898.23 ಕೋಟಿಗಳಷ್ಟು ವೆಚ್ಚವನ್ನು ಅಧಿಕವಾಗಿ ತೋರಿಸಿರುವುದನ್ನು ಗಮನಿಸಲಾಗಿದೆ.

**2.2.5** ಪ್ರಸಕ್ತ 2016–17ರಲ್ಲಿ ಬಳಕೆಯಾಗದೆ ಉಳಿದ ₹11,921.91 ಕೋಟಿಗಳಷ್ಟು ಮೊತ್ತದ ಅವಕಾಶವು 29 ಅನುದಾನ/ವಿನಿಯೋಗಗಳಲ್ಲಿನ ₹13,007.32 ಕೋಟಿಗಳ ಒಟ್ಟಾರೆ ಬಳಕೆಯಾಗದೆ ಉಳಿದ ಅವಕಾಶ ಮತ್ತು ಅನುದಾನ ಸಂಖ್ಯೆ 01, 05, 14, 20 ಮತ್ತು 29 ಗಳಡಿಯ ರಾಜಸ್ವ/ಬಂಡವಾಳ ವಿಭಾಗಗಳಲ್ಲಿನ ಪುರಸ್ಕೃತ/ಪ್ರಭೃತ ವೆಚ್ಚಗಳಲ್ಲಿ ಉಂಟಾದ ₹1,085.41 ಕೋಟಿಗಳ ಹೆಚ್ಚಳದ ಉತ್ತಾರದಿಂದ ಉಂಟಾಗಿದೆ.

**2.2.6** 2016–17ನೇ ವರ್ಷದಲ್ಲಿ ಆಡಳಿತಾತ್ಮಕ ಇಲಾಖೆಗಳ ಕೋರಿಕೆಯ ಮೇರೆಗೆ, ಆರ್ಥಿಕ ಇಲಾಖೆಯು ಪ್ರಾರಂಭದಲ್ಲಿ ಆಯವ್ಯಯ ಅವಕಾಶವಿಲ್ಲದಿದ್ದರೂ, ವೆಚ್ಚಗಳ ಪೂರೈಕೆಗಾಗಿ, 293 ಕಾರ್ಯಕಾರಿ ಆದೇಶಗಳ ಮುಖಾಂತರ 26 ಅನುದಾನಗಳ ರಾಜಸ್ವ/ಬಂಡವಾಳ ವಿಭಾಗದಲ್ಲಿ

₹6,057.11 ಕೋಟಿಗಳನ್ನು (ಇದು ಕೇವಲ ಉದಾಹರಣೆಯಾಗಿ ಮಾತ್ರ) ಶಾಸಕಾಂಗದ ಅಂಗೀಕಾರವಿಲ್ಲದೆ ಹೆಚ್ಚುವರಿಯಾಗಿ ಬಿಡುಗಡೆ ಮಾಡಿದೆ (**ಅನುಬಂಧ 2.1**). ಇವು ರಾಜ್ಯ ಶಾಸಕಾಂಗದ ಸಾರ್ವಜನಿಕ ಲೆಕ್ಕ ಸಮಿತಿಯು ಶಿಫಾರಸ್ಸು ಮಾಡಿರುವ (ಡಿಸೆಂಬರ್ 2014) ಹೊಸ ಸೇವೆಗಳು/ಹೊಸ ಸೇವಾ ಸಾಧನಗಳಿಗಿರುವ ಮಾನದಂಡಗಳಡಿ (₹5 ಕೋಟಿ) ಬರುವುದಿಲ್ಲ. ಆದಾಗ್ಯೂ, ಈ ಹೆಚ್ಚುವರಿಯನ್ನು ಒಳಗೊಳ್ಳಲು ಸಂವಿಧಾನದ ಅನುಚ್ಛೇದ 205(1)(ಎ) ರಡಿ ಪೂರಕ ಅನುದಾನಗಳ ಮೂಲಕ ಅವಕಾಶ ಕಲ್ಪಿಸಲಾಗಿತ್ತು.

(ಅ) 2014–15ರಿಂದ 2016–17ರ ವರೆಗಿನ ಅಂತಹ ಹೆಚ್ಚುವರಿ ಬಿಡುಗಡೆಯ ವಿವರಗಳನ್ನು **ಕೋಷ್ಟಕ 2.2**ರಲ್ಲಿ ನೀಡಲಾಗಿದೆ.

**ಕೋಷ್ಟಕ 2.2: 2014–15 ರಿಂದ 2016–17ರ ವರೆಗೆ ಹೆಚ್ಚುವರಿಗಾಗಿ ಜಾರಿಮಾಡಿದ ಆದೇಶಗಳ ಸಂಖ್ಯೆ**

(ಕೋಟಿ ರೂಪಾಯಿಗಳಲ್ಲಿ)

| ವರ್ಷ | ಅನುದಾನಗಳ ಸಂಖ್ಯೆ | ಜಾರಿ ಆದೇಶಗಳ ಸಂಖ್ಯೆ | ಪೂರಕ ಬೇಡಿಕೆ | ಹೆಚ್ಚುವರಿ ಮೊತ್ತ |
|---|---|---|---|---|
| 2014–15 | 25 | 112 | 12,336.76 | 3,022.33 |
| 2015–16 | 25 | 190 | 18,708.02 | 5,065.69 |
| 2016–17 | 26 | 293 | 13,955.18 | 6,057.11 |

*ಆಕರ: ಸಂಬಂಧಿಸಿದ ವರ್ಷಗಳ ಧನವಿನಿಯೋಗ ಲೆಕ್ಕಗಳು*

ಮೇಲಿನ ಕೋಷ್ಟಕದಲ್ಲಿ ತೋರಿಸಿರುವಂತೆ, ಮೊದಲು ಕಾರ್ಯಕಾರಿ ಆದೇಶಗಳ ಮೂಲಕ ಹಣ ಬಿಡುಗಡೆ ಮಾಡುವ, ಹಾಗೂ ನಂತರ ಪೂರಕ ಅನುದಾನಗಳ ಮೂಲಕ ವಿಧಾನಸಭೆಯ ಅನುಮೋದನೆ ಪಡೆಯುವ ಪ್ರವೃತ್ತಿಯು ಹೆಚ್ಚಾಗುತ್ತಿದೆ. ಸಾರ್ವಜನಿಕ ಲೆಕ್ಕ ಸಮಿತಿಯು, ದಿನಾಂಕ 6ನೇ ಆಗಸ್ಟ್ 2015ರ ಸರ್ಕಾರಿ ಆದೇಶದ ಕಂಡಿಕೆ 5ರಲ್ಲಿ ವಿಶೇಷ ಸಂದರ್ಭಗಳಲ್ಲಿ ಅನಿವಾರ್ಯ/ತುರ್ತು ಅವಶ್ಯಕತೆಯ ಪ್ರಕರಣಗಳಲ್ಲಿ ವೆಚ್ಚವನ್ನು ಭರಿಸಲು ಹೆಚ್ಚುವರಿ ಬಿಡುಗಡೆಯ ಆದೇಶಗಳನ್ನು ಜಾರಿಮಾಡಬಹುದಾಗಿ ಸಲಹೆ ಮಾಡಿದೆ. ಆದಾಗ್ಯೂ, ಹೆಚ್ಚುವರಿ ಆದೇಶಗಳ ಮೂಲಕ ಆದ ಬಿಡುಗಡೆಗಳಿಗೆ ನಂತರದ ಪೂರಕ ಅಂದಾಜಿಗಳಲ್ಲಿ ಅವಕಾಶ ಒದಗಿಸಿ ಪುರಸ್ಕೃತಗೊಳಿಸಬೇಕಾಗಿದೆ.

(ಬಿ) **ಕೋಷ್ಟಕ 2.3**ರಲ್ಲಿ ತೋರಿಸಿರುವಂತೆ 2016–17ನೇ ವರ್ಷದಲ್ಲಿ, ಮೂರು ಅನುದಾನಗಳಡಿಯ ನಾಲ್ಕು ಪ್ರಕರಣಗಳಲ್ಲಿ ಕೆಳಗಿನ ಅಂಶವನ್ನು ಗಮನಿಸಲಾಗಿದೆ.

**ಕೋಷ್ಟಕ 2.3: ಪೂರಕ ಅಂದಾಜುಗಳ ಮೂಲಕ ಸಕ್ರಮಗೊಳಿಸದ ಹೆಚ್ಚುವರಿ ಆದೇಶದ ವೆಚ್ಚಗಳು**

(ಲಕ್ಷ ರೂಪಾಯಿಗಳಲ್ಲಿ)

| ಕ್ರಮ ಸಂಖ್ಯೆ | ಅನುದಾನ ಸಂಖ್ಯೆ | ಲೆಕ್ಕಶೀರ್ಷಿಕೆ | ಆದೇಶ ಸಂಖ್ಯೆ ಮತ್ತು ದಿನಾಂಕ | ಮೂಲ ಆಯವ್ಯಯ | ಹೆಚ್ಚುವರಿ ಮೊತ್ತ | ಮಾಡಿದ ವೆಚ್ಚ | ಅಧಿಕ ವೆಚ್ಚ |
|---|---|---|---|---|---|---|---|
| 1 | 11 | 2235-02-196-1-03-405 ಶಿವಮೊಗ್ಗ | ಎಫ್‌ಡಿ 453 ಬಿಆರ್‌ಎಸ್ 2016, ಬೆಂಗಳೂರು ದಿನಾಂಕ 18.03.2017 | 8.00 | 9.67 | 17.67 | 9.67 |
| 2 | | 2235-02-196-1-03-410 ಹಾಸನ | | 8.00 | 9.67 | 17.67 | 9.67 |
| 3 | 17 | 2202-02-001-0-01-059 (ಯೋಜನೇತರ) ಇತರ ವೆಚ್ಚಗಳು | ಎಫ್‌ಡಿ 38 ಬಿಆರ್‌ಎಸ್ 2016 ದಿನಾಂಕ 20.08.2016 | 26.00 | 74.00 | 48.39 | 22.39 |
| 4 | 26 | 3451-00-101-5-03-015 ಉಪ ವೆಚ್ಚಗಳು | ಎಫ್‌ಡಿ 02 ಬಿಆರ್‌ಎಸ್ 2016 ದಿನಾಂಕ 30.04.2016 | 1.00 | 10.00 | 3.75 | 2.75 |
| ಒಟ್ಟು | | | | | **103.34** | | **44.48** |

*ಆಕರ: ಧನವಿನಿಯೋಗ ಲೆಕ್ಕಗಳು*

ಆರ್ಥಿಕ ಇಲಾಖೆಯು (ಡಿಸೆಂಬರ್ 2017) ಲೆಕ್ಕಪರಿಶೋಧನೆಯ ಅಂಶವನ್ನು ಒಪ್ಪಿಕೊಳ್ಳುತ್ತಾ ಮೇಲೆ ಕಾಣಿಸಿದ ಕ್ರಮಸಂಖ್ಯೆ (1), (2) ಮತ್ತು (3) ರಲ್ಲಿ ಹೆಚ್ಚುವರಿ ಆದೇಶಗಳನ್ನು ಪೂರಕ ಬೇಡಿಕೆಗಳಲ್ಲಿ ಸಕ್ರಮಗೊಳಿಸಲಾಗಿಲ್ಲ ಎಂದು ತಿಳಿಸಿದೆ. ಹಾಗೂ ಕ್ರಮಸಂಖ್ಯೆ (4) ರಲ್ಲಿ ಸೂಚಿಸಲಾಗಿರುವ ಹೆಚ್ಚುವರಿ ಆದೇಶವನ್ನು ಪೂರಕ ಅಂದಾಜು–3ರಲ್ಲಿ ಸಕ್ರಮಗೊಳಿಸಲಾಗಿದೆ ಎಂದು ತಿಳಿಸಿದೆ. ಆದರೆ ಹೆಚ್ಚುವರಿ ಆದೇಶವು ಜಾರಿಯಾಗಿರುವುದು ಉದ್ದೇಶ ಶೀರ್ಷಿಕೆ '059–ಇತರೆ ವೆಚ್ಚಗಳು' ಅಡಿಯಲ್ಲಿಯೇ ಹೊರತು ಉದ್ದೇಶ ಶೀರ್ಷಿಕೆ '015–ಪೂರಕ ವೆಚ್ಚಗಳು' ಅಡಿಯಲ್ಲಿ ಅಲ್ಲ ಎಂಬುದನ್ನು ಗಮನಿಸಲಾಗಿದೆ.

## 2.3 ಅಧಿಕ ವೆಚ್ಚಗಳು

ಆಯವ್ಯಯದಲ್ಲಿ ಅವಕಾಶವಿಲ್ಲದೆ ₹25 ಕೋಟಿಗೆ ಮೀರಿದ ವೆಚ್ಚವನ್ನು ಹತ್ತು ಅನುದಾನಗಳಿಗೆ ಸಂಬಂಧಿಸಿದ ಹನ್ನೊಂದು ಪ್ರಧಾನ ಶೀರ್ಷಿಕೆಗಳಡಿ 17 ಪ್ರಸಂಗಗಳಲ್ಲಿ ಒಟ್ಟು ₹4,327.82 ಕೋಟಿಗಳಷ್ಟು ವೆಚ್ಚ ಮಾಡಲಾಗಿದೆ (**ಅನುಬಂಧ 2.2**)

### 2.3.1 ಸಕ್ರಮಬದ್ಧಗೊಳಿಸಬೇಕಾಗಿರುವ ಹಿಂದಿನ ವರ್ಷಗಳ ಅಧಿಕವೆಚ್ಚಗಳು

ಭಾರತ ಸಂವಿಧಾನದ ಅನುಚ್ಛೇದ 205ರ ಪ್ರಕಾರ, ಅನುದಾನ/ಧನವಿನಿಯೋಗಗಳಿಗಿಂತ ಹೆಚ್ಚಾದ ಮೊತ್ತವನ್ನು ರಾಜ್ಯ ಸರ್ಕಾರವು, ವಿಧಾನಸಭೆಯ ಅಂಗೀಕಾರದೊಂದಿಗೆ ಸಕ್ರಮಗೊಳಿಸಬೇಕಾಗಿದೆ. ಅಧಿಕ ವೆಚ್ಚವನ್ನು ಸಕ್ರಮಗೊಳಿಸಲು ಈ ಅನುಚ್ಛೇದಡಿಯಲ್ಲಿ ಯಾವುದೇ ಕಾಲಮಿತಿಯನ್ನು ವಿಧಿಸಿಲ್ಲವಾದರೂ ಸಾರ್ವಜನಿಕ ಲೆಕ್ಕ ಸಮಿತಿಯಿಂದ ಧನವಿನಿಯೋಗ ಲೆಕ್ಕಗಳ ಕುರಿತ ಚರ್ಚೆಯು ಪೂರ್ಣಗೊಂಡ ಮೇಲೆ ಅಧಿಕ ವೆಚ್ಚಗಳನ್ನು ಸಕ್ರಮಗೊಳಿಸಲಾಗುತ್ತದೆ.

**ಕೋಷ್ಟಕ 2.4** ರಲ್ಲಿ ವಿವರಿಸಿರುವಂತೆ 2012–13 ರಿಂದ 2015–16ರ ಸಾಲಿನವರೆಗೆ ₹1,124.66 ಕೋಟಿಗಳಷ್ಟು ಅಧಿಕ ವೆಚ್ಚದ ಮೊತ್ತವನ್ನು ಇನ್ನೂ ಸಕ್ರಮಗೊಳಿಸಬೇಕಾಗಿದೆ.

**ಕೋಷ್ಟಕ 2.4: ಸಕ್ರಮಗೊಳಿಸಬೇಕಾಗಿರುವ ಹೆಚ್ಚಾದ ವೆಚ್ಚಗಳು**

**(ಕೋಟಿ ರೂಪಾಯಿಗಳಲ್ಲಿ)**

| ವರ್ಷ | ಅನುದಾನಗಳ ಸಂಖ್ಯೆ/ವಿವರ | ಧನವಿನಿಯೋಗ ಲೆಕ್ಕ/ ಲೆಕ್ಕ ಪರಿಶೋಧನಾ ವರದಿಯಲ್ಲಿ ಸೂಚಿಸಿರುವ ಸಕ್ರಮಗೊಳಿಸಬೇಕಾಗಿರುವ ಹೆಚ್ಚಾದ ವೆಚ್ಚಗಳು | ಷರಾ |
|---|---|---|---|
| 2012–13 | 08 – ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ | 494.02 | ₹209.51 ಕೋಟಿ ಮೊತ್ತದ ಅಧಿಕ ವೆಚ್ಚವು ಅರಣ್ಯ ಅಭಿವೃದ್ಧಿ ತೆರಿಗೆಯಿಂದ ಸಾರ್ವಜನಿಕ ಲೆಕ್ಕಕ್ಕೆ ವರ್ಗಾವಣೆಯ ಕಾರಣದಿಂದ ಉಂಟಾಗಿರುತ್ತದೆ. ಜಮೆಯು ನಿರೀಕ್ಷಿತ ಮೊತ್ತಕ್ಕಿಂತ ಹೆಚ್ಚಾಗಿರುತ್ತದೆ. ಹಾಗೂ ತಪ್ಪು ವರ್ಗೀಕರಣದ ದೆಸೆಯಿಂದ ವಾಣಿಜ್ಯತೆರಿಗೆ ಇಲಾಖೆಯಲ್ಲಿ ಉಳಿದಿದ್ದ ₹284.51 ಕೋಟಿಗಳಷ್ಟು ಆದಾಯವನ್ನು ಸರಿಯಾಗಿ ವರ್ಗೀಕರಿಸಿ ಸಾರ್ವಜನಿಕ ಲೆಕ್ಕಕ್ಕೆ ವರ್ಗಾಯಿಸಲಾಗಿದೆ. |
| 2013–14 | | 355.39 | ಅಧಿಕ ವೆಚ್ಚವು ಅರಣ್ಯ ಅಭಿವೃದ್ಧಿ ತೆರಿಗೆಯಿಂದ ಸಾರ್ವಜನಿಕ ನಿಧಿಗೆ ವರ್ಗಾವಣೆಯ ಕಾರಣದಿಂದ ಉಂಟಾಗಿರುತ್ತದೆ. ಜಮೆಯು ನಿರೀಕ್ಷಿತ ಮೊತ್ತಕ್ಕಿಂತ ಹೆಚ್ಚಾಗಿ ಸಂಗ್ರಹವಾಗಿರುತ್ತದೆ. |
| | 26–ಯೋಜನೆ ಅಂಕಿ ಅಂಶ, ವಿಜ್ಞಾನ ಮತ್ತು ತಂತ್ರಜ್ಞಾನ | 20.42 | ಫೆಬ್ರುವರಿ 2013ರಲ್ಲಿ ಮಂಡಿಸಿದ್ದ ಲೇಖಾನುದಾನದಲ್ಲಿ ಸೇರಿಸಿದ್ದ ಆಯವ್ಯಯದ ಕೆಲ ಶೀರ್ಷಿಕೆಗಳ ಅವಕಾಶವನ್ನು ಜುಲೈ 2013ರ ಆಯವ್ಯಯದಲ್ಲಿ ಹಿಂತೆಗೆದಿದ್ದರಿಂದ ಆದ ಹೆಚ್ಚುವರಿ ವೆಚ್ಚ. |
| 2014–15 | 08 – ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ | 188.75 | ಅಧಿಕ ವೆಚ್ಚವು ಅರಣ್ಯ ಅಭಿವೃದ್ಧಿ ತೆರಿಗೆಯಿಂದ ಸಾರ್ವಜನಿಕ ನಿಧಿಯ ಅರಣ್ಯ ಅಭಿವೃದ್ಧಿ ನಿಧಿಗೆ ವರ್ಗಾವಣೆಯ ಕಾರಣದಿಂದ ಉಂಟಾಗಿರುತ್ತದೆ. ಜಮೆಯು ನಿರೀಕ್ಷಿತ ಮೊತ್ತಕ್ಕಿಂತ ಹೆಚ್ಚಾಗಿರುತ್ತದೆ ಮತ್ತು ತಪ್ಪು ವರ್ಗೀಕರಣದ ಕಾರಣದಿಂದಲೂ ಉಂಟಾಗಿದೆ. |
| | 10–ಸಮಾಜಕಲ್ಯಾಣ | 0.06 | ಹೆಚ್ಚುವರಿಗೆ ಯಾವುದೇ ನಿರ್ದಿಷ್ಟ ಕಾರಣಗಳನ್ನು ನೀಡಿಲ್ಲ. |

| ವರ್ಷ | ಅನುದಾನಗಳ ಸಂಖ್ಯೆ/ವಿವರ | ಧನವಿನಿಯೋಗ ಲೆಕ್ಕ/ ಲೆಕ್ಕ ಪರಿಶೋಧನಾ ವರದಿಯಲ್ಲಿ ಸೂಚಿಸಿರುವ ಸಕ್ರಮಗೊಳಿಸಬೇಕಾಗಿರುವ ಹೆಚ್ಚಾದ ವೆಚ್ಚಗಳು | ಷರಾ |
|---|---|---|---|
| 2015–16 | 01 ಕೃಷಿ ಮತ್ತು ತೋಟಗಾರಿಕೆ | 7.93 | ಇದಕ್ಕೆ ಮುಂಗಡಪತ್ರದಲ್ಲಿ ಇರುವ ದೋಷವು ಕಾರಣವಾಗಿರುತ್ತದೆ. ಅನುದಾನ 1ಕ್ಕೆ ಬದಲಾಗಿ ಅನುದಾನ 18ರಲ್ಲಿ ಅವಕಾಶ ಒದಗಿಸಲಾಗಿದೆ. ಆದರೆ ವೆಚ್ಚವನ್ನು ಅನುದಾನ 1ರಲ್ಲಿ ವರ್ಗೀಕರಿಸಲಾಗಿದೆ. |
| | 05 – ಗೃಹ ಮತ್ತು ಸಾರಿಗೆ | 44.94 | ಹೆಚ್ಚುವರಿಗೆ ಯಾವುದೇ ನಿರ್ದಿಷ್ಟ ಕಾರಣಗಳನ್ನು ನೀಡಿಲ್ಲ. |
| | 06 – ಮೂಲಭೂತ ಸೌಕರ್ಯಗಳ ಅಭಿವೃದ್ಧಿ | *5.11* | ಇದಕ್ಕೆ ಮುಂಗಡಪತ್ರದಲ್ಲಿ ಇರುವ ದೋಷವು ಕಾರಣವಾಗಿರುತ್ತದೆ. ಪುರಸ್ಕೃತಕ್ಕೆ ಬದಲಾಗಿ ಪ್ರಭೃತ ವಿಭಾಗದ ಅಡಿಯಲ್ಲಿ ಅವಕಾಶ ಒದಗಿಸಲಾಗಿದೆ. ಆದರೂ ವೆಚ್ಚವನ್ನು ಸರಿಯಾಗಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ. |
| | 19- ನಗರಾಭಿವೃದ್ಧಿ | 8.04 | |
| ಒಟ್ಟು | | **1,124.66** | |

*ಆಕರ: ಧನವಿನಿಯೋಗ ಲೆಕ್ಕಗಳು.*

### 2.3.2 2016–17ರಲ್ಲಿ ಅವಕಾಶಗಳಿಗಿಂತ ಅಧಿಕ ವೆಚ್ಚಗಳು

2016–17ರಲ್ಲಿ ಅನುದಾನ ಸಂಖ್ಯೆ 1–ಕೃಷಿ ಮತ್ತು ತೋಟಗಾರಿಕೆ, 05–ಗೃಹ ಮತ್ತು ಸಾರಿಗೆ, 14 — ಕಂದಾಯ, 20 – ಲೋಕೋಪಯೋಗಿ ಕಾಮಗಾರಿಗಳು ಹಾಗೂ 29 – ಋಣ ಸೇವೆಗಳಡಿಯಲ್ಲಿ ಅವಕಾಶಗಳಿಗಿಂತ ₹1,085.41 ಕೋಟಿಗಳ ಅಧಿಕ ವೆಚ್ಚವಾಗಿದ್ದು ಸಕ್ರಮಗೊಳಿಸಬೇಕಾಗಿದೆ. ವಿವರಗಳನ್ನು **ಕೋಷ್ಟಕ 2.5** ರಲ್ಲಿ ನೀಡಲಾಗಿದೆ.

**ಕೋಷ್ಟಕ 2.5: 2016–17ರಲ್ಲಿ ಅಧಿಕ ವೆಚ್ಚಗಳು.**

**(ರೂಪಾಯಿಗಳಲ್ಲಿ)**

| ಕ್ರಮ ಸಂಖ್ಯೆ | ಅನುದಾನ | ಅವಕಾಶ | ವೆಚ್ಚ | ಅಧಿಕ |
|---|---|---|---|---|
| 1 | 01 – ಕೃಷಿ ಮತ್ತು ತೋಟಗಾರಿಕೆ ಬಂಡವಾಳ–ಪುರಸ್ಕೃತ | 1,06,10,00,000 | 2,82,84,83,304 | 1,76,74,83,304 |
| 2 | 05 – ಗೃಹ ಮತ್ತು ಸಾರಿಗೆ ರಾಜಸ್ವ –ಪುರಸ್ಕೃತ | 7,67,73,11,000 | 8,23,09,99,503 | 55,36,88,503 |
| 3 | 14 – ಕಂದಾಯ ರಾಜಸ್ವ –ಪುರಸ್ಕೃತ | 79,36,67,94,000 | 85,68,74,27,666 | 6,32,06,33,666 |
| 4 | 20– ಲೋಕೋಪಯೋಗಿ ಕಾಮಗಾರಿಗಳು ರಾಜಸ್ವ –ಪುರಸ್ಕೃತ | 24,51,18,25,000 | 25,10,99,26,797 | 59,81,01,797 |
| 5 | *29 – ಋಣ ಸೇವೆ ಬಂಡವಾಳ–ಪ್ರಭೃತ* | *72,58,82,00,000* | *74,20,23,83,927* | *1,61,41,83,927* |
| ಒಟ್ಟು | | **1,85,20,51,30,000** | **1,96,05,92,21,197** | **10,85,40,91,197** |

*ಆಕರ: ಧನವಿನಿಯೋಗ ಲೆಕ್ಕಗಳು.*

ಮೇಲಿನ ಅನುದಾನಗಳಡಿಯಲ್ಲಿ ಅವಕಾಶಗಳಿಗಿಂತ ಅಧಿಕವೆಚ್ಚಗಳಿಗೆ ಪ್ರಮುಖ ಕಾರಣಗಳನ್ನು ಈ ಕೆಳಗೆ ಚರ್ಚಿಸಲಾಗಿದೆ:

- ಅನುದಾನ ಸಂಖ್ಯೆ 1 – ಕೃಷಿ ಮತ್ತು ತೋಟಗಾರಿಕೆಯಡಿಯಲ್ಲಿ ಹೆಚ್ಚಳವು, ವೆಚ್ಚವನ್ನು (₹186.01 ಕೋಟಿ) ರಾಜಸ್ವ ಶೀರ್ಷಿಕೆ (2401–00–108–2–30–059)ಯಿಂದ ಬಂಡವಾಳ ಶೀರ್ಷಿಕೆ (4401–00–800–1–08–436)ಗೆ ಬದಲಾಯಿಸಿರುವುದರಿಂದ ಉಂಟಾಗಿದೆ.

ಆದರೆ, ಪೂರಕ ಅವಕಾಶದ ಮೂಲಕ ಬೇಡಿಕೆ–1ರ ಅಡಿಯಲ್ಲಿ ಅವಶ್ಯಕ ಅವಕಾಶವನ್ನು ಮಾಡಿರಲಿಲ್ಲ.

- ಬೇಡಿಕೆ ಸಂಖ್ಯೆ 5 – ಗೃಹ ಮತ್ತು ಸಾರಿಗೆಯಲ್ಲಿ ಹೆಚ್ಚಳವು, ರಾಜಸ್ವ ಮತ್ತು ಬಂಡವಾಳಗಳ ನಡುವೆ ಪುನರ್ವಿನಿಯೋಗದ ಆದೇಶಗಳನ್ನು ಆರ್ಥಿಕ ಇಲಾಖೆಯ ಅಧಿಕಾರದೊಂದಿಗೆ ಆದೇಶಿಸಿರುವ ಕಾರಣದಿಂದ ಆಗಿದೆ (**ಕಂಡಿಕೆ 2.7.9**).

- ಬೇಡಿಕೆ ಸಂಖ್ಯೆ 14 – ಕಂದಾಯದಲ್ಲಿ ಹೆಚ್ಚಳವು ₹1,235.52 ಕೋಟಿ ಮೊತ್ತದ ಭಾರತ ಸರ್ಕಾರದ ಎನ್‌ಡಿಆರ್‌ಎಫ್ ವಂತಿಗೆಯನ್ನು 2016–17ನೇ ಆರ್ಥಿಕ ವರ್ಷದ ಕೊನೆಯ ದಿನದಂದು ಬಿಡುಗಡೆಮಾಡಿ 2016–17ರಲ್ಲಿಯೇ ನಿಧಿಯ ಲೆಕ್ಕಕ್ಕೆ ವರ್ಗಾವಣೆ ಮಾಡಿದ್ದರಿಂದ ಉಂಟಾಗಿದೆ.

- ಅನುದಾನ ಸಂಖ್ಯೆ 20 – ಲೋಕೋಪಯೋಗಿ ಕಾಮಗಾರಿಯಲ್ಲಿನ ಹೆಚ್ಚಳವು ರೇವು, ದೀಪಸ್ತಂಭ ಮತ್ತು ಹಡಗು – ಅಡಿಯಲ್ಲಿ ಸಂಗ್ರಹಿಸಲಾದ ವಾಸ್ತವ ಸ್ವೀಕೃತಿಯನ್ನು ರೇವು ಅಭಿವೃದ್ಧಿ ನಿಧಿಗೆ ವರ್ಗಾಯಿಸಿರುವ ಕಾರಣದಿಂದಾಗಿದೆ. ವರ್ಗಾವಣೆಗಾಗಿ ಮಾಡಿದ ಅವಕಾಶವು ವಾಸ್ತವ ಸಂಗ್ರಹಕ್ಕಿಂತ ಕಡಿಮೆಯಿತ್ತು. ಹೆಚ್ಚಳವು ರಾಜ್ಯ ಸಂಚಿತ ನಿಧಿಯ ಕೇಂದ್ರ ರಸ್ತೆ ನಿಧಿಗೆ ಜಮೆಯಾಗಿದ್ದ ಭಾರತ ಸರ್ಕಾರದ ಒಟ್ಟು ಅನುದಾನಗಳನ್ನು (2017 ಮಾರ್ಚ್ ತಿಂಗಳ ಕೊನೆಯ ದಿನದಂದು) ಸಾರ್ವಜನಿಕ ಲೆಕ್ಕದಡಿಯ ಕೇಂದ್ರ ರಸ್ತೆ ನಿಧಿಯಿಂದ ಆರ್ಥಿಕ ಸಹಾಯದ ಠೇವಣಿ ಲೆಕ್ಕಕ್ಕೆ ವರ್ಗಾವಣೆಯಾಗಿರುವುದರಿಂದ ಉಂಟಾಗಿದೆ. ಹಾಗೂ

- ಅನುದಾನ ಸಂಖ್ಯೆ 29 – ಋಣ ಸೇವೆಯಲ್ಲಿಯ ಹೆಚ್ಚಳಕ್ಕೆ, ಋಣ ವಿಮೋಚನೆಯ ಅವಕಾಶಗಳನ್ನು ನಿಧಿಯ ಅವಶ್ಯಕತೆಯ ಆಧಾರದ ಮೇಲೆ ವೈಜ್ಞಾನಿಕವಾಗಿ ತಯಾರಿಸದೆ ನಿಧಿ ವಿತರಣೆಗೆ ಸಹಕರಿಸುವ ಏಜೆನ್ಸಿಗಳನ್ನು, ಅಂತಹ ಸಾಲಗಳ ಫಲಾನುಭವಿ ಇಲಾಖೆಗಳನ್ನು ಸಂಪರ್ಕಿಸದೆ ಹಿಂದಿನ ವರ್ಷಗಳ ವಾಸ್ತವದ ಆಧಾರದ ಮೇಲೆ ತಯಾರಿಸಿರುವುದು ಕಾರಣವಾಗಿದೆ.

ಆಯವ್ಯಯದ ಅವಕಾಶಕ್ಕಿಂತಲೂ ಹೆಚ್ಚಿನ ವೆಚ್ಚವು ಅವಕಾಶಕ್ಕೆ ವಿಧಾನಮಂಡಲದ ಅನುಮೋದನೆಯ ಅಗತ್ಯವಿರುವುದಕ್ಕೆ ವಿರುದ್ಧವಾಗಿರುವುದು ಮತ್ತು ಅಸಮರ್ಪಕ ಯೋಜನೆಯನ್ನು ಸೂಚಿಸುತ್ತದೆ.

### 2.3.3 ಹೊಸ ಸೇವೆ/ ಹೊಸ ಸೇವೆಗಳ ಸಾಧನ

ಸಂವಿಧಾನದ 205ನೇ ಅನುಚ್ಛೇದದ ಅನ್ವಯ ವಾರ್ಷಿಕ ಮುಂಗಡ ಪತ್ರದಲ್ಲಿ ನಿರೀಕ್ಷಿಸಿರದ 'ಹೊಸ ಸೇವೆ'ಯ ಮೇಲಿನ ವೆಚ್ಚವನ್ನು, ಅದಕ್ಕೆ ಶಾಸನಸಭೆಯಿಂದ ನಿರ್ದಿಷ್ಟ ಅನುಮೋದನೆ ದೊರೆತ ಮೇಲಷ್ಟೇ ವಹಿಸಬಹುದಾಗಿದೆ. ಸರ್ಕಾರವು ಸಾರ್ವಜನಿಕ ಲೆಕ್ಕ ಸಮಿತಿಯ ನಾಲ್ಕನೆಯ ವರದಿ (ಹದಿನಾಲ್ಕನೇ ವಿಧಾನಸಭೆ)ಯ ಶಿಫಾರಸ್ಸಿನ ಮೇಲೆ 'ಹೊಸ ಸೇವೆ'ಯ ಮಾನದಂಡಗಳು ಅನ್ವಯಿಸದ ಕೆಲವು ವೆಚ್ಚದ ಬಾಬ್ತುಗಳನ್ನು ವಿನಾಯಿತಿಗೊಳಿಸಿ ಹಾಗೂ ಹೊಸ ಸೇವೆ'ಯನ್ನು ನಿರ್ಧರಿಸಲು ಇರುವ ಮಾನದಂಡಗಳನ್ನು ನಿಗದಿಗೊಳಿಸಿ, ಆಗಸ್ಟ್ 2015ರಲ್ಲಿ ಆದೇಶವನ್ನು ಹೊರಡಿಸಿದೆ. 'ಹೊಸ ಸೇವೆ'ಯ ಈ ಪರಿಷ್ಕೃತ ಮಾನದಂಡಗಳು 2015–16ನೇ ವರ್ಷದಿಂದ ಜಾರಿಗೆ ಬಂದಿವೆ. ಮೇಲಿನ ಆದೇಶದ ಪ್ರಕಾರ, ಅದಾಗಲೇ ಅವಕಾಶ ಕಲ್ಪಿಸಿರುವ ಮತ್ತು ಶಾಸನ ಸಭೆಯ ಒಪ್ಪಿಗೆ ಪಡೆದಿರುವ ಪ್ರಕರಣಗಳು ಒಂದುವೇಳೆ ಮುಂದೆ ವೆಚ್ಚಗಳು ಮೂಲತಃ ಆಯವ್ಯಯದಲ್ಲಿ ಒದಗಿಸಿರುವ ಅವಕಾಶವನ್ನು ಮೀರಬಹುದಾಗಿದ್ದಲ್ಲಿ, ವಾಸ್ತವ ವೆಚ್ಚದ ಮೊತ್ತವು ಮೂಲ ಅವಕಾಶದ ಎರಡರಷ್ಟು ಅಥವಾ ₹5 ಕೋಟಿ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತವನ್ನು ಮೀರದಿದ್ದಲ್ಲಿ ಆ ಬಾಬ್ತುಗಳನ್ನು ಹೊಸ ಸೇವೆ' ಎಂದು ಪರಿಗಣಿಸಲಾಗುವುದಿಲ್ಲ.

2016–17ನೇ ವರ್ಷದಲ್ಲಿ ಐದು ಅನುದಾನಗಳಿಗೆ ಸಂಬಂಧಿಸಿದ ಐದು ಪ್ರಕರಣಗಳಲ್ಲಿ, 'ಹೊಸ ಸೇವೆ/ ಹೊಸ ಸೇವೆಗಳ ಸಾಧನ' ಎಂದು ಪರಿಗಣಿಸಬೇಕಿದ್ದ ₹124.12 ಕೋಟಿಗಳಷ್ಟು ಮೊತ್ತದ ಅಧಿಕ ವೆಚ್ಚವನ್ನು ಶಾಸನ ಸಭೆಯ ಒಪ್ಪಿಗೆ ಪಡೆಯದೆ ವಹಿಸಿರುವುದನ್ನು **ಕೋಷ್ಟಕ 2.6**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 2.6: ಹೊಸ ಸೇವೆ/ ಹೊಸ ಸೇವೆಗಳ ಸಾಧನದ ಪ್ರಕರಣಗಳು**

(ಕೋಟಿ ರೂಪಾಯಿಗಳಲ್ಲಿ)

| ಕ್ರಮ ಸಂಖ್ಯೆ | ಅನುದಾನ ಸಂಖ್ಯೆ/ ಶೀರ್ಷಿಕೆ | ಲೆಕ್ಕ ಶೀರ್ಷಿಕೆ | ಒಟ್ಟು ಅನುದಾನ | ವೆಚ್ಚ | ಹೆಚ್ಚುವರಿ |
|---|---|---|---|---|---|
| 1 | 01–ಕೃಷಿ ಮತ್ತು ತೋಟಗಾರಿಕೆ | 2851–00–797–0–01–261 ಅಂತರ ಲೆಕ್ಕ ವರ್ಗಾವಣೆ | 0.00 | 37.12 | 37.12 |
| 2 | 02– ಪಶುವೈದ್ಯ ಮತ್ತು ಮೀನುಗಾರಿಕೆ | 2405–00–195–0–01–106 ಸಹಾಯಧನ | 1.00 | 6.97 | 5.97 |
| 3 | 07– ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ | 2215–01–001–1–03–003 ಸಿಬ್ಬಂದಿ ವೇತನ | 10.73 | 36.62 | 25.89 |
| 4 | 14–ಕಂದಾಯ | 2235–60–102–1–03–059 ಇತರೆ ವೆಚ್ಚಗಳು | 24.00 | 74.00 | 50.00 |
| 5 | 22–ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 4210–03–105–1–02–386 ನಿರ್ಮಾಣ | 2.31 | 7.45 | 5.14 |
| ಒಟ್ಟು | | | | | **124.12** |

*ಆಕರ: ಧನವಿನಿಯೋಗ ಲೆಕ್ಕಗಳು*

ಇದಕ್ಕೆ ಉತ್ತರವಾಗಿ (ಡಿಸೆಂಬರ್ 2017), ಆರ್ಥಿಕ ಇಲಾಖೆಯು ಲೆಕ್ಕಪರಿಶೋಧನೆಯು ಮೇಲೆ ಕಾಣಿಸಿದ ಕ್ರಮಸಂಖ್ಯೆ (1), (3) ಮತ್ತು (5) ರ ಅಂಶಗಳನ್ನು ಒಪ್ಪಿಕೊಂಡು, (2) ಮತ್ತು (4) ಕುರಿತು ಅಧಿಕತಮ ವೆಚ್ಚಗಳನ್ನು ಭರಿಸಲು ಪುನರ್ವಿನಿಯೋಗದ ಆದೇಶಗಳು ಜಾರಿಯಾಗಿವೆ ಎಂದು ತಿಳಿಸಿದೆ. ಆದರೆ ಪುನರ್ವಿನಿಯೋಗದ ಆದೇಶಗಳು ಜಾರಿಯಾಗಿದ್ದರೂ ಅವು 'ಹೊಸ ಸೇವೆಗಳ' ಮಾನದಂಡದ ಅಡಿಯಲ್ಲಿ ಬರುವುದರಿಂದ ಮಹಾಲೇಖಾಪಾಲರು (ಲೆ ಮತ್ತು ಹ) ಅವರಿಂದ ತಿರಸ್ಕರಿಸಲ್ಪಟ್ಟಿವೆ.

## 2.4 2016–17ನೇ ವರ್ಷದ ಆಯವ್ಯಯ ಅಂದಾಜು ಮತ್ತು ಪೂರಕ ಅಂದಾಜುಗಳ ಪರಿಶೀಲನೆ

### 2.4.1 ಆಯವ್ಯಯದ ದೋಷಗಳು

#### 2.4.1.1 'ರಾಜಸ್ವ' ಮತ್ತು 'ಬಂಡವಾಳ'ಗಳ ನಡುವಿನ ವರ್ಗೀಕರಣ ದೋಷಗಳು

- 2016–17ರಲ್ಲಿ, ಕೊಪ್ಪಳದಲ್ಲಿ ಆಸ್ಪತ್ರೆ ನಿರ್ಮಾಣಕ್ಕೆ ವೆಚ್ಚವಾದ ₹5.57 ಕೋಟಿಗಳನ್ನು ರಾಜಸ್ವ ವಿಭಾಗದ (2210-01-110-1-21-147 – 'ಭೂಮಿ ಮತ್ತು ಕಟ್ಟಡಗಳು') ಅಡಿಯಲ್ಲಿ ಸ್ವಾಧೀನ ಪಡಿಸಿಕೊಂಡ ಭೂಮಿಯ ಮಾಲೀಕರಿಗೆ ಪಾವತಿ ಮಾಡಿದ ಪರಿಹಾರವಾಗಿ ವರ್ಗೀಕರಿಸಲಾಗಿದೆ. ಈ ಮೊತ್ತವು ಭೂಸ್ವಾಧೀನಕ್ಕಾಗಿ ಇರುವುದರಿಂದ ಆರ್ಥಿಕ ಇಲಾಖೆಯ ಸುತ್ತೋಲೆ (15.01.2013)ಯ ಪ್ರಕಾರ, ಭೂಮಿಯು ಸ್ಥಿರಾಸ್ತಿಯಾಗಿರುವುದರಿಂದ ಭೂಸ್ವಾಧೀನದ ವೆಚ್ಚವನ್ನು 'ಬಂಡವಾಳ'ದಡಿಯಲ್ಲಿ ವರ್ಗೀಕರಿಸಬೇಕಾಗಿತ್ತು. ರಾಜಸ್ವದಡಿಯಲ್ಲಿ ವರ್ಗೀಕರಿಸಿರುವುದು ವಿತ್ತೀಯಸೂಚಿಯ ಮೇಲೆ, ಅಂದರೆ ರಾಜಸ್ವ ಹೆಚ್ಚಳದ ಮೇಲೆ ದೋಷಪೂರಿತ ಪರಿಣಾಮ ಬೀರುತ್ತದೆ. ಆರ್ಥಿಕ ಇಲಾಖೆಯು ಲೆಕ್ಕಪರಿಶೋಧನೆಯ ಅಭಿಪ್ರಾಯವನ್ನು ಒಪ್ಪುತ್ತಾ, (ಅಕ್ಟೋಬರ್ 2017) 2017–18ರಲ್ಲಿ ಅಂತಹ ಅವಕಾಶಗಳು ಇದ್ದಲ್ಲಿ ರಾಜಸ್ವದಿಂದ ಬಂಡವಾಳಕ್ಕೆ ಬದಲಾಯಿಸುವ ಸೂಚನೆಗಳನ್ನೊಳಗೊಂಡ ಸುತ್ತೋಲೆಯನ್ನು ಕಳಿಸಲು ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದಾಗಿ ತಿಳಿಸಿದೆ.

- ಪ್ರಸಕ್ತ ವರ್ಷದಲ್ಲಿ ₹19.11 ಕೋಟಿಗಳಷ್ಟು ಮೊತ್ತವು ಕರ್ನಾಟಕದ ನಾಲ್ಕು ಕೃಷಿ ವಿಶ್ವವಿದ್ಯಾನಿಲಯಗಳ ಅನುದಾನವಾಗಿ 4401–00–800–1–05/06/03/02– ನಬಾರ್ಡ್ ಕಾಮಗಾರಿ ಲೆಕ್ಕಶೀರ್ಷಿಕೆಯಡಿಯಲ್ಲಿ ಆರ್ಥಿಕ ಇಲಾಖೆಯ ಅನುಮೋದನೆಯೊಂದಿಗೆ ಬಿಡುಗಡೆಯಾಗಿರುತ್ತದೆ. ಈ ಮೊತ್ತವು ವಿಶ್ವವಿದ್ಯಾನಿಲಯಗಳ ಸಹಾಯಾನುದಾನವಾಗಿ ಕೊಡಲ್ಪಟ್ಟಿರುವುದರಿಂದ ಐಜಿಎಎಸ್–2ಕ್ಕೆ ಅನುಗುಣವಾಗಿ, ಹಂಚಲ್ಪಟ್ಟ ನಿಧಿಯ ಉದ್ದೇಶವು ಯಾವುದೇ ಇದ್ದರೂ, ಸಹಾಯಾನುದಾನ ನೀಡುವವರು ಸಹಾಯಾನುದಾನ ಪಡೆಯುವವರಿಗೆ ನೀಡಿದ ಸಹಾಯಾನುದಾನವನ್ನು ಸಹಾಯಾನುದಾನ ನೀಡುವವರ ಹಣಕಾಸು ಲೆಕ್ಕ ಪತ್ರದಲ್ಲಿ ರಾಜಸ್ವ ಲೆಕ್ಕಶೀರ್ಷಿಕೆಯಲ್ಲಿ ವೆಚ್ಚವಾಗಿ ವರ್ಗೀಕರಿಸಬೇಕಾಗಿರುವುದರಿಂದ ಸಹಾಯಾನುದಾನವನ್ನು ಬಂಡವಾಳದ ಲೆಕ್ಕಶೀರ್ಷಿಕೆಯಾದ 4401ರಲ್ಲಿ ಬಿಡುಗಡೆಗೊಳಿಸಿರುವುದು, ಕ್ರಮಬದ್ಧವಾಗಿಲ್ಲ. ಆದ್ದರಿಂದ, ವೆಚ್ಚದ ದಾಖಲೆಯು ಬಂಡವಾಳ ವೆಚ್ಚವನ್ನು ಅಧಿಕವಾಗಿ ತೋರಿಸುವಲ್ಲಿ ಫಲಿತವಾಗಿದೆ.

- ಆಯವ್ಯಯ ಅಂದಾಜುಗಳಲ್ಲಿ ಸಂಬಳದ ಮೇಲಿನ ವೆಚ್ಚವನ್ನು ರಾಜಸ್ವ ಲೆಕ್ಕಕ್ಕೆ ಬದಲಾಗಿ ಬಂಡವಾಳ ವಿಭಾಗದಡಿಯಲ್ಲಿ ಅವಕಾಶ ಮಾಡಿರುವುದನ್ನು ಕುರಿತು ಹಿಂದಿನ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಮೇಲಿನ ವರದಿಗಳಲ್ಲಿ (**ಕಂಡಿಕೆ 2.8.2.9**/ಲೇ.ವ 2014–15 ಮತ್ತು **2.4.1.1**/ಲೇ.ವ. 2015–16) ಗಮನ ಸೆಳೆಯಲಾಗಿತ್ತು. 2016–17ರಲ್ಲೂ ಸಹ ₹13.23 ಕೋಟಿಗಳಷ್ಟು ವೇತನದ ಮೊತ್ತವನ್ನು ಬಂಡವಾಳದ ಲೆಕ್ಕದಡಿಯಲ್ಲಿ (ಪ್ರಧಾನ ಶೀರ್ಷಿಕೆ 4700, 4701 ಮತ್ತು 4711) ತೋರಿಸಲಾಗಿದೆ. ಇದರಿಂದ ಬಂಡವಾಳ ವೆಚ್ಚವು ವಾಸ್ತವಕ್ಕಿಂತ ಹೆಚ್ಚಾಗಿ ತೋರಿಸಲ್ಪಟ್ಟಿದೆ ಹಾಗೂ ವೇತನದ ಲೆಕ್ಕವನ್ನು ರಾಜಸ್ವ ವೆಚ್ಚದಡಿಯಲ್ಲಿ ವಾಸ್ತವಕ್ಕಿಂತ ಕಡಿಮೆಯಾಗಿ ತೋರಿಸಲಾಗಿದೆ; ಹಾಗೂ

- ಮಾರ್ಚ್ 2012ಕ್ಕೆ ಕೊನೆಗೊಂಡ ರಾಜ್ಯ ಸರ್ಕಾರದ ಹಣಕಾಸು ವ್ಯವಹಾರಗಳ ವರದಿಯ **ಕಂಡಿಕೆ 2.6.3.5**ರಲ್ಲಿ ಕರ್ನಾಟಕ ರಾಜ್ಯ ಪ್ರವಾಸ ಅಭಿವೃದ್ಧಿ ನಿಗಮಕ್ಕೆ ಬಿಡುಗಡೆಯಾದ ಮೊತ್ತದಲ್ಲಿ ಬಂಡವಾಳ ಶೀರ್ಷಿಕೆಯಡಿ ಮಾಡಿದ ಸಾಗಾಣಿಕೆ ವೆಚ್ಚವು ರಾಜಸ್ವ ಶೀರ್ಷಿಕೆಯಡಿ ಮಾಡಬೇಕಾಗಿತ್ತು ಎಂಬುದನ್ನು ಉಲ್ಲೇಖಿಸಲಾಗಿತ್ತು. 2016–17ರಲ್ಲಿ, ₹7.78 ಕೋಟಿ ಮೊತ್ತವನ್ನು ರೈಲ್ವೆ ಇಲಾಖೆಗೆ ಸುವರ್ಣರಥದ ಸಾಗಾಣಿಕೆ ವೆಚ್ಚದ ಸಲುವಾಗಿ ಕರ್ನಾಟಕ ರಾಜ್ಯ ಪ್ರವಾಸ ಅಭಿವೃದ್ಧಿ ನಿಗಮಕ್ಕೆ ಬಂಡವಾಳ ಶೀರ್ಷಿಕೆ 5452–03–101–05–132–ಬಂಡವಾಳ ವೆಚ್ಚ– ಅಡಿಯಲ್ಲಿ ಸೆಳೆದು ಪಾವತಿಸಿರುವುದನ್ನು ಗಮನಿಸಲಾಗಿದೆ. ಇದರಿಂದ ಬಂಡವಾಳ ವೆಚ್ಚವು ಈ ವೆಚ್ಚಕ್ಕೆ ಸಮನಾದ ಮೊತ್ತದಷ್ಟು ಹೆಚ್ಚುವರಿಯಾಗಿ ತೋರಿಸಲ್ಪಟ್ಟಿದೆ.

ಲೆಕ್ಕಪರಿಶೋಧನೆಯ ಅಂಶವನ್ನು ಒಪ್ಪಿಕೊಂಡಿದ್ದರೊಂದಿಗೆ, ಆರ್ಥಿಕ ಇಲಾಖೆಯು (ಡಿಸೆಂಬರ್ 2017) 2013 ಮತ್ತು 2017ರಲ್ಲಿ ಆಂತರಿಕ ಸುತ್ತೋಲೆಯನ್ನು ಜಾರಿ ಮಾಡಿರುವುದರಿಂದ ಅಂತಹ ಪ್ರಕರಣಗಳು ಕಡಿಮೆಯಾಗಿವೆ ಎಂಬುದಾಗಿ ತಿಳಿಸಿದೆ. ಆದರೂ ಸಹ 2018–19ರಲ್ಲಿ ಇಂತಹ ಪ್ರಕರಣಗಳು ಮರುಕಳಿಸದಂತೆ ಸೂಚಿಸಲಾಗಿದೆ ಎಂದೂ ತಿಳಿಸಿದೆ.

### 2.4.1.2 ಆಯವ್ಯಯದಲ್ಲಿ 'ಪುರಸ್ಕೃತ' ಮತ್ತು 'ಪ್ರಭೃತ' ವಿಭಾಗಗಳಲ್ಲಿ ದೋಷಪೂರಿತ ವರ್ಗೀಕರಣ

2015–16ರ ಲೆಕ್ಕಪರಿಶೋಧನಾ ವರದಿಯಲ್ಲಿ ಮುಂಗಡಪತ್ರ ಸಿದ್ಧಪಡಿಸುವಾಗ ಪುರಸ್ಕೃತ ಮತ್ತು ಪ್ರಭೃತ ವಿಭಾಗಗಳಲ್ಲಿ ತಪ್ಪು ವರ್ಗೀಕರಣವಾಗಿದ್ದು, ದೋಷಪೂರಿತ ವರ್ಗೀಕರಣಗಳನ್ನು (ಕಂಡಿಕೆ 2.4.1.2) ಪೂರಕ ಬೇಡಿಕೆಯಲ್ಲಿ ಸರಿಪಡಿಸಲಾಗಿದ್ದನ್ನು ಗಮನಿಸಲಾಗಿದ್ದು, 2016–17ನೇ ಸಾಲಿನಲ್ಲಿಯೂ, ₹5.61 ಕೋಟಿ ಮೊತ್ತವನ್ನು ಆರು ಪ್ರಕರಣಗಳಲ್ಲಿ ರಾಜಸ್ವ/ಬಂಡವಾಳದ ಪ್ರಭೃತ ವಿಭಾಗಕ್ಕೆ ಬದಲಾಗಿ ಪುರಸ್ಕೃತ ವಿಭಾಗದಲ್ಲಿ ಅವಕಾಶ ಒದಗಿಸಿದ್ದು ವರ್ಷದ ಪೂರಕ ಬೇಡಿಕೆ–1ರಲ್ಲಿ ಅವುಗಳನ್ನು ಸರಿಪಡಿಸಲಾಗಿದೆ (**ಕೋಷ್ಟಕ 2.7**). ಮುಂಗಡಪತ್ರ ಸಿದ್ಧತೆಯ ಕೊನೆಯ ಹಂತದ ಸಮಯದಲ್ಲಿ ತಾಂತ್ರಿಕ ದೋಷದಿಂದ ಈ ತಪ್ಪುಗಳು ಗಮನಕ್ಕೆ ಬಾರದೆ ಉಳಿದುಹೋಗಿದ್ದು ಇನ್ನು ಮುಂದೆ ಅಂತಹ ದೋಷಗಳು ಪುನರಾವರ್ತನೆಯಾಗದಂತೆ ವ್ಯವಸ್ಥೆಯೊಂದನ್ನು ಅನುಷ್ಠಾನಗೊಳಿಸುವುದಾಗಿ ಉತ್ತರಿಸಲಾಗಿದೆ (ಏಪ್ರಿಲ್ 2017).

**ಕೋಷ್ಟಕ 2.7: ಪುರಸ್ಕೃತ ಮತ್ತು ಪ್ರಭೃತಗಳ ವರ್ಗೀಕರಣ ದೋಷಗಳು**

(ಕೋಟಿ ರೂಪಾಯಿಗಳಲ್ಲಿ)

| ಕ್ರಮ ಸಂಖ್ಯೆ | ಬೇಡಿಕೆ ಸಂಖ್ಯೆ | ಲೆಕ್ಕ ಶೀರ್ಷಿಕೆ | ಅವಕಾಶ |
|---|---|---|---|
| 1 | 4–ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ | 2012–03–102–0–00–103 ಸಾಮಾನ್ಯ ಸಹಾಯಾನುದಾನ | 0.35 |
| 2 | | 2014–00–102–0–02–103 ಸಾಮಾನ್ಯ ಸಹಾಯಾನುದಾನ | 0.01 |
| 3 | | 2014–00–102–0–03–059 ಇತರೆ ವೆಚ್ಚಗಳು | 0.41 |
| 4 | | 2014–00–102–0–09–059 ಇತರೆ ವೆಚ್ಚಗಳು | 0.23 |
| 5 | | 2014–00–102–0–10–059 ಇತರೆ ವೆಚ್ಚಗಳು | 0.11 |
| 6 | 19 – ನಗರಾಭಿವೃದ್ಧಿ | 4217–60–800–3–01–240 ಋಣ ಸೇವೆಗಳು | 4.50 |
| ಒಟ್ಟು | | | **5.61** |

*ಆಕರ: ಮುಂಗಡ ಅಂದಾಜುಗಳು*

### 2.4.1.3 ಆಯವ್ಯಯದಲ್ಲಿ ಮಾರುಕಟ್ಟೆ ಶುಲ್ಕ/ಪರವಾನಗಿ ಶುಲ್ಕಗಳ ವರ್ಗಾವಣೆಗೆ ಅವಕಾಶ ಒದಗಿಸದೆ ಉಂಟಾದ ದೋಷಗಳು.

ಕರ್ನಾಟಕ ರೇಷ್ಮೆ ಮೊಟ್ಟೆ ಗೂಡು ಮತ್ತು ರೇಷ್ಮೆ ಅಭಿವೃದ್ಧಿ ಬೆಲೆ ಸ್ಥಿರೀಕರಣ ನಿಧಿಯು ರೇಷ್ಮೆ ಮೊಟ್ಟೆಯ ಮತ್ತು ರೇಷ್ಮೆ ದಾರದ ಬೆಲೆಯ ಸ್ಥಿರೀಕರಣದ ಹಾಗೂ ರೇಷ್ಮೆ ಮೊಟ್ಟೆಯಿಂದ ದಾರವನ್ನು ಬಿಡಿಸುವ, ಸುರುಳಿಗೊಳಿಸುವ ಮತ್ತು ಹೊಸೆಯುವ ಹಾಗೂ ಅದಕ್ಕೆ ಸಂಬಂಧಿಸಿದ ಅಭಿವೃದ್ಧಿಯ ಉದ್ದೇಶಕ್ಕಾಗಿ ಸ್ಥಾಪಿತವಾಗಿತ್ತು. ನಿಧಿಗೆ ಮಾರುಕಟ್ಟೆ ಶುಲ್ಕ/ಪರವಾನಗಿ ಶುಲ್ಕ ಹಾಗೂ ಸರ್ಕಾರದ ವಂತಿಗೆಯ ಮೂಲಕ ಬರುವ ಎಲ್ಲ ಹಣವನ್ನು ಜಮೆ ಮಾಡಲಾಗುತ್ತದೆ. 2016–17ರಲ್ಲಿ, ₹37.12 ಕೋಟಿ ಮೊತ್ತವು ಮಾರುಕಟ್ಟೆ ಶುಲ್ಕ/ಪರವಾನಗಿ ಶುಲ್ಕದ ಮೂಲಕ ಸಂಚಿತ ನಿಧಿಯ ರಾಜಸ್ವ ಸ್ವೀಕೃತಿ ಶೀರ್ಷಿಕೆ 0851 ಅಡಿಯಲ್ಲಿ ಸಂಗ್ರಹವಾಗಿದ್ದು, ಇದು ಸಾರ್ವಜನಿಕ ಲೆಕ್ಕ ನಿಧಿಗೆ ರಾಜಸ್ವ ವೆಚ್ಚದ ಶೀರ್ಷಿಕೆಯ ಮೂಲಕ ವರ್ಗಾವಣೆಯಾಗಬೇಕಿತ್ತು. ಆದರೆ, ರಾಜಸ್ವವನ್ನು ಸಾರ್ವಜನಿಕ ಲೆಕ್ಕಕ್ಕೆ ವರ್ಗಾಯಿಸಲು ಅಗತ್ಯವಾದ ಅವಕಾಶವನ್ನು ಮುಂಗಡಪತ್ರದಲ್ಲಿ ಒದಗಿಸದಿರುವದನ್ನು ಗಮನಿಸಲಾಗಿತ್ತು. ವೆಚ್ಚವು ರಾಜಸ್ವ ಶೀರ್ಷಿಕೆಯಡಿಯಲ್ಲಿ ದಾಖಲಾಗಿ ನಿಧಿಯ ಲೆಕ್ಕಕ್ಕೆ ವರ್ಗಾವಣೆಯಾಗಿರುವುದು ಆಯವ್ಯಯದಲ್ಲಿ ಅವಕಾಶವಿಲ್ಲದ ವೆಚ್ಚವಾಗಿ ಪರಿಣಮಿಸಿತ್ತು ಹಾಗೂ ಇದು ಹೊಸ ಸೇವೆ/ಹೊಸ ಸೇವೆಯ ಸಾಧನಕ್ಕೆ ನಿಗದಿಯಾದ ಮಾನದಂಡವನ್ನೂ ಸೆಳೆಯುತ್ತದೆ.

### 2.4.1.4 ಪ್ರಧಾನ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ತಪ್ಪು ಅವಕಾಶಗಳನ್ನು ಒದಗಿಸಿರುವುದು

- ₹223.87 ಕೋಟಿಗಳ ಮೊತ್ತದ, ಅವಕಾಶವನ್ನು ಪ್ರಧಾನ ಶೀರ್ಷಿಕೆ 4401 ಸಸ್ಯ ಸಂಗೋಪನೆಯ ಮೇಲಿನ ಬಂಡವಾಳ ವೆಚ್ಚ–ಇತರೆ ವೆಚ್ಚಗಳು–ಕೃಷಿ ವಿಶ್ವವಿದ್ಯಾನಿಲಯ–ಸೂಕ್ಷ್ಮ ನೀರಾವರಿ ಸ್ಥಾಪನೆ–ತೋಟಗಾರಿಕೆ–ನಬಾರ್ಡ್ ಕಾಮಗಾರಿಯ ಅಡಿಯಲ್ಲಿ ಒದಗಿಸುವುದಕ್ಕೆ ಬದಲಾಗಿ, ದೋಷಪೂರಿತವಾಗಿ ಪ್ರಧಾನ ಲೆಕ್ಕ ಶೀರ್ಷಿಕೆ 2401–ಸಸ್ಯ ಸಂಗೋಪನೆ ವಾಣಿಜ್ಯ ಬೆಳೆ–ತೋಟಗಾರಿಕೆ ಇಲಾಖೆ–ಪಿಎಮ್‌ಕೆಎಸ್‌ವೈ–ರಾಷ್ಟ್ರೀಯ ಕೃಷಿ ಅಭಿಯಾನ ಮಿಶನ್– ಇತರೆ ವೆಚ್ಚಗಳ ಅಡಿಯಲ್ಲಿ ಒದಗಿಸಲಾಗಿತ್ತು ಹಾಗೂ 4401–ಸಸ್ಯ ಸಂಗೋಪನೆಯ ಮೇಲಿನ ಬಂಡವಾಳ ವೆಚ್ಚದ ಅಡಿಯಲ್ಲಿ ಪೂರಕ ಅಂದಾಜು (3ನೇ ಕಂತು)ಗಳಲ್ಲಿ ಸಾಂಕೇತಿಕ ಅವಕಾಶ ಮಾಡಲಾಗಿತ್ತು. ಆದರೆ, ವೆಚ್ಚವನ್ನು ಬಂಡವಾಳ ಶೀರ್ಷಿಕೆ 4401ಕ್ಕೆ ವರ್ಗಾಯಿಸಿದ್ದರಿಂದ ಆ ಶೀರ್ಷಿಕೆ ಅಡಿಯಲ್ಲಿ ಹೆಚ್ಚುವರಿ ವೆಚ್ಚವಾಗಿ ಪರಿಣಮಿಸಿದೆ;

- ₹15.00 ಕೋಟಿಗಳ ಅವಕಾಶವನ್ನು ದೋಷಪೂರಿತವಾಗಿ ಪ್ರಧಾನ ಶೀರ್ಷಿಕೆ 4860–ಬಂಡವಾಳ ವೆಚ್ಚ –ಗ್ರಾಹಕ ವಸ್ತುಗಳ ಉದ್ಯಮ–ಸಕ್ಕರೆ–ಸಾರ್ವಜನಿಕ ವಲಯ ಮತ್ತು ಇತರೆ ಉದ್ದಿಮೆ– ಮೈಶುಗರ್–ಹೂಡಿಕೆಯ ಅಡಿಯಲ್ಲಿ ಮಾಡಲಾಗಿತ್ತು ಹಾಗೂ 6860–ಗ್ರಾಹಕ

ಉದ್ಯಮಗಳಿಗೆ ಸಾಲ–ಸಕ್ಕರೆ–ಸಾರ್ವಜನಿಕ ವಲಯ ಮತ್ತು ಇತರೆ ಉದ್ದಿಮೆ–ದುಡಿಮೆ ಬಂಡವಾಳ ಸಹಾಯ ಮತ್ತು ಇತರೆ ಸಾಲಗಳ ಅಡಿಯಲ್ಲಿ ಮೊದಲನೆಯ ಲೆಕ್ಕ ಶೀರ್ಷಿಕೆಯಿಂದ ಎರಡನೆಯ ಲೆಕ್ಕ ಶೀರ್ಷಿಕೆಗೆ ವೆಚ್ಚಗಳ ವರ್ಗಾವಣೆಗಾಗಿ ಪೂರಕ ಅಂದಾಜು–1ರಲ್ಲಿ ಸಾಂಕೇತಿಕ ಅವಕಾಶ ಮಾಡಲಾಗಿತ್ತು. ಆದರೆ, ವೆಚ್ಚವು ಎರಡನೆಯ ಲೆಕ್ಕ ಶೀರ್ಷಿಕೆಯಲ್ಲಿಯೇ ದಾಖಲಾಗಿರುವುದರಿಂದ ಸಾಲಗಳ ಶೀರ್ಷಿಕೆಯಲ್ಲಿ ಅವಕಾಶಕ್ಕಿಂತಲೂ ಹೆಚ್ಚಿನ ವೆಚ್ಚವಾಗಿ ಪರಿಣಮಿಸಿದೆ. ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ (ಜುಲೈ 2017) ಇಂತಹ ಪ್ರಸಂಗಗಳು ಬರುವುದು ಕೇವಲ ಅನಿರೀಕ್ಷಿತ ಸಂದರ್ಭಗಳಲ್ಲಿ ಮಾತ್ರವೆಂದೂ ಹಾಗೂ ಅಂತಹವುಗಳು ಮುಂದೆ ಘಟಿಸದಿರುವಂತೆ ಸಾಧ್ಯವಾದ ಎಲ್ಲಾ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿತ್ತು;

- ಅನುದಾನ ಸಂಖ್ಯೆ 29ರಲ್ಲಿ ₹0.10 ಕೋಟಿಗಳ ಅವಕಾಶವನ್ನು ಪರಿಹಾರ ಬಾಂಡುಗಳ ಮೇಲಿನ ಬಡ್ಡಿ ಪಾವತಿಯ ಸಲುವಾಗಿ ಪ್ರಧಾನ ಶೀರ್ಷಿಕೆ 2075–ಇತರೆ ಸಾಮಾನ್ಯ ಸೇವೆಗಳಡಿಯಲ್ಲಿ ಒದಗಿಸುವದಕ್ಕೆ ಬದಲಾಗಿ ಪ್ರಧಾನ ಶೀರ್ಷಿಕೆ 2049–ಬಡ್ಡಿ ಪಾವತಿಯಡಿಯಲ್ಲಿ ಒದಗಿಸಲಾಗಿತ್ತು. ಇದು ಪ್ರಧಾನ ಶೀರ್ಷಿಕೆ ಮತ್ತು ಒಳಶೀರ್ಷಿಕೆಗಳ ಪಟ್ಟಿಯಲ್ಲಿ ಪ್ರಧಾನ ಶೀರ್ಷಿಕೆ 2049ರ ಕೆಳಗೆ ನಮೂದಿತವಾದ ಟಿಪ್ಪಣಿ (1)ರ ಸೂಚನೆಗಳಿಗೆ ವಿರುದ್ಧವಾಗಿದೆ;

- ಪೂರಕ ಅಂದಾಜುಗಳು–3 (ಅನುದಾನ ಸಂಖ್ಯೆ 29) ರಲ್ಲಿ, ವಾಣಿಜ್ಯ ತೆರಿಗೆ ಇಲಾಖೆಯ ಮಾರಾಟ ತೆರಿಗೆ/ಮೌಲ್ಯವರ್ಧಿತ ತೆರಿಗೆಯ ಮರುಪಾವತಿಯ ವಿಳಂಬದ ಮೇಲಿನ ಬಡ್ಡಿಯ ₹0.88 ಕೋಟಿಗಳ ಮೊತ್ತವನ್ನು ಲೆಕ್ಕ ಶೀರ್ಷಿಕೆ 2049–60–101–1–00–240 ಋಣ ಸೇವೆಗಳು– ಇದರ ಅಡಿಯಲ್ಲಿ ಪುರಸ್ಕೃತ ವಿಭಾಗದಲ್ಲಿ ದೋಷಪೂರಿತವಾಗಿ ಅವಕಾಶ ಮಾಡಲಾಗಿತ್ತು. ಆದರೆ ಬೇಡಿಕೆ ಸಂಖ್ಯೆ 3–ಹಣಕಾಸು, ಇದರ ಲೆಕ್ಕ ಶೀರ್ಷಿಕೆ 2020–00–108–0–01–059 ಅಡಿಯಲ್ಲಿ ಪ್ರಧಾನ ಶೀರ್ಷಿಕೆ 2049ರ ಅಡಿಯಲ್ಲಿ ಪಡೆದಿರುವ ಮಾರಾಟ ತೆರಿಗೆಯ ಮರುಪಾವತಿಯ ವಿಳಂಬದ ಮೇಲಿನ ಬಡ್ಡಿಯನ್ನು ಬದಲಾಯಿಸುವ ಸಲುವಾಗಿ ಎಂದು ತಿಳಿಸಿ ಸಾಂಕೇತಿಕ ಅವಕಾಶ ತೆಗೆದುಕೊಳ್ಳಲಾಗಿತ್ತು. ಮರುಪಾವತಿಯ ವಿಳಂಬದ ಮೇಲಿನ ಬಡ್ಡಿಯ ವರ್ಗಾವಣೆಯ ಸಲುವಾಗಿ ಕ್ರಿಯಾಪ್ರಧಾನ ಶೀರ್ಷಿಕೆಯಾದ 2020ರ ಅಡಿಯಲ್ಲಿ ಅವಕಾಶ ಮಾಡಿರುವುದು ಅಸಮರ್ಪಕವಾಗಿದೆ. ಏಕೆಂದರೆ ಮರುಪಾವತಿಯ ವಿಳಂಬದಿಂದಾಗಿ ಪಾವತಿಸಬೇಕಾದ ಬಡ್ಡಿಯು, ವಿಭಾಗ **'ಎ'** ಅಡಿಯ ಉಪವಿಭಾಗ (ಎ)– ಆದಾಯ ಮತ್ತು ವೆಚ್ಚದ ಮೇಲಿನ ತೆರಿಗೆಗೆ ಸಂಬಂಧಿಸಿದ್ದಾಗಿದೆಯೇ ಹೊರತು, ಉಪವಿಭಾಗ (ಸಿ)– ಸರಕು ಮತ್ತು ಸೇವೆಗಳ ಮೇಲಿನ ತೆರಿಗೆಗೆ ಸಂಬಂಧಿಸಿದ್ದಲ್ಲ. ಇದಕ್ಕೆ ಉತ್ತರವಾಗಿ, (ಮೇ 2017) ಈ ಅಂಶಗಳನ್ನು ಗಮನಿಸಲಾಗಿದೆ ಹಾಗೂ ಮುಂದೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಎಂದು ಇಲಾಖೆಯು ತಿಳಿಸಿದೆ; ಹಾಗೂ

- ಸಾಮಾನ್ಯ ನಿಯಮದಂತೆ, ಸರಕಾರದ ಲೆಕ್ಕಗಳ ವಹಿವಾಟಿನ ವರ್ಗೀಕರಣವು ಸರ್ಕಾರದ ಕಾರ್ಯ, ಕಾರ್ಯಕ್ರಮ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದ್ದಾಗಿರುತ್ತದೆ. 2003–04ರ ಲೆಕ್ಕ ಶೀರ್ಷಿಕೆಗಳ ಪುರ್ನವ್ಯವಸ್ಥೆ ಮತ್ತು ಇಲಾಖೆಯ ಬೇಡಿಕೆಗಳಿಗನುಗುಣವಾಗಿ ಚಟುವಟಿಕೆಗಳ ಪಂಕ್ತೀಕರಣದ ದೆಸೆಯಿಂದ, ಇಲಾಖೆಗೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳನ್ನು 29 ಅನುದಾನಗಳ ಅಡಿಯಲ್ಲಿ ತರಲಾಗಿದೆ. ಇದಕ್ಕೆ ವಿರುದ್ಧವಾಗಿ, ಕ್ರಿಯಾಪ್ರಧಾನ ಶೀರ್ಷಿಕೆಯಾದ 2205– ಕಲೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ₹25.06 ಕೋಟಿಯಷ್ಟು ಅವಕಾಶ/ವೆಚ್ಚವನ್ನು ಕ್ರಿಯಾಪ್ರಧಾನ ಶೀರ್ಷಿಕೆ 2202 – ಶಿಕ್ಷಣದ ಅಡಿಯಲ್ಲಿ ಮಾಡಲಾಗಿದೆ/ಭರಿಸಲಾಗಿದೆ ಎಂಬುದನ್ನು ಗಮನಿಸಲಾಗಿದೆ. ಇಲಾಖೆಯು, ಈ ವಿಷಯವನ್ನು ಒಪ್ಪಿಕೊಳ್ಳುತ್ತಾ, ಲೆಕ್ಕ ಶೀರ್ಷಿಕೆಯನ್ನು 2205– ಕಲೆ ಮತ್ತು ಸಂಸ್ಕೃತಿಗೆ ಬದಲಾಯಿಸಲು ಕ್ರಮವನ್ನು ತೆಗೆದು ಕೊಳ್ಳಲಾಗುವುದು ಹಾಗೂ ಆರ್ಥಿಕ ಇಲಾಖೆಯೊಂದಿಗೆ ಚರ್ಚಿಸಿ, ನಂತರದ ಬೆಳವಣಿಗೆಯನ್ನು ಮುಂದೆ ತಿಳಿಸಲಾಗುವುದು ಎಂದು ಉತ್ತರಿಸಿದೆ (ಮೇ 2017). ಹಾಗೂ ಕ್ರಿಯಾಪ್ರಧಾನ ಶೀರ್ಷಿಕೆ 2852– ಕೈಗಾರಿಕೆ– ಕೈಗಾರಿಕಾ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ಚಟುವಟಿಕೆಗಳಿಗೆ ಸಂಬಂಧಿಸಿದ ₹0.54 ಕೋಟಿ ಅವಕಾಶ/ವೆಚ್ಚವನ್ನು 2202 – ಶಿಕ್ಷಣ – ಇದರ ಅಡಿಯಲ್ಲಿ ಮಾಡಿರುವುದರಿಂದ

ದೋಷಪೂರ್ಣ ಆಯವ್ಯಯವಾಗಿರುವುದನ್ನು ಗಮನಿಸಲಾಗಿತ್ತು. ಇಲಾಖೆಯು ತನ್ನ ಉತ್ತರದಲ್ಲಿ (ಮೇ 2017) ಆರ್ಥಿಕ ಇಲಾಖೆಯೊಂದಿಗೆ ಚರ್ಚಿಸಿದ ಬಳಿಕ ಕೈಗಾರಿಕೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದ ಲೆಕ್ಕ ಶೀರ್ಷಿಕೆಯಡಿಯಲ್ಲಿ ಅವಕಾಶವನ್ನು ಕಲ್ಪಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದೆ.

### 2.4.1.5 ಒಳಶೀರ್ಷಿಕೆ ಮಟ್ಟದಲ್ಲಿ ದೋಷಪೂರಿತ ವರ್ಗೀಕರಣ

ಪ್ರಧಾನಶೀರ್ಷಿಕೆ ಮತ್ತು ಒಳಶೀರ್ಷಿಕೆಗಳ ಪಟ್ಟಿಯ ಕಂಡಿಕೆ 3.10ರಲ್ಲಿ ಒಳಗೊಂಡಿರುವ ಸೂಚನೆಗಳ ಪ್ರಕಾರ, ಅದೇ ಆರ್ಥಿಕ ವರ್ಷದಲ್ಲಿ ಮಾಡಿರುವ ಹೆಚ್ಚುವರಿ ಪಾವತಿಯ ವಸೂಲಾತಿಗಳನ್ನು ಸಂಬಂಧಿಸಿದ ಸೇವಾ ಶೀರ್ಷಿಕೆಗಳ ಅಡಿಯಲ್ಲಿ ವೆಚ್ಚದಲ್ಲಿ ಕಡಿತವೆಂಬಂತೆ ದಾಖಲಿಸಬೇಕು. ಹಿಂದಿನ ವರ್ಷದಲ್ಲಿ/ಗಳಲ್ಲಿ ಮಾಡಿರುವ ಹೆಚ್ಚುವರಿ ಪಾವತಿಯ ವಸೂಲಾತಿಗಳನ್ನು ಸಂಬಂಧಿಸಿದ ಪ್ರಧಾನ/ಒಳಶೀರ್ಷಿಕೆಗಳ ಅಡಿಯಲ್ಲಿ ಕ್ರಿಯಾಪ್ರಧಾನ– ಉಪಪ್ರಧಾನ ಶೀರ್ಷಿಕೆಗಳಡಿಯ ಒಟ್ಟಾರೆ ವೆಚ್ಚದ ಮೇಲೆ ಪರಿಣಾಮ ಬೀರದಂತೆ ಪ್ರತ್ಯೇಕವಾದ ಒಳಶೀರ್ಷಿಕೆ '911– ಕಳೆಯಿರಿ– ಹೆಚ್ಚುವರಿ ಪಾವತಿಯ ವಸೂಲಾತಿ'ಯ ಅಡಿಯಲ್ಲಿ ದಾಖಲಿಸಬೇಕು.

2016–17ರ ಆಯವ್ಯಯ ಅಂದಾಜುಗಳ ಪರಿಶೀಲನೆಯಲ್ಲಿ ನಿಧಿಗಳ ವ್ಯವಹಾರಕ್ಕೆ ಸಂಬಂಧಿಸಿದಂತೆ ಒಳಶೀರ್ಷಿಕೆ 902 – ಮೊತ್ತವನ್ನು ಪಡೆದ ಮೀಸಲು ನಿಧಿ/ ಠೇವಣಿ ಲೆಕ್ಕದ ಕಡಿತದ ಉಲ್ಲೇಖವನ್ನು ಆಯವ್ಯಯ ಅಂದಾಜುಗಳಲ್ಲಿಯೇ ಮಾಡಿರುವುದಲ್ಲದೆ, ನಿಧಿ ವ್ಯವಹಾರಗಳು ಇಲ್ಲದ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿಗಳ ಹಿಂದಿನ ವರ್ಷಗಳಿಗೆ ಸಂಬಂಧಿಸಿದ ಹೆಚ್ಚುವರಿ ಪಾವತಿಗಳ ವಸೂಲಾತಿಗೆ ಅನುದಾನ ಸಂಖ್ಯೆ 17, 22 ಇತ್ಯಾದಿಗಳಲ್ಲಿಯೂ ಅವಕಾಶವನ್ನು ನೀಡಲಾಗಿದ್ದು ಇದು ದೋಷಪೂರಿತವಾಗಿದೆ. ಲೆಕ್ಕಪರಿಶೋಧನೆಯ ಆಕ್ಷೇಪಣೆಗೆ ಉತ್ತರವಾಗಿ, ಆರ್ಥಿಕ ಇಲಾಖೆಯು ಇಂತಹ ಪ್ರಕರಣಗಳಲ್ಲಿ ಒಳಶೀರ್ಷಿಕೆ '902'ನ್ನು '911' ಎಂದು ಓದಿಕೊಳ್ಳಬೇಕಾಗಿ ತಿದ್ದೋಲೆ (ಮಾರ್ಚ್/ಡಿಸೆಂಬರ್ 2017) ಯನ್ನು ಹೊರಡಿಸಿದೆ. ಈ ಒಳಶೀರ್ಷಿಕೆಯು ಆರ್ಥಿಕ ಇಲಾಖೆಯಿಂದ ಮಾತ್ರ ಬಳಸಲ್ಪಡುವ ಕಾರಣದಿಂದ ಈ ಒಳಶೀರ್ಷಿಕೆಯಡಿಯಲ್ಲಿ ಇಲಾಖೆಗಳು ಆಯವ್ಯಯ ಅಂದಾಜನ್ನು ಸಲ್ಲಿಸುವುದಿಲ್ಲವೆಂದೂ ತಿಳಿಸಿತ್ತು. ಹಿಂದಿನ ವರ್ಷಗಳ ಹೆಚ್ಚುವರಿ ಬಿಡುಗಡೆಯ ವ್ಯವಹಾರಗಳನ್ನು ಹೆಚ್ಚುವರಿ ಪಾವತಿ ವಸೂಲಿಯ ಲೆಕ್ಕಗಳಲ್ಲಿ ದಾಖಲಿಸುವುದು ಪ್ರಧಾನಶೀರ್ಷಿಕೆ ಮತ್ತು ಒಳಶೀರ್ಷಿಕೆಗಳ ಪಟ್ಟಿಯಲ್ಲಿನ ಸೂಚನೆಗಳಿಗೆ ಅನುಸಾರವಾಗಿಲ್ಲದಿರುವುದರಿಂದ, ಈ ಉತ್ತರವು ಸಮಾಧಾನಕರವಾಗಿಲ್ಲ.

### 2.4.1.6 ವರ್ಗೀಕರಣದಲ್ಲಿನ ದೋಷಗಳು

ನಗರ ಸ್ಥಳೀಯ ಸಂಸ್ಥೆಗಳ ಅನುದಾನಗಳ ಬಿಡುಗಡೆ ಮತ್ತು ವೆಚ್ಚಗಳಿಗೆ ಉದ್ದೇಶ ಶೀರ್ಷಿಕೆ ಹಂತದ ವರ್ಗೀಕರಣದಲ್ಲಿ ತಪ್ಪಾದ ಆಯವ್ಯಯ ಕ್ರಮವನ್ನು ಅನುಸರಿಸಿರುವುದರಿಂದ ಆಯವ್ಯಯ/ವೆಚ್ಚಗಳಿಗೆ ಧಕ್ಕೆಯಾಗಿದೆ. ನಗರ ಸ್ಥಳೀಯ ಸಂಸ್ಥೆಗಳ ವಿಭಾಗದ ಆಯವ್ಯಯ/ವೆಚ್ಚಗಳನ್ನು ದಾಖಲಿಸಲು ಪ್ರತ್ಯೇಕ ಶೀರ್ಷಿಕೆಗಳನ್ನು ತೆರೆಯಬೇಕಿದ್ದು, ಅವು ಕೇವಲ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಎಂದು ಮಾತ್ರ ಸೂಚಿಸಬೇಕು. ಅಂತಹ ವಿವರಗಳನ್ನು ಈ ಕೆಳಗಿನ **ಕೋಷ್ಟಕ 2.8** ರಲ್ಲಿ ತೋರಿಸಿದೆ.

**ಕೋಷ್ಟಕ 2.8: ವರ್ಗೀಕರಣದಲ್ಲಿನ ದೋಷಗಳ ವಿವರಗಳು**

| ವೆಚ್ಚದ ಬಾಬ್ತು | ಮೊತ್ತ (ಕೋಟಿ ರೂಪಾಯಿಗಳಲ್ಲಿ) | ಷರಾ |
|---|---|---|
| ಪಿಂಚಣಿ ಮತ್ತು ಇತರ ನಿವೃತ್ತಿ ಸೌಲಭ್ಯಗಳು | 12,486.41 | ಈ ವೆಚ್ಚದಲ್ಲಿ ರಾಜ್ಯ ಸಂಚಿತನಿಧಿಗೆ ದಾಖಲಾಗುವ ಸರ್ಕಾರಿ ನೌಕರರಿಗೆ ಕೊಡಲ್ಪಡುವ ಪಿಂಚಣಿಯ ವ್ಯತಿರಿಕ್ತವಾದ, ನಗರ ಸ್ಥಳೀಯ ಸಂಸ್ಥೆಗಳಿಗೆ ಪಿಂಚಣಿ ಸ್ವರೂಪದಲ್ಲಿ ಇಲ್ಲದ ಸಲುವಾಗಿ ಬಿಡುಗಡೆಯಾದ ಅನುದಾನವವು (₹54.94 ಕೋಟಿ) ಸೇರಿದೆ. |
| ಸಂಚಿತ ಸಂಬಳಗಳು | 853.88 | ಈ ಉದ್ದೇಶ ಶೀರ್ಷಿಕೆಯು ಸಂವಿಧಾನಿಕ ಗಣ್ಯರಿಗೆ ನೀಡುವ ಸಂಬಳವನ್ನು ದಾಖಲಿಸಲು ಉದ್ದೇಶಿತವಾಗಿದ್ದು, ಇದರಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಳಕ್ಕಾಗಿ ಮಾಡಿದ ಬಿಡುಗಡೆಯ ಮೊತ್ತವು ಸೇರಿದೆ (₹816.48 ಕೋಟಿಗಳು). |
| ನಿರ್ವಹಣೆ | 2,729.40 | ಇದು ನಗರ ಸ್ಥಳೀಯ ಸಂಸ್ಥೆಗಳಿಗೆ ನಿರ್ವಹಣೆಗೆ ಅನುದಾನ ರೂಪದಲ್ಲಿ ಬಿಡುಗಡೆ ಮಾಡಿದ ₹949.52 ಕೋಟಿ ಮೊತ್ತವನ್ನು ಒಳಗೊಂಡಿದೆ. |

*ಆಕರ: ಹಣಕಾಸು ಲೆಕ್ಕಗಳು*

ಈ ಕುರಿತು ಹಿಂದಿನ ಲೆಕ್ಕ ಪರಿಶೋಧಕರ ವರದಿಗಳಲ್ಲಿ ಗಮನ ಸೆಳೆದಿದ್ದರೂ ಸರಿಪಡಿಸುವ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ.

ಆರ್ಥಿಕ ಇಲಾಖೆಯು 2012–13ರ ರಾಜ್ಯ ಹಣಕಾಸು ವರದಿಗೆ ನೀಡಿದ ಉತ್ತರದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಉದ್ದೇಶ ಶೀರ್ಷಿಕೆಯು ಒಂದೇ ರೀತಿಯದಾಗಿದ್ದರೂ, ನಗರ ಸ್ಥಳೀಯ ಸಂಸ್ಥೆಗಳ ಸಂಪರ್ಕ ದಾಖಲೆಯಲ್ಲಿನ ಆಯವ್ಯಯ ಶೀರ್ಷಿಕೆಗಳು ರಾಜ್ಯ ವಿಭಾಗದ ಲೆಕ್ಕ ವಿಭಾಗದಲ್ಲಿ ಸೇರಿರುವುದಿಲ್ಲ ಎಂದು ತಿಳಿಸಿದೆ. ನಗರ ಸ್ಥಳೀಯ ಸಂಸ್ಥೆಗಳ ಹಣ ಸೆಳೆಯುವ ಅಧಿಕಾರಿಗಳಿಂದ ಈ ಬಿಲ್ಲುಗಳು ಸಲ್ಲಿಸಲ್ಪಟ್ಟಿರುವುದರಿಂದ ಮತ್ತು ಖಜಾನೆಯಿಂದ ಮೊತ್ತವು ಸೆಳೆಯಲ್ಪಡುವುದರಿಂದ, ಹಾಗೂ ಈ ಮೊತ್ತವು ಅದೇ ಕ್ರಿಯಾ ಉದ್ದೇಶ ಶೀರ್ಷಿಕೆಗಳಡಿ ಲೆಕ್ಕ ಮಾಡಲ್ಪಟ್ಟಿದ್ದು ಅದನ್ನು ರಾಜ್ಯ ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ 4–ಬಿ ವೆಚ್ಚ ಸ್ವರೂಪದಲ್ಲಿ ಅದೇ ಶೀರ್ಷಿಕೆಯಡಿ ದಾಖಲಾಗುವುದರಿಂದ ತೋರಿಸಿರುವಂತೆ ಉತ್ತರವು ಸಮರ್ಥನೀಯವಲ್ಲ.

### 2.4.1.7 ತಪ್ಪಾದ ಆಯವ್ಯಯ ಅಂದಾಜುಗಳು

2016–17ನೇ ಸಾಲಿನ ಪೂರಕ ಅಂದಾಜು–1ರಲ್ಲಿ ದಕ್ಷಿಣ ಕರ್ನಾಟಕದ 12 ಸಕ್ಕರೆ ಕಾರ್ಖಾನೆಗಳು 01.04.2013 ರಿಂದ 21.11.2013ರ ಅವಧಿಯಲ್ಲಿ ₹7.64 ಕೋಟಿಗಳನ್ನು ಖರೀದಿ ತೆರಿಗೆ ಮತ್ತು ರಸ್ತೆ ಉಪಕರವಾಗಿ ಪಾವತಿ ಮಾಡಿದ್ದು ಇದನ್ನು ತುಂಬಿಕೊಡುವ ಸಲುವಾಗಿ ಲೆಕ್ಕ ಶೀರ್ಷಿಕೆ 2040–00–101–0–10–100 ಅಡಿಯಲ್ಲಿ ಆರ್ಥಿಕ ಸಹಾಯಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಸಕ್ಕರೆ ಕಾರ್ಖಾನೆಗಳು ಅದಾಗಲೇ ಮೇಲಿನ ಅವಧಿಗೆ ಖರೀದಿ ತೆರಿಗೆ ಮತ್ತು ರಸ್ತೆ ಉಪಕರ ಪಾವತಿ ಮಾಡಿದ್ದು ಇದು ಆ ವರ್ಷದ (2013–14) ರಾಜಸ್ವ ತೆರಿಗೆಯಾದುದರಿಂದ, ಮರುಪಾವತಿಗಾಗಿ ಪೂರಕ ಅಂದಾಜು–1ರಲ್ಲಿ ಅವಕಾಶ ಒದಗಿಸಿರುವುದು ಅಸಮರ್ಪಕವಾಗಿದೆ. ಈ ಹಿನ್ನೆಲೆಯಲ್ಲಿ, ತೆರಿಗೆ ವೆಚ್ಚವಾಗಿ ಹೆಚ್ಚುವರಿ ತೆರಿಗೆಯನ್ನು ಮರುಪಾವತಿಸಲು ಅನುಸರಿಸುವ ಸಾಮಾನ್ಯ ವಿಧಾನದಂತೆ ಕಾರ್ಯಕಾರಿ ಆದೇಶದ ಮೂಲಕ ಹಣವನ್ನು ತುಂಬಿಕೊಡುವುದು ಸೂಕ್ತ ಕ್ರಮವಾಗಿರುತ್ತದೆ. ಸರ್ಕಾರವು, ವಾಣಿಜ್ಯ ತೆರಿಗೆ ಇಲಾಖೆಯ ಮನವಿಯ ಮೇರೆಗೆ, ಮರುಪಾವತಿಗಾಗಿ ಆದೇಶವನ್ನು (ಅಕ್ಟೋಬರ್ 2016) ಹೊರಡಿಸಿ ₹7.48 ಕೋಟಿ ಮೊತ್ತವನ್ನು ನವೆಂಬರ್ 2016ರಲ್ಲಿ ಮರುಪಾವತಿ ಮಾಡಿರುತ್ತದೆ.

ಇಲಾಖೆಯು ತನ್ನ ಉತ್ತರದಲ್ಲಿ (ಆಗಸ್ಟ್ 2017) ಪೂರಕ ಅಂದಾಜಿನಲ್ಲಿ ಅವಕಾಶ ಒದಗಿಸಿರುವುದು ಕಾರ್ಯವಿಧಾನ ದೋಷ ಕಾರಣದಿಂದ ಉಂಟಾಗಿದೆ ಅಲ್ಲದೆ ಹಣಕಾಸಿನ ತೊಡಕು ಇಲ್ಲದಿರುವುದರಿಂದ, ಲೆಕ್ಕ ಪುಸ್ತಕದಲ್ಲಿ ಮಾಡಿದ ಹೊಂದಾಣಿಕೆಯನ್ನು ಹಿಂತೆಗೆದಿರುವುದರಿಂದ ಆಯವ್ಯಯ ಅವಕಾಶವನ್ನು ಸರ್ಕಾರಕ್ಕೆ ಅಧ್ಯರ್ಪಣ ಮಾಡಿದಂತಾಗಿದೆ ಎಂದು ತಿಳಿಸಿದೆ.

ಆದಾಗ್ಯೂ, ಪೂರಕ ಅಂದಾಜು–1ರಲ್ಲಿ ಅವಕಾಶವನ್ನು ತೋರಿಸಿರುವುದು ಅನವಶ್ಯಕ ಮತ್ತು ದೋಷಪೂರಿತವಾಗಿದ್ದು ಇದು ಆಯವ್ಯಯದ ಹೆಚ್ಚುವರಿ ಅವಕಾಶವಾಗಿ ಪರಿಣಮಿಸಿತ್ತು ಎಂಬುದು ವಾಸ್ತವ ಸಂಗತಿಯಾಗಿದೆ.

### 2.4.1.8 ಖಾತರಿ ಮೀಸಲು ನಿಧಿಗೆ ಖಾತರಿ ಶುಲ್ಕದ ಹೊಂದಾಣಿಕೆಗೆ ಸಂಬಂಧಿಸಿದ ದೋಷಪೂರಿತ ಅವಕಾಶಗಳು

12ನೇ ಹಣಕಾಸು ಆಯೋಗವು (2005–10) ತನ್ನ ಕಂಡಿಕೆ 12.60ರಲ್ಲಿ ರಾಜ್ಯಗಳು, ಖಾತರಿಗಳ ಹಾನಿ ಸಂಭಾವ್ಯತೆಯ ಪ್ರಮಾಣ ನಿರೀಕ್ಷಿಸಿ ಮುಂದುವರಿದ ಭಾಗವಾಗಿ ಮೀಸಲಿಟ್ಟ ಖಾತರೀ ಶುಲ್ಕಗಳ ಮೂಲಕ ಖಾತರಿ ವಿಮೋಚನಾ ನಿಧಿಯನ್ನು ಸ್ಥಾಪಿಸುವಂತೆ ಶಿಫಾರಸ್ಸು ಮಾಡಿದೆ. ಅದಕ್ಕೆ ಅನುಗುಣವಾಗಿ ನಿಧಿಯ ವಂತಿಗೆಯ ಪ್ರಮಾಣವನ್ನು ನಿರ್ಧರಿಸಬೇಕಾಗುವುದು.

2008–09ರ ನಂತರದ ರಾಜ್ಯ ಹಣಕಾಸು ವರದಿಗಳಲ್ಲಿ ಸಾಲದಾತರು ಕೋರಿದಾಗ ಖಾತರಿಗಳ ವಿಮುಕ್ತಿಯ ಲೆಕ್ಕ ವಿಧಾನದ ಉಲ್ಲಂಘನೆಗೆ ಸಂಬಂಧಿಸಿದಂತೆ ವ್ಯಾಖ್ಯಾನಿಸಲಾಗಿತ್ತು. ಮೀಸಲಿಟ್ಟ ಖಾತರಿ ಶುಲ್ಕದ ಮೂಲಕ ಖಾತರಿ ಮೀಸಲು ನಿಧಿಯ ಸ್ಥಾಪನೆಯ ಕುರಿತಾಗಿ, ಆರ್ಥಿಕ ಇಲಾಖೆಯು ಸೂಕ್ತ ಘಟ್ಟದಲ್ಲಿ ಅದನ್ನು ಪರಿಗಣಿಸಲಾಗುವುದು ಹಾಗೂ ಖಾತರಿ ಮೀಸಲು ನಿಧಿ ಸ್ಥಾಪಿಸಬೇಕೆನ್ನುವುದು ರಾಜ್ಯದ ಪಾಲಿಗೆ ನಿರ್ಬಂಧವೇನಿಲ್ಲ ಎಂದು ಹೇಳಿದೆ. ಹಾನಿ ಸಂಭಾವ್ಯ ಖಾತರಿಗಳಿಗೆ ಸಂಬಂಧಿಸಿದಂತೆ ಯಾವುದೇ ಖಚಿತವಾದ ಕಾರ್ಯನೀತಿ ಇರುವುದಿಲ್ಲ. ಭಾರತ ಸರ್ಕಾರದಿಂದ ಬಂದಿರುವ ಒಂದು ಕಾರ್ಯನೀತಿಯು ಪರಿಶೀಲನೆಯಲ್ಲಿದೆ ಎಂದೂ ಹೇಳಿದೆ.

2016–17ರಲ್ಲಿ, ಪೂರಕ ಅಂದಾಜು–1ರಲ್ಲಿ ಅನುದಾನ ಸಂಖ್ಯೆ – 3ರ ಅಡಿಯಲ್ಲಿ ಸಾರ್ವಜನಿಕ ಲೆಕ್ಕದ ಅಡಿಯಲ್ಲಿ ಈಗಾಗಲೇ ಸ್ಥಾಪಿಸಿದ (1999–2000) ಖಾತರಿ ಮೀಸಲು ನಿಧಿಗೆ ವರ್ಗಾಯಿಸಲು ₹67.19 ಕೋಟಿಯ ಅವಕಾಶ ಮಾಡಲಾಗಿತ್ತು. ವಿವರಣಾ ಟಿಪ್ಪಣಿಯಲ್ಲಿ, ಮುಂದೆ ಜಾರಿಗೊಳಿಸಲಾಗುವ ಕಾರ್ಯಕಾರಿ ಆದೇಶದ ಆಧಾರದ ಮೇಲೆ ವರ್ಗಾಯಿಸಲು ಮಹಾಲೇಖಾಪಾಲ (ಲೆ ಮತ್ತು ಹ)ರಲ್ಲಿ ವಿನಂತಿಸಲಾಗುವುದೆಂದು ತಿಳಿಸಲಾಗಿತ್ತು. ಆದರೆ, ಮಹಾಲೇಖಾಪಾಲ(ಲೆ ಮತ್ತು ಹ)ರಿಂದ ಈ ಮೊತ್ತವು, 12ನೇ ಹಣಕಾಸು ಆಯೋಗದ ಶಿಫಾರಸ್ಸಿಗೆ ಸಂಬಂಧಿಸಿದ್ದಾಗಿರದೆ, ಆರು[7] ನಿಗಮಗಳ ಬಾಕಿ ಉಳಿದಿರುವ ಅಸಲು ಮತ್ತು ಬಡ್ಡಿಗೆ ಸಂಬಂಧಿಸಿದ್ದು ಮತ್ತು 12ನೇ ಹಣಕಾಸು ಆಯೋಗದ ಶಿಫಾರಸ್ಸುಗಳಿಗೆ ಸಂಗತವಾಗಿಲ್ಲ ಹಾಗೂ ಇದು ಮೀಸಲು ನಿಧಿಯನ್ನು ಉದ್ದೇಶಿತ ಸ್ವೀಕೃತಿಗಳ ವರ್ಗಾವಣೆಗೆ ಮಾತ್ರ ಬಳಸಬಹುದೆಂಬ ಪ್ರಧಾನ ಮತ್ತು ಒಳಶೀರ್ಷಿಕೆ ಪಟ್ಟಿಯ ಸಾಮಾನ್ಯ ನಿರ್ದೇಶನಗಳಿಗೆ ವಿರುದ್ಧವಾಗಿರುವುದೆಂಬುದನ್ನೂ ಗಮನಿಸಲಾಗಿತ್ತು.

ಇದಕ್ಕೆ ಉತ್ತರವಾಗಿ ಆರ್ಥಿಕ ಇಲಾಖೆಯು ಮಹಾಲೇಖಾಪಾಲ(ಲೆ ಮತ್ತು ಹ)ರು ಗಮನಿಸಿದ ಈ ವಿಷಯವನ್ನು 2017–18ರಲ್ಲಿ ಪರಿಗಣಿಸಲಾಗುವುದು ಎಂದು ತಿಳಿಸಿದೆ.

ಈ ರೀತಿಯಾಗಿ ಲೆಕ್ಕ ಬದಲಾವಣೆಯ ಮೂಲಕ ಖಾತರಿ ಮೀಸಲು ನಿಧಿಗೆ ವರ್ಗಾಯಿಸಲು ಉದ್ದೇಶಿಸಿದ್ದ ₹67.19 ಕೋಟಿ ಅವಕಾಶವು ಕ್ರಮಬದ್ಧವಾಗಿಲ್ಲ ಹಾಗೂ ದೋಷಪೂರಿತ ಆಯವ್ಯಯವಾಗಿ ಪರಿಣಮಿಸಿದೆ.

## 2.5 ನಿಧಿ ಲೆಕ್ಕಗಳಡಿಯ ಆಯವ್ಯಯದ ದೋಷಗಳು

ತೆರಿಗೆ ಆದಾಯದ ಅಡಿಯಲ್ಲಿ ಸಂಗ್ರಹವಾದ ಮೂಲಭೂತ ಸೌಕರ್ಯಗಳ ಉಪಕರಗಳನ್ನು ಸಂಚಿತನಿಧಿಯ ವೆಚ್ಚಗಳೆಂದು ಪರಿಗಣಿಸಿ, ಸಾರ್ವಜನಿಕ ಲೆಕ್ಕದ ವಿವಿಧ ನಿಧಿ ಲೆಕ್ಕ (ಐಐಎಫ್, ಬಿಎಮ್ಆರ್‌ಸಿಎಲ್ ನಿಧಿ ಮತ್ತು ಸಿಎಮ್ಆರ್‌ಆರ್‌ಡಿ ನಿಧಿ) ಗಳಿಗೆ ಲೆಕ್ಕ ಹೊಂದಾಣಿಕೆಯ ಮೂಲಕ ವಹಿಸಲಾಗಿದೆ. ಇದೇ ರೀತಿಯಲ್ಲಿ ರಾಜಸ್ವ/ಬಂಡವಾಳ ಶೀರ್ಷಿಕೆಗಳಡಿಯ ನಿಧಿಯ ಲೆಕ್ಕಗಳ ವೆಚ್ಚಗಳನ್ನು, ಮೊದಲಿಗೆ ಸಂಚಿತ ನಿಧಿಯ ಅಡಿಯಲ್ಲಿ ದಾಖಲಿಸಿ ವರ್ಷದ ಕೊನೆಯಲ್ಲಿ ಲೆಕ್ಕ ಹೊಂದಾಣಿಕೆಯ ಮೂಲಕ ಹಿಂತೆಗೆದು ಸಾರ್ವಜನಿಕ ಲೆಕ್ಕಕ್ಕೆ ವರ್ಗಾಯಿಸಲಾಗುತ್ತದೆ.

ನಿರೀಕ್ಷಿತ ಉಪಕರ ಸಂಗ್ರಹ ಮತ್ತು ವೆಚ್ಚಗಳ ವರ್ಗಾವಣೆಗೆ ಮಾಡಿದ ಅವಕಾಶಗಳ ತಪ್ಪು ಹೊಂದಾಣಿಕೆ ಕುರಿತು 2015–16 ವರ್ಷದ ರಾಜ್ಯ ಹಣಕಾಸು ವರದಿಯ **ಕಂಡಿಕೆ 2.5**ರಲ್ಲಿ ಸೂಚಿಸಲಾಗಿತ್ತು. 2016–17ನೇ ವರ್ಷದಲ್ಲಿ ₹1,101.24 ಕೋಟಿಗಳ ಮೊತ್ತದಷ್ಟು ಉಪಕರ ಸಂಗ್ರಹಣೆಯನ್ನು ನಿರೀಕ್ಷಿಸಿದ್ದು ಅದನ್ನು 57:28:15ರ ಅನುಪಾತದಲ್ಲಿ ಐಐಎಫ್ ನಿಧಿ, ಬಿಎಮ್ಆರ್‌ಸಿಎಲ್ ನಿಧಿ ಮತ್ತು ಸಿಎಮ್ಆರ್‌ಆರ್‌ಡಿ ನಿಧಿಗಳಿಗೆ ಕ್ರಮವಾಗಿ ಹಂಚಬೇಕಾಗಿತ್ತು. ಇದಕ್ಕೆ ಪ್ರತಿಯಾಗಿ, ₹617.73 ಕೋಟಿಗಳಷ್ಟು ಮೊತ್ತವನ್ನು ಪ್ರಧಾನ ಶೀರ್ಷಿಕೆ 5465ರ (ಐಐಎಫ್) ಅಡಿಯಲ್ಲಿಯೂ, ₹1,000 ಕೋಟಿ ಮೊತ್ತವನ್ನೂ ಪ್ರಧಾನ ಶೀರ್ಷಿಕೆ 6217ರ (ಬಿಎಮ್ಆರ್‌ಸಿಎಲ್) ಅಡಿಯಲ್ಲಿಯೂ ಮತ್ತು ₹312.56 ಕೋಟಿ ಮೊತ್ತವನ್ನೂ ಪ್ರಧಾನ ಶೀರ್ಷಿಕೆ 3054ರ (ಸಿಎಮ್ಆರ್‌ಆರ್‌ಡಿ) ಅಡಿಯಲ್ಲಿಯೂ, ಒಟ್ಟಾರೆಯಾಗಿ ₹1,930.29 ಕೋಟಿ ಮೊತ್ತವನ್ನು ನಿಧಿಯ ಲೆಕ್ಕಕ್ಕೆ ವರ್ಗಾಯಿಸಲು ಆಯವ್ಯಯದಲ್ಲಿ ಅವಕಾಶ ಒದಗಿಸಲಾಗಿತ್ತು. ಇದರಿಂದ ನಿರೀಕ್ಷಿತ ಸಂಗ್ರಹ ಮತ್ತು ವರ್ಗಾಯಿಸಲು ಆಯವ್ಯಯದಲ್ಲಿ ಒದಗಿಸಿದ ಅವಕಾಶಗಳ ನಡುವೆ ತಪ್ಪು ಹೊಂದಾಣಿಕೆಯಾಗಿ ₹829.05ಕೋಟಿಗಳ ಮೊತ್ತದ ಹೆಚ್ಚುವರಿ ಅವಕಾಶದಲ್ಲಿ ಪರಿಣಮಿಸಿತ್ತು.

ಇದಕ್ಕೆ ಉತ್ತರವಾಗಿ, ಆರ್ಥಿಕ ಇಲಾಖೆಯು ವಿತ್ತೀಯ ಪರಿಸ್ಥಿತಿ ಅನುಕೂಲಕರವಾಗಿದ್ದಲ್ಲಿ ಆಯವ್ಯಯದ ಸಾಮಾನ್ಯ ರಾಜಸ್ವದಿಂದಲೂ ಮೊತ್ತವನ್ನು ವರ್ಗಾಯಿಸಬಹುದಾಗಿದೆ. ಆದುದರಿಂದ, ಇಲ್ಲಿ ತಿಳಿಸಿದ ಪ್ರಕರಣಗಳಲ್ಲಿ ಹೆಚ್ಚುವರಿ ಮೊತ್ತದ ವರ್ಗಾವಣೆಗಾಗಿ ಅವಕಾಶವಾಗಿತ್ತು ಎಂದಿರುವುದು ಸರಿಯಲ್ಲ ಎಂದು ಹೇಳಿದೆ (ಡಿಸೆಂಬರ್ 2017).

[7] ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಮಹಾ ಮಂಡಳಿ ನಿಯಮಿತ (₹25.27 ಕೋಟಿ), ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (₹16.68 ಕೋಟಿ), ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ (₹6.64 ಕೋಟಿ), ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ವರ್ಗ ಅಭಿವೃದ್ಧಿ ನಿಗಮ (₹3.69 ಕೋಟಿ), ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (₹5.86 ಕೋಟಿ) ಮತ್ತು ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ (₹9.05 ಕೋಟಿ).

ಲೆಕ್ಕ ಪರಿಶೋಧನೆಯ ಆಕ್ಷೇಪಣೆಯು ಉಪಕರ ಸಂಗ್ರಹ ಹಾಗೂ ಸಂಬಂಧಿತ ವೆಚ್ಚದ ವರ್ಗಾವಣೆಗೆ ಮಾಡಿದ ಅವಕಾಶದ ಬಗ್ಗೆ ಆಗಿದ್ದು ಇದು ವರ್ಗಾವಣೆಗೆ ನಿಗದಿತವಾದ ಅನುಪಾತಕ್ಕೆ ಅನುಗುಣವಾಗಿಲ್ಲವಾದುದರಿಂದ, ಇಲಾಖೆಯ ಉತ್ತರವು ಸಮರ್ಥನೀಯವಲ್ಲ.

### 2.6 ಬಹು ಉದ್ದೇಶ ಶೀರ್ಷಿಕೆ 059– ಇತರೆ ವೆಚ್ಚಗಳಡಿ ಅವಕಾಶ ಕಲ್ಪಿಸುವಲ್ಲಿ– ಆಯವ್ಯಯ ನಿರ್ವಹಣೆಯಲ್ಲಿ ಪಾರದರ್ಶಕತೆ ಇಲ್ಲದಿರುವುದು

ಸರ್ಕಾರದ ಆಯವ್ಯಯ/ವೆಚ್ಚಗಳನ್ನು ವಿಭಾಗ/ಉಪವಿಭಾಗ/ಕಾರ್ಯ/ಉಪಕಾರ್ಯ/ಕಾರ್ಯಕ್ರಮ ಉಪ/ಸವಿವರ/ಉದ್ದೇಶ ಶೀರ್ಷಿಕೆಗಳಿಗೆ ಅನುಗುಣವಾಗಿ 15 ಅಂಕಿಗಳಲ್ಲಿ ವರ್ಗೀಕರಿಸಲಾಗಿದೆ. ವರ್ಗೀಕರಣದ ಕೊನೆಯ ಹಂತವಾದ ಉದ್ದೇಶ ಶೀರ್ಷಿಕೆಯಡಿ ತೋರಿಸಲಾಗುವ ವೆಚ್ಚವು ವೆಚ್ಚದ ಉದ್ದೇಶ/ಸ್ವರೂಪವನ್ನು ತೋರಿಸುವುದರಿಂದ, ಇದನ್ನು ಅತಿ ಹೆಚ್ಚಿನ ನಿಖರತೆ/ಸೂಕ್ಷ್ಮದೃಷ್ಟಿ/ ಸಕ್ಷಮತೆಗಳನ್ನು ಉಪಯೋಗಿಸಿ ತಯಾರಿಸಬೇಕಾಗಿರುತ್ತದೆ. ವೆಚ್ಚದ ವರ್ಗೀಕರಣವನ್ನು ಸರಳೀಕರಿಸುವ ದೃಷ್ಟಿಯಿಂದ 2003–04ರಲ್ಲಿ ಕೆಲವು ಉದ್ದೇಶ ಶೀರ್ಷಿಕೆಗಳನ್ನು ಒಟ್ಟುಗೂಡಿಸಿ ಹೊಸ ಉದ್ದೇಶ ಶೀರ್ಷಿಕೆಗಳನ್ನು ರೂಪಿಸಲಾಯಿತು. ಉದ್ದೇಶ ಶೀರ್ಷಿಕೆ '059–ಇತರ ವೆಚ್ಚಗಳು' ಬಹು ಉದ್ದೇಶಿತ ಶೀರ್ಷಿಕೆಯಾಗಿದ್ದು ಅವಕಾಶವನ್ನು/ವೆಚ್ಚವನ್ನು ಇತರ ಯಾವುದೇ ಉದ್ದೇಶ ಶೀರ್ಷಿಕೆಯಡಿ ವರ್ಗೀಕರಿಸಲು ಸಾಧ್ಯವಾಗದಿದ್ದಲ್ಲಿ ಈ ಶೀರ್ಷಿಕೆಯಡಿ ದಾಖಲಿಸಲು ರೂಪಿಸಲಾಗಿದೆ. ಆಯವ್ಯಯ ಸುತ್ತೋಲೆಯ ಪ್ರಕಾರ ಈ ಶೀರ್ಷಿಕೆಯಡಿಯ ಅವಕಾಶವು ಅಗತ್ಯಕ್ಕೆ ಮಾತ್ರದಷ್ಟಿರಬೇಕು.

2016–17ರಲ್ಲಿ ಏಳು ಇಲಾಖೆಗಳ ವೋಚರ್‌ಗಳನ್ನು ಪರಿಶೀಲಿಸಿದಾಗ ₹1,265.77 ಕೋಟಿಗಳಷ್ಟು ವೆಚ್ಚದ ಬಾಬ್ತನ್ನು ಸರಿಯಾದ ಲೆಕ್ಕಶೀರ್ಷಿಕೆಯಾದ ಅಂದರೆ, 015–ಪೂರಕ ವೆಚ್ಚಗಳು, 102–ಸಹಾಯಾನುದಾನ–ಸಾಮಾನ್ಯ, 103–ಸಹಾಯಾನುದಾನ–ಆಸ್ತಿ ಸೃಜನೆ, 106–ಸಹಾಯಧನ, ಇತ್ಯಾದಿಗಳಿಗೆ ಬದಲಾಗಿ '059–ಇತರೆ ಖರ್ಚುಗಳು' ಅಡಿಯಲ್ಲಿ ತಪ್ಪಾಗಿ ವರ್ಗೀಕರಿಸಲ್ಪಟ್ಟಿರುವುದು ಗಮನಕ್ಕೆ ಬಂದಿದ್ದು, ಅಂತಹ ವರ್ಗೀಕರಣದ ವಿವರಗಳನ್ನು **ಅನುಬಂಧ 2.3**ರಲ್ಲಿ ನೀಡಲಾಗಿದೆ. ಇದಕ್ಕೆ ಉತ್ತರವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು (ಸೆಪ್ಟೆಂಬರ್ 2017) ಮುಂದಿನ ವರ್ಷದಿಂದ, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರಿಗೆ ನೀಡುವ ಪರಿಶ್ರಮಧನವನ್ನು '015–ಪೂರಕ ವೆಚ್ಚದ ಅಡಿಯಲ್ಲಿ ಅವಕಾಶ ಒದಗಿಸಲಾಗುವುದು ಎಂದು ತಿಳಿಸಿದೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆಯು ತನ್ನ ಉತ್ತರದಲ್ಲಿ ಲೆಕ್ಕಪರಿಶೋಧನೆಯ ಸಲಹೆಯು ಒಪ್ಪತಕ್ಕದ್ದೆಂದೂ ಹಾಗೂ ಇನ್ನು ಮುಂದೆ ಹೊಸ ಬೆಳೆಯ ಮೇಲಿನ ವಿಮೆಯ ಅವಕಾಶವನ್ನು 106–ಸಹಾಯಧನದ ಅಡಿಯಲ್ಲಿ ಮಾಡಲಾಗುವುದು ಎಂದು ತಿಳಿಸಿದೆ. ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುವ ಆಪ್ತ ಸಿಬ್ಬಂದಿಗಳಿಗೆ ನೀಡಲಾಗುವ ಪರಿಶ್ರಮಧನವನ್ನು 059–ಇತರೆ ವೆಚ್ಚಗಳಡಿಯಲ್ಲಿ ನೀಡುತ್ತಿದ್ದು ಇದನ್ನು 2017–18ರಲ್ಲಿ ಹೊಸ ಉದ್ದೇಶ ಶೀರ್ಷಿಕೆ '034–ಗುತ್ತಿಗೆ/ ಹೊರಗುತ್ತಿಗೆ' ಯನ್ನು ಪ್ರಾರಂಭಿಸಿ ಪ್ರಸ್ತುತ ಪಾವತಿಯನ್ನು ಇದೇ ಹೊಸಶೀರ್ಷಿಕೆಯಡಿಯಲ್ಲಿ ಮಾಡಲಾಗುತ್ತಿದೆ ಎಂದು ತಿಳಿಸಿದೆ.

## 2.7 ಹಣಕಾಸು ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ

### 2.7.1 ಧನವಿನಿಯೋಗಕ್ಕೆ ಪ್ರತಿಯಾಗಿ ಹಂಚಿಕೆಯ ಆದ್ಯತೆಗಳು

2016–17ರಲ್ಲಿ ಒಟ್ಟು 16 ಅನುದಾನ/ವಿನಿಯೋಗಗಳಲ್ಲಿ ಬಳಕೆಯಾಗದೆ ಉಳಿದ ₹12,628.06 ಕೋಟಿಗಳಲ್ಲಿ 22 ಪ್ರಕರಣಗಳಲ್ಲಿ ಉಳಿಕೆಯು ₹100 ಕೋಟಿಗಿಂತಲೂ ಅಧಿಕವಾಗಿದೆ. ಹೆಚ್ಚಿನ ಪ್ರಮಾಣದ, ಬಳಸದೆ ಉಳಿದ ಅವಕಾಶಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಆರ್ಥಿಕ, ನಗರಾಭಿವೃದ್ಧಿ, ಶಿಕ್ಷಣ, ಜಲಸಂಪನ್ಮೂಲ, ಮತ್ತು ಋಣಸೇವೆಗಳು ಇಲಾಖೆಗಳಲ್ಲಿ ಕಂಡುಬಂದಿದ್ದು ಅವುಗಳನ್ನು **ಕೋಷ್ಟಕ 2.9**ರಲ್ಲಿ ಸೂಚಿಸಲಾಗಿದೆ.

**ಕೋಷ್ಟಕ 2.9: ₹100 ಕೋಟಿ ಮತ್ತು ಅದಕ್ಕಿಂತ ಹೆಚ್ಚಾದ ಬಳಕೆಯಾಗದೆ ಉಳಿದ ಅವಕಾಶಗಳ ಅನುದಾನ/ವಿನಿಯೋಗಗಳು**

(ಕೋಟಿ ರೂಪಾಯಿಗಳಲ್ಲಿ)

| ಕ್ರಮ ಸಂಖ್ಯೆ | ಅನುದಾನ/ಶೀರ್ಷಿಕೆ | ಆಯವ್ಯಯ ಅವಕಾಶ | | | ವೆಚ್ಚ | ಬಳಕೆಯಾಗದೆ ಉಳಿದ ಅವಕಾಶ |
|---|---|---|---|---|---|---|
| | | ಮೂಲ | ಪೂರಕ | ಒಟ್ಟು | | |
| 1 | 01–ಕೃಷಿ ಮತ್ತು ತೋಟಗಾರಿಕೆ<br>ರಾಜಸ್ವ– ಪುರಸ್ಕೃತ | 5,375.75 | 965.85 | 6,341.60 | 5,687.63 | 653.97(10) |
| 2 | 03–ಆರ್ಥಿಕ<br>ರಾಜಸ್ವ–ಪುರಸ್ಕೃತ | 19,385.38 | 102.01 | 19,487.39 | 16,458.91 | 3,028.48(16) |
| 3 | 04–ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ<br>ರಾಜಸ್ವ– ಪುರಸ್ಕೃತ | 595.49 | 64.42 | 659.91 | 516.76 | 143.15(22) |
| 4 | 07–ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್<br>ರಾಜಸ್ವ–ಪುರಸ್ಕೃತ<br>ಬಂಡವಾಳ–ಪುರಸ್ಕೃತ | 10,934.34<br>2,084.02 | 2,024.81<br>1.84 | 12,959.15<br>2,085.86 | 12,655.27<br>1,242.94 | 303.88(2)<br>842.92(40) |
| 5 | 08–ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ<br>*ರಾಜಸ್ವ–ಪ್ರಭೃತ* | *300.19* | *0.32* | *300.51* | *154.17* | *146.34(49)* |
| 6 | 10–ಸಮಾಜಕಲ್ಯಾಣ<br>ರಾಜಸ್ವ–ಪುರಸ್ಕೃತ<br>ಬಂಡವಾಳ–ಪುರಸ್ಕೃತ | 6,897.01<br>2,441.20 | 182.20<br>41.22 | 7,079.21<br>2,482.42 | 6,906.70<br>2,243.23 | 172.51(2)<br>239.19(10) |
| 7 | 11–ಮಹಿಳಾ ಮತ್ತು ಮಕ್ಕಳ ಕಲ್ಯಾಣ<br>ರಾಜಸ್ವ–ಪುರಸ್ಕೃತ | 4,335.14 | 34.36 | 4,369.50 | 4,182.98 | 186.52(4) |
| 8 | 13–ಆಹಾರ ಮತ್ತು ನಾಗರಿಕ ಸರಬರಾಜು<br>ಬಂಡವಾಳ–ಪುರಸ್ಕೃತ | 2,090.48 | 21.74 | 2,112.22 | 1,941.69 | 170.53(8) |
| 9 | 16–ವಸತಿ<br>ರಾಜಸ್ವ–ಪುರಸ್ಕೃತ | 3,579.17 | 75.00 | 3,654.17 | 3,394.66 | 259.51(7) |
| 10 | 17–ಶಿಕ್ಷಣ<br>ರಾಜಸ್ವ–ಪುರಸ್ಕೃತ<br>ಬಂಡವಾಳ–ಪುರಸ್ಕೃತ | 21,233.55<br>790.53 | 66.08<br>377.23 | 21,229.63<br>1,167.76 | 20,432.31<br>1,060.06 | 867.32(4)<br>107.70(9) |
| 11 | 19–ನಗರಾಭಿವೃದ್ಧಿ<br>ರಾಜಸ್ವ–ಪುರಸ್ಕೃತ<br>ಬಂಡವಾಳ–ಪುರಸ್ಕೃತ | 8,744.08<br>4,348.58 | 487.06<br>438.20 | 9,231.14<br>4,786.78 | 8,558.00<br>3,448.10 | 673.14(7)<br>1,338.68(28) |
| 12 | 20–ಲೋಕೋಪಯೋಗಿ ಕಾಮಗಾರಿಗಳು<br>ಬಂಡವಾಳ–ಪುರಸ್ಕೃತ | 5,458.18 | 2,384.79 | 7,842.97 | 7,310.07 | 532.90(7) |
| 13 | 21–ಜಲ ಸಂಪನ್ಮೂಲಗಳು<br>ರಾಜಸ್ವ–ಪುರಸ್ಕೃತ<br>ಬಂಡವಾಳ–ಪುರಸ್ಕೃತ | 1,001.38<br>9,493.47 | 23.00<br>159.67 | 1,024.38<br>9,653.14 | 905.22<br>8,400.17 | 119.16(12)<br>1,252.97(13) |
| 14 | 23 – ಕಾರ್ಮಿಕ<br>ರಾಜಸ್ವ–ಪುರಸ್ಕೃತ | 897.04 | 23.63 | 920.67 | 809.30 | 111.37(12) |
| 15 | 26–ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ<br>ರಾಜಸ್ವ–ಪುರಸ್ಕೃತ<br>ಬಂಡವಾಳ–ಪುರಸ್ಕೃತ | 795.37<br>1,020.49 | 0.63<br>0.00 | 796.00<br>1,020.49 | 626.35<br>894.83 | 169.65(21)<br>125.66(12) |
| 16 | *29 – ಋಣ ಸೇವೆಗಳು*<br>*ರಾಜಸ್ವ–ಪ್ರಭೃತ* | *13,206.54* | *118.32* | *13,324.86* | *12,142.35* | *1,182.51(9)* |
| ಒಟ್ಟು | | **1,25,007.38** | **7,592.38** | **1,32,599.76** | **1,19,971.70** | **12,628.06(10)** |

*ಆಕರ: ಧನವಿನಿಯೋಗ ಲೆಕ್ಕಗಳು*

ಪುನರ್ವಿನಿಯೋಗವು ಸೇರಿದಂತೆ, ₹25 ಕೋಟಿಗಳಿಗಿಂತಲೂ ಹೆಚ್ಚಾಗಿ ಬಳಕೆಯಾಗದೆ ಉಳಿದ ಅವಕಾಶಗಳ ಪ್ರಧಾನ ಲೆಕ್ಕ ಶೀರ್ಷಿಕೆಗಳ ವಿವರಗಳನ್ನು **ಅನುಬಂಧ 2.4**ರಲ್ಲಿ ನೀಡಲಾಗಿದೆ.

ಕೆಲವು ಪ್ರಧಾನ ಶೀರ್ಷಿಕೆಗಳಡಿ ಅವಕಾಶಗಳು ಬಳಕೆಯಾಗದೆ ಉಳಿದಿರುವುದಕ್ಕೆ ಸಂಬಂಧಿಸಿದ ಇಲಾಖೆಗಳು ನೀಡಿರುವ ಕಾರಣಗಳನ್ನು ಧನವಿನಿಯೋಗ ಲೆಕ್ಕಗಳಲ್ಲಿ ವರದಿ ಮಾಡಿದಂತೆ ಈ ಕೆಳಗೆ ನೀಡಲಾಗಿದೆ:

### ಆರ್ಥಿಕ

ಪ್ರಧಾನ ಶೀರ್ಷಿಕೆ '3475–ಇತರೆ ಸಾಮಾನ್ಯ ಆರ್ಥಿಕ ಸೇವೆಗಳು – ಮೀಸಲು ನಿಧಿ ವರ್ಗಾವಣೆ ಮತ್ತು ಠೇವಣಿ ಲೆಕ್ಕ– ಮೂಲಭೂತ ಸೌಕರ್ಯ ಉಪಕ್ರಮಣ ನಿಧಿಗೆ ಉಪಕರಗಳ ವರ್ಗಾವಣೆ– ಅಂತರ ಲೆಕ್ಕ ವರ್ಗಾವಣೆಗಳು' ಇದರ ಅಡಿಯಲ್ಲಿ ಉಳಿಕೆಯಾದ ₹149.71 ಕೋಟಿ ಅವಕಾಶಗಳಿಗೆ ಕಾರಣ ಸಾರ್ವಜನಿಕ ಲೆಕ್ಕದ ಮೀಸಲು ನಿಧಿಗೆ ವರ್ಗಾವಣೆಯಾಗಬೇಕಾಗಿದ್ದ ಮೂಲಭೂತ ಸೌಕರ್ಯ ಉಪಕರದ ವಾಸ್ತವ ಸಂಗ್ರಹವು ನಿರೀಕ್ಷಿತ ಸ್ವೀಕೃತಿಗಿಂತ ಕಡಿಮೆಯಿತ್ತು.

ಪ್ರಧಾನ ಶೀರ್ಷಿಕೆ '3475–ಇತರೆ ಸಾಮಾನ್ಯ ಆರ್ಥಿಕ ಸೇವೆಗಳು–800 ಇತರೆ ವೆಚ್ಚಗಳು–ಖಾತರಿ ಮೀಸಲು ನಿಧಿಗೆ ವಂತಿಗೆ' ಇದರ ಅಡಿಯಲ್ಲಿ ಬಳಕೆಯಾಗದೆ ಉಳಿದ ಅವಕಾಶವಾದ ₹67.19 ಕೋಟಿ ಖಾತರಿ ವಿಮೋಚನಾ ಮೊತ್ತದ ಪರಿಷ್ಕರಣೆಯು ಕಾರಣವಾಗಿದ್ದು ಇದನ್ನು 2017–18ರಲ್ಲಿ ಹೊಂದಾಣಿಕೆ ಮಾಡಲಾಗುತ್ತದೆ.

ಶೀರ್ಷಿಕೆ 2040–ಮಾರಾಟದ ಮೇಲಿನ ತೆರಿಗೆ, ವ್ಯಾಪಾರ ಇತ್ಯಾದಿ–ವಸೂಲಿ ವೆಚ್ಚ–ಕಬ್ಬು ಖರೀದಿ ತೆರಿಗೆಯ ಮನರ್ಭರ್ತಿ ಮತ್ತು ರಸ್ತೆ ಉಪಕರ– ಇದರಡಿಯಲ್ಲಿ ಬಳಕೆಯಾಗದೆ ಉಳಿದ ಅವಕಾಶವಾದ ₹7.64 ಕೋಟಿ 12 ಸಕ್ಕರೆ ಕಾರ್ಖಾನೆಗಳ ಕಬ್ಬು ಖರೀದಿ, ತೆರಿಗೆ ಮತ್ತು ರಸ್ತೆ ಉಪಕರದ ಮರುಪಾವತಿಗೆ ಸಂಬಂಧಿಸಿದ ದೋಷಪೂರಿತ ಆಯವ್ಯಯವು ಕಾರಣವಾಗಿತ್ತು.

### ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್

2515–ಇತರೆ ಗ್ರಾಮೀಣ ಅಭಿವೃದ್ಧಿ ಯೋಜನೆ–ಪಂಚಾಯತ್ ರಾಜ್– ಗ್ರಾ.ಅ.ಪಂ.ರಾ. ಗಣಕೀಕರಣ– ಇತರೆ ವೆಚ್ಚಗಳು–ಈ ಶೀರ್ಷಿಕೆಯಡಿಯಲ್ಲಿ ಬಳಕೆಯಾಗದೆ ಉಳಿದ ಅವಕಾಶವಾದ ₹10.50 ಕೋಟಿ ಜೆಮ್‌ಪೋರ್ಟಲ್‌ನಿಂದ ಗಣಕಯಂತ್ರದ ಬಿಡಿಭಾಗಗಳನ್ನು ಖರೀದಿಸಲು ಸಾಕಷ್ಟು ಕಾಲಾವಕಾಶದ ಕೊರತೆ/ಸಮಯಾಭಾವ ಕಾರಣವಾಗಿತ್ತು.

### ಶಿಕ್ಷಣ

ಪ್ರಧಾನ ಶೀರ್ಷಿಕೆ 2202–ಸಾಮಾನ್ಯ ಶಿಕ್ಷಣ– ಪ್ರಾಥಮಿಕ ಶಿಕ್ಷಣ– ಸರ್ಕಾರಿ ಪ್ರಾಥಮಿಕ ಶಾಲೆಗಳು– ವಿದ್ಯಾರ್ಥಿ ಪ್ರೇರಣಾ ಉಪಕ್ರಮದ ಅಡಿಯಲ್ಲಿ ಬಳಕೆಯಾಗದೆ ಉಳಿದ ₹14.87 ಕೋಟಿ ಅವಕಾಶಕ್ಕೆ, ದೋಷಪೂರಿತ ಆಯವ್ಯಯದ ದೆಸೆಯಿಂದ ಈ ಶೀರ್ಷಿಕೆಯಡಿಯ ಮೊತ್ತವನ್ನು ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳು ಬಳಸಲಾಗದಿದ್ದುದು ಕಾರಣವಾಗಿತ್ತು.

ಪ್ರಧಾನ ಶೀರ್ಷಿಕೆ 2202–ಸಾಮಾನ್ಯ ಶಿಕ್ಷಣ–ಪ್ರಾಥಮಿಕ ಶಿಕ್ಷಣ–ಉಪಾಧ್ಯಾಯರು ಮತ್ತು ಇತರೆ ಸೇವೆಗಳು–ಗುಣಮಟ್ಟ ಆಶ್ವಾಸನ ಉಪಕ್ರಮದ ಅಡಿಯಲ್ಲಿ ₹15 ಕೋಟಿ ಮೊತ್ತವು ಬಳಕೆಯಾಗದೆ ಉಳಿಯಲು ದೋಷಪೂರಿತ ಆಯವ್ಯಯದ ದೆಸೆಯಿಂದ ಈ ಶೀರ್ಷಿಕೆಯಡಿಯ ಮೊತ್ತವನ್ನು ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳು ಬಳಸಲಾಗದಿದ್ದುದು ಕಾರಣವಾಗಿತ್ತು.

ಪ್ರಧಾನ ಶೀರ್ಷಿಕೆ 2202–ಸಾಮಾನ್ಯ ಶಿಕ್ಷಣ–ಮಾಧ್ಯಮಿಕ ಶಿಕ್ಷಣ–ಸರ್ಕಾರಿ ಮಾಧ್ಯಮಿಕ ಶಾಲೆಗಳು– ಬಾಲಕಿಯರ ಶಾಲೆಯ ಪ್ರಾರಂಭ– ಅಡಿಯಲ್ಲಿಯ ₹24.48 ಕೋಟಿ ಮೊತ್ತವು ಬಳಕೆಯಾಗದೆ ಉಳಿಯಲು ಸರ್ವ ಶಿಕ್ಷಣ ಅಭಿಯಾನ ಸೊಸೈಟಿಗೆ ಹಿಂದಿನ ವರ್ಷಗಳಲ್ಲಿ ಬಿಡುಗಡೆ ಮಾಡಿದ್ದ ಮೊತ್ತವನ್ನು 2016–17ರಲ್ಲಿ ಉಪಯೋಗಿಸಿಕೊಂಡು ಯೋಜನೆಯನ್ನು ಅನುಷ್ಠಾನಗೊಳಿಸಿರುವುದು ಕಾರಣವಾಗಿತ್ತು.

### ನಗರಾಭಿವೃದ್ಧಿ

ಪ್ರಧಾನ ಶೀರ್ಷಿಕೆ 2217–ನಗರಾಭಿವೃದ್ಧಿ–ಇತರೆ ನಗರ ಅಭಿವೃದ್ಧಿ ಯೋಜನೆಗಳು–ಇತರೆ ವೆಚ್ಚಗಳು–ಸರ್ವರಿಗೂ ಮನೆ – ನಗರ ಈ ಶೀರ್ಷಿಕೆಯಡಿ ₹36.01 ಕೋಟಿ ಬಳಕೆಯಾಗದೆ ಉಳಿಯುವುದಕ್ಕೆ ಪೌರಾಡಳಿತ ನಿರ್ದೇಶನಾಲಯದಿಂದ ಹಣ ಬಿಡುಗಡೆಗೆ ಅಗತ್ಯವಾದ ಮನವಿ ಬಾರದಿರುವುದು ಕಾರಣವಾಗಿತ್ತು.

ಪ್ರಧಾನ ಶೀರ್ಷಿಕೆ 2217–ನಗರಾಭಿವೃದ್ಧಿ–ಸಾಮಾನ್ಯ–ನಿರ್ದೇಶನ ಮತ್ತು ಆಡಳಿತ – ಪೌರಾಡಳಿತ ಸೇವೆಗಳು ಈ ಶೀರ್ಷಿಕೆಯಡಿ ₹55.08 ಕೋಟಿ ಬಳಕೆಯಾಗದೆ ಉಳಿಯುವುದಕ್ಕೆ ಖಾಲಿಯಿದ್ದ ಹುದ್ದೆಗಳು ಆರ್ಥಿಕ ವರ್ಷದಲ್ಲಿ ಭರ್ತಿಯಾಗದಿರುವುದು ಕಾರಣವಾಗಿತ್ತು.

ಪ್ರಧಾನ ಶೀರ್ಷಿಕೆ 2217–ನಗರಾಭಿವೃದ್ಧಿ–ಇತರೆ ನಗರ ಅಭಿವೃದ್ಧಿ ಯೋಜನೆಗಳು–ಸಾಮಾನ್ಯ–ಇತರೆ ವೆಚ್ಚಗಳು–ಕೆಎಮ್ಆರ್‌ಪಿ ಯೋಜನೆಗಳಿಗೆ ಸಹಾಯ–ಬಂಡವಾಳ ಆಸ್ತಿ ಬಲವರ್ಧನೆ ಅನುದಾನ ಶೀರ್ಷಿಕೆಯಡಿ ₹5 ಕೋಟಿ ಬಳಕೆಯಾಗದೆ ಉಳಿಯುವುದಕ್ಕೆ ಕೆಯುಐಡಿಎಫ್‌ಸಿಯಿಂದ ಹಣ ಬಿಡುಗಡೆಗೆ ಅಗತ್ಯವಾದ ಮನವಿ ಬಾರದಿರುವುದು ಕಾರಣವಾಗಿತ್ತು.

ಪ್ರಧಾನ ಶೀರ್ಷಿಕೆ 2217–ನಗರಾಭಿವೃದ್ಧಿ–ಇತರೆ ನಗರ ಅಭಿವೃದ್ಧಿ ಯೋಜನೆಗಳು–ಇತರೆ ವೆಚ್ಚಗಳು–ಸ್ವಚ್ಛ ಭಾರತ–ಇತರೆ ವೆಚ್ಚಗಳು ಈ ಶೀರ್ಷಿಕೆಯಡಿ ₹76.99 ಕೋಟಿ ಬಳಕೆಯಾಗದೆ ಉಳಿಯುವುದಕ್ಕೆ ಪೌರಾಡಳಿತ ನಿರ್ದೇಶನಾಲಯದಿಂದ ಹಣ ಬಿಡುಗಡೆಗೆ ಅಗತ್ಯವಾದ ಮನವಿ ಬಾರದಿರುವುದು ಕಾರಣವಾಗಿತ್ತು.

ಪ್ರಧಾನ ಶೀರ್ಷಿಕೆ 4217–ನಗರಾಭಿವೃದ್ಧಿಗಾಗಿ ಬಂಡವಾಳ ವೆಚ್ಚ–ಇತರೆ ನಗರ ಅಭಿವೃದ್ಧಿ ಯೋಜನೆಗಳು–ಇತರೆ ವೆಚ್ಚಗಳು–ಬೆಂಗಳೂರು ಸಬ್ ಅರ್ಬನ್ ರೈಲ್ ಸಿಸ್ಟಮ್–ಬಂಡವಾಳ ಆಸ್ತಿ ಹೆಚ್ಚಿಸಲು ಅನುದಾನ ಈ ಶೀರ್ಷಿಕೆಯಡಿ ₹76 ಕೋಟಿ ಬಳಕೆಯಾಗದೆ ಉಳಿಯುವುದಕ್ಕೆ ರೈಲ್ವೇ ಮಂತ್ರಾಲಯದಿಂದ ಸಬ್ ಅರ್ಬನ್ ರೈಲ್ ಪ್ರಾಜೆಕ್ಟ್ ಕುರಿತಾದ ಕಾರ್ಯನೀತಿ ಮಾರ್ಗದರ್ಶಿಗಳು ಜಾರಿಯಾಗದೇ ಇರುವುದು ಕಾರಣವಾಗಿತ್ತು.

### ಲೋಕೋಪಯೋಗಿ ಕಾಮಗಾರಿಗಳು

ಪ್ರಧಾನ ಶೀರ್ಷಿಕೆ 2059 –ಲೋಕೋಪಯೋಗಿ ಕಾಮಗಾರಿಗಳು– ಸಾಮಾನ್ಯ–ಇತರೆ ವೆಚ್ಚಗಳು–ಮರಳು ಗಣಿಗಾರಿಕೆಯ ಆಡಳಿತ–ಸಾಮಾನ್ಯ ವೆಚ್ಚಗಳು–ಅಡಿಯಲ್ಲಿ ₹80.55 ಕೋಟಿ ಉಳಿಕೆಗೆ ಮರಳು ಗಣಿಗಾರಿಕೆಗಾಗಿ ಟೆಂಡರ್ ಕರೆಯುವುದರಲ್ಲಿ ಆದ ವಿಳಂಬವು ಕಾರಣವಾಗಿದೆ.

ಪ್ರಧಾನ ಶೀರ್ಷಿಕೆ 3054–ರಸ್ತೆ ಮತ್ತು ಸೇತುವೆಗಳು–ರಾಜ್ಯ ಹೆದ್ದಾರಿಗಳು–ಸೇತುವೆಗಳು–ರಾಜ್ಯ ಹೆದ್ದಾರಿ ಸೇತುವೆಗಳ ನಿರ್ವಹಣೆ –ಅಡಿಯಲ್ಲಿ ₹8.66 ಕೋಟಿ ಉಳಿಕೆಗೆ ವಾಸ್ತವ ಅಂದಾಜಿಗಿಂತ ಕಡಿಮೆ ಮೊತ್ತಕ್ಕೆ ಟೆಂಡರ್ ಮಂಜೂರು ಮಾಡಿರುವುದು ಕಾರಣವಾಗಿತ್ತು.

ಪ್ರಧಾನ ಶೀರ್ಷಿಕೆ 5051–ಬಂದರು ಮತ್ತು ಲೈಟ್ ಹೌಸ್‌ಗಳ ಮೇಲಿನ ಬಂಡವಾಳ ವೆಚ್ಚ–ಸಾಮಾನ್ಯ–ಕರಾವಳಿ ಸಂರಕ್ಷಣೆ ನಿರ್ವಹಣೆ–ಇಎಪಿ–ಬಂಡವಾಳ ವೆಚ್ಚಗಳು–ಅಡಿಯಲ್ಲಿ ₹17.18 ಕೋಟಿ ಉಳಿಕೆಗೆ ಟೆಂಡರ್ ಪ್ರಕ್ರಿಯೆಗಳು ಪ್ರಗತಿಯಲ್ಲಿರುವುದು ಕಾರಣವಾಗಿದೆ.

ಪ್ರಧಾನ ಶೀರ್ಷಿಕೆ 5054–ರಸ್ತೆ ಮತ್ತು ಸೇತುವೆಗಳ ಮೇಲಣ ಬಂಡವಾಳ ವೆಚ್ಚ–ರಾಜ್ಯ ಹೆದ್ದಾರಿಗಳು –ರಸ್ತೆ ಕಾಮಗಾರಿಗಳು–ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣಾ ಯೋಜನೆ (ಕೆಎಸ್‌ಹೆಚ್‌ಐಪಿ) ಇಎಪಿ–2(ಎಡಿಬಿ)–ರಸ್ತೆ– ಅಡಿಯಲ್ಲಿ ₹60.04 ಕೋಟಿ ಉಳಿತಾಯವು ಸಕಾಲದಲ್ಲಿ ಬಾರದಿರುವ ಬಿಲ್ಲುಗಳ ಕಾರಣದಿಂದ ಉಂಟಾಗಿದೆ.

### ಜಲ ಸಂಪನ್ಮೂಲಗಳು

ಪ್ರಧಾನ ಶೀರ್ಷಿಕೆ 4702– ಸಣ್ಣ ನೀರಾವರಿ ಮೇಲಣ ಬಂಡವಾಳ ವೆಚ್ಚ– ಮೇಲ್ಮೈ ಜಲ–ಬಳಕೆಯಾಗದ ಪಜಾಉಯೋ– ಗಿಜಉಯೋ– ಪಜಾಉಯೋ– ಗಿಜಉಯೋ ಕಾಯ್ದೆಯ

ಅಡಿಯಲ್ಲಿ ಬಳಕೆಯಾಗದ ₹30.85 ಕೋಟಿ ಮೊತ್ತಕ್ಕೆ ತಾಂತ್ರಿಕ ಸಲಹಾ ಸಮಿತಿಯಿಂದ ಕಾಮಗಾರಿಗಳಿಗೆ ಮಂಜೂರಾತಿ ಸಿಗದಿರುವುದು ಕಾರಣವಾಗಿದೆ.

ಪ್ರಧಾನ ಶೀರ್ಷಿಕೆ 4702– ಸಣ್ಣ ನೀರಾವರಿ ಮೇಲಣ ಬಂಡವಾಳ ವೆಚ್ಚ– ಮೇಲ್ಮೈ ಜಲ–ಏತ ನೀರಾವರಿ ಯೋಜನೆಗಳು– ಅಡಿಯಲ್ಲಿ ₹65 ಕೋಟಿ ಉಳಿತಾಯಕ್ಕೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಆದ ವಿಳಂಬ ಕಾರಣವಾಗಿದೆ.

ಪ್ರಧಾನ ಶೀರ್ಷಿಕೆ 4702– ಸಣ್ಣ ನೀರಾವರಿ ಮೇಲಣ ಬಂಡವಾಳ ವೆಚ್ಚ– ಮೇಲ್ಮೈ ಜಲ– ವಿಶೇಷ ಘಟಕ ಯೋಜನೆ– ಪಜಾಉಯೋ– ಅಡಿಯಲ್ಲಿ ಬಳಕೆಯಾಗದ ₹198.61 ಕೋಟಿ ಮೊತ್ತಕ್ಕೆ ತಾಂತ್ರಿಕ ಸಲಹಾ ಸಮಿತಿಯಿಂದ ಕಾಮಗಾರಿಗಳಿಗೆ ಒಪ್ಪಿಗೆ ಸಿಗದಿರುವುದು ಕಾರಣವಾಗಿದೆ.

ಪ್ರಧಾನ ಶೀರ್ಷಿಕೆ 4702– ಸಣ್ಣ ನೀರಾವರಿ ಮೇಲಣ ಬಂಡವಾಳ ವೆಚ್ಚ– ಮೇಲ್ಮೈ ಜಲ– ಗಿರಿಜನ ಉಪಯೋಜನೆ– ಅಡಿಯಲ್ಲಿ ಬಳಕೆಯಾಗದ ₹81.09 ಕೋಟಿ ಮೊತ್ತಕ್ಕೆ ಹೊಸ ನಾಗರಿಕ ಕಾಮಗಾರಿಗಳ ಅಂದಾಜುಗಳಿಗೆ ಹಣಕಾಸು ವರ್ಷದ ಅಂತ್ಯದಲ್ಲಿ ಒಪ್ಪಿಗೆ ಸಿಕ್ಕಿದುದರಿಂದ, ಹೊಸ ಸಿವಿಲ್ ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿನ ವಿಳಂಬವು ಕಾರಣವಾಗಿದೆ.

### ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಪ್ರಧಾನ ಲೆಕ್ಕಶೀರ್ಷಿಕೆ 2210– ವೈದ್ಯಕೀಯ ಮತ್ತು ಜನಾರೋಗ್ಯ– ಗ್ರಾಮೀಣ ಆರೋಗ್ಯ ಸೇವೆಗಳು– ಅಲೋಪತಿ– ಇತರೆ ವೆಚ್ಚಗಳು– ರಾಷ್ಟ್ರೀಯ ಆರೋಗ್ಯ ಯೋಜನೆ– ಇತರೆ ಖರ್ಚುಗಳು– ಇದರ ಅಡಿಯಲ್ಲಿ ₹21.71 ಕೋಟಿ ಬಳಕೆಯಾಗದ ಅವಕಾಶಕ್ಕೆ ಹಣ ಬಿಡುಗಡೆ ಮಾಡಿದ ಸರ್ಕಾರಿ ಆದೇಶಗಳು ಸ್ವೀಕೃತವಾಗದಿರುವ ಕಾರಣದಿಂದ ಉಂಟಾಗಿದೆ.

ಪ್ರಧಾನ ಲೆಕ್ಕಶೀರ್ಷಿಕೆ 2210– ವೈದ್ಯಕೀಯ ಮತ್ತು ಜನಾರೋಗ್ಯ– ಸಾಮಾನ್ಯ– ಇತರೆ ವೆಚ್ಚಗಳು– ರಾಷ್ಟ್ರೀಯ ಸ್ವಾಸ್ಥ್ಯ ವಿಮಾ ಯೋಜನೆ– ಇತರೆ ಖರ್ಚುಗಳು– ಇದರ ಅಡಿಯಲ್ಲಿ ₹10.02 ಕೋಟಿ ಬಳಕೆಯಾಗದ ಅವಕಾಶಕ್ಕೆ, ಹಣ ಬಿಡುಗಡೆ ಮಾಡಿದ ಸರ್ಕಾರಿ ಆದೇಶಗಳು ಸ್ವೀಕೃತವಾಗದಿರುವ ಕಾರಣದಿಂದ ಉಂಟಾಗಿದೆ.

### ಋಣ ಸೇವೆಗಳು

ಪ್ರಧಾನ ಲೆಕ್ಕಶೀರ್ಷಿಕೆ 2049– ಬಡ್ಡಿ ಪಾವತಿ– ಆಂತರಿಕ ಸಾಲಗಳ ಮೇಲಿನ ಬಡ್ಡಿ– ಚಾಲ್ತಿ ಸಾಲಗಳ ಮೇಲಿನ ಬಡ್ಡಿ– ಹೊಸ ಸಾಲಗಳು 2015–16 – ಅಡಿಯಲ್ಲಿ ಬಳಸದೆ ಉಳಿದ ₹192.39 ಕೋಟಿಗಳ ಅವಕಾಶವು ಈ ಶೀರ್ಷಿಕೆಯಡಿ 2013–14ನೇ ಸಾಲಿನ 16 ಸಾಲಗಳ ಋಣಸೇವೆಗಳಿಗೆ ಹಾಗೂ ಪ್ರತ್ಯೇಕ ಪಂಕ್ತಿಯ ವಿಷಯಗಳಡಿ ಮಾಡಿದ ಅವಕಾಶಗಳ ಪುನರಾವರ್ತನೆಯಿಂದ ಆಗಿತ್ತು.

ಪ್ರಧಾನ ಲೆಕ್ಕಶೀರ್ಷಿಕೆ 2049– ಬಡ್ಡಿ ಪಾವತಿ– ಆಂತರಿಕ ಸಾಲಗಳ ಮೇಲಿನ ಬಡ್ಡಿ– ಚಾಲ್ತಿ ಸಾಲಗಳ ಮೇಲಿನ ಬಡ್ಡಿ– 2016–17ರ ಹೊಸ ಸಾಲಗಳು–ಋಣ ಸೇವೆಗಳು ಅಡಿಯಲ್ಲಿ ಬಳಸದೆ ಉಳಿದ ₹292.50 ಕೋಟಿಗಳ ಅವಕಾಶವು ಹಣಕಾಸು ವರ್ಷದ ಮೊದಲ ಅರ್ಧವರ್ಷದಲ್ಲಿ ಮುಕ್ತ ಮಾರುಕಟ್ಟೆ ಸಾಲಗಳನ್ನು ಪಡೆದುಕೊಳ್ಳದೆ ಇರುವುದು ಕಾರಣವಾಗಿತ್ತು.

ಮೇಲ್ಕಂಡ ಅಂಶಗಳಿಂದ ಇಲಾಖೆಗಳು ನೀಡಿರುವ ಕಾರಣಗಳು ಅಂತಿಮ ಉಳಿತಾಯದ ಒಂದು ಸಣ್ಣ ಭಾಗಕ್ಕೆ ಮಾತ್ರ ಎಂಬುದನ್ನು ಗಮನಿಸಿದೆ.

ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯು ವಿಧಾನಸಭೆಗೆ ಸಲ್ಲಿಸಿದ ತನ್ನ 13ನೇ ವರದಿಯಲ್ಲಿ (ಡಿಸೆಂಬರ್ 2011) ಆಯವ್ಯಯ ಅವಕಾಶ/ವೆಚ್ಚದ ಮೇಲೆ ನಿಯಂತ್ರಣವನ್ನು ಸಾಧಿಸಲು ಬಳಕೆಯಾಗದ ಅವಕಾಶಗಳು ಗಮನಕ್ಕೆ ಬಂದ ಕೂಡಲೇ ಅಧ್ಯರ್ಪಣೆ ಮಾಡಬೇಕೆಂದು ಮತ್ತು ಈ ಬಗ್ಗೆ ನಿರ್ದಿಷ್ಟ ಸೂಚನೆಗಳನ್ನು ನೀಡುವ ಅಗತ್ಯವಿದೆ ಎಂದು ಹೇಳಿತ್ತು. ಆರ್ಥಿಕ ಇಲಾಖೆಯು 19 ಡಿಸೆಂಬರ್ 2013ರ ಸುತ್ತೋಲೆಯಲ್ಲಿ ಎಲ್ಲಾ ಆಡಳಿತ ಇಲಾಖೆಗಳಿಗೆ ಮತ್ತು ಇಲಾಖೆಯ ಮುಖ್ಯಸ್ಥರಿಗೆ ಬಳಕೆಯಾಗದ ಅವಕಾಶಗಳು ಗಮನಕ್ಕೆ ಬಂದ ಕೂಡಲೇ ವರ್ಷಾಂತ್ಯಕ್ಕೆ ಕಾಯದೇ ಆರ್ಥಿಕ ಇಲಾಖೆಗೆ ಅದನ್ನು ಸಂಪೂರ್ಣವಾಗಿ ಅಧ್ಯರ್ಪಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲು ಆದೇಶಿಸಿತ್ತು.

ಆದರೆ, ಲೆಕ್ಕಪತ್ರ ಸಮಿತಿಯ ಶಿಫಾರಸ್ಸಿನ ನಂತರವೂ ದೊಡ್ಡ ಮೊತ್ತಗಳು ಬಳಕೆಯಾಗದೇ/ಅಧ್ಯರ್ಪಣೆ ಆಗದೇ ಉಳಿದಿದ್ದು, ಇದು ವೆಚ್ಚದ ಮೇಲಿನ ಅಪರ್ಯಾಪ್ತ ನಿಯಂತ್ರಣವನ್ನು ಸೂಚಿಸುತ್ತದೆ ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸ್ಸುಗಳನ್ನು ಪಾಲಿಸುವಲ್ಲಿ ಕಾರ್ಯನಿರ್ವಾಹಕರ ಪ್ರತಿಕ್ರಿಯೆಯು ನೀರಸವಾಗಿರುವುದರಿಂದ, ಆರ್ಥಿಕ ಇಲಾಖೆಯ ಸುತ್ತೋಲೆಯಲ್ಲಿನ ಸೂಚನೆಗಳನ್ನು ಪಾಲಿಸದ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳುವ ಅಗತ್ಯವಿದೆ.

### 2.7.2 ಸತತವಾಗಿ ಬಳಕೆಯಾಗದೆ ಉಳಿದ ಅವಕಾಶಗಳು.

ಒಂದು ಅನುದಾನದಲ್ಲಿ ಕಳೆದ ಐದು ವರ್ಷಗಳಲ್ಲಿ ಪ್ರತಿ ಪ್ರಕರಣದಲ್ಲೂ ₹100 ಕೋಟಿಗಳಿಗಿಂತಲೂ ಅಧಿಕವಾದ ಅವಕಾಶವು ಬಳಕೆಯಾಗದೆ ಉಳಿದಿದ್ದು, ವಿವರಗಳನ್ನು **ಕೋಷ್ಟಕ 2.10**ರಲ್ಲಿ ನೀಡಿದೆ.

**ಕೋಷ್ಟಕ 2.10: ಸತತವಾಗಿ ಬಳಕೆಯಾಗದ ಅವಕಾಶಗಳು**

**(ಕೋಟಿ ರೂಪಾಯಿಗಳಲ್ಲಿ)**

| ಕ್ರಮ ಸಂಖ್ಯೆ | ಅನುದಾನ/ಶೀರ್ಷಿಕೆ ಪ್ರಧಾನ ಶೀರ್ಷಿಕೆ | ವರ್ಷ | | | | |
|---|---|---|---|---|---|---|
| | | 2012–13 | 2013–14 | 2014–15 | 2015–16 | 2016–17 |
| 1 | 03– ಆರ್ಥಿಕ (ರಾಜಸ್ವ–ಪುರಸ್ಕೃತ) | 4,101.04 | 116.64 | 489.34 | 1,215.44 | 3,028.48 |
| | 2070–00–800–0–11 ಖಾಲಿಹುದ್ದೆಗಳ ಭರ್ತಿ | 999.98 | 500.00 | 1,181.28 | 1,250.03 | 1,575.00 |

*ಆಕರ: ಧನವಿನಿಯೋಗ ಲೆಕ್ಕಗಳು*

ಮೇಲಿನ ಬೇಡಿಕೆಯಲ್ಲಿ ಅವಕಾಶವು ಸತತವಾಗಿ ಬಳಕೆಯಾಗದೆ ಉಳಿತಾಯವಾಗಲು ಕಾರಣ ಹೀಗಿದೆ:

- ಅನುದಾನ ಸಂಖ್ಯೆ 3– ಆರ್ಥಿಕ, ಶೀರ್ಷಿಕೆ 2070–800–11– ಖಾಲಿ ಹುದ್ದೆಗಳ ಭರ್ತಿ– ಅಡಿಯಲ್ಲಿ ಅವಕಾಶವು ಬಳಕೆಯಾಗದೆ ಉಳಿದಿದೆ. ಆರ್ಥಿಕ ಇಲಾಖೆಯು, ತನ್ನ ಉತ್ತರದಲ್ಲಿ (ಡಿಸೆಂಬರ್ 2017) ಪ್ರಸಕ್ತ ವರ್ಷದ ಅವಧಿಯಲ್ಲಿ ತುಂಬಬಹುದಾದ ಹುದ್ದೆಗಳನ್ನು ಪರಿಗಣಿಸಿ, ಖಾಲಿಯಿರುವ ಹುದ್ದೆಗಳನ್ನು ತುಂಬಲು ಅವಕಾಶ ಒದಗಿಸಲಾಗಿದೆ ಎಂದು ತಿಳಿಸಿದೆ. ಹಾಗೂ, 2017–18ರಲ್ಲಿ ಪ್ರತ್ಯೇಕ ಅನುದಾನಗಳ ಅಡಿಯಲ್ಲಿ ಕೆಲವು ಮೊತ್ತಗಳನ್ನು ಹಂಚಿಕೆ ಮಾಡಲಾಗುವುದು ಎಂದೂ ತಿಳಿಸಿದೆ.

### 2.7.3 ಪೂರಕ ಅವಕಾಶಗಳು

ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯ್ದೆಯ (ಕೆಎಫ್ಆರ್ಎ) ಅಗತ್ಯದಂತೆ ಪೂರಕ ಅಂದಾಜುಗಳು 'ವಿತ್ತೀಯ ತಟಸ್ಥ'ವಲ್ಲದ ಮತ್ತು ಗಣನೀಯ ಪ್ರಮಾಣದ ಮೊತ್ತಗಳ ಬದ್ಧತೆಗಳು, ಪೂರಕ ಅಂದಾಜುಗಳ ಭಾಗವಾಗಿ ಸೇರಲ್ಪಟ್ಟು, ಇದು ಆಯವ್ಯಯ ಕಾರ್ಯನಿರ್ವಹಣೆ ಪ್ರಕ್ರಿಯೆಯ ಮೇಲೆ ಪರಿಣಾಮವನ್ನು ಬೀರುತ್ತದೆ. ಪೂರಕ ಅಂದಾಜುಗಳು ಹೆಚ್ಚಾದಾಗ ವಿತ್ತೀಯ ಶಿಸ್ತಿನ ಮೇಲೆ ಪರಿಣಾಮ ಬೀರಬಹುದಾಗಿದ್ದು, ಮೂಲ ಆಯವ್ಯಯಕ್ಕಿಂತಲೂ ಪೂರಕ ಅಂದಾಜುಗಳ ಮೇಲೆ ಹೆಚ್ಚಿನ ಅವಲಂಬನೆ ಉಂಟಾಗುತ್ತದೆ. ಸರ್ಕಾರವು ವರ್ಷದಲ್ಲಿನ ಪೂರಕ ಅಂದಾಜುಗಳ ಸಂಖ್ಯೆಯನ್ನು ಕಡಿಮೆಗೊಳಿಸುವ ಗುರಿಯನ್ನು ಇಟ್ಟುಕೊಂಡು ವಿತ್ತೀಯ ನಿರ್ವಹಣಾ ಸಮೀಕ್ಷಾ ಸಮಿತಿಯು ಶಿಫಾರಸ್ಸು ಮಾಡಿರುವಂತೆ ವರ್ಷದಲ್ಲಿ ಒಂದು ಪೂರಕ ಅಂದಾಜಿಗೆ ಸೀಮಿತಗೊಳಿಸಬೇಕು ಹಾಗೂ ಎರಡನೇ ಪೂರಕ ಅಂದಾಜಿಗೆ ಅನುಮೋದನೆಯು ಕನಿಷ್ಠವಾಗಿರಬೇಕು.

2016–17ನೇ ವರ್ಷದಲ್ಲಿ ಪೂರಕ ಅಂದಾಜುಗಳ ಮೂಲಕ ಒದಗಿಸಿದ ಮೊತ್ತವು (₹13,955.18 ಕೋಟಿ) ಮೂಲ ಅಂದಾಜುಗಳ (₹1,72,097.17 ಕೋಟಿ) ಶೇಕಡ ಎಂಟರಷ್ಟಿದೆ.

ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ 2002ರ ವಿಭಾಗ (6) –ಉಪವಿಭಾಗ(5)ರ ಅನ್ವಯ ಒಂದು ಅಥವಾ ಹೆಚ್ಚಿನ ಪೂರಕ ಅಂದಾಜುಗಳನ್ನು ಶಾಸಕಾಂಗದ ಅನುಮೋದನೆಗೆ ಮಂಡಿಸುವಾಗಲೆಲ್ಲಾ, ರಾಜ್ಯ ಸರ್ಕಾರವು ಪ್ರಸಕ್ತ ವರ್ಷದ ಆಯವ್ಯಯ ಗುರಿಗಳು ಹಾಗೂ ಮಧ್ಯಮಾವಧಿ ವಿತ್ತೀಯ ಯೋಜನೆಯ ಉದ್ದೇಶ ಮತ್ತು ಮುಂದಿನ ವರ್ಷದ ಗುರಿಗಳಿಗೆ ಸಂಬಂಧಿಸಿದಂತೆ ಪೂರಕ ಅಂದಾಜುಗಳ ವಿತ್ತೀಯ ಪರಿಣಾಮವನ್ನು ಪೂರ್ಣವಾಗಿ ಸರಿದೂಗಿಸಲು

ಸಂವಾದಿಯಾಗಿ ವೆಚ್ಚಕಡಿತ ಮತ್ತು/ಅಥವಾ ಆದಾಯವರ್ಧನೆಯನ್ನು ಸೂಚಿಸುವ ಒಂದು ವಿವರಣಾ ಪಟ್ಟಿಯನ್ನು ಸಲ್ಲಿಸಬೇಕಾಗಿದೆ.

2016–17ರಲ್ಲಿ ಪೂರಕ ಅಂದಾಜುಗಳ ಮೂರು ಕಂತುಗಳನ್ನು ಶಾಸಕಾಂಗದ ಮುಂದೆ ಮಂಡಿಸಲಾಗಿತ್ತು. ಪೂರಕ ಅಂದಾಜುಗಳ ಸಂವಾದಿಯಾಗಿ ವೆಚ್ಚ ಕಡಿತ, ಆದಾಯವರ್ಧನೆಯ ವಿವರಣಾಪಟ್ಟಿಯನ್ನು **ಕೋಷ್ಟಕ 2.11**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 2.11: ವೆಚ್ಚ ಕಡಿತ, ಆದಾಯ ವರ್ಧನೆ, ಪೂರಕ ಅಂದಾಜುಗಳಲ್ಲಿ ಪುಸ್ತಕ ಹೊಂದಾಣಿಕೆಗೆ ಅವಕಾಶಗಳ ವಿವರಗಳು**

**(ಕೋಟಿ ರೂಪಾಯಿಗಳಲ್ಲಿ)**

| | ಮೊದಲನೇ ಪೂರಕ ಅಂದಾಜು ₹2,916.42 | ಎರಡನೇ ಪೂರಕ ಅಂದಾಜು ₹3,447.81 | ಮೂರನೇ ಪೂರಕ ಅಂದಾಜು ₹7,590.94 |
|---|---|---|---|
| ಮೀಸಲು ನಿಧಿಯಿಂದ ಭರಿಸಿದ ಮೊತ್ತ | 606.98 | 667.33 | 450.00 |
| ಕೇಂದ್ರ ಸಹಾಯದ ಮೊತ್ತ | 7.00 | 396.31 | 816.87 |
| ಇತರೆ ಸ್ವೀಕೃತಿಗಳು | 612.04 | 0.29 | 342.74 |
| ಹೊಂದಾಣಿಕೆಗಳಿಂದ ಭರಿಸಿದ ಮೊತ್ತ | 635.17 | 6.23 | 0.00 |
| ನಿವ್ವಳ ನಗದು ಹೊರಹರಿವು | **1,055.23** | **2,377.65** | **5,981.33** |

*ಆಕರ: ಪೂರಕ ಅಂದಾಜುಗಳು*

ಆಯವ್ಯಯದಲ್ಲಿನ ಗುರಿಗಳಿಗೆ ಸರಿದೂಗಿಸಲು ಪೂರಕ ಅವಕಾಶಗಳನ್ನು ವೆಚ್ಚ ತಟಸ್ಥವನ್ನಾಗಿ ಮಾಡಿರಲಿಲ್ಲವೆಂಬುದನ್ನು ಕೋಷ್ಟಕದಿಂದ ಗಮನಿಸಬಹುದು.

### 2.7.4 ಅಸಮರ್ಪಕ ಪೂರಕ ಅವಕಾಶಗಳು

ಇತ್ತೀಚಿನ ವರ್ಷಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಗೆ ಬಿಡುಗಡೆಯಾದ ಮೊತ್ತದ ಒಂದು ಭಾಗವು ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಸ್ಥೆಗಳಲ್ಲಿ ಉಳಿದಿದ್ದು ಅದು ಮೂರು ಬ್ಯಾಂಕ್ ಖಾತೆಗಳಲ್ಲಿ ಇರುತ್ತದೆ. ಈ ವಿಷಯವಾಗಿ ವಿಶೇಷ ಲೆಕ್ಕಪರಿಶೋಧನೆ ನಡೆಸಲು ಮತ್ತು ವಿವಿಧ ಬ್ಯಾಂಕುಗಳಲ್ಲಿ ಬಳಕೆಯಾಗದೆ ಉಳಿದ ಮೊತ್ತದ ಕುರಿತಾಗಿಯೂ ತನಿಖೆ ನಡೆಸಲು ಸರ್ಕಾರವು ರಾಜ್ಯ ಲೆಕ್ಕಪತ್ರ ಇಲಾಖೆಯ ಒಂದು ತಂಡವನ್ನು ರಚಿಸಿತ್ತು. ಈ ವಿಶೇಷ ಲೆಕ್ಕಪರಿಶೋಧನೆಯಿಂದ, ಬಡ್ಡಿಯೂ ಸೇರಿದಂತೆ ಒಟ್ಟು ₹612.04 ಕೋಟಿಯಷ್ಟು ಮೊತ್ತವು ವಿವಿಧ ಅನುಸೂಚಿತ ಬ್ಯಾಂಕ್‌ಗಳ ಖಾತೆಗಳಲ್ಲಿ ಉಳಿದಿರುವುದಾಗಿ ತಿಳಿದುಬಂದಿತ್ತು. 04 ಮೇ 2016ರಂದು ನಡೆದ ಸಭೆಯಲ್ಲಿ ಸಚಿವ ಸಂಪುಟವು ಈ ಹಣವನ್ನು ಸಂಚಿತ ನಿಧಿಗೆ ಪಾವತಿಸಲು ಹಾಗೂ ಈ ಯೋಜನೆಯ ಉದ್ದೇಶಕ್ಕೆ ಪುನಃ ಮೊತ್ತವನ್ನು ಬಿಡುಗಡೆ ಮಾಡಲು ನಿರ್ಧರಿಸಿತ್ತು. ಮೇ 2016ರಲ್ಲಿ ಈ ಮೊತ್ತವು ಸಂಚಿತ ನಿಧಿಗೆ (ಸ್ವೀಕೃತಿ ಶೀರ್ಷಿಕೆ 0515) ಪಾವತಿಸಲಾಗಿತ್ತು ಮತ್ತು ಪೂರಕ ಅಂದಾಜು–1ರಲ್ಲಿ ಅದೇ ಮೊತ್ತಕ್ಕೆ ಅವಕಾಶವನ್ನು ಮಾಡಲಾಗಿತ್ತು. ಹಿಂದಿನ ವರ್ಷಗಳಲ್ಲಿ ಬಿಡುಗಡೆ ಮಾಡಿದ್ದ ಮೊತ್ತವು ಸಂಚಿತ ನಿಧಿಗೆ ವೆಚ್ಚವೆಂದು ದಾಖಲಾಗಿರುವುದರಿಂದ ಹಾಗೂ ಹಿಂದಿನ ವರ್ಷಗಳ ವಿತ್ತೀಯ ಸೂಚಕಗಳನ್ನು ಅದಕ್ಕನುಗುಣವಾಗಿ ಲೆಕ್ಕಹಾಕಿರುವುದರಿಂದ ಬೇಡಿಕೆಯನ್ನು ಪಡೆದಿರುವ ಸರ್ಕಾರದ ಕ್ರಮವು ಅಸಮರ್ಪಕವಾಗಿತ್ತು.

ಇದಕ್ಕೆ ಉತ್ತರವಾಗಿ (ಜೂನ್/ಡಿಸೆಂಬರ್ 2017) ಇಲಾಖೆಯು, ಸಚಿವ ಸಂಪುಟದ ನಿರ್ಧಾರದಂತೆ ಮೊತ್ತವನ್ನು ಸಂಚಿತ ನಿಧಿಗೆ ಪಾವತಿಸಲಾಗಿತ್ತು ಹಾಗೂ ಬದ್ಧಕಾಮಗಾರಿಗಳಿಗೆ ಹಣದ ಕೊರತೆಯಿದ್ದಿದ್ದರಿಂದ ಪೂರಕ ಅಂದಾಜು–1ರಲ್ಲಿ ಅವಕಾಶ ಒದಗಿಸಲಾಗಿತ್ತೆಂದು ತಿಳಿಸಿದೆ.

ಇದರಿಂದ ಒಂದೇ ಕಾಮಗಾರಿಗೆ ಎರಡು ಬಾರಿ ಅನುದಾನದ ಅವಕಾಶ ಒದಗಿಸಿದಂತಾಗುವುದು ಹಾಗೂ ಪ್ರಸಕ್ತ ವರ್ಷ ಮತ್ತು ಹಿಂದಿನ ವರ್ಷಗಳ ವಿತ್ತೀಯ ಸೂಚಕಗಳು ದೋಷಪೂರಿತವಾಗುವುದರಿಂದ ಇಲಾಖೆಯ ಈ ಉತ್ತರವು ಸ್ವೀಕಾರಾರ್ಹವಲ್ಲ.

### 2.7.5 ಅನಗತ್ಯ ಪೂರಕ ಅವಕಾಶಗಳು

16 ಅನುದಾನಗಳ ಅಡಿಯಲ್ಲಿ 15 ಪ್ರಸಂಗಗಳಲ್ಲಿ ಒದಗಿಸಿದ ಒಟ್ಟು ₹2,047.40 ಕೋಟಿಗಳಷ್ಟು ಪೂರಕ ಅವಕಾಶವು ಅನಗತ್ಯವೆಂದು ಸಾಧಿತವಾಗಿದೆ. **(ಅನುಬಂಧ 2.5)**

### 2.7.6 ಅಧಿಕವಾದ ಪೂರಕ ಅವಕಾಶಗಳು

ಹತ್ತು ಅನುದಾನಗಳಿಗೆ ಸಂಬಂಧಿಸಿದ ಏಳು ಉದ್ದೇಶ ಶೀರ್ಷಿಕೆಗಳಲ್ಲಿ ಪಡೆದ ₹203.82 ಕೋಟಿಗಳ ಮೊತ್ತದ ಪೂರಕ ಅನುದಾನವು ಅಗತ್ಯಕ್ಕಿಂತ ಅಧಿಕವಾಗಿದೆ. ಅಂತಿಮವಾಗಿ ₹112.52 ಕೋಟಿಗಳಷ್ಟು ಅವಕಾಶವು ಬಳಕೆಯಾಗದೆ ಉಳಿದಿತ್ತು (**ಅನುಬಂಧ 2.6**).

ಆರ್ಥಿಕ ಇಲಾಖೆಯು ಒಂದು ವೇಳೆ ಪೂರಕ ಅಂದಾಜಿನಲ್ಲಿ ಅವಕಾಶವನ್ನು ಒದಗಿಸಿರದಿದ್ದಲ್ಲಿ, ಆಗ ಖಚಿತವಾಗಿ ಅಧಿಕ ವೆಚ್ಚದಲ್ಲಿ ಪರಿಣಮಿಸುತ್ತಿತ್ತು ಎಂಬುದಾಗಿ ಉತ್ತರಿಸಿದೆ (ಡಿಸೆಂಬರ್ 2017). ಅಲ್ಲದೆ, ಆಯವ್ಯಯವು ಒಂದು ಊಹಾತ್ಮಕ ಕಾರ್ಯವಾಗಿದ್ದು, ವೆಚ್ಚವು ಆಡಳಿತಾತ್ಮಕವಾದ ಹಲವು ಅಂಶಗಳನ್ನು ಅವಲಂಬಿಸಿರುತ್ತದೆ ಎಂದೂ ತಿಳಿಸಿದೆ. ಪೂರಕ ಅಂದಾಜಿನಲ್ಲಿ ಪಡೆದ ಶೇಕಡಾ 40ಕ್ಕಿಂತಲೂ ಹೆಚ್ಚಿನ ಅವಕಾಶವು ಬಳಕೆಯಾಗದೇ ಉಳಿದುದರಿಂದ ಈ ಉತ್ತರವು ಸಮರ್ಥನೀಯವಲ್ಲ.

### 2.7.7 ಅಪರ್ಯಾಪ್ತ ಪೂರಕ ಅವಕಾಶಗಳು

ಏಳು ಅನುದಾನಗಳಿಗೆ ಸಂಬಂಧಿಸಿದ ಒಂಬತ್ತು ಉದ್ದೇಶ ಶೀರ್ಷಿಕೆಗಳಡಿ ಪಡೆದ ₹1,055.39 ಕೋಟಿಗಳ ಪೂರಕ ಅವಕಾಶವು ಪರ್ಯಾಪ್ತವಾಗಿಲ್ಲವೆಂದು ಸಾಧಿತವಾಗಿದೆ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ₹453.02 ಕೋಟಿಗಳ ವೆಚ್ಚವು ಅವಕಾಶ ಸಾಲದೆ ಅನಾವೃತವಾಗಿ ಉಳಿದಿತ್ತು (ಅನುಬಂಧ 2.7).

### 2.7.8 ಮೊತ್ತಗಳ ಪುನರ್ವಿನಿಯೋಗಗಳು

ವಿತರಣೆಗೆ ಬೇಕಾದ ಅನುದಾನ ಅಥವಾ ವಿನಿಯೋಗಗಳು ಆಯಾ ಲೆಕ್ಕಗಳಡಿಯಲ್ಲಿನ ಕ್ರಿಯಾಶೀರ್ಷಿಕೆ/ ಉಪಶೀರ್ಷಿಕೆ/ ಸವಿವರಶೀರ್ಷಿಕೆ/ ಉದ್ದೇಶಸೂಚಕ ಶೀರ್ಷಿಕೆಗಳ ಪ್ರಕಾರ ಹಂಚಿಕೆಯಾಗಿರುತ್ತದೆ. ಸಕ್ಷಮ ಕಾರ್ಯಪಾಲಕ ಅಧಿಕಾರಿಗಳು ಸಂಬಂಧಿಸಿದ ಆರ್ಥಿಕ ವರ್ಷದ ಅಂತ್ಯದೊಳಗೆ, ಆಯಾ ಅನುದಾನ ಅಥವಾ ವಿನಿಯೋಗಗಳ ಒಳಗೆ ವಿನಿಯೋಗದ ಪ್ರಾಥಮಿಕ ಘಟಕಗಳ ನಡುವೆ ಮೊತ್ತಗಳ ಪುನರ್ವಿನಿಯೋಗಕ್ಕೆ ಅನುಮೋದನೆ ನೀಡಬಹುದಾಗಿದೆ. ಸಕ್ಷಮ ಅಧಿಕಾರಿಯು ಒಂದು ಅನುದಾನ/ವಿನಿಯೋಗದಲ್ಲಿಯ ಒಂದು ಘಟಕದಲ್ಲಿನ ಉಳಿಕೆಯನ್ನು ಅದೇ ಪುರಸ್ಕೃತ ಅನುದಾನ ಅಥವಾ ಪ್ರಭೃತ ವಿನಿಯೋಗದಲ್ಲಿನ ಮತ್ತೊಂದು ಘಟಕದಲ್ಲಿನ ಹೆಚ್ಚಳವನ್ನು ಭರಿಸಲು ವರ್ಗಾವಣೆ ಮಾಡುವುದು ಪುನರ್ವಿನಿಯೋಗವೆನಿಸುತ್ತದೆ. ಅನುದಾನದ ಯಾವ ಘಟಕದಿಂದ ಮೊತ್ತಗಳನ್ನು ವರ್ಗಾವಣೆ ಮಾಡಲಾಗುವುದೋ ಆ ಘಟಕದಲ್ಲಿನ ಮೊತ್ತಗಳು ಪೂರ್ಣವಾಗಿ ಬಳಕೆಯಾಗುವುದಿಲ್ಲ ಅಥವಾ ಅದು ಉಳಿತಾಯದಲ್ಲಿ ಪರಿಣಮಿಸುತ್ತದೆ ಎಂದು ನಿರೀಕ್ಷಿಸಿದ್ದರೆ ಅಥವಾ ತಿಳಿದಿದ್ದರೆ ಮಾತ್ರ ಮೊತ್ತಗಳ ಪುನರ್ವಿನಿಯೋಗವನ್ನು ಮಾಡಬಹುದಾಗಿದೆ.

### 2.7.9 ತಡವಾಗಿ ತಲುಪಿದ ಪುನರ್ವಿನಿಯೋಗ ಮತ್ತು ಅಧ್ಯರ್ಪಣೆ ಆದೇಶಗಳು

ಅನುದಾನ ನಿಯಂತ್ರಣ ಪ್ರಾಧಿಕಾರಗಳಿಂದ ಜಾರಿಯಾದ ಪುನರ್ವಿನಿಯೋಗ ಆದೇಶಗಳನ್ನು ಲೆಕ್ಕದಲ್ಲಿ ಸೇರಿಸಲು ಆ ವರ್ಷದ ಲೆಕ್ಕಗಳನ್ನು ಅಂತ್ಯಗೊಳಿಸುವುದಕ್ಕೆ ಮೊದಲೇ ಮಹಾಲೇಖಾಪಾಲರ (ಲೆ ಮತ್ತು ಹ) ಕಛೇರಿಯಲ್ಲಿ ಸ್ವೀಕೃತಗೊಂಡಿರಬೇಕಾಗಿರುತ್ತದೆ (30.06.2017). ಆದರೆ, ₹33.37 ಕೋಟಿಗಳ ಮೊತ್ತವನ್ನೊಳಗೊಂಡ ಐದು ಅನುದಾನಗಳಲ್ಲಿಯ ಆರು ಪುನರ್ವಿನಿಯೋಗ ಆದೇಶಗಳನ್ನು ನಿಗದಿತ ದಿನಾಂಕದ ನಂತರ ಪಡೆದಿರುವುದನ್ನು ಗಮನಿಸಲಾಗಿತ್ತು. ಅದೇ ರೀತಿಯಲ್ಲಿ, ₹395.54 ಕೋಟಿಗಳ ಮೊತ್ತವನ್ನೊಳಗೊಂಡ ಎಂಟು ಅನುದಾನಗಳಲ್ಲಿಯ 31 ಅಧ್ಯರ್ಪಣೆ ಆದೇಶಗಳನ್ನು ನಿಗದಿತ ದಿನಾಂಕದ ನಂತರ ಪಡೆಯಲಾಗಿದೆ. ಧನವಿನಿಯೋಗ ಲೆಕ್ಕದಲ್ಲಿಯ ವ್ಯಾಖ್ಯಾನಗಳು ಉಳಿತಾಯ/ಹೆಚ್ಚುವರಿಗೆ ಆಧಾರದ ಸಹಿತ ಕಾರಣಗಳನ್ನು ನೀಡುವುದರಿಂದ ಅಂತಹ ಆದೇಶಗಳನ್ನು ಮಹಾಲೇಖಾಪಾಲರ(ಲೆ ಮತ್ತು ಹ) ಕಛೇರಿಗೆ ಸಮಯಕ್ಕೆ ಸರಿಯಾಗಿ ತಲುಪುವಂತೆ ಜಾಗ್ರತೆ ವಹಿಸಬೇಕಾಗುತ್ತದೆ.

### 2.7.10 ಅನವಶ್ಯಕ/ ಅಧಿಕತಮ/ ಅಪರ್ಯಾಪ್ತ ಮೊತ್ತದ ಪುನರ್ವಿನಿಯೋಗಗಳು

2015–16ನೇ ವರ್ಷದಲ್ಲಿ 73 ಪ್ರಕರಣಗಳಿಗೆ ಹೋಲಿಸಿದರೆ, 2016–17ರಲ್ಲಿ 62 ಪ್ರಕರಣಗಳಲ್ಲಿ ಪುನರ್ವಿನಿಯೋಗಗಳನ್ನು ಅನುಚಿತವಾಗಿ ಮಾಡಲಾಗಿದ್ದು, ಇವು ಆಯವ್ಯಯದ ಅವಕಾಶಗಳು ಪೂರ್ಣವಾಗಿ ಬಳಕೆಯಾಗದೆ ಉಳಿದಿರುವುದರಲ್ಲಿ ಅಥವಾ ಪ್ರತಿ ಪ್ರಕರಣದಲ್ಲೂ ಅವಕಾಶವನ್ನು ಮೀರಿ ಬಳಕೆ ಆಗಿರುವುದರಲ್ಲಿ ಫಲಿತವಾಗಿದ್ದು (**ಅನುಬಂಧ 2.8**) ಸಾರಾಂಶವನ್ನು ಕೆಳಗೆ ನೀಡಲಾಗಿದೆ.

28 ಪ್ರಕರಣಗಳಲ್ಲಿ ಬಳಕೆಯಾಗದೆ ಉಳಿಯುವ ಅವಕಾಶವನ್ನು ಸರಿಯಾಗಿ ಲೆಕ್ಕ ಹಾಕಿರಲಿಲ್ಲವಾದ್ದರಿಂದ ಪುನರ್ವಿನಿಯೋಗದ ಮೂಲಕ ₹560.88 ಕೋಟಿಗಳನ್ನು ಹಿಂಪಡೆದ ನಂತರವೂ ₹674.87 ಕೋಟಿಗಳು ಬಳಕೆಯಾಗದೆ ಉಳಿದಿತ್ತು.

ಒಂಬತ್ತು ಪ್ರಕರಣಗಳಲ್ಲಿ, ₹81.60 ಕೋಟಿ ಹೆಚ್ಚುವರಿ ಮೊತ್ತಗಳನ್ನು ಪುನರ್ವಿನಿಯೋಗದ ಮೂಲಕ ಒದಗಿಸಿದ್ದು, ಅಂತಿಮ ವೆಚ್ಚವು ಅವಕಾಶಕ್ಕಿಂತಲೂ ₹70.88 ಕೋಟಿಯಷ್ಟು ಹೆಚ್ಚಾಗಿದ್ದು ಪುನರ್ವಿನಿಯೋಗದ ಮೂಲಕ ಒದಗಿಸಿದ ಮೊತ್ತದ ಕೊರತೆಯುಂಟಾಗಿದೆ ಎಂಬುದು ರುಜುವಾತಾಗಿದೆ.

22 ಪ್ರಕರಣಗಳಲ್ಲಿ ಪುನರ್ವಿನಿಯೋಗದ ಮೂಲಕ ₹497.20 ಕೋಟಿಗಳನ್ನು ಹೆಚ್ಚುವರಿಯಾಗಿ ಒದಗಿಸಿದ್ದು, ಒಟ್ಟಾರೆ ₹221.95 ಕೋಟಿಗಳಷ್ಟು ಬಳಕೆಯಾಗದೆ ಉಳಿದುಕೊಂಡಿತ್ತು.

ಮೂರು ಪ್ರಕರಣಗಳಲ್ಲಿ ₹31.78 ಕೋಟಿಗಳನ್ನು ಹಿಂಪಡೆದಿದ್ದು ಅಂತಿಮವಾಗಿ ₹21.68 ಕೋಟಿ ಅಧಿಕ ವೆಚ್ಚವಾಗಿ ಪರಿಣಮಿಸಿತು.

ಆರ್ಥಿಕ ಇಲಾಖೆಯು ಒಂದು ನಿರ್ದಿಷ್ಟ ಶೀರ್ಷಿಕೆಯಡಿಯಲ್ಲಿ ಉಳಿತಾಯವನ್ನು ನಿರೀಕ್ಷಿಸಿ, ಆ ಶೀರ್ಷಿಕೆಯಿಂದ ಪುನರ್ವಿನಿಯೋಗ ಮಾಡಲಾಗಿದ್ದು, ಒಂದು ವೇಳೆ ಪುನರ್ವಿನಿಯೋಗ ಮಾಡಿರದಿದ್ದರೆ ಆ ಶೀರ್ಷಿಕೆಯಡಿಯಲ್ಲಿ ಇನ್ನೂ ಹೆಚ್ಚಿನ ಅವಕಾಶವು ಉಳಿಯುವಂತಾಗುತ್ತಿತ್ತು ಎಂದು ಉತ್ತರಿಸಿದೆ (ಡಿಸೆಂಬರ್ 2017). ಕೆಲವು ಶೀರ್ಷಿಕೆಗಳಡಿಯಲ್ಲಿ ಅನಾವಶ್ಯಕ, ಅಧಿಕತಮ ಹಾಗೂ ಅಪರ್ಯಾಪ್ತವಾದ ಪುನರ್ವಿನಿಯೋಗವಾಗಿರುವುದನ್ನು ಗಮನಿಸಿರುವುದರಿಂದ ಇಲಾಖೆಯ ಉತ್ತರವು ಸಮಾಧಾನಕರವಾಗಿರುವುದಿಲ್ಲ.

### 2.7.11 ದೋಷಪೂರ್ಣ ಪುನರ್ವಿನಿಯೋಗಗಳು

ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 309, 312 ಹಾಗೂ 315(ಎ)ರ ಉಪಬಂಧಗಳಲ್ಲಿ ಪುನರ್ವಿನಿಯೋಗವು ಸ್ವಯಂ ಸಮತೋಲನ ಹೊಂದಿಲ್ಲದಿದ್ದರೆ ಹಾಗೂ ನಿಗದಿತ ನಮೂನೆಯಲ್ಲಿ (ನಮೂನೆ ಸಂ.22ಎ – ಕಆಸಂ) ಇರದಿದ್ದಲ್ಲಿ, ಶಾಸನಸಭೆ ಅನುಮೋದಿಸಿರುವ ಒಂದು ಪುರಸ್ಕೃತ ಅನುದಾನದಿಂದ ಮತ್ತೊಂದು ಅಂತಹ ಅನುದಾನಕ್ಕೆ, ಪುರಸ್ಕೃತ ವೆಚ್ಚ ಬಾಬ್ತುಗಳಿಂದ ಪ್ರಭೃತ ವೆಚ್ಚ ಬಾಬ್ತುಗಳಿಗೆ, ಬಂಡವಾಳದಿಂದ ರಾಜಸ್ವಕ್ಕೆ, ರಾಜಸ್ವದಿಂದ ಬಂಡವಾಳಕ್ಕೆ, ಪುನರ್‌ವಿನಿಯೋಗ ಮಾಡದಂತೆ ನಿಯಮಗಳನ್ನು ವಿಧಿಸಿರುತ್ತದೆ. 2016–17ರಲ್ಲಿ, ₹2,456.73 ಕೋಟಿ ಮೊತ್ತದ 328 ಪುನರ್ವಿನಿಯೋಗ ಆದೇಶಗಳು ಜಾರಿಯಾಗಿದ್ದು ಅವುಗಳಲ್ಲಿ ₹907.68 ಕೋಟಿ ಮೊತ್ತದ 49 ಪುನರ್ವಿನಿಯೋಗ ಆದೇಶಗಳನ್ನು ಅವು ಮೇಲಿನ ನಿಯಮಗಳಿಗೆ ಅನುಸಾರವಾಗಿಲ್ಲವಾದ್ದರಿಂದ ಲೆಕ್ಕದಲ್ಲಿ ಪರಿಗಣಿಸಲಾಗಿಲ್ಲ. (**ಅನುಬಂಧ 2.9**).

ದೋಷಪೂರ್ಣ ಪುನರ್ವಿನಿಯೋಗ ಆದೇಶಗಳ ಪರಿಶೀಲನೆಯಿಂದ ₹32.45 ಕೋಟಿ ಮೊತ್ತವನ್ನೊಳಗೊಂಡ 25 ಪ್ರಕರಣಗಳಲ್ಲಿ, ಪುನರ್ವಿನಿಯೋಗ ವಿವರಣಾ ಪಟ್ಟಿಗಳಲ್ಲಿದ್ದ ಲೆಕ್ಕಗಳ ತಪ್ಪಿನಿಂದಾಗಿ ಅವು ತಿರಸ್ಕೃತವಾಗಿರುವುದು ತಿಳಿದು ಬಂದಿರುತ್ತದೆ. ಆಡಳಿತಾತ್ಮಕ ಇಲಾಖೆಗಳು ಆದೇಶಗಳನ್ನು ಮಹಾಲೇಖಾಪಾಲರ(ಲೆ ಮತ್ತು ಹ) ಒಪ್ಪಿಗೆಗೆ ಕಳುಹಿಸಿಕೊಡುವ ಮೊದಲು ಅವುಗಳನ್ನು ಸರಿಯಾಗಿ ಪರಿಶೀಲಿಸುವ ಅಗತ್ಯವಿದೆ.

ಆರ್ಥಿಕ ಇಲಾಖೆಯ ಒಪ್ಪಿಗೆಯೊಂದಿಗೆ ಜಾರಿಯಾದ ₹362.73 ಕೋಟಿಗಳನ್ನೊಳಗೊಂಡ ಐದು ಪ್ರಕರಣಗಳಲ್ಲಿ ಪುನರ್ವಿನಿಯೋಗವು ರಾಜಸ್ವ ಮತ್ತು ಬಂಡವಾಳ ಶೀರ್ಷಿಕೆಗಳ ನಡುವೆ ಇದ್ದುದನ್ನು

ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾಗಿತ್ತು. ರಾಜಸ್ವ, ಬಂಡವಾಳಗಳ ಅಡಿಯಲ್ಲಿ ಹಂಚಿಕೆಯನ್ನು ಪ್ರತ್ಯೇಕವಾಗಿ ಪಡೆದಿದ್ದರಿಂದ, ಇಂತಹ ಆದೇಶಗಳ ಪರಿಣಾಮವು ಬೇಡಿಕೆಯ ಅಂತಿಮ ಉದ್ದೇಶವನ್ನು ಬದಲಾಯಿಸುವುದಾಗಿದೆ. ಆದ್ದರಿಂದ ಅವುಗಳನ್ನು ತಿರಸ್ಕರಿಸಲಾಗಿದೆ. ಆರ್ಥಿಕ ಇಲಾಖೆಯು ಇದಕ್ಕೆ ಉತ್ತರವಾಗಿ ಆಸ್ತಿ ಸೃಜನೆಯ ಉದ್ದೇಶದಿಂದ ಇದನ್ನು ಮಾಡಲಾಗಿದ್ದು, ಇಲ್ಲದಿದ್ದಲ್ಲಿ ಈ ಮೊತ್ತವು ರಾಜಸ್ವದಡಿಯಲ್ಲಿ ಉಳಿತಾಯವಾಗುತ್ತಿತ್ತು ಎಂದು ತಿಳಿಸಿದೆ. ಈ ಉತ್ತರವು ಮೇಲೆ ತಿಳಿಸಿದ ಕಾರಣಗಳಿಂದ ಒಪ್ಪಿಕೊಳ್ಳಲಾಗುವುದಿಲ್ಲ.

ಖಜಾನೆಯು ಪುನರ್ವಿನಿಯೋಗ ಆದೇಶಗಳನ್ನು (ಗಣಕ ವ್ಯವಸ್ಥೆಯಲ್ಲಿ) ತುಂಬಿಸಿ ಬಂಡವಾಳ ಶೀರ್ಷಿಕೆಯಡಿಯಲ್ಲಿ ಮೊತ್ತವನ್ನು ಸೆಳೆಯಲು ಅವಕಾಶ ಮಾಡಿದೆ ಎಂಬುದನ್ನೂ ಗಮನಿಸಲಾಗಿತ್ತು. ಬಂಡವಾಳ ಶೀರ್ಷಿಕೆಯ ಅಡಿಯಲ್ಲಿ ಸಾಕಷ್ಟು ಅವಕಾಶದ ಕೊರತೆಯಿಂದಾಗಿ ವೆಚ್ಚವು ಅವಕಾಶವನ್ನು ಮೀರಿದ್ದು ಇದು ಸಕ್ರಮಗೊಳ್ಳಬೇಕಾದ ಅವಶ್ಯಕತೆಯಿದೆ (ಬೇಡಿಕೆ ಸಂಖ್ಯೆ 5– ಗೃಹ ಮತ್ತು ಸಾರಿಗೆ).

ಆಯವ್ಯಯ ಕೈಪಿಡಿಯ ಕಂಡಿಕೆ 277ರ ಪ್ರಕಾರ, ಸರ್ಕಾರದ ನಿರ್ದಿಷ್ಟ ಅನುಮೋದನೆ ಪಡೆದ ಪ್ರಕರಣಗಳನ್ನು ಹೊರತುಪಡಿಸಿ, ಯೋಜನೆವೆಚ್ಚದ ಅವಕಾಶದ ಬಾಬ್ತನ್ನು ಯೋಜನೇತರಕ್ಕೂ, ಯೋಜನೇತರ ವೆಚ್ಚದ ಬಾಬ್ತಿನ ಅವಕಾಶವನ್ನು ಯೋಜನೆಗೂ ತಿರುಗಿಸಕೂಡದು. ಆದರೆ, ₹211.04 ಕೋಟಿ ಮೊತ್ತದ ನಾಲ್ಕು ಪ್ರಕರಣಗಳಲ್ಲಿ ಆಯವ್ಯಯ ಕೈಪಿಡಿಯ ನಿಯಮಗಳನ್ನು ಉಲ್ಲಂಘಿಸಿ ಪುನರ್ವಿನಿಯೋಗದ ಆದೇಶಗಳನ್ನು ಹೊರಡಿಸಿರುವ ಕಾರಣದಿಂದ ಮಹಾಲೇಖಪಾಲರ(ಲೆ ಮತ್ತು ಹ) ಕಛೇರಿಯಲ್ಲಿ ಒಪ್ಪಿಕೊಳ್ಳಲಿಲ್ಲ ಎಂಬುದನ್ನು ಗಮನಿಸಲಾಗಿದೆ.

ಲೆಕ್ಕ ಪರಿಶೋಧನೆಯ ಆಕ್ಷೇಪಣೆಗಳನ್ನು ಒಪ್ಪಿಕೊಂಡಿರುವ ಆರ್ಥಿಕ ಇಲಾಖೆಯು ಸ್ವಯಂ ಸಮತೋಲನ, ಅಸಮರ್ಪಕ ಆಯವ್ಯಯ ಅವಕಾಶ ಮುಂತಾದ ತಾಂತ್ರಿಕ ದೋಷಗಳನ್ನು ತಪ್ಪಿಸುವುದಕ್ಕಾಗಿ ಪುನರ್ವಿನಿಯೋಗ ಮಾದರಿಯನ್ನು ರೂಪಿಸಿದ್ದು, ಇದು ಅಂತಹ ತಪ್ಪುಗಳು ಸಂಭವಿಸದಂತೆ ಎಚ್ಚರ ವಹಿಸುವುದೆಂದೂ ಹಾಗೂ ಇನ್ನು ಮುಂದೆ ಇಂತಹ ತಪ್ಪುಗಳು ಸಂಭವಿಸುವುದಿಲ್ಲವೆಂದೂ ತಿಳಿಸಿದೆ (ಡಿಸೆಂಬರ್ 2017).

### 2.7.12 ಬಳಕೆಯಾಗದ ಅವಕಾಶಗಳ ಅಧ್ಯರ್ಪಣೆ

ವೆಚ್ಚ ಮಾಡಲು ಅಧಿಕಾರವಿರುವ ಇಲಾಖೆಗಳು ಆಯವ್ಯಯ ಅವಕಾಶದಲ್ಲಿ ಉಳಿಕೆಯಾಗುವುದನ್ನು ನಿರೀಕ್ಷಿಸಿದಂತೆಲ್ಲಾ ಅನುದಾನ/ವಿನಿಯೋಗಗಳನ್ನು ಅಥವಾ ಅದರಲ್ಲಿನ ಭಾಗವನ್ನು ಆರ್ಥಿಕ ಇಲಾಖೆಗೆ ಅಧ್ಯರ್ಪಣೆ ಮಾಡಬೇಕಾಗಿರುತ್ತದೆ

#### ಬಳಕೆಯಾಗದ ಅವಕಾಶಗಳನ್ನು ಅಧ್ಯರ್ಪಣೆ ಮಾಡದಿರುವುದು

18 ಅನುದಾನಗಳು/ವಿನಿಯೋಗಗಳಲ್ಲಿ ಬಳಕೆಯಾಗದೆ ಉಳಿದ ₹4,387.13 ಕೋಟಿಗಳ ಸಂಪೂರ್ಣ ಅವಕಾಶವನ್ನು ಅಧ್ಯರ್ಪಣೆ ಮಾಡಿರಲಿಲ್ಲ (**ಅನುಬಂಧ 2.10**).

ಮುಂದುವರೆದು, 29 ಅನುದಾನಗಳು/ವಿನಿಯೋಗಗಳಲ್ಲಿ ಒಟ್ಟು ಬಳಕೆಯಾಗದೆ ಉಳಿದ ಮೊತ್ತದಲ್ಲಿ (₹14,092.72 ಕೋಟಿ) ಕೇವಲ ಭಾಗಶ: ಅಧ್ಯರ್ಪಣೆಯಾಗಿದ್ದು ಸುಮಾರು ಶೇಕಡ 85ರಷ್ಟು ಅಧ್ಯರ್ಪಣೆಯಾಗದೆ ಉಳಿದಿದ್ದು (₹11,994.81 ಕೋಟಿ) ವಿವರಗಳನ್ನು **ಅನುಬಂಧ 2.11**ರಲ್ಲಿ ನೀಡಲಾಗಿದೆ. ಅಲ್ಲದೆ, ₹5 ಕೋಟಿಗಿಂತಲೂ ಹೆಚ್ಚಾದ ಅಧ್ಯರ್ಪಣೆ ಮಾಡಿದ್ದ 15 ಅನುದಾನಗಳಲ್ಲಿ ₹1,789.36 ಕೋಟಿಗಳ ಮೊತ್ತವನ್ನು ಆರ್ಥಿಕ ವರ್ಷದ ಕೊನೆಯ ಎರಡು ಕೆಲಸದ ದಿನಗಳಂದು ಅಧ್ಯರ್ಪಣೆ ಮಾಡಲಾಗಿದ್ದು, ಇದು ಹಣಕಾಸು ನಿಯಂತ್ರಣದ ಅಪರ್ಯಾಪ್ತತೆಯನ್ನು ಸೂಚಿಸುತ್ತದೆ (**ಅನುಬಂಧ 2.12**).

### 2.7.13 ಗಣನೀಯ ಅಧ್ಯರ್ಪಣೆಗಳು

₹1,305.10 ಕೋಟಿಗಳ ಒಟ್ಟು ಅವಕಾಶದ 41 ಪ್ರಕರಣಗಳಲ್ಲಿ ₹989.89 ಕೋಟಿಗಳು (ಶೇಕಡ 76) ಅಧ್ಯರ್ಪಣೆಯಾಗಿದ್ದು, ಇದರಲ್ಲಿ 11 ಪ್ರಕರಣಗಳಲ್ಲಿ ಅಧ್ಯರ್ಪಣೆಯು (₹154.91 ಕೋಟಿಗಳು) ಶೇಕಡ ನೂರರಷ್ಟಿತ್ತು (**ಅನುಬಂಧ 2.13**). ಈ ಅಧ್ಯರ್ಪಣೆಗಳು ಪಿಲಿಕುಳ ನಿಸರ್ಗಧಾಮದಲ್ಲಿ ಸಾಗರೋದ್ಯಾನದ ನಿರ್ಮಾಣಕ್ಕೆ ಅನುಮೋದನೆ ಸಿಗದಿರುವುದು, 2017–18ರಲ್ಲಿ

ಹೊಂದಾಣಿಕೆಯಾಗಬೇಕಿದ್ದ ಖಾತರಿ ಶುಲ್ಕದ ಪರಿಷ್ಕೃತ ಮೊತ್ತ, ಮರಳು ಗಣಿಗಾರಿಕೆಯ ಟೆಂಡರುಗಳನ್ನು ಕರೆಯುವಲ್ಲಿ ಆದ ವಿಳಂಬ, ಮಾರ್ಗಸೂಚಿಗಳು ಸ್ವೀಕೃತವಾಗದಿರುವುದು ಇತ್ಯಾದಿಗಳಿಂದ ಉಂಟಾಗಿದೆ ಎಂದು ಹೇಳಲಾಗಿದೆ.

## 2.8 ಸಾದಿಲ್ವಾರು ನಿಧಿ

ಭಾರತದ ಸಂವಿಧಾನದ ಅನುಚ್ಛೇದ 267(2) ಮತ್ತು 283(2) ನಿಬಂಧನೆಗಳಡಿಯಲ್ಲಿ, ರಾಜ್ಯ ಸರ್ಕಾರದ ಸಾದಿಲ್ವಾರು ನಿಧಿ ಅಧಿನಿಯಮ, 1957ರಡಿ ರಾಜ್ಯ ಸಾದಿಲ್ವಾರು ನಿಧಿಯನ್ನು ಸ್ಥಾಪಿಸಲಾಗಿತ್ತು. ಶಾಸನ ಸಭೆಯ ಅನುಮೋದನೆಯನ್ನು ಪಡೆಯುವವರೆಗೂ ಮುಂದೂಡಿಕೆಯು ಅನಪೇಕ್ಷಣೀಯವಾದ, ಅನಿರೀಕ್ಷಿತ–ತುರ್ತುಸ್ವರೂಪದ ವೆಚ್ಚಗಳನ್ನು ಭರಿಸಲು ಮಾತ್ರ ಈ ನಿಧಿಯಿಂದ ಮುಂಗಡಗಳನ್ನು ಪಡೆಯಬಹುದಾಗಿದೆ. ಈ ನಿಧಿಯು ಮುಂಗಡ ಹಣದ ಸ್ವರೂಪದಲ್ಲಿದ್ದು, ಇದರ ಮೂಲಧನವು ₹80 ಕೋಟಿಗಳಷ್ಟಿದೆ. ಸಾದಿಲ್ವಾರು ನಿಧಿಯಿಂದ ಸೆಳೆದ ಹಣವನ್ನು ಮುಂದೆ ಪೂರಕ ಅವಕಾಶಗಳ ಮೂಲಕ ನಿಧಿಗೆ ಪುನರ್ ಭರ್ತಿಮಾಡಲಾಗುವುದು.

2016–17ರ ವರ್ಷಾವಧಿಯಲ್ಲಿ ₹7.64 ಕೋಟಿಗಳನ್ನು ಸಾದಿಲ್ವಾರು ನಿಧಿಯಿಂದ ಬಿಡುಗಡೆ ಮಾಡಲಾಗಿದ್ದು ಈ ಮೊತ್ತವನ್ನು ತರುವಾಯ ಪೂರಕ ಅವಕಾಶಗಳ ಮೂಲಕ ಪುನರ್ ಭರ್ತಿ ಮಾಡಲಾಗಿದೆ.

## 2.9 ಆಯ್ದ ಅನುದಾನಗಳ ಸಮೀಕ್ಷೆಯ ಫಲಿತಾಂಶಗಳು

ಆಯ್ದ ಎರಡು ಅನುದಾನಗಳಿಗೆ ಸಂಬಂಧಿಸಿದಂತೆ 2014–15ರಿಂದ 2016–17ರವರೆಗಿನ ಮೂರು ವರ್ಷಗಳ ಅವಧಿಯಲ್ಲಿ ಆಯವ್ಯಯ ವಿಧಾನ ಹಾಗೂ ವೆಚ್ಚ ನಿಯಂತ್ರಣದ ಸಮೀಕ್ಷೆಯಲ್ಲಿ ಕೆಳಗಿನ ಅಂಶಗಳನ್ನು ಗಮನಿಸಲಾಗಿದೆ.

### 2.9.1 ಅನುದಾನ ಸಂಖ್ಯೆ 11–ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

#### 2.9.1.1 ಪೀಠಿಕೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು, ವಿವಿಧ ಕಾರ್ಯನೀತಿಗಳ ಮತ್ತು ಯೋಜನೆಗಳ ಮೂಲಕ ಸಾಮಾಜಿಕ, ಆರ್ಥಿಕ ರಾಜಕೀಯವಾಗಿ ಮಹಿಳೆಯರನ್ನು ಸಬಲೀಕರಿಸುವುದು, ಮಹಿಳಾ ಸಂಬಂಧಿತ ಅಂಶಗಳನ್ನು ಮುಖ್ಯವಾಹಿನಿಗೆ ತರುವುದು, ಅವರ ಹಕ್ಕುಗಳನ್ನು ಕುರಿತು ಜಾಗೃತಿಯನ್ನು ಮೂಡಿಸುವುದು ಹಾಗೂ ಸಾಂಸ್ಥಿಕ ಮತ್ತು ಶಾಸನಬದ್ಧ ಬೆಂಬಲದೊಂದಿಗೆ ಅವರು ತಮ್ಮ ಪೂರ್ಣ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಅನುಕೂಲ ಮಾಡಿಕೊಡುವ ಲಕ್ಷ್ಯವನ್ನು ಹೊಂದಿದೆ ಹಾಗೂ ರಾಜ್ಯದ ಎಲ್ಲಾ ಮಕ್ಕಳ ಆರೋಗ್ಯಸಹಿತ ಸುರಕ್ಷಿತವಾದ ಬಾಲ್ಯಕ್ಕೆ ಬೇಕಾದ ಪಾಲನೆ ಮತ್ತು ರಕ್ಷಣೆ ಒದಗಿಸುವುದರ ಬಗ್ಗೆ ಖಚಿತ ಪಡಿಸಿಕೊಳ್ಳುವುದು, ತನ್ಮೂಲಕ ವಿವಿಧ ಕಾರ್ಯನೀತಿ ಮತ್ತು ಕಾರ್ಯಕ್ರಮಗಳ ಮೂಲಕ ಸಮಗ್ರ ಅಭಿವೃದ್ಧಿಯ ಅಸ್ತಿಭಾರ ಹಾಕುವ ಜವಾಬ್ದಾರಿಯನ್ನು ಹೊಂದಿದೆ.

#### 2.9.1.2 ಆಯವ್ಯಯ ಮತ್ತು ವೆಚ್ಚ

ಕಳೆದ ಮೂರು ವರ್ಷಗಳ ಆಯವ್ಯಯ ಅವಕಾಶಗಳು, ಅನುದಾನಗಳ ಕಾರ್ಯಪ್ರಧಾನ ಶೀರ್ಷಿಕೆಗಳ ರಾಜಸ್ವ ಮತ್ತು ಬಂಡವಾಳಗಳಡಿಯ ವಾಸ್ತವ ವಿವರಗಳು ಮತ್ತು ಉಳಿತಾಯಗಳ ಸಮಗ್ರ ಸ್ಥಿತಿಯನ್ನು **ಕೋಷ್ಟಕ 2.12**ರಲ್ಲಿ ಕೊಡಲಾಗಿದೆ.

**ಕೋಷ್ಟಕ 2.12: ಆಯವ್ಯಯ ಮತ್ತು ವೆಚ್ಚಗಳು**

(ಕೋಟಿ ರೂಪಾಯಿಗಳಲ್ಲಿ)

| ವರ್ಷ | ವಿಭಾಗ | ಆಯವ್ಯಯ ಅವಕಾಶ | ಒಟ್ಟು | ವೆಚ್ಚ | ಬಳಕೆಯಾಗದ ಅವಕಾಶ ಮತ್ತು ಅದರ ಶತಾಂಶ |
|---|---|---|---|---|---|
| 2014-15 | ರಾಜಸ್ವ-ಮೂಲ(ಪುರಸ್ಕೃತ) | 3,571.94 | 3,758.77 | 3,464.08 | 294.69(8) |
| | ಪೂರಕ | 186.83 | | | |
| | ಬಂಡವಾಳ-ಮೂಲ(ಪುರಸ್ಕೃತ) | 98.65 | 118.90 | 70.17 | 48.73(41) |
| | ಪೂರಕ | 20.25 | | | |
| 2015-16 | ರಾಜಸ್ವ-ಮೂಲ(ಪುರಸ್ಕೃತ) | 4,164.32 | 4,213.20 | 4,007.50 | 205.70(5) |
| | ಪೂರಕ | 48.88 | | | |
| | ಬಂಡವಾಳ-ಮೂಲ(ಪುರಸ್ಕೃತ) | 67.66 | 87.52 | 76.30 | 11.22(13) |
| | ಪೂರಕ | 19.86 | | | |
| 2016-17 | ರಾಜಸ್ವ-ಮೂಲ(ಪುರಸ್ಕೃತ) | 4,335.14 | 4,369.50 | 4,182.98 | 186.52(4) |
| | ಪೂರಕ | 34.36 | | | |
| | ಬಂಡವಾಳ-ಮೂಲ(ಪುರಸ್ಕೃತ) | 161.65 | 189.65 | 139.74 | 49.91(26) |
| | ಪೂರಕ | 28.00 | | | |

*ಆಕರ: ಧನವಿನಿಯೋಗ ಲೆಕ್ಕಗಳು.*

2014-15 ರಿಂದ 2016-17ರ ಅವಧಿಯಲ್ಲಿ ರಾಜಸ್ವ ವಿಭಾಗದಲ್ಲಿ ಬಳಕೆಯಾಗದ ಅವಕಾಶಗಳ ಪಥಾಂತರವು ಶೇಕಡಾ 4ರಿಂದ 8ರ ನಡುವೆ ಮತ್ತು ಬಂಡವಾಳ ವಿಭಾಗದಲ್ಲಿ ಶೇಕಡಾ 13ರಿಂದ 41ರ ನಡುವೆ ಇತ್ತು.

### 2.9.1.3 ಆಯವ್ಯಯ ರಾಜಸ್ವ ಮತ್ತು ಬಂಡವಾಳ

ಶಾಸಕಾಂಗದ ಮುಂದೆ ಮಂಡಿಸಲಾದ ಆಯವ್ಯಯವು ಅನುದಾನಗಳ ಸವಿವರ ಬೇಡಿಕೆಗಳಲ್ಲಿ ರಾಜಸ್ವ ಮತ್ತು ಬಂಡವಾಳ, ಯೋಜನೆ ಮತ್ತು ಯೋಜನೇತರ ಎಂದು ವಿಂಗಡಿಸಲ್ಪಟ್ಟಿದೆ. 2014-15 ರಿಂದ 2016-17ರ ಅವಧಿಯಲ್ಲಿ ರಾಜಸ್ವ/ಬಂಡವಾಳಗಳಡಿಯಲ್ಲಿ ಅವಕಾಶ/ವೆಚ್ಚಗಳ ವಿಂಗಡಣೆಯ ವಿವರವನ್ನು **ಕೋಷ್ಟಕ 2.13** ಮತ್ತು **ಕೋಷ್ಟಕ 2.14**ರಲ್ಲಿ ನೀಡಲಾಗಿದೆ.

**ಕೋಷ್ಟಕ: 2.13: ರಾಜಸ್ವ**

(ಕೋಟಿ ರೂಪಾಯಿಗಳಲ್ಲಿ)

| ವರ್ಷ | ಪೂರಕವನ್ನು ಒಳಗೊಂಡಂತೆ ಆಯವ್ಯಯ | | ವೆಚ್ಚ | | ಪಥಾಂತರ -ಶೇಕಡಾವಾರು | |
|---|---|---|---|---|---|---|
| | ಯೋಜನೇತರ | ಯೋಜನೆ | ಯೋಜನೇತರ | ಯೋಜನೆ | ಯೋಜನೇತರ | ಯೋಜನೆ |
| 2014-15 | 1,223.14 | 2,535.63 | 1,050.35 | 2,413.73 | (-)14 | (-)5 |
| 2015-16 | 1,551.69 | 2,661.51 | 1,275.13 | 2,732.37 | (-)18 | (+)3 |
| 2016-17 | 1,686.23 | 2,683.27 | 1,387.79 | 2,795.19 | (-)18 | (+)4 |

*ಆಕರ: ಅನುದಾನ ವಹಿ*

ಮೇಲಿನ ಕೋಷ್ಟಕದಲ್ಲಿ ಕಾಣಿಸುವಂತೆ, ಯೋಜನೇತರದ ಅಡಿ ಪಥಾಂತರವು ಶೇಕಡಾ 14 ಹಾಗೂ 18ರ ನಡುವೆ ಇದೆ. ಯೋಜನೆ ವೆಚ್ಚದ ವಿಭಾಗದಲ್ಲಿ ಪಥಾಂತರವು ಶೇಕಡಾ ಮೂರರಿಂದ ಐದರ ನಡುವೆ ಇದೆ.

**ಕೋಷ್ಟಕ 2.14: ಬಂಡವಾಳ**

**(ಕೋಟಿ ರೂಪಾಯಿಗಳಲ್ಲಿ)**

| ವರ್ಷ | ಪೂರಕವನ್ನು ಒಳಗೊಂಡಂತೆ ಆಯವ್ಯಯ | ವೆಚ್ಚ | ಪಥಾಂತರ – ಶೇಕಡಾವಾರು | ಪೂರಕವನ್ನು ಒಳಗೊಂಡಂತೆ ಆಯವ್ಯಯ | ವೆಚ್ಚ | |
|---|---|---|---|---|---|---|
| | ಯೋಜನೇತರ | ಯೋಜನೆ | ಯೋಜನೇತರ | ಯೋಜನೇತರ | ಯೋಜನೆ | ಯೋಜನೇತರ |
| 2014–15 | 0 | 118.90 | 0 | 70.17 | 0 | (–)41 |
| 2015–16 | 0 | 87.52 | 0 | 76.30 | 0 | (–)13 |
| 2016–17 | 0 | 189.65 | 0 | 139.74 | 0 | (–)26 |

*ಆಕರ: ಅನುದಾನ ವಹಿ*

ಮೇಲಿನ ಕೋಷ್ಟಕದಲ್ಲಿ ಕಾಣಿಸುವಂತೆ, ಬಂಡವಾಳ ವಿಭಾಗದಲ್ಲಿ ಪಥಾಂತರವು ಶೇಕಡಾ 13ರಿಂದ 41ರಷ್ಟು ಇರುತ್ತದೆ. ಬಂಡವಾಳ ವಿಭಾಗದಲ್ಲಿ ಉಳಿತಾಯವು ಮುಖ್ಯವಾಗಿ ಅಂಗನವಾಡಿ ಕಟ್ಟಡಗಳ ನಿರ್ಮಾಣ– ನಬಾರ್ಡ್ ಕಾಮಗಾರಿಗಳಡಿಯಲ್ಲಿ ಆಯವ್ಯಯ ಅವಕಾಶದ ಭಾಗಶಃ ಬಳಕೆಯಿಂದ ಉಂಟಾಗಿದೆ. ಇದಕ್ಕೆ ಉತ್ತರವಾಗಿ ಬಿಡುಗಡೆಯಾದ ಅನುದಾನವನ್ನು ಪೂರ್ಣವಾಗಿ ಅದೇ ಆರ್ಥಿಕ ವರ್ಷದ ಅವಧಿಯಲ್ಲೇ ಬಳಸಲು ಅನುಸರಣಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಇಲಾಖೆಯು ತಿಳಿಸಿದೆ (ನವೆಂಬರ್ 2017).

### 2.9.1.4 ಆಂತರಿಕ ಆರ್ಥಿಕ ಸಲಹೆಗಾರ (ಐ ಎಫ್ ಎ)ರ ಪಾತ್ರ.

ಸರ್ಕಾರವು ಒಂದು ಇಲಾಖೆ ಅಥವಾ ಇಲಾಖೆಗಳ ಗುಂಪಿಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಆಂತರಿಕ ಆರ್ಥಿಕ ಸಲಹೆಗಾರರನ್ನು ನೇಮಿಸುತ್ತದೆ. ಜುಲೈ 1982ರಲ್ಲಿ ಹೊರಡಿಸಲಾದ ಪ್ರಕಟಣೆಯ ಪ್ರಕಾರ, ಆಂತರಿಕ ಆರ್ಥಿಕ ಸಲಹೆಗಾರರು ಆಯವ್ಯಯ ಅಂದಾಜುಗಳು ಸರಿಯಾಗಿ ರೂಪಿಸಲಾಗಿದೆಯೆಂದು ಕಾಲ ನಿಗಧಿಯನ್ನು ಕಟ್ಟುನಿಟ್ಟಾಗಿ ಅನುಸರಿಸಿದೆ ಎಂದು ಖಚಿತಪಡಿಸಿಕೊಳ್ಳುವುದಕ್ಕೂ ಮತ್ತು ಎಲ್ಲ ಹೊಸ ಯೋಜನೆಗಳು, ಹೊಸ ವೆಚ್ಚಗಳು ಇತ್ಯಾದಿಗಳನ್ನು ಪರೀಕ್ಷಿಸಿ ಸಲಹೆ ಕೊಡುವುದಕ್ಕೂ ಹೊಣೆಯಾಗುತ್ತಾರೆ. ಸಚಿವಾಲಯದ ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಆಂತರಿಕ ಆರ್ಥಿಕ ಸಲಹೆಗಾರರು ನೀಡುವ ಮಾಹಿತಿಗಳು ಅಲ್ಪ, ಮಧ್ಯಮ ಅಥವಾ ದೀರ್ಘಾವಧಿ ಸ್ವರೂಪದ ವಿತ್ತೀಯ ಪರಿಣಾಮವಿರುವ ಇಲಾಖೆಯ ಆಯವ್ಯಯದ ಮೇಲೆ ಪ್ರಭಾವ ಬೀರುವ ಎಲ್ಲಾ ವಿಷಯಗಳನ್ನು ಪರೀಕ್ಷಿಸಿ ಸಲಹೆ ನೀಡುವುದೇ ಆಗಿರುತ್ತದೆ. ಆಂತರಿಕ ಆರ್ಥಿಕ ಸಲಹೆಗಾರರು, ಹಣಕಾಸಿನ ಮಿತವ್ಯಯ, ಇಲಾಖಾ ಆಯವ್ಯಯ ತಯಾರಿಕೆ, ಲೆಕ್ಕ ಪರಿಶೋಧನಾ ವರದಿ ಹಾಗೂ ಕಾಲಕಾಲಕ್ಕೆ ಹೊರಡಿಸುವ ನಿಯಮಗಳು, ಸುತ್ತೋಲೆ/ಆದೇಶಗಳಲ್ಲಿನ ವಿಷಯಗಳ ಬಗ್ಗೆ ಸಲಹೆ ನೀಡುತ್ತಾರೆ. ಇಲಾಖೆಯ ಕಡತಗಳ ಪರಿಶೀಲನೆಯಲ್ಲಿ, ಸೂಚನೆಗಳಿಗೆ ಅನುಸಾರವಾಗಿ ಆಯವ್ಯಯ ಅಂದಾಜುಗಳನ್ನು ಸಿದ್ಧಪಡಿಸುವುದಕ್ಕಾಗಿ, ಕಡತಗಳನ್ನು ಆಂತರಿಕ ಆರ್ಥಿಕ ಸಲಹೆಗಾರರಿಗೆ ಪರಿಶೀಲನೆಗಾಗಿ ಸಲ್ಲಿಸದೆ ಇರುವುದನ್ನು ಗಮನಿಸಲಾಗಿದೆ.

ಇಲಾಖೆಯು ತನ್ನ ಉತ್ತರದಲ್ಲಿ (ಸೆಪ್ಟೆಂಬರ್ 2017) ಆಯವ್ಯಯ ಅಂದಾಜು ತಯಾರಿಕೆ ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಆಂತರಿಕ ಆರ್ಥಿಕ ಸಲಹೆಗಾರರ ಅಭಿಪ್ರಾಯವನ್ನು ಪಡೆಯುವಲ್ಲಿ, 15 ಜುಲೈ 1982ರಲ್ಲಿ ಹೊರಡಿಸಲಾದ ಶಿಷ್ಟಾಚಾರ ನಿಯಮಗಳನ್ನು ವಿಧ್ಯುಕ್ತವಾಗಿ ಅನುಸರಿಸುವುದಾಗಿ ತಿಳಿಸಿದೆ.

### 2.9.1.5 ಭಾರತ ಸರ್ಕಾರದ ಅನುದಾನವನ್ನು ಸ್ನೇಹ ಶಿವಿರ್ ಯೋಜನೆಗೆ ಬಿಡುಗಡೆಗೊಳಿಸದಿರುವುದು.

ಸ್ನೇಹ ಶಿವಿರ್ ಎಂಬುದು 2014–15ರಲ್ಲಿ ಪ್ರಾರಂಭಿಸಿದ, 4–5 ಅಂಗನವಾಡಿ ಕೇಂದ್ರಗಳ ಸಮೂಹವನ್ನು ಆಯ್ಕೆ ಮಾಡಿ, ಅಲ್ಲಿ ತೀವ್ರ ಮತ್ತು ಸಾಧಾರಣ ಪೋಷ್ಟಕಾಂಶ ಕೊರತೆಯಿರುವ ಮಕ್ಕಳ, ತಂದೆ–ತಾಯಿಯರು ಮತ್ತು ಪೋಷಕರಿಗೆ ಪೌಷ್ಟಿಕ ಆಹಾರ ತಯಾರಿಕೆ, ಉಣಿಸುವ ವಿಧಾನಗಳು. ಆರೋಗ್ಯ, ನೈರ್ಮಲ್ಯಗಳನ್ನು ಕುರಿತಾದ ಹನ್ನೆರಡು ದಿನಗಳ ತರಬೇತಿ ಕೊಡಲಾಗುವ ಒಂದು ಹೊಸ ಯೋಜನೆಯಾಗಿದೆ.

ಈ ಯೋಜನೆಯು ಕೇಂದ್ರ ಮತ್ತು ರಾಜ್ಯಗಳ ನಡುವೆ 75:25 ಅನುಪಾತದಲ್ಲಿ ಹಂಚಿಕೊಳ್ಳುವ ಕೇಂದ್ರ ಪುರಸ್ಕೃತ ಯೋಜನೆ. ಈ ಯೋಜನೆಯ ಮಾರ್ಗಸೂಚಿಗಳು 2013–14ರಲ್ಲಿ ಬಿಡುಗಡೆಯಾಗಿವೆ.

2014–15 ನೇ ವರ್ಷಕ್ಕೆ, ಈ ಯೋಜನೆಗಾಗಿ ₹4.24 ಕೋಟಿ ಮೊತ್ತವು ಹಂಚಿಕೆಯಾಗಿದ್ದು ಅದರಲ್ಲಿ ಕರ್ನಾಟಕ ಸರ್ಕಾರದ ಪಾಲು ₹1.06 ಕೋಟಿ ಮೊತ್ತವನ್ನು ಭಾರತ ಸರ್ಕಾರದ ಪಾಲಿನ ಸ್ವೀಕೃತಿಯ ನಿರೀಕ್ಷೆಯಲ್ಲಿ ಬಿಡುಗಡೆ ಮಾಡಿತ್ತು. ತರಬೇತಿ ಕಾರ್ಯಕ್ರಮದ ಅಂಗವಾಗಿ ₹0.58 ಕೋಟಿ ಮೊತ್ತದ ವೆಚ್ಚವನ್ನು ಮಾಡಲಾಗಿತ್ತು. ಭಾರತ ಸರ್ಕಾರದ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ನೆನಪೋಲೆಗಳನ್ನು ಕಳಿಸಿದಾಗ್ಯೂ ಭಾರತ ಸರ್ಕಾರದ ಪಾಲಿನ ಮೊತ್ತವು ಬರಲಿಲ್ಲ.

ಅಷ್ಟೇ ಅಲ್ಲದೆ, 2015–16 ಮತ್ತು 2016–17ರಲ್ಲಿ ₹1.06 ಕೋಟಿಗಳ (ರಾಜ್ಯದ ಪಾಲು) ಅವಕಾಶವನ್ನು ಒದಗಿಸಿದ್ದರೂ ಯಾವುದೇ ಮೊತ್ತವು ಬಿಡುಗಡೆಯಾಗಿಲ್ಲ ಮತ್ತು ಯೋಜನೆಯು ಅನುಷ್ಠಾನಗೊಳ್ಳಲಿಲ್ಲ ಎಂಬುದನ್ನು ಗಮನಿಸಲಾಗಿತ್ತು. ಪ್ರತಿವರ್ಷವೂ ₹1.06 ಕೋಟಿ ಅವಕಾಶವನ್ನು ಒದಗಿಸಿದ ಇಲಾಖೆಯ ಕ್ರಮವು ಸರಿಯಾದುದಲ್ಲ ಬದಲಾಗಿ ಕೇಂದ್ರ ಸರ್ಕಾರದಿಂದ ಮೊತ್ತವು ಬಂದ ನಂತರ, ಪೂರಕ ಅಂದಾಜಿನಲ್ಲಿ ಅವಕಾಶವನ್ನು ಒದಗಿಸಬಹುದಾಗಿತ್ತು.

ಇಲಾಖೆಯು ತನ್ನ ಉತ್ತರದಲ್ಲಿ (ಆಗಸ್ಟ್ 2017) ರಾಜ್ಯ ಸರ್ಕಾರವು 2014–15ನೇ ಸಾಲಿನ ಆಯವ್ಯಯದಲ್ಲಿ ₹4.24 ಕೋಟಿ ಅವಕಾಶವನ್ನು ಒದಗಿಸಿ, ಅದರಲ್ಲಿ ₹1.06 ಕೋಟಿ ಮೊತ್ತವನ್ನು ಬಿಡುಗಡೆ ಮಾಡಿರುವುದಾಗಿ ತಿಳಿಸಿದೆ. ಜೊತೆಗೆ, 2015–16 ಮತ್ತು 2016–17ರಲ್ಲಿ ಭಾರತ ಸರಕಾರದ ಆಯವ್ಯಯ ಅನುದಾನದ ನಿರೀಕ್ಷೆಯಲ್ಲಿ ಅವಕಾಶವನ್ನು ಒದಗಿಸಲಾಗಿತ್ತು ಹಾಗೂ ನಿರೀಕ್ಷಿಸಿದ ಅನುದಾನ ಬರಲಿಲ್ಲವೆಂದೂ ತಿಳಿಸಿದೆ.

### 2.9.1.6 ಕೇಂದ್ರ ಸರ್ಕಾರಕ್ಕೆ ಕ್ರಿಯಾ ಯೋಜನೆ ಸಲ್ಲಿಸುವಲ್ಲಿ ವಿಳಂಬ– ಬಹುವಿಭಾಗೀಯ ಪೌಷ್ಟಿಕ ಆಹಾರ ಯೋಜನೆ

ಬಹುವಿಭಾಗೀಯ ಪೌಷ್ಟಿಕ ಆಹಾರ ಯೋಜನೆಯು ಭಾರತ ಸರ್ಕಾರ ಪ್ರಸ್ತಾಪಿಸಿರುವ 75:25 ಅನುಪಾತದ ಹಂಚಿಕೆಯ ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ರಾಷ್ಟ್ರೀಯ ಪೋಷಕ ಆಹಾರ ನಿಯೋಗದ ಅಡಿಯಲ್ಲಿ ಗುರುತಿಸಲಾದ ಅಧಿಕ ತೊಂದರೆಯಲ್ಲಿರುವ 200 ಜಿಲ್ಲೆಗಳಲ್ಲಿನ ಪೋಷಕಾಂಶ ಕೊರತೆಯಿರುವ ತಾಯಿ–ಮಗುವನ್ನು ಉದ್ದೇಶಿತ ಯೋಜನೆಯಾಗಿದೆ. ಭಾರತ ಸರ್ಕಾರವು ಜಿಲ್ಲಾ ಪೌಷ್ಟಿಕ ಆಹಾರ ಸಲಹಾ ಮಂಡಳಿಯನ್ನು ಪ್ರಾರಂಭಿಸಲು ಮತ್ತು ಜಿಲ್ಲಾ ಪೌಷ್ಟಿಕ ಆಹಾರ ಕ್ರಿಯಾಯೋಜನೆಯ ತಯಾರಿಕೆಗಾಗಿ ₹0.08 ಕೋಟಿಯನ್ನು ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಿತ್ತು. ಆದರೆ, ರಾಜ್ಯ ಸರ್ಕಾರವು ನಿಗದಿತ ಅವಧಿಯ ಒಳಗಾಗಿ ಕ್ರಿಯಾ ಯೋಜನೆಯನ್ನು ಸಲ್ಲಿಸಿರಲಿಲ್ಲವೆಂಬುದನ್ನು ಗಮನಿಸಲಾಗಿತ್ತು. ಅದರಿಂದಾಗಿ ಭಾರತ ಸರ್ಕಾರವು (ಜುಲೈ 2014) ರಾಜ್ಯ ಸರ್ಕಾರವನ್ನು ಈ ಉದ್ದೇಶಕ್ಕಾಗಿ ಬಿಡುಗಡೆ ಮಾಡಿದ್ದ ₹0.08 ಕೋಟಿ ಮೊತ್ತವನ್ನು ಮರುಪಾವತಿ ಮಾಡುವಂತೆ ನಿರ್ದೇಶಿಸಿತ್ತು. ಆರ್ಥಿಕ ಇಲಾಖೆಯು (ಫೆಬ್ರುವರಿ 2017) ಆಡಳಿತಾತ್ಮಕ ಇಲಾಖೆಗೆ ಈ ಹಣವನ್ನು ಕೇಂದ್ರ ಸರ್ಕಾರಕ್ಕೆ ಹಿಂತಿರುಗಿಸುವಂತೆ ನಿರ್ದೇಶಿಸಿತ್ತು. ಆದರೆ, ಈ ಮೊತ್ತವು ಇನ್ನೂ (ಆಗಸ್ಟ್ 2017) ಮರುಪಾವತಿಯಾಗಿಲ್ಲ.

ಆದ್ದರಿಂದ, ನಿಗದಿತ ಅವಧಿಯ ಒಳಗಾಗಿ ಕ್ರಿಯಾ ಯೋಜನೆಯನ್ನು ಸಲ್ಲಿಸಿರದಿದ್ದರಿಂದ ಪೌಷ್ಟಿಕತೆಯ ಕೊರತೆಯಿರುವ ತಾಯಿ–ಮಗು ಉದ್ದೇಶಿತ ಯೋಜನೆಯು ಅನುಷ್ಠಾನಗೊಳ್ಳದೆ ಈ ಯೋಜನೆಗಾಗಿ 2014–15ರಿಂದ 2016–17ರವರೆಗೆ ಕ್ರಮವಾಗಿ ಮಾಡಿದ್ದ ₹1.55 ಕೋಟಿ, ₹0.39 ಕೋಟಿ ಮತ್ತು ₹0.50 ಕೋಟಿಗಳ ಅವಕಾಶವು ಬಳಕೆಯಾಗದೆ ಉಳಿದಿತ್ತು.

### 2.9.1.7 ಅನುಷ್ಠಾನಗೊಳ್ಳದ ಅನಾಥ ಮತ್ತು ನಿರ್ಗತಿಕ ಮಕ್ಕಳ ಆದಾಯ ಸುರಕ್ಷಿತ ಯೋಜನೆ

'ಅನಾಥ ಮತ್ತು ನಿರ್ಗತಿಕ ಮಕ್ಕಳ ಆದಾಯ ಸುರಕ್ಷಿತ ಯೋಜನೆ' ಎಂಬ ಒಂದು ಹೊಸ ಯೋಜನೆಯು ಆಯವ್ಯಯ ಭಾಷಣದ ಆಧಾರದ ಮೇಲೆ 2014–15ನೇ ವರ್ಷದ ಆಯವ್ಯಯದಲ್ಲಿ ಸೇರಿಸಲ್ಪಟ್ಟಿತ್ತು. ಯೋಜನೆಯ ಉದ್ದೇಶವು ಬಾಲ ಮಕ್ಕಳ ಕಾಯ್ದೆಯಡಿಯಲ್ಲಿ ಸರ್ಕಾರಿ ಬಾಲಮಂದಿರಗಳಲ್ಲಿ ದೀರ್ಘಾವಧಿ ಪುನರ್ವಸತಿ ಪಡೆದಿರುವ ಅನಾಥ ಮತ್ತು ನಿರ್ಗತಿಕ ಮಕ್ಕಳಿಗೆ ಜೀವನಾಧಾರ ಭದ್ರತೆಗೆ ವಿಮೆಯನ್ನು ಒದಗಿಸುವುದು. 2014–15ನೇ ವರ್ಷದ ಆಯವ್ಯಯದಲ್ಲಿ ಈ ಉದ್ದೇಶಕ್ಕಾಗಿ ₹2.50 ಕೋಟಿ ಅವಕಾಶದ ಹಂಚಿಕೆಯಾಗಿತ್ತು. ಯೋಜನೆಯನ್ನು ಅನುಷ್ಠಾನಗೊಳಿಸುವ ಏಜೆನ್ಸಿಯು (ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ಸಂರಕ್ಷಣಾ ಸಂಘ) ಕರಡು

ಮಾರ್ಗಸೂಚಿ/ಪ್ರಸ್ತಾವನೆಯನ್ನು ಸುಮಾರು ಎಂಟು ತಿಂಗಳಷ್ಟು ತಡವಾಗಿ ಅಂದರೆ ನವೆಂಬರ್ 2014ರಲ್ಲಿ ಸಲ್ಲಿಸಿತ್ತು ಎಂಬುದನ್ನು ಗಮನಿಸಲಾಗಿದೆ. ಯೋಜನೆಯ ಮಾರ್ಗಸೂಚಿ, ಹಣಕಾಸಿನ ಸಹಮತ, ಯೋಜನಾ ಇಲಾಖೆಯ ಅನುಮೋದನೆಗಳನ್ನು ಪಡೆಯದೆ ಇದ್ದುದರಿಂದ 2014–15ರಲ್ಲಿ ಮಾಡಿದ್ದ ಆಯವ್ಯಯ ಅವಕಾಶವು ಬಳಕೆಯಾಗದೆ ಉಳಿದಿತ್ತು.

2015–16 ಮತ್ತು 2016–17ರ ಆಯವ್ಯಯದಲ್ಲಿ ಕ್ರಮವಾಗಿ ₹0.50 ಕೋಟಿ ಮತ್ತು ₹0.24 ಕೋಟಿಗಳ ಅವಕಾಶವನ್ನು ಒದಗಿಸಲಾಗಿದ್ದು, ಯಾವುದೇ ವೆಚ್ಚವನ್ನೂ ಮಾಡಿರಲಿಲ್ಲವೆಂಬುದನ್ನು ಗಮನಿಸಲಾಗಿತ್ತು. ಹಣಕಾಸಿನ ಸಹಮತವನ್ನು ಮೇ 2016ರಲ್ಲಿ ಪಡೆಯಲಾಗಿತ್ತು ಹಾಗೂ ಇಲಾಖೆಯು ಸಲ್ಲಿಸಿದ್ದ ಕರಡು ಮಾರ್ಗಸೂಚಿಯಲ್ಲಿ ಕೆಲವು ಬದಲಾವಣೆಗಳಿಗೆ ಯೋಜನಾ ಇಲಾಖೆಯು ಸಲಹೆ ಮಾಡಿತ್ತು. ಅಂತಿಮವಾಗಿ ಇಲಾಖೆಯು ಪರಿಷ್ಕೃತ ಮಾರ್ಗಸೂಚಿಯನ್ನು ಏಪ್ರಿಲ್ 2017ರಲ್ಲಿ ಸಲ್ಲಿಸಿತು. ಇದಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶ ಇನ್ನೂ ಜಾರಿಯಾಗಬೇಕಿದೆ.

ಆದ್ದರಿಂದ, ಮಾರ್ಗಸೂಚಿಯ ತಯಾರಿಕೆ ಮತ್ತು ಒಪ್ಪಿಗೆ ಪಡೆಯುವುದರಲ್ಲಿ ಆದ ವಿಳಂಬದಿಂದ 2014–15ರಲ್ಲಿ ಜಾರಿಯಾಗಬೇಕಿದ್ದ ಯೋಜನೆಯನ್ನು ಇಂದಿನವರೆಗೂ ಕೈಗೆತ್ತಿಕೊಂಡಿರುವುದಿಲ್ಲ. (ಅಕ್ಟೋಬರ್ 2017).

ಇಲಾಖೆಯು ತನ್ನ ಉತ್ತರದಲ್ಲಿ (ನವೆಂಬರ್ 2017) ಸರ್ಕಾರಿ ಆದೇಶ ಜಾರಿಯಾದ ಕೂಡಲೆ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದೆಂದು ತಿಳಿಸಿದೆ.

#### 2.9.1.8 ಪೂರಕ ಅಂದಾಜು–3ನೇ ಕಂತಿನಲ್ಲಿ ಸಕ್ರಮಗೊಳಿಸದ ಹೆಚ್ಚುವರಿ ಮೊತ್ತ

ಸಂವಿಧಾನದ 205ನೇ ವಿಧಿಯಲ್ಲಿರುವ ನಿಯಮಗಳ ಪ್ರಕಾರ (1) ರಾಜ್ಯಪಾಲರು

ಎ) ಒಂದುವೇಳೆ 204ನೇ ಅನುಚ್ಛೇದದ ಅನ್ವಯ ಯಾವುದೇ ಕಾಯಿದೆಯಡಿ ಅನುಮತಿಸಲ್ಪಟ್ಟ ಮೊತ್ತವನ್ನು ಹಾಲಿ ವರ್ಷದಲ್ಲಿ ನಿರ್ದಿಷ್ಟ ಸೇವೆಗೆ ವೆಚ್ಚಮಾಡಲು ಆ ವರ್ಷದ ಉದ್ದೇಶಕ್ಕೆ ಅಗತ್ಯಕ್ಕಿಂತ ಕಡಿಮೆಯಾದಲ್ಲಿ, ಅಥವಾ ಹಾಲಿ ಹಣಕಾಸು ವರ್ಷದಲ್ಲಿ ಪೂರಕ ಅಂದಾಜಿನ ಅವಶ್ಯಕತೆ ಕಂಡುಬಂದಲ್ಲಿ, ಅಥವಾ ಆಯವ್ಯಯದಲ್ಲಿ ಉದ್ದೇಶಿಸಿರದ ಕೆಲವು ಹೊಸ ಸೇವೆಗಳ ದೆಸೆಯಿಂದ ಹೆಚ್ಚುವರಿ ವೆಚ್ಚ, ಅಥವಾ

ಬಿ) ಒಂದುವೇಳೆ ಹಣಕಾಸು ವರ್ಷದಲ್ಲಿ ಯಾವುದೇ ಸೇವೆಗೆ ಮಂಜೂರಾಗಿದ್ದ ಮೊತ್ತಕ್ಕಿಂತ ಅಧಿಕವಾಗಿ ಆ ಸೇವೆಗೆ ಆ ವರ್ಷದಲ್ಲಿ ವೆಚ್ಚವಾಗಿದ್ದರೆ, ಆ ವೆಚ್ಚದ ಅಂದಾಜು ಮೊತ್ತವನ್ನು ತೋರಿಸುವ ಇನ್ನೊಂದು ಪಟ್ಟಿಯನ್ನು, ಶಾಸನ ಸಭೆ ಅಥವಾ ಸಭೆಗಳ ಮುಂದೆ ಮಂಡಿಸಬೇಕು ಅಥವಾ ಅಂತಹ ಹೆಚ್ಚುವರಿಗೆ ಬೇಡಿಕೆಗಳನ್ನು, ಇವುಗಳಲ್ಲಿ ಯಾವುದು ಅನ್ವಯಿಸುವುದೋ ಅದನ್ನು ಮಂಡಿಸಬೇಕು.

2016–17ನೇ ಹಣಕಾಸು ವರ್ಷದ ಆಯವ್ಯಯದಲ್ಲಿ, ಪ್ರತಿಯೊಂದಕ್ಕೂ ₹8 ಲಕ್ಷದ ಅವಕಾಶವನ್ನು ಶೀರ್ಷಿಕೆ 2235–00–101–0–30–103–ಆರ್ಥಿಕ ಸಹಾಯ (2235–02–196–1–03–405 ಶಿವಮೊಗ್ಗ 410– ಹಾಸನ) ಅಡಿಯಲ್ಲಿ ಒದಗಿಸಿತ್ತು. ಹಾಗೂ, ಆರ್ಥಿಕ ಇಲಾಖೆಯು ದಿನಾಂಕ 18 ಮಾರ್ಚ್ 2017ರ ಆದೇಶದಲ್ಲಿ ₹19.34 ಲಕ್ಷ (ಪ್ರತಿಯೊಂದಕ್ಕೂ ₹9.67 ಲಕ್ಷದಂತೆ) ಈ ಜಿಲ್ಲೆಗಳಿಗೆ ಹೆಚ್ಚುವರಿ ಅವಕಾಶಕ್ಕೆ ಒಪ್ಪಿಗೆ ನೀಡಿ ಇದನ್ನು ಪೂರಕ ಅಂದಾಜು–3ರಲ್ಲಿ ಸಕ್ರಮಗೊಳಿಸುವದಾಗಿ ತಿಳಿಸಿತ್ತು. ಆದರೆ, ಈ ಮೊತ್ತವನ್ನು ಮಾರ್ಚ್ 2017ರಲ್ಲಿ ಶಾಸನಸಭೆಯಲ್ಲಿ ಮಂಡಿಸಿದ ಪೂರಕ ಅಂದಾಜು–3ನೇ ಕಂತಿನಲ್ಲಿ ಸಕ್ರಮಗೊಳಿಸಿರಲಿಲ್ಲ ಎಂಬುದನ್ನು ಗಮನಿಸಲಾಗಿತ್ತು. ಇದರಿಂದ ಈ ಅಧಿಕವೆಚ್ಚದ ಮೊತ್ತವನ್ನು ಸಕ್ರಮಗೊಳಿಸದಿರುವುದು ಸಂವಿಧಾನದ 205(1) (ಬಿ) ಅನುಚ್ಛೇದದ ಉಲ್ಲಂಘನೆಯಾಗಿದೆ.

#### 2.9.1.9 ಸತತ ಉಳಿತಾಯ

2014–15ರಿಂದ 2016–17ರ ಅವಧಿಯಲ್ಲಿ ಪ್ರತಿ ವರ್ಷವೂ ಕೆಲವು ನಿರ್ದಿಷ್ಟ ಶೀರ್ಷಿಕೆಗಳಡಿಯಲ್ಲಿ ಆಯವ್ಯಯ ಹಂಚಿಕೆಯ ಒಂದು ಭಾಗವು ಬಳಕೆಯಾಗದೆ ಉಳಿದಿದ್ದು ಅದು ಆಯಾ ವರ್ಷಗಳಲ್ಲಿ ಕಲ್ಪಿಸಿದ ಹಣಕಾಸಿನ ವೆಚ್ಚಗಳನ್ನು ಸಾಧಿಸಿಲ್ಲವೆಂಬುದನ್ನು ಗಮನಿಸಲಾಗಿದೆ. ಕರ್ನಾಟಕ ಆಯವ್ಯಯ

ಕೈಪಿಡಿಯ ಕಂಡಿಕೆ 110ರ ಅಗತ್ಯತೆಯಂತೆ, ಹಿಂದಿನ ವರ್ಷಗಳ ವೆಚ್ಚಗಳನ್ನು ಪರಿಗಣಿಸದೆ ಆಯವ್ಯಯದಲ್ಲಿ ಹಂಚಿಕೆಗಳನ್ನು ಮಾಡಿರುವುದನ್ನು **ಕೋಷ್ಟಕ2.15**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 2.15: ಸತತ ಉಳಿತಾಯಗಳು**

(ಕೋಟಿ ರೂಪಾಯಿಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | | 2014–15 | 2015–16 | 2016–17 |
|---|---|---|---|---|---|
| 1 | 2235–02–001–0–01 | ಮಹಿಳೆ ಮತ್ತು ಮಕ್ಕಳ ಕಲ್ಯಾಣ ನಿರ್ದೇಶನಾಲಯ | 3.44 | 2.19 | 2.83 |
| 2 | 2235–02–101–0–53 | ಅಂಗವಿಕಲರಿಗಾಗಿ ಎನ್.ಆರ್.ಡಿ.ಪಿ.ಕಾರ್ಯಕ್ರಮ | 1.88 | 1.46 | 1.77 |
| 3 | 2235–02–101–0–55 | ಅಂಗವಿಕಲರಿಗಾಗಿ ಉದ್ಯೋಗ ಕೋಶ | 2.43 | 1.00 | 2.13 |
| 4 | 2235–02–101–0–99 | ದೈಹಿಕ ಮತ್ತು ಮಾನಸಿಕ ವಿಕಲ ಚೇತನರ ಕಲ್ಯಾಣ | 4.04 | 5.97 | 9.73 |
| 5 | 2235–02–102–0–05 | ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕರ ತರಬೇತಿ ಕೇಂ.ಪು.ಯೋ. (100%) | 13.02 | 13.61 | 15.94 |
| 6 | 2235–02–102–0–36 | ಸಮಗ್ರ ಮಕ್ಕಳ ಸಂರಕ್ಷಣಾ ಯೋಜನೆ. | 18.94 | 30.84 | 1.33 |
| 7 | 2235–02–102–0–38 | ಸ್ನೇಹ ಶಿವಿರ್ | 3.18 | 1.06 | 4.24 |
| 8 | 2235–02–102–0–40 | ಅಂಗನವಾಡಿಗಳ ನಿರ್ವಹಣೆ | 12.82 | 2.84 | 8.10 |
| 9 | 2235–02–103–0–41 | ಸ್ತ್ರೀಶಕ್ತಿ ಆವರ್ತನ ನಿಧಿ–ಸ್ವಸಹಾಯ ಗುಂಪಿಗಾಗಿ | 10.54 | 1.27 | 1.86 |
| 10 | 2235–02–103–0–46 | ಅಪ್ರಾಪ್ತ ಬಾಲಕಿಯರ ಸಬಲೀಕರಣಕ್ಕಾಗಿ ರಾಜೀವ್‌ಗಾಂಧಿ ಯೋಜನೆ(ಸಬಲಾ) | 3.26 | 1.27 | 3.60 |
| 11 | 2235–02–103–0–61 | ಇಂದಿರಾಗಾಂಧಿ ಮಾತೃತ್ವ ಸಹಯೋಗ ಯೋಜನೆ | 12.22 | 8.94 | 34.49 |
| 12 | 2235–02–104–2–04 | ಹಿರಿಯ ನಾಗರಿಕರ ವಿಮಾ ಪಾಲಿಸಿ | 1.80 | 1.07 | 1.55 |
| 13 | 2236–02–197–6–01 | ಬ್ಲಾಕ್ ಅನುದಾನ | 202.13 | 6.08 | 3.69 |

*ಆಕರ: ಧನವಿನಿಯೋಗ ಲೆಕ್ಕಗಳು*

### 2.9.1.10 ವೆಚ್ಚದ ಒತ್ತಡ

ಮೊತ್ತಗಳ ಬಿಡುಗಡೆ, ಸೆಳೆತ ಮತ್ತು ಲೆಕ್ಕ ವಿಧಾನಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಆರ್ಥಿಕ ಇಲಾಖೆಯು ಜಾರಿ ಮಾಡಿದ 9 ಸೆಪ್ಟಂಬರ್ 2004ರ ಆದೇಶದ ಕಂಡಿಕೆ 6ರಂತೆ, ಆಡಳಿತ ಇಲಾಖೆ ಮತ್ತು ಇಲಾಖಾ ಮುಖ್ಯಸ್ಥರುಗಳು ಆರ್ಥಿಕ ವರ್ಷದ ಉಳಿದ ಭಾಗಕ್ಕೆ ಬೇಕಾದ ವೆಚ್ಚವನ್ನು ಎಚ್ಚರಿಕೆಯಿಂದ ಮತ್ತು ಉಳಿದಿರುವ ಅನುದಾನಗಳ ಒಳಗೆ ಯೋಜಿಸಬೇಕಾಗಿದೆ. ಬಿಲ್ಲುಗಳ ಒಗ್ಗೂಡಿಸುವಿಕೆ ಹಾಗೂ ಮಾರ್ಚ್ ತಿಂಗಳಲ್ಲಿ ವೆಚ್ಚದ ಒತ್ತಡವನ್ನು ತಪ್ಪಿಸಬೇಕಿದೆ. ಫೆಬ್ರವರಿ ಮತ್ತು ಮಾರ್ಚ್ ತಿಂಗಳಿಂದ ನಿರೀಕ್ಷಿತ ವೆಚ್ಚಗಳಿಗೆ ಅಗತ್ಯವಿರುವ ಸೂಕ್ತ ಮಟ್ಟದ ಪ್ರಾಧಿಕಾರದಿಂದ ಅನುಮೋದನೆ ಪಡೆದು ಆಡಳಿತಾತ್ಮಕ ಆದೇಶಗಳನ್ನು ಮುಂಚಿತವಾಗಿಯೇ ಹೊರಡಿಸಬೇಕು.

ಹಾಗಿದ್ದರೂ 2016–17ರ ವರ್ಷಗಳಲ್ಲಿ ಮಾರ್ಚ್ ತಿಂಗಳಿನ ಶೇಕಡಾವಾರು ವೆಚ್ಚವು 41ರಿಂದ 100ರ ವ್ಯಾಪ್ತಿಯಲ್ಲಿದ್ದುದ್ದನ್ನು ಗಮನಿಸಲಾಯಿತು. ಸವಿವರ ಲೆಕ್ಕಶೀರ್ಷಿಕೆವಾರು ವೆಚ್ಚಗಳ ವಿವರಗಳನ್ನು **ಅನುಬಂಧ 2.14** ರಲ್ಲಿ ನೀಡಲಾಗಿದೆ.

### 2.9.2 ಅನುದಾನ ಸಂಖ್ಯೆ 20–ಲೋಕೋಪಯೋಗಿ ಕಾಮಗಾರಿಗಳು

#### 2.9.2.1 ಪೀಠಿಕೆ

ಲೋಕೋಪಯೋಗಿ ಕಾಮಗಾರಿಗಳು, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆಯು ಆಡಳಿತಾತ್ಮಕ ಇಲಾಖೆ ಹಾಗೂ ಲೋಕೋಪಯೋಗಿ ಕಾಮಗಾರಿಗಳು, ಬಂದರು ಮತ್ತು ಒಳನಾಡು ಜಲ ಸಾರಿಗೆಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಜವಾಬ್ದಾರಿಯನ್ನು ಹೊಂದಿದೆ. ಇಲಾಖೆಯು ರಾಜ್ಯದ ಸಾಮಾಜಿಕ–ಆರ್ಥಿಕ ಬೆಳವಣಿಗೆಗಾಗಿ ಸುರಕ್ಷಿತ, ಉತ್ತಮ ತಾಂತ್ರಿಕತೆಯಿಂದ ಕೂಡಿದ ಮತ್ತು ಪರಿಣಾಮಕಾರಿ ರಸ್ತೆಯ ಸಂಪರ್ಕಜಾಲಗಳು, ಸಮರ್ಥ ಮತ್ತು ಅತ್ಯುಚ್ಚ ಗುಣಮಟ್ಟದ ಸಾರ್ವಜನಿಕ ಕಟ್ಟಡಗಳು ಹಾಗೂ ಸಣ್ಣ ಬಂದರುಗಳು; ಮತ್ತು ಅವಶ್ಯಕತೆಗನುಗುಣವಾದ ಒಳನಾಡು ಜಲ ಸಾರಿಗೆ. ಇವುಗಳ ಯೋಜನೆ, ವಿನ್ಯಾಸ, ನಿರ್ಮಾಣ ಮತ್ತು ನಿರ್ವಹಣೆಯ ಗುರಿಯನ್ನು ಹೊಂದಿದೆ;

ಧನವಿನಿಯೋಗ ಲೆಕ್ಕಗಳ ಅನುದಾನವು, ಲೋಕೋಪಯೋಗಿ ಇಲಾಖೆಯ ಆಯವ್ಯಯ ಹಾಗೂ ವೆಚ್ಚಗಳಷ್ಟನ್ನೇ ಅಲ್ಲದೆ ಇತರೆ ಕ್ರಿಯಾ ಪ್ರಧಾನ ಶೀರ್ಷಿಕೆಗಳನ್ನೂ ಈ ಕೆಳಗೆ ವಿವರಿಸಿದೆ:

1. ಲೋಕೋಪಯೋಗಿ ಇಲಾಖೆ
2. ಇತರೆ ಆಡಳಿತಾತ್ಮಕ ಸೇವೆಗಳು
3. ವಸತಿ
4. ಬಂದರು ಮತ್ತು ದೀಪಸ್ತಂಭ
5. ರಸ್ತೆ ಮತ್ತು ಸೇತುವೆಗಳು
6. ಒಳನಾಡು ಜಲಸಾರಿಗೆ

2014–17ರ ಅವಧಿಯಲ್ಲಿ, ಶೇಕಡಾ 90ಕ್ಕಿಂತ ಹೆಚ್ಚಿನ ಆಯವ್ಯಯ ಹಂಚಿಕೆ ಮತ್ತು ವೆಚ್ಚವು ಪ್ರಧಾನ ಶೀರ್ಷಿಕೆ 2059–ಲೋಕೋಪಯೋಗಿ ಕಾಮಗಾರಿಗಳು, 3054–ರಸ್ತೆ ಮತ್ತು ಸೇತುವೆಗಳು, 4059–ಲೋಕೋಪಯೋಗಿ ಇಲಾಖೆಯ ಬಂಡವಾಳ ವೆಚ್ಚ ಮತ್ತು 5054–ರಸ್ತೆ ಮತ್ತು ಸೇತುವೆಗಳ ಬಂಡವಾಳ ವೆಚ್ಚಗಳ ಅಡಿಯಲ್ಲಿ ಆಗಿತ್ತು. ವ್ಯವಹಾರಗಳ ಅಪಾರತೆಯ ದೆಸೆಯಿಂದ, ಅನುದಾನಗಳ ಸಮೀಕ್ಷೆಯನ್ನು ಮೇಲೆ ತಿಳಿಸಿದ ನಾಲ್ಕು ಕ್ರಿಯಾ ಪ್ರಧಾನ ಶೀರ್ಷಿಕೆಗಳಿಗೆ ಸೀಮಿತಗೊಳಿಸಲಾಗಿತ್ತು.

ಅನುದಾನ 20–ಲೋಕೋಪಯೋಗಿ ಕಾಮಗಾರಿ ಅಡಿಯ ಆಯವ್ಯಯ ವಿಧಾನ ಮತ್ತು ವೆಚ್ಚಗಳ ಮೇಲಿನ ನಿಯಂತ್ರಣಗಳ ಪರಿಶೀಲನೆಯು ಕೆಳಗಿನ ಅಂಶಗಳನ್ನು ತೋರಿಸಿದೆ:

#### 2.9.2.2 ಆಯವ್ಯಯ ಮತ್ತು ವೆಚ್ಚ

ಕಳೆದ ಮೂರು ವರ್ಷಗಳ (2014–15 ರಿಂದ 2016–17) ಅನುದಾನಗಳ ಕಾರ್ಯಪ್ರಧಾನ ಶೀರ್ಷಿಕೆಗಳಡಿಯಲ್ಲಿ ಆಯವ್ಯಯ ಅವಕಾಶಗಳು, ವಾಸ್ತವಿಕ ವೆಚ್ಚ ಮತ್ತು ಉಳಿತಾಯಗಳ ಸಮಗ್ರ ಸ್ಥಿತಿಯನ್ನು **ಕೋಷ್ಟಕ 2.16**ರಲ್ಲಿ ಕೊಡಲಾಗಿದೆ.

**ಕೋಷ್ಟಕ 2.16: ಆಯವ್ಯಯ ಮತ್ತು ವೆಚ್ಚಗಳು**

**(ಕೋಟಿ ರೂಪಾಯಿಗಳಲ್ಲಿ)**

| ವರ್ಷ | ವಿಭಾಗ | ಆಯವ್ಯಯ ಅವಕಾಶ | ಒಟ್ಟು | ವೆಚ್ಚ | ಬಳಕೆ ಮಾಡದ ಅವಕಾಶ ಮತ್ತು ಅದರ ಶೇಕಡಾವಾರು |
|---|---|---|---|---|---|
| 2014–15 | ರಾಜಸ್ವ– ಮೂಲ(ಪುರಸ್ಕೃತ) | 2,395.48 | 2,490.08 | 2,188.89 | (–)301.19(12) |
| | ಪೂರಕ | 94.60 | | | |
| | ರಾಜಸ್ವ–ಮೂಲ(ಪ್ರಭೃತ) | *0.00* | *26.00* | *19.82* | *(–)6.18(24)* |
| | ಪೂರಕ | *26.00* | | | |
| | ಬಂಡವಾಳ–ಮೂಲ(ಪುರಸ್ಕೃತ) | 3,651.84 | 5,748.15 | 5,009.88 | (–)738.27(13) |
| | ಪೂರಕ | 2,096.31 | | | |
| | ಬಂಡವಾಳ–ಮೂಲ(ಪ್ರಭೃತ) | *0* | *45.00* | *45.00* | *0* |
| | ಪೂರಕ | *45.00* | | | |
| 2015–16 | ರಾಜಸ್ವ–ಮೂಲ(ಪುರಸ್ಕೃತ) | 2,217.10 | 2,263.27 | 2,009.86 | (–)253.41(11) |
| | ಪೂರಕ | 46.17 | | | |

| ವರ್ಷ | ವಿಭಾಗ | ಆಯವ್ಯಯ ಅವಕಾಶ | ಒಟ್ಟು | ವೆಚ್ಚ | ಬಳಕೆ ಮಾಡದ ಅವಕಾಶ ಮತ್ತು ಅದರ ಶೇಕಡಾವಾರು |
|---|---|---|---|---|---|
| | ರಾಜಸ್ವ–ಮೂಲ(ಪ್ರಭೃತ) | *26.65* | *26.65* | *17.72* | *(–)8.93(34)* |
| | ಪೂರಕ | *0* | | | |
| | ಬಂಡವಾಳ–ಮೂಲ(ಪುರಸ್ಕೃತ) | 4,564.89 | 6,592.25 | 6,450.82 | (–)141.43(2) |
| | ಪೂರಕ | 2,027.36 | | | |
| | ಬಂಡವಾಳ–ಮೂಲ(ಪ್ರಭೃತ) | *44.00* | *44.00* | *43.61* | *(–)0.39(1)* |
| | ಪೂರಕ | *0* | | | |
| 2016–17 | ರಾಜಸ್ವ–ಮೂಲ(ಪುರಸ್ಕೃತ) | 2,177.26 | 2,234.19 | 2,319.69 | (+)85.50(4) |
| | ಪೂರಕ | 56.93 | | | |
| | ರಾಜಸ್ವ–ಮೂಲ(ಪ್ರಭೃತ) | *27.50* | *27.50* | *16.76* | *(–)10.74(39)* |
| | ಪೂರಕ | *0* | | | |
| | ಬಂಡವಾಳ–ಮೂಲ(ಪುರಸ್ಕೃತ) | 5,177.23 | 7,531.02 | 7,049.40 | (–)481.62(6) |
| | ಪೂರಕ | 2,353.79 | | | |
| | ಬಂಡವಾಳ–ಮೂಲ(ಪ್ರಭೃತ) | *42.50* | *42.50* | *28.42* | *(–)14.08(33)* |

*ಆಕರ: ಅನುದಾನ ವಹಿ*

2014–15 ಮತ್ತು 2015–16ರ ಅವಧಿಯಲ್ಲಿ ರಾಜಸ್ವ ಪುರಸ್ಕೃತ ವಿಭಾಗದಲ್ಲಿ ಬಳಕೆಯಾಗದ ಅವಕಾಶಗಳು ಒಟ್ಟು ಅವಕಾಶದ ಶತಾಂಶವಾಗಿ ಕ್ರಮವಾಗಿ 12 ಮತ್ತು 11ರಷ್ಟು ಇದ್ದು 2016–17ರಲ್ಲಿ ಶೇಕಡಾ 4ರಷ್ಟು ಹೆಚ್ಚಳವಾಗಿತ್ತು. ರಾಜಸ್ವ ಪ್ರಭೃತದಡಿಯಲ್ಲಿ ಪಥಾಂತರವು ಶೇಕಡಾ 24ರಿಂದ 39ರ ನಡುವೆ ಹಾಗೂ ಬಂಡವಾಳ ಪುರಸ್ಕೃತ ವಿಭಾಗದಲ್ಲಿ ಶೇಕಡಾ 2ರಿಂದ 13 ಮತ್ತು ಬಂಡವಾಳ ಪ್ರಭೃತ ವಿಭಾಗದಲ್ಲಿ ಶೇಕಡಾ 1ರಿಂದ 33ರ ನಡುವೆ ಇತ್ತು.

### 2.9.2.3 ಆಯವ್ಯಯ ರಾಜಸ್ವ ಮತ್ತು ಬಂಡವಾಳ

ಆಯವ್ಯಯವನ್ನು ರಾಜಸ್ವ ಮತ್ತು ಬಂಡವಾಳ ಹಾಗೂ ಯೋಜನೆ ಮತ್ತು ಯೋಜನೇತರಗಳಡಿಯಲ್ಲಿ ಅನುದಾನಗಳಿಗಾಗಿ ಸವಿವರ ಬೇಡಿಕೆಗಳಡಿ ಮಂಡಿಸಲಾಗುತ್ತದೆ. 2014–15 ರಿಂದ 2016–17ರ ಅವಧಿಯಲ್ಲಿ ರಾಜಸ್ವ/ಬಂಡವಾಳಗಳಡಿಯಲ್ಲಿ ಅವಕಾಶ/ವೆಚ್ಚಗಳ ವಿಂಗಡಣೆಯ ವಿವರವನ್ನು **ಕೋಷ್ಟಕ 2.17** ಮತ್ತು **2.18**ರಲ್ಲಿ ನೀಡಲಾಗಿದೆ.

**ಕೋಷ್ಟಕ 2.17: ರಾಜಸ್ವ**

**(ಕೋಟಿ ರೂಪಾಯಿಗಳಲ್ಲಿ)**

| ವರ್ಷ | ವಿಭಾಗ | ಪೂರಕವನ್ನು ಒಳಗೊಂಡಂತೆ ಆಯವ್ಯಯ | | ವೆಚ್ಚ | | ಪಥಾಂತರ –ಶೇಕಡಾವಾರು | |
|---|---|---|---|---|---|---|---|
| | | ಯೋಜನೇತರ | ಯೋಜನೆ | ಯೋಜನೇತರ | ಯೋಜನೆ | ಯೋಜನೇತರ | ಯೋಜನೆ |
| 2014–15 | ಪುರಸ್ಕೃತ | 2,152.20 | 337.88 | 1,870.22 | 318.67 | (–)13 | (–)6 |
| | *ಪ್ರಭೃತ* | *26.00* | *0* | *19.82* | *0.00* | *(–)24* | *0* |
| 2015–16 | ಪುರಸ್ಕೃತ | 1968.27 | 295.00 | 1,696.15 | 313.71 | (–)14 | (+)6 |
| | *ಪ್ರಭೃತ* | *26.65* | *0.00* | *17.72* | *0.00* | *(–)34* | *0* |
| 2016–17 | ಪುರಸ್ಕೃತ | 2,066.55 | 167.64 | 1,692.68 | 627.01 | (–)18 | (+)274 |
| | *ಪ್ರಭೃತ* | *27.50* | *0.00* | *16.76* | *0* | *(–)39* | *0* |

*ಆಕರ: ಅನುದಾನ ವಹಿ*

ಮೇಲಿನ ಕೋಷ್ಟಕದಲ್ಲಿ ಕಾಣಿಸುವಂತೆ, ಯೋಜನೆ (ಪುರಸ್ಕೃತ) ವಿಭಾಗದ ಅಡಿಯಲ್ಲಿ 2014–15ರಲ್ಲಿ ಶೇಕಡಾ 6ರಷ್ಟು ಉಳಿತಾಯವಾಗಿತ್ತು ಹಾಗೂ 2015–16ರಲ್ಲಿ ಶೇಕಡಾ 6ರಷ್ಟು ಹೆಚ್ಚಳವಾಗಿತ್ತು. 2016–17ರಲ್ಲಿ ಕೇಂದ್ರ ರಸ್ತೆ ನಿಧಿಯಿಂದ ರಾಜ್ಯ ರಸ್ತೆ ಅಭಿವೃದ್ಧಿ ಯೋಜನೆಗಳಿಗೆ ನೀಡಬೇಕಾದ ಅನುದಾನಕ್ಕಾಗಿ ಹಂಚಿಕೆಯಾದ ಅವಕಾಶವು (₹171.85 ಕೋಟಿ) ವಾಸ್ತವವಾಗಿ ನಿಧಿ ಲೆಕ್ಕಕ್ಕೆ (ಸಾರ್ವಜನಿಕ ಲೆಕ್ಕ) ವರ್ಗಾವಣೆಯಾದ ಮೊತ್ತಕ್ಕಿಂತ (₹489.63 ಕೋಟಿ) ಕಡಿಮೆಯಿದ್ದುದರಿಂದ ವೆಚ್ಚವು ಆಯವ್ಯಯದಲ್ಲಿ ಹಂಚಿಕೆಯಾದ ಅವಕಾಶಕ್ಕಿಂತ ಹೆಚ್ಚಾಗಿತ್ತು.

ಯೋಜನೇತರ ವಿಭಾಗದಲ್ಲಿ, ಪಥಾಂತರವು ಪುರಸ್ಕೃತ ವಿಭಾಗದಲ್ಲಿ ಶೇಕಡಾ 13ರಿಂದ 18ರಷ್ಟಿದ್ದು ಪ್ರಭೃತ ವಿಭಾಗದಲ್ಲಿ ಶೇಕಡಾ 24ರಿಂದ 39ರಷ್ಟಿತ್ತು. ಆಯವ್ಯಯದ ಹೊರಗಿನ ಸಂಸ್ಥೆಯಾದ ಕೆಆರ್‌ಡಿಸಿಎಲ್‌ಗೆ ಋಣ ಸೇವೆಗಳಿಗಾಗಿ 2015–16ರಲ್ಲಿ ಒದಗಿಸಿದ ಅವಕಾಶವು ಅವಶ್ಯಕ ಮೊತ್ತಕ್ಕಿಂತ ಅತ್ಯಧಿಕವಾಗಿದ್ದುದು ಇದಕ್ಕೆ ಕಾರಣವಾಗಿತ್ತು. ಇಲಾಖೆಯು ಬಡ್ಡಿ ದರದ ಇಳಿಕೆಯ ಬಗ್ಗೆ ಮಾಹಿತಿಯನ್ನು ಹೊಂದಿದ್ದು ಇದರಿಂದ ಋಣ ಸೇವೆಗಳಿಗೆ ಕಡಿಮೆ ಮೊತ್ತದ ಅವಶ್ಯಕತೆ ಇತ್ತು ಎಂಬುದನ್ನೂ ಗಮನಿಸಲಾಗಿತ್ತು. ಆದರೆ, ಪ್ರಸಕ್ತ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳದೆ ಮುಂದಿನ ವರ್ಷದ ಆಯವ್ಯಯದಲ್ಲಿ ಅವಕಾಶವನ್ನು ಒದಗಿಸಲಾಗಿತ್ತು. ಇದಕ್ಕೆ ಉತ್ತರವಾಗಿ (ಅಕ್ಟೋಬರ್ 2017) ಆರ್ಥಿಕ ಇಲಾಖೆಯಿಂದ 2015–16ರಲ್ಲಿ ₹5.65 ಕೋಟಿ ಮತ್ತು 2016–17ರಲ್ಲಿ ₹9.40 ಕೋಟಿಗಳ ಮೊತ್ತವನ್ನು ಹಿಂದಕ್ಕೆ ಪಡೆಯಲಾಗಿದೆ ಎಂದು ಆಂತರಿಕ ಆರ್ಥಿಕ ಸಲಹೆಗಾರರು ತಿಳಿಸಿದ್ದಾರೆ. ಆದರೆ ಅವಶ್ಯಕತೆಯಿದ್ದ ಮೊತ್ತಕ್ಕಿಂತ ಹೆಚ್ಚಿನ ಅವಕಾಶವನ್ನು ಆಯವ್ಯಯದಲ್ಲಿ ಸೇರಿಸಲಾಗಿತ್ತು ಎಂಬುದು ವಾಸ್ತವ ಸಂಗತಿಯಾಗಿದೆ.

**ಕೋಷ್ಟಕ 2.18: ಬಂಡವಾಳ**

(ಕೋಟಿ ರೂಪಾಯಿಗಳಲ್ಲಿ)

| ವರ್ಷ | ವಿಭಾಗ | ಪೂರಕವನ್ನು ಒಳಗೊಂಡಂತೆ ಆಯವ್ಯಯ | | ವೆಚ್ಚ | | ಪಥಾಂತರ –ಶೇಕಡಾವಾರು | |
|---|---|---|---|---|---|---|---|
| | | ಯೋಜನೇತರ | ಯೋಜನೆ | ಯೋಜನೇತರ | ಯೋಜನೆ | ಯೋಜನೇತರ | ಯೋಜನೆ |
| 2014–15 | ಪುರಸ್ಕೃತ | 45.00 | 5,703.15 | 0.00 | 5,009.88 | 100 | 12 |
| | *ಪ್ರಭೃತ* | *45.00* | *0.00* | *45.00* | *0.00* | *0* | *0* |
| 2015–16 | ಪುರಸ್ಕೃತ | 0.00 | 6,592.25 | 0.00 | 6,450.82 | 0 | 2 |
| | *ಪ್ರಭೃತ* | *44.00* | *0.00* | *43.60* | *0.00* | *1* | *0* |
| 2016–17 | ಪುರಸ್ಕೃತ | 0.00 | 7,531.02 | 0.00 | 7,049.40 | 0 | 6 |
| | *ಪ್ರಭೃತ* | *42.50* | *0.00* | *28.42* | *0.00* | *33* | *0* |

*ಆಕರ: ಅನುದಾನ ವಹಿ*

ಮೇಲಿನ ಕೋಷ್ಟಕದಲ್ಲಿ ತೋರಿಸಿರುವಂತೆ, ಯೋಜನೆ (ಪುರಸ್ಕೃತ) ವೆಚ್ಚದ ಅಡಿಯಲ್ಲಿನ ಪಥಾಂತರವು ಶೇಕಡಾ 2ರಿಂದ 12ರಷ್ಟಿತ್ತು. ಯೋಜನೇತರ(ಪುರಸ್ಕೃತ)ದ ಅಡಿಯಲ್ಲಿ 2014–15ರ ಆಯವ್ಯಯದಲ್ಲಿ ಪುರಸ್ಕೃತ ವಿಭಾಗದ ಬದಲಾಗಿ ಪ್ರಭೃತ ವಿಭಾಗದಲ್ಲಿ ಅವಕಾಶವನ್ನು ಒದಗಿಸಿದ್ದರಿಂದ ಆದ ತಪ್ಪಿನ ದೆಸೆಯಿಂದ ಪಥಾಂತರವು ಶೇಕಡಾ 100ರಷ್ಟಿದ್ದು ಆ ಅವಕಾಶವನ್ನು ಅಧ್ಯರ್ಪಣೆ ಮಾಡಿ, ಕೆಎಫ್‌ಆರ್‌ಎ. ಕಾಯ್ದೆ 2002ರ ಪರಿಚ್ಛೇದ 2ರ ಪರಿಷ್ಕೃತ ನಿಯಮಕ್ಕೆ ಹೊಂದುವಂತೆ ಪೂರಕ ಅಂದಾಜಿನಲ್ಲಿ ಪುರಸ್ಕೃತ ವಿಭಾಗದಲ್ಲಿ ಅವಕಾಶ ಪಡೆಯಲಾಗಿತ್ತು. 2016–17ರಲ್ಲಿ ಆಯವ್ಯಯದ ಹೊರಗಿನ ಸಂಸ್ಥೆಯಾದ ಕೆಆರ್‌ಡಿಸಿಎಲ್‌ಗೆ ಋಣ ಸೇವೆಯ ಜವಾಬ್ದಾರಿಗಾಗಿ ಒದಗಿಸಿದ ಅವಕಾಶವು ಅವಶ್ಯಕ ಮೊತ್ತಕ್ಕಿಂತ ಅಧಿಕವಾಗಿದ್ದುದರಿಂದ ಪ್ರಭೃತವಿಭಾಗದಲ್ಲಿ ಶೇಕಡಾವಾರು ಪಥಾಂತರವು 33ರಷ್ಟಿತ್ತು. ಆಯವ್ಯಯ ತಯಾರಿಕೆಯ ಕೆಲಸವು ಪರಿಣಾಮಕಾರಿಯಾಗಿರದ ಕಾರಣದಿಂದ ಅನವಶ್ಯಕ ಮೊತ್ತಗಳ ಅವಕಾಶ ಒದಗಿಸುವಿಕೆ ಹಾಗೂ ಅದರಿಂದ ವರ್ಷದ ಬಂಡವಾಳ ವೆಚ್ಚವನ್ನು ಅಧಿಕವಾಗಿ ತೋರಿಸುವಿಕೆಯಲ್ಲಿ ಪರಿಣಮಿಸಿತ್ತು ಎಂಬುದನ್ನೂ ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾಗಿದೆ. ಆಂತರಿಕ ಆರ್ಥಿಕ ಸಲಹೆಗಾರರು ತಮ್ಮ ಉತ್ತರದಲ್ಲಿ, ಪ್ರಸಕ್ತ ವರ್ಷದಲ್ಲಿ ₹6.80 ಕೋಟಿಯಷ್ಟು ಅವಕಾಶವನ್ನು ಆರ್ಥಿಕ ಇಲಾಖೆಯು ಹಿಂಪಡೆದಿತ್ತು ಎಂದು ತಿಳಿಸಿದ್ದಾರೆ. ಆದರೆ, ಆರ್ಥಿಕ ಇಲಾಖೆಯು ಹಿಂಪಡೆದ ಮೇಲೂ ₹7.28 ಕೋಟಿಗಳಷ್ಟು ಅವಕಾಶವು ಬಳಕೆಯಾಗದೇ ಉಳಿದಿದ್ದು ಇದಕ್ಕೆ ಯಾವುದೇ ನಿಖರವಾದ ಕಾರಣಗಳು ಕಂಡುಬರಲಿಲ್ಲ.

### 2.9.2.4 ಆಡಳಿತಾತ್ಮಕ/ತಾಂತ್ರಿಕ ಮಂಜೂರಾತಿ ಪಡೆಯದ ಹೊಸ ಕಾಮಗಾರಿಗಳ ಸೇರ್ಪಡೆ

ಕರ್ನಾಟಕ ಆಯವ್ಯಯ ಕೈಪಿಡಿ (ಕೆಬಿಎಮ್)ಯ ಕಂಡಿಕೆ 132 ಮತ್ತು 134ರಲ್ಲಿ ಮುಖ್ಯ ಅಭಿಯಂತರರು(ಸಿಇ) ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ಪಡೆದ ಹೊಸ ಬೃಹತ್ ಕಾಮಗಾರಿಗಳನ್ನು ಮಾತ್ರ ಆಯವ್ಯಯದ ಅಂದಾಜಿನಲ್ಲಿ ಸೇರಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕೆಂದು ತಿಳಿಸಿದೆ. ಆದರೆ 2014–15 ಮತ್ತು 2016–17ರಲ್ಲಿ, ಒಟ್ಟು 3,551 ಕಾಮಗಾರಿಗಳಲ್ಲಿ (ಆಯವ್ಯಯ ಅಂದಾಜು ₹7,378.34 ಕೋಟಿ), ಶೇಕಡಾ 94ರಷ್ಟಿರುವ 3,366 ಕಾಮಗಾರಿಗಳು (ಆಯವ್ಯಯ ಅಂದಾಜು ₹6,890.42 ಕೋಟಿ) ಆಡಳಿತಾತ್ಮಕ ಒಪ್ಪಿಗೆಯನ್ನೂ

ತಾಂತ್ರಿಕ ಮಂಜೂರಾತಿಯನ್ನೂ ಪಡೆಯದೆ ಆಯವ್ಯಯ ಅಂದಾಜಿನಲ್ಲಿ ಸೇರಿಸಲಾಗಿದ್ದ ವಿವರಗಳನ್ನು ಈ ಕೆಳಗೆ **ಕೋಷ್ಟಕ 2.19**ರಲ್ಲಿ ನೀಡಲಾಗಿದೆ:

**ಕೋಷ್ಟಕ 2.19: ಆಡಳಿತಾತ್ಮಕ ಅನುಮೋದನೆ ಪಡೆಯದ ಹೊಸ ಕಾಮಗಾರಿಗಳ ಸೇರ್ಪಡೆಯ ವಿವರಗಳು**

**(ಕೋಟಿ ರೂಪಾಯಿಗಳಲ್ಲಿ)**

| ವರ್ಷ* | ಲೆಕ್ಕ ಶೀರ್ಷಿಕೆ | ಒಟ್ಟು ಕಾಮಗಾರಿಗಳ ಸಂಖ್ಯೆ | ಮೊತ್ತ |
|---|---|---|---|
| 2014–15 | 5054 | 1,687 | 3,640.74 |
| 2016–17 | 5054 | 1,705 | 3,534.75 |
| | 4059 | 159 | 202.85 |
| ಒಟ್ಟು | | **3,551** | **7,378.34** |

*ಆಕರ: ಲೋ.ಕಾ. ಬಿ.ಓ. ಮತ್ತು ಜ.ಸಾ. ಇ – ಅನುಬಂಧ–ಇ*

**2015–16ನೇ ವರ್ಷದಲ್ಲಿ ಹೊಸ ಬೃಹತ್‌ಕಾಮಗಾರಿಗಳ ಅನುಬಂಧ–ಇ ಯನ್ನು ಸಿದ್ಧಪಡಿಸಿಲ್ಲ*

ಈ ವಿಷಯವನ್ನು ಗಮನಕ್ಕೆ ತಂದಾಗ, ಇದಕ್ಕೆ ಉತ್ತರವಾಗಿ ಆಯವ್ಯಯ ಅಂದಾಜು ಮತ್ತು 'ಅನುಬಂಧ–ಇ'ಯನ್ನು ಆರ್ಥಿಕ ಇಲಾಖೆಯು ಪರಿಶೀಲಿಸಿದ ನಂತರವಷ್ಟೇ, ಅನುಬಂಧ–ಇ ಯಲ್ಲಿ ಸೇರಿಸಿದ ಹೊಸ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ನೀಡಲಾಗುವುದು ಎಂದು ತಿಳಿಸಿದೆ. ಮೇಲೆ ತಿಳಿಸಿರುವ ಅವಕಾಶ ನಿಯಮಗಳ ದೃಷ್ಟಿಯಿಂದ ಈ ಉತ್ತರವನ್ನು ಒಪ್ಪಿಕೊಳ್ಳಲಾಗುವುದಿಲ್ಲ.

### 2.9.2.5 ಬಳಕೆಯಾಗದೇ ಉಳಿದ ಅವಕಾಶಗಳ ಅಧ್ಯರ್ಪಣೆ /ಆಯವ್ಯಯ ವ್ಯಪಗತೆ

ಕರ್ನಾಟಕ ಆಯವ್ಯಯ ಕೈಪಿಡಿಯ ಕಂಡಿಕೆ 264 ಮತ್ತು ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 314ರಲ್ಲಿ ನಿಗದಿಪಡಿಸಿರುವಂತೆ, ನಿಯಂತ್ರಣಾಧಿಕಾರಿಗಳು ಎಲ್ಲಾ ನಿರೀಕ್ಷಿತ ಉಳಿತಾಯಗಳನ್ನು ತಮ್ಮ ಗಮನಕ್ಕೆ ಬಂದ ಕೂಡಲೇ ಸವಿವರವಾಗಿ ಮತ್ತು ಸೂಕ್ತ ಕಾರಣದೊಂದಿಗೆ ತತ್‌ಕ್ಷಣ ಆರ್ಥಿಕ ಇಲಾಖೆಗೆ ವರದಿ ಮಾಡಬೇಕು. ಉಳಿಕೆ ಹಣದಲ್ಲಿ ಯಾವುದೇ ಭಾಗವನ್ನು ನಿಶ್ಚಿತವಾಗಿ ಊಹಿಸಲಾಗದ ನಿರೀಕ್ಷಿತ ಹೆಚ್ಚುವರಿ ವೆಚ್ಚಕ್ಕಾಗಿ ಅಥವಾ ಅದಾಗಲೇ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದಿದ್ದರೆ ಕಾಯ್ದಿರಿಸುವಂತಿಲ್ಲ. ಅಧ್ಯರ್ಪಣೆ ಮಾಡಿದ ಮೊತ್ತವು ಬಳಕೆಯಾಗದ ಅವಕಾಶಕ್ಕಿಂತ ಕಡಿಮೆ ಅಥವಾ ಶೂನ್ಯವಾಗಿರುವುದರಿಂದ ಈ ನಿಯಮವನ್ನು ಉಲ್ಲಂಘಿಸಲಾಗಿದೆ. ಈ ರೀತಿಯಾಗಿ ಕೈಪಿಡಿಯಲ್ಲಿರುವ ನಿರ್ದೇಶನಗಳನ್ನು ನಿಯಂತ್ರಣಾಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸಿರುವುದಿಲ್ಲ. ಬಳಕೆಯಾಗದ ಭಾಗವನ್ನು ಅಧ್ಯರ್ಪಣ ಮಾಡಿದ ವಿವರಗಳ ಸ್ಥಿತಿಯನ್ನು **ಕೋಷ್ಟಕ 2.20**ರಲ್ಲಿ ತೋರಿಸಲಾಗಿದೆ:

**ಕೋಷ್ಟಕ 2.20: ಬಳಕೆಯಾಗದೇ ಉಳಿದ ಅವಕಾಶಗಳ ಅಧ್ಯರ್ಪಣೆ**

**(ಕೋಟಿ ರೂಪಾಯಿಗಳಲ್ಲಿ)**

| ವರ್ಷ | ವಿಭಾಗ | ಉಳಿತಾಯ | | ಅಧ್ಯರ್ಪಣೆ ಮಾಡಿದ ಮೊತ್ತ | |
|---|---|---|---|---|---|
| | | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ |
| 2014–15 | ಪುರಸ್ಕೃತ | (–)301.19 | (–)738.27 | 0.00(0) | 510.39(69) |
| | ಪ್ರಭೃತ | *(–)6.18* | *0.00* | *0.00(0)* | *0.00(0)* |
| 2015–16 | ಪುರಸ್ಕೃತ | (–)253.41 | (–)141.43 | 132.49(52) | 123.08(87) |
| | ಪ್ರಭೃತ | *(–)8.93* | *(–)0.39* | *8.93(100)* | *0.39(100)* |
| 2016–17 | ಪುರಸ್ಕೃತ | (+)85.50 | (–)481.62 | 218.20 | 351.06(73) |
| | ಪ್ರಭೃತ | (–)10.74 | (–)14.08 | 10.74(100) | 14.08(100) |

*ಆಕರ: ಅನುದಾನ ವಹಿ*

ರಾಜಸ್ವ ವಿಭಾಗಲ್ಲಿ ಶೇಕಡಾ 52 ರಿಂದ 100ರಷ್ಟು ಬಂಡವಾಳ ವಿಭಾಗದಲ್ಲಿ ಶೇಕಡಾ 69 ರಿಂದ 100ರಷ್ಟು ಅಧ್ಯರ್ಪಣೆಯಾಗಿತ್ತೆಂಬುದನ್ನು ಗಮನಿಸಲಾಗಿದೆ.

### 2.9.2.6 ಸತತ ಉಳಿತಾಯ

2014–17ರ ಅವಧಿಯಲ್ಲಿ ಪ್ರತಿ ವರ್ಷವೂ ಕೆಲವು ನಿರ್ದಿಷ್ಟ ಶೀರ್ಷಿಕೆಗಳಡಿಯಲ್ಲಿ ಆಯವ್ಯಯ ಹಂಚಿಕೆಯ ಗಣನೀಯ ಪ್ರಮಾಣದ ಮೊತ್ತವು ಬಳಕೆಯಾಗದೆ ಉಳಿದಿರುವುದು ಆಯಾ ವರ್ಷಗಳಲ್ಲಿ ತೋರಿಸಿರುವ ಹಣಕಾಸು ವೆಚ್ಚಗಳ ಗುರಿ ಸಾಧಿಸದಿರುವುದನ್ನು ಸೂಚಿಸುತ್ತದೆಂಬುದನ್ನು ಗಮನಿಸಲಾಗಿತ್ತು. ಕರ್ನಾಟಕ ಆಯವ್ಯಯ ಕೈಪಿಡಿಯ ನಿಯಮ 110ರ ಅಗತ್ಯತೆಯಂತೆ, ಹಿಂದಿನ ವರ್ಷಗಳ ವೆಚ್ಚಗಳನ್ನು ಪರಿಗಣಿಸಿ ಆಯವ್ಯಯದಲ್ಲಿ ಹಂಚಿಕೆಗಳನ್ನು ಮಾಡದೇ ಇರುವುದರಿಂದ ಲೆಕ್ಕಶೀರ್ಷಿಕೆಗಳಲ್ಲಿ ಸತತ ಉಳಿಕೆಯಾಗಿರುವುದನ್ನು **ಕೋಷ್ಟಕ2.21**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ: 2.21: ಸತತ ಉಳಿತಾಯ**

**(ಕೋಟಿ ರೂಪಾಯಿಗಳಲ್ಲಿ)**

| ಕ್ರಮ ಸಂಖ್ಯೆ | ಲೆಕ್ಕ ಶೀಷಿಕೆ | ಉಳಿತಾಯ | | |
|---|---|---|---|---|
| | | 2014–15 | 2015–16 | 2016–17 |
| 1 | 2059–80–053–4–00–200 ನಿರ್ವಹಣೆ | 34.78 | 29.71 | 42.69 |
| 2 | 2059–80–800–0–06–051 ಸಾಮಾನ್ಯ ವೆಚ್ಚಗಳು | 42.68 | 78.18 | 80.55 |
| 3 | 3054–03–102–0–01–200 ನಿರ್ವಹಣೆ | 8.67 | 2.53 | 8.66 |
| 4 | 3054–04–105–0–01–200 ನಿರ್ವಹಣೆ | 3.92 | 1.38 | 4.53 |
| 5 | 3054–80–190–0–01–240 *ಋಣಸೇವೆಗಳು(ಪ್ರಭೃತ)* | *6.18* | *8.93* | *10.74* |
| 6 | 5054–04–337–0–01–422 ವಿಶೇಷ ಅಂಶಗಳ ಯೋಜನೆ | 10.52 | 0.87 | 187.58 |
| 7 | 5054–04–337–0–01–423 ಗಿರಿಜನ ಅಭಿವೃದ್ಧಿ ಯೋಜನೆ | 5.84 | 3.92 | 72.59 |
| 8 | 5054–04–337–0–84–436 ನಬಾರ್ಡ್ ಕಾಮಗಾರಿಗಳು | 27.90 | 72.82 | 25.12 |
| 9 | 5054–03–337–0–86–172 ರಸ್ತೆಗಳು | 274.05 | 66.51 | 99.04 |

*ಆಕರ: ಅನುದಾನ ವಹಿ*

ಇದಕ್ಕೆ ಉತ್ತರವಾಗಿ ಇಲಾಖೆಯು ಆಯವ್ಯಯದಲ್ಲಿ ಒದಗಿಸಿರುವ ಅವಕಾಶವನ್ನು ಸಕಾಲದಲ್ಲಿ ಬಳಸಿಕೊಳ್ಳುವಂತೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದೆ.

### 2.9.2.7 ವೆಚ್ಚದ ಒತ್ತಡ

ಮೊತ್ತಗಳ ಬಿಡುಗಡೆ, ಸೆಳೆತ ಮತ್ತು ಲೆಕ್ಕ ವಿಧಾನಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಆರ್ಥಿಕ ಇಲಾಖೆಯು ಜಾರಿ ಮಾಡಿದ 9 ಸೆಪ್ಟಂಬರ್ 2004ರ ಆದೇಶದ ಕಂಡಿಕೆ 6ರಂತೆ, ಆಡಳಿತ ಇಲಾಖೆ ಮತ್ತು ಇಲಾಖಾ ಮುಖ್ಯಸ್ಥರುಗಳು ಆರ್ಥಿಕ ವರ್ಷದ ಉಳಿದ ಭಾಗಕ್ಕೆ ಬೇಕಾದ ವೆಚ್ಚವನ್ನು ಎಚ್ಚರಿಕೆಯಿಂದ ಮತ್ತು ಉಳಿದಿರುವ ಅನುದಾನಗಳ ಒಳಗೆ ಯೋಜಿಸಬೇಕಾಗಿದೆ. ಬಿಲ್ಲುಗಳ ಒಗ್ಗೂಡಿಸುವಿಕೆ ಹಾಗೂ ಮಾರ್ಚ್ ತಿಂಗಳಲ್ಲಿ ವೆಚ್ಚದ ಒತ್ತಡವನ್ನು ತಪ್ಪಿಸಬೇಕಿದೆ. ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳ ನಿರೀಕ್ಷಿತ ವೆಚ್ಚಗಳಿಗೆ ಅಗತ್ಯವಿರುವ ಸೂಕ್ತ ಮಟ್ಟದ ಪ್ರಾಧಿಕಾರದಿಂದ ಅನುಮೋದನೆ ಪಡೆದು ಆಡಳಿತಾತ್ಮಕ ಆದೇಶಗಳನ್ನು ಮುಂಚಿತವಾಗಿಯೇ ಹೊರಡಿಸಬೇಕು. ಹಾಗಿದ್ದರೂ 2016–17ರ ವರ್ಷಗಳಲ್ಲಿ ಮಾರ್ಚ್ ತಿಂಗಳಿನ ಶೇಕಡಾವಾರು ವೆಚ್ಚವು 36ರಿಂದ 66ರ ವ್ಯಾಪ್ತಿಯಲ್ಲಿದುದನ್ನು ಗಮನಿಸಲಾಯಿತು. ಉದ್ದೇಶ–ಲೆಕ್ಕಶೀರ್ಷಿಕೆವಾರು ವೆಚ್ಚಗಳ ವಿವರಗಳನ್ನು **ಕೋಷ್ಟಕ–2.22** ರಲ್ಲಿ ನೀಡಲಾಗಿದೆ.

**ಕೋಷ್ಟಕ 2.22: ವೆಚ್ಚದ ಒತ್ತಡ**

(ಕೋಟಿ ರೂಪಾಯಿಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | 2016–17 | | |
|---|---|---|---|---|
| | | ಒಟ್ಟು ವೆಚ್ಚ | ಕೊನೆಯ ತ್ರೈಮಾಸಿಕದ ವೆಚ್ಚ ಮತ್ತು ಶೇಕಡವಾರು | ಕೊನೆಯ ತ್ರೈಮಾಸಿಕದ ವೆಚ್ಚ ಮತ್ತು ಶೇಕಡವಾರು |
| 1 | 2059–80–053–4–00–200 ನಿರ್ವಹಣೆ | 302.16 | 228.86(76) | 178.66(59) |
| 2 | 3054–03–102–0–01–200 ನಿರ್ವಹಣೆ | 39.74 | 30.48(77) | 26.34(66) |
| 3 | 3054–03–337–0–05–200 ನಿರ್ವಹಣೆ | 305.43 | 218.25(75) | 167.73(55) |
| 4 | 3054–04–337–1–09–172 ರಸ್ತೆಗಳು | 263.16 | 237.59(79) | 126.94(48) |
| 5 | 3054–04–337–1–10–200 ನಿರ್ವಹಣೆ | 363.76 | 222.10(61) | 138.19(38) |
| 6 | 4059–80–051–0–32–386 ನಿರ್ಮಾಣ | 245.96 | 82.53(42) | 69.54(36) |
| 7 | 5054–03–101–0–02–132 ಬಂಡವಾಳ ವೆಚ್ಚಗಳು | 90.30 | 52.18(58) | 50.02(55) |
| 8 | 5054–80–190–0–01–132 ಬಂಡವಾಳ ವೆಚ್ಚಗಳು | 332.00 | 215.32(65) | 215.34(65) |

*ಆಕರ: ಅನುದಾನ ವಹಿ*

## 2.10 ಕುಟುಂಬ ಪಿಂಚಣಿಯ ಹೆಚ್ಚುವರಿ ಪಾವತಿ

ಕರ್ನಾಟಕ ಸರ್ಕಾರ ನೌಕರರ (ಕುಟುಂಬ ಪಿಂಚಣಿ) ನಿಯಮಗಳು 2002ರನ್ವಯ ಸರ್ಕಾರಿ ನೌಕರನು/ಳು ಸೇವೆಯಲ್ಲಿರುವಾಗ ಮರಣ ಹೊಂದಿದರೆ ಆತನ/ಆಕೆಯ ಕುಟುಂಬವು ಸಾಮಾನ್ಯವಾಗಿ ಪಡೆಯುವ ಕುಟುಂಬ ಪಿಂಚಣಿಯ ಎರಡರಷ್ಟು ಅಥವಾ ನೌಕರನು/ಳು ಕೊನೆಯ ಬಾರಿ ಪಡೆದ ವೇತನದ ಶೇಕಡ 50ರಷ್ಟು ಇವೆರಡರಲ್ಲಿ ಯಾವುದು ಕಡಿಮೆಯೋ ಅಷ್ಟನ್ನು ಆ ಕುಟುಂಬ ಪಿಂಚಣಿಗೆ ಮರಣ ದಿನಾಂಕದ ಮರುದಿನಾಂಕದಿಂದ ಏಳು ವರ್ಷಗಳವರೆಗೆ ಅಥವಾ ಆ ಸರ್ಕಾರಿ ನೌಕರನು/ಳು ಜೀವಂತವಾಗಿದ್ದಿದ್ದರೆ ಅವನು/ಳು 65 ವರ್ಷಗಳನ್ನು ಮುಟ್ಟುವವರೆಗೂ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೂ ಅರ್ಹನಾಗಿರುತ್ತಾನೆ/ಳೆ. ಬಹುತೇಕ ಪಿಂಚಣಿ ಪಾವತಿಯು ಬ್ಯಾಂಕುಗಳ ಮುಖಾಂತರ ಆಗುತ್ತಿದೆ. ಬ್ಯಾಂಕುಗಳು ಪಿಂಚಣಿಯ ಮೊತ್ತವನ್ನು ಸಂಬಂಧಿಸಿದ ಉಳಿತಾಯ ಖಾತೆಗಳಿಗೆ ಜಮೆ ಮಾಡಿ ನಂತರ ಕ್ಲೇಮುಗಳನ್ನು ಸಂಪರ್ಕ ಶಾಖೆಯ ಮೂಲಕ ಕಳುಹಿಸುತ್ತವೆ. ಈ ಕ್ಲೇಮುಗಳನ್ನು ಖಜಾನೆಗಳು ಇತ್ಯರ್ಥ ಮಾಡುತ್ತವೆ.

2016–17ರಲ್ಲಿ 32 ಜಿಲ್ಲಾ ಖಜಾನೆಗಳಲ್ಲಿನ 151 ಪ್ರಕರಣಗಳಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳು ಕುಟುಂಬ ಪಿಂಚಣಿಯನ್ನು ಪಿಂಚಣಿ ಪಾವತಿ ಆದೇಶದಲ್ಲಿ ಸೂಚಿಸಿರುವ ದಿನಾಂಕದ ನಂತರವೂ ಅಧಿಕ ದರದಲ್ಲಿ ಪಾವತಿ ಮಾಡಿದ್ದು, ಇದರಿಂದಾಗಿ ₹1.39 ಕೋಟಿಗಳ ಹೆಚ್ಚುವರಿ ಪಾವತಿಯಾಗಿದೆ (**ಅನುಬಂಧ 2.15**). ಮುಂದುವರೆದು, 21 ಖಜಾನೆಗಳಲ್ಲಿ 79 ಪ್ರಕರಣಗಳಲ್ಲಿ 2015–16ರ ತಪಾಸಣೆಯಲ್ಲಿ ಗಮನಕ್ಕೆ ತಂದಿದ್ದರೂ ಸಹ ₹0.55 ಕೋಟಿಗಳ ಹೆಚ್ಚುವರಿ ಪಾವತಿಯನ್ನು ಮುಂದುವರೆಸಿದ್ದು, ಇದು ಒಟ್ಟಾರೆ ₹1.23 ಕೋಟಿಗಳ ಮುಂದುವರೆಸಿದ ಹೆಚ್ಚಿನ ಪಾವತಿಯಲ್ಲಿ ಫಲಿತವಾಗಿದೆ (**ಅನುಬಂಧ 2.16**).

ಬ್ಯಾಂಕುಗಳಿಂದ ಈ ಪ್ರಕರಣಗಳ ಪರಿಶೀಲನೆಯಲ್ಲಿನ ವಿಫಲತೆ ಮತ್ತು ಅಧಿಕ ದರದಲ್ಲಿ ಕುಟುಂಬ ಪಿಂಚಣಿಯನ್ನು ಪಾವತಿಸಲು ಇರುವ ಸ್ಥಗಿತ ದಿನಾಂಕವನ್ನು ಅನುಸರಿಸದಿರುವುದರಿಂದ ಈ ರೀತಿ ಹೆಚ್ಚುವರಿ ಪಾವತಿಯಾಗಿದೆ.

ಇಂತಹುದೇ ಅಂಶವನ್ನು 2015–16ರಲ್ಲಿ ರಾಜ್ಯ ಹಣಕಾಸಿನ ವ್ಯವಹಾರಗಳ ವರದಿಯಲ್ಲಿ ಗಮನಕ್ಕೆ ತಂದಿದ್ದಾಗ ಅದಕ್ಕೆ ಉತ್ತರವಾಗಿ, (ಡಿಸೆಂಬರ್ 2016) ಸಾರ್ವಜನಿಕ ವಲಯದ ಬ್ಯಾಂಕುಗಳಿಂದ

ಪಾವತಿ ಮಾಡಿದ ಹೆಚ್ಚುವರಿ ಮೊತ್ತವನ್ನು ತಕ್ಷಣವೇ ವಸೂಲಿ ಮಾಡಲು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಮತ್ತು ಎಲ್ಲಾ ಖಜಾನೆಗಳಿಗೂ ಅವುಗಳ ವ್ಯಾಪ್ತಿಯಲ್ಲಿ ಬರುವ ಬ್ಯಾಂಕ್ ಶಾಖೆಗಳಿಗೆ ಹೆಚ್ಚುವರಿ ಪಾವತಿಯನ್ನು ತಪ್ಪಿಸಲು ಪಾವತಿಗಿಂತ ಒಂದು ತಿಂಗಳು ಮುಂಚಿತವಾಗಿಯೇ ಮುನ್ಸೂಚನೆಗಳನ್ನು ಕಳಿಸುವಂತೆ ಸೂಚನೆಗಳನ್ನು ಕಳಿಸಲಾಗಿದೆ ಎಂದು ಉತ್ತರಿಸಿದೆ. ಆದರೂ, ಹೆಚ್ಚುವರಿ ಪಾವತಿಯನ್ನು ತಡೆಗಟ್ಟಲು ತೆಗೆದುಕೊಂಡ ಕ್ರಮಗಳು ಅತೃಪ್ತಿದಾಯಕವಾಗಿವೆ ಯೆಂಬುದನ್ನು 2016–17ರಲ್ಲಿ ಮುಂದುವರೆದಿರುವ ಹೆಚ್ಚುವರಿ ಪಾವತಿಯು ಸೂಚಿಸುತ್ತಿದೆ.

ಮುಂದುವರೆದು, ಹೆಚ್ಚುವರಿ ಮೊತ್ತವಾಗಿ ₹1.39ಕೋಟಿ ಮೊತ್ತವು ಬ್ಯಾಂಕ್‌ಗಳಿಗೆ ಪುನರ್ಪಾವತಿ ಆಗಿರುವುದರಿಂದ ಸರ್ಕಾರವು ಅದೇ ಮೊತ್ತವನ್ನು 14 ದಿನದ ಖಜಾನೆ ಬಿಲ್ಲುಗಳಲ್ಲಿ ಹೂಡಿದ್ದರೆ ಬರಬಹುದಾಗಿದ್ದ ₹0.04 ಕೋಟಿ ಮೊತ್ತದ ತಡೆಯಬಹುದಾಗಿದ್ದ ಬಡ್ಡಿಯ ನಷ್ಟವಾಗಿದೆ (**ಅನುಬಂಧ 2.17**). (ಬಡ್ಡಿಯನ್ನು 2016–17ರಲ್ಲಿ ಮಾತ್ರ ಕಂಡುಹಿಡಿದ ಪ್ರಕರಣಗಳ ಆಧಾರದ ಮೇಲೆ ಮತ್ತು ತಪಾಸಣಾ ವರದಿಗಳನ್ನು ಕಳುಹಿಸಿದ ತಿಂಗಳಿಂದ ಮಾರ್ಚ್ 2017ರ ಕೊನೆಯವರೆಗೆ ಲೆಕ್ಕ ಮಾಡಲಾಗಿದೆ).

## 2.11 ಸಮಾಪನ

ಮೇಲಿನ ಕಂಡಿಕೆಗಳಲ್ಲಿ ಹೇಳಿದಂತೆ ರಾಜ್ಯ ಸರ್ಕಾರವು ವಿವೇಚನಾಯುಕ್ತ ಹಣಕಾಸು ನಿರ್ವಹಣೆಗೆ ಆಯವ್ಯಯ ತಯಾರಿಕೆ ಮತ್ತು ವೆಚ್ಚ ನಿಯಂತ್ರಣದ ಮೇಲೆ ಬಿಗಿಯಾದ ನಿಯಂತ್ರಣವನ್ನು ಸಾಧಿಸಬೇಕಾಗಿದೆ. ಅಪರ್ಯಾಪ್ತ ನಿಯಂತ್ರಣಗಳಿಂದಾಗಿ ಕೆಳಗಿನ ಅನಿಯತಗಳು ಕಂಡುಬಂದಿವೆ.

- 2016–17ರಲ್ಲಿ ಒಟ್ಟು ಅವಕಾಶದ ಮೊತ್ತವಾದ ₹1,86,052.34 ಕೋಟಿಗೆ ಪ್ರತಿಯಾಗಿ ₹1,73,045.02 ಕೋಟಿ ವೆಚ್ಚವಾಗಿರುತ್ತದೆ. ಇದರ ಪರಿಣಾಮವಾಗಿ ₹13,007.32 ಕೋಟಿ (ಶೇಕಡಾ ಏಳು) ಬಳಕೆಯಾಗದೆ ಉಳಿದಿದೆ. ₹45.69 ಕೋಟಿಯಷ್ಟು ಅವಕಾಶವು ಬಂಡವಾಳ/ರಾಜಸ್ವದ ಅಡಿಯಲ್ಲಿ ತಪ್ಪಾಗಿ ವರ್ಗೀಕರಣವಾಗಿದ್ದು ವಿತ್ತೀಯ ಸೂಚಕಗಳ ಮೇಲೆ ಪರಿಣಾಮ ಬೀರಿರುವುದರಿಂದ ಆಯವ್ಯಯ ಸಿದ್ಧತೆಯು ಇನ್ನೂ ಹೆಚ್ಚು ನಿಖರವಾಗಬೇಕಾಗಿದೆ.

- ₹6,057.11 ಕೋಟಿಯಷ್ಟು ಮೊತ್ತವನ್ನು ಶಾಸಕಾಂಗದ ಅನುಮೋದನೆಗೆ ಮುನ್ನ ಕಾರ್ಯನಿರ್ವಾಹಕ ಆದೇಶಗಳ ಮೂಲಕ ಬಿಡುಗಡೆ ಮಾಡಲಾಗಿದೆ. ಇದು ಪೂರಕ ಅಂದಾಜಿನ ಶೇಕಡಾ 43ರಷ್ಟಿರುತ್ತದೆ. ಶಾಸಕಾಂಗದ ಅನುಮೋದನೆಗೆ ಮುನ್ನ ಹೊರಡಿಸುವ ಆದೇಶಗಳು ಅತ್ಯಂತ ಕನಿಷ್ಠ ಪ್ರಮಾಣದಲ್ಲಿ ಮತ್ತು ಸಾರ್ವಜನಿಕ ಲೆಕ್ಕ ಸಮಿತಿಯ ಶಿಫಾರಸ್ಸಿನ ಮೇಲೆ ವಿಶೇಷ ಸಂದರ್ಭಗಳಲ್ಲಿ ಮಾತ್ರ ಜಾರಿಗೊಳಿಸಬೇಕಾಗುತ್ತದೆ. ₹1.03 ಕೋಟಿ ಮೊತ್ತವನ್ನೊಳಗೊಂಡ ಮೂರು ಕಾರ್ಯನಿರ್ವಾಹಕ ಆದೇಶಗಳು ಮುಂದಿನ ಪೂರಕ ಅಂದಾಜಿನಲ್ಲಿ ಸಕ್ರಮಗೊಳ್ಳದೆ ಇದ್ದುದರಿಂದ ₹0.44 ಕೋಟಿಗಳ ಅಧಿಕ ವೆಚ್ಚದಲ್ಲಿ ಪರಿಣಮಿಸಿದೆ.

- 2012–13ರಿಂದ 2016–17ರ ಅವಧಿಗೆ ಸಂಬಂಧಿಸಿದ ಅಧಿಕ ವೆಚ್ಚವಾದ ₹2,210.07 ಕೋಟಿ ಮೊತ್ತವನ್ನು ಸಂವಿಧಾನದ ಅನುಚ್ಛೇದ 205ರ ಅನುಸಾರವಾಗಿ ಸಕ್ರಮಗೊಳಿಸಬೇಕಾಗಿದೆ.

- 'ಹೊಸ ಸೇವೆ/ಹೊಸ ಸೇವಾ ಸಾಧನ'ದ ಅಡಿಯಲ್ಲಿ ಪರಿಗಣಿಸಬಹುದಾಗಿದ್ದ, ಐದು ಅನುದಾನಗಳನ್ನೊಳಗೊಂಡ, ಐದು ಪ್ರಕರಣಗಳಲ್ಲಿ, ₹124.12 ಕೋಟಿ ಮೊತ್ತದ ಅಧಿಕ ವೆಚ್ಚವನ್ನು ಶಾಸನ ಸಭೆಯ ಒಪ್ಪಿಗೆಯಿಲ್ಲದೆ ಮಾಡಲಾಗಿದೆ.

- ಕೆಎಫ್‌ಆರ್‌ಯ ವಿಭಾಗ (6)ರ ಉಪವಿಭಾಗ (5)ರಲ್ಲಿ ತಿಳಿಸಿರುವುದಕ್ಕನುಗುಣವಾಗಿ ರಾಜಸ್ವ ವ್ಯವಹಾರಗಳನ್ನು ತಟಸ್ಥಗೊಳಿಸಲು, ಪೂರಕ ಅವಕಾಶವು ಸಂಪೂರ್ಣವಾಗಿ ಇತರ ಬೇಡಿಕೆಗಳಡಿಯ ಉಳಿತಾಯದ ಆಧಾರವನ್ನು ಪಡೆದಿರಲಿಲ್ಲ

- 15 ಉದ್ದೇಶ ಶೀರ್ಷಿಕೆಗಳಲ್ಲಿ ₹2,047.40 ಕೋಟಿಯ ಪೂರಕ ಅವಕಾಶವು ಅನವಶ್ಯಕವಾಗಿತ್ತು ಹಾಗೂ 7 ಉದ್ದೇಶ ಶೀರ್ಷಿಕೆಗಳಡಿ ಮಾಡಿದ ₹203.82 ಕೋಟಿಯು ಅಧಿಕತಮವೆಂದು ಸಾಬೀತಾಗಿತ್ತು.

- 62 ಪ್ರಸಂಗಗಳಲ್ಲಿ ಪುನರ್ವಿನಿಯೋಗವು ಅಸಮರ್ಪಕವಾಗಿ ಆಗಿರುವುದು, ಬಳಕೆಯಾಗದ ಅಥವಾ ಹೆಚ್ಚುವರಿ ವೆಚ್ಚಕ್ಕೆ ಕಾರಣವಾಗಿದೆ.

- 15 ಅನುದಾನಗಳಲ್ಲಿ ₹1,789.36 ಕೋಟಿಗಳನ್ನು ಆರ್ಥಿಕ ವರ್ಷದ ಕೊನೆಯ ಎರಡು ಕೆಲಸದ ದಿನಗಳಂದು ಅಧ್ಯರ್ಪಣೆ ಮಾಡಲಾಗಿತ್ತು ಹಾಗೂ

- ಕುಟುಂಬ ಪಿಂಚಣಿಯ ಹೆಚ್ಚುವರಿ ಪಾವತಿಯನ್ನು ಗಮನಿಸಲಾಗಿತ್ತು.

## 2.12 ಸಲಹೆಗಳು

- *ಅವಕಾಶಗಳು ಬಳಕೆಯಾಗದೆ ಉಳಿಯುವ ಪ್ರಕರಣಗಳನ್ನು ತಪ್ಪಿಸಲು ಆಯವ್ಯಯ ಅಂದಾಜಿನ ನಿಯಂತ್ರಣವನ್ನು ಎಲ್ಲಾ ಇಲಾಖೆಗಳಲ್ಲೂ ಬಲಪಡಿಸಬೇಕಾಗಿದೆ.*

- *ಆಯವ್ಯಯ ಬೇಡಿಕೆಗಳ ತೀವ್ರವಾದ ಪರಿಶೀಲನೆ, ವೆಚ್ಚಗಳ ಗತಿಯ ಕಠಿಣವಾದ ನಿಗಾವಣೆ ಮತ್ತು ಕರ್ನಾಟಕ ಆಯವ್ಯಯ ಕೈಪಿಡಿಯ ಅಂಶಗಳ ಚಾಚೂ ತಪ್ಪದ ಪರಿಪಾಲನೆಗಳು ವೆಚ್ಚಗಳು ಮಿತಿ ಮೀರುವ ಸಂಭವವನ್ನು ಕಡಿಮೆಗೊಳಿಸಲು ಅತ್ಯವಶ್ಯಕವಾಗಿವೆ. 2012-13ರಿಂದ ಅಧಿಕ ವೆಚ್ಚಗಳನ್ನು ಸಕ್ರಮಗೊಳಿಸಲು ಅಂತಹ ಪ್ರಕರಣಗಳನ್ನು ಸಾರ್ವಜನಿಕ ಲೆಕ್ಕ ಸಮಿತಿಯ ಮುಂದಿಡುವ ಪ್ರಯತ್ನಕ್ಕೆ ಆದ್ಯತೆ ನೀಡಬೇಕಾಗಿದೆ.*

- *ಅಳತೆ ಮೀರಿದ/ಅನವಶ್ಯಕ ಪೂರಕ ಅವಕಾಶಗಳನ್ನು ತಪ್ಪಿಸಬೇಕಾಗಿದೆ.*

- *ಪುನರ್ವಿನಿಯೋಗ ಆದೇಶಗಳು ಕರ್ನಾಟಕ ಆರ್ಥಿಕ ಸಂಹಿತೆಯ ನಿಯಮಗಳಿಗೆ ಅನುಸಾರವಾಗಿ ಜಾರಿಯಾಗಬೇಕು ಹಾಗೂ*

- *ಕುಟುಂಬ ಪಿಂಚಣಿಯ ಪಾವತಿಯನ್ನು ನಿರ್ಬಂಧಿಸುವ ದಿನಾಂಕಕ್ಕೆ ಬದ್ಧವಾಗಿರಲು ಅನುಕೂಲವಾಗುವಂತೆ ಕ್ರಮಬದ್ಧ ತಪಾಸಣೆಯನ್ನು ಖಾತರಿಗೊಸಬೇಕಾಗಿದೆ.*

# ಅಧ್ಯಾಯ - III

# ಆರ್ಥಿಕ ನಿರೂಪಣೆ

# ಅಧ್ಯಾಯ – 3

## ಆರ್ಥಿಕ ನಿರೂಪಣೆ

ಹಣಕಾಸು ನಿಯಮಗಳ ಅನುಸರಣೆಯನ್ನು ಆಧರಿಸಿದ ಸ್ವಸ್ಥ ಆಂತರಿಕ ಆರ್ಥಿಕ ನಿರೂಪಣಾ ವ್ಯವಸ್ಥೆಯು ಉತ್ತಮ ಆಡಳಿತದ ಲಕ್ಷಣಗಳಲ್ಲಿ ಒಂದಾಗಿದೆ. ಈ ಅಧ್ಯಾಯವು ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರದ ಇಲಾಖೆಗಳ, ವಿವಿಧ ಹಣಕಾಸು ನಿಯಮಗಳ, ಕಾರ್ಯ ವಿಧಾನಗಳ ಮತ್ತು ನಿರ್ದೇಶನಗಳ ಅನುಸರಣೆಯ ಸ್ಥಿತಿಯನ್ನು ಮತ್ತು ಸ್ಥೂಲ ನೋಟವನ್ನು ನೀಡುತ್ತದೆ.

## 3.1 ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದಿರುವಿಕೆ

ಇಲಾಖಾ ಅಧಿಕಾರಿಗಳು ನೀಡಿದ ಅನುದಾನಗಳಿಗೆ ಅನುದಾನಿತ ಸಂಸ್ಥೆಗಳಿಂದ ಬಳಕೆ ಪ್ರಮಾಣಪತ್ರಗಳನ್ನು ಪಡೆಯಬೇಕು ಹಾಗೂ ಪರಿಶೀಲನೆಯ ನಂತರ ಅವುಗಳನ್ನು ಮಂಜೂರಾದ ದಿನಾಂಕದಿಂದ 18 ತಿಂಗಳುಗಳೊಳಗೆ (ಬೇರೆ ರೀತಿ ನಿಗದಿಪಡಿಸಿದ್ದರ ಹೊರತಾಗಿ) ಮಹಾಲೇಖಾಪಾಲರಿಗೆ (ಲೆ ಮತ್ತು ಹ) ಕಳುಹಿಸಬೇಕೆಂದು ಆರ್ಥಿಕ ನಿಯಮಗಳು ವಿಧಿಸುತ್ತವೆ. ಆದರೆ, 2016–17ರವರೆಗೆ ನೀಡಿದ ಅನುದಾನಗಳಿಗೆ ಸಂಬಂಧಿಸಿದಂತೆ ಸಲ್ಲಿಸಬೇಕಿದ್ದ ₹723.94 ಕೋಟಿಗಳ ಒಟ್ಟು ಮೊತ್ತದ 173 ಬಳಕೆ ಪ್ರಮಾಣ ಪತ್ರಗಳು **ಅನುಬಂಧ 3.1**ರಲ್ಲಿ ವಿವರಿಸಿದಂತೆ ಬಾಕಿಯಿತ್ತು. ವರ್ಷವಾರು ಬಾಕಿಯಿರುವ ಬಳಕೆ ಪ್ರಮಾಣಪತ್ರಗಳನ್ನು **ಕೋಷ್ಟಕ 3.1**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.1: ವರ್ಷವಾರು ಬಾಕಿಯಿರುವ ಬಳಕೆ ಪ್ರಮಾಣ ಪತ್ರಗಳು**

(ಕೋಟಿ ರೂಪಾಯಿಗಳಲ್ಲಿ)

| ವರ್ಷ | ಬಾಕಿ ಇರುವ ಸಂಖ್ಯೆ | ಮೊತ್ತ |
|---|---|---|
| 2014–15 ರವರೆಗೆ | 53 | 61.98 |
| 2015–16 | 49 | 261.47 |
| 2016–17* | 71 | 400.49 |
| ಮೊತ್ತ | **173** | **723.94** |

*ಆಕರ: ಹಣಕಾಸು ಲೆಕ್ಕಗಳು*

**ಮೇಲೆ ಸೂಚಿಸಿರುವ ವರ್ಷವು ಯಾವ ವರ್ಷದಲ್ಲಿ ಬರಬೇಕಿದೆಯೋ ಆ ವರ್ಷಕ್ಕೆ ಸಂಬಂಧಿಸಿದೆ. ಅಂದರೆ, ವಾಸ್ತವವಾಗಿ ಹಣ ಪಡೆದ 18 ತಿಂಗಳ ನಂತರ.*

ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸದಿರುವ ಹೆಚ್ಚು ಪಾಲು ಪ್ರಕರಣಗಳು ವೈದ್ಯಕೀಯ ಮತ್ತು ಜನಾರೋಗ್ಯ ಇಲಾಖೆಗೆ (ಶೇಕಡ 66) ಸಂಬಂಧಿಸಿವೆ. ಬಳಕೆ ಪ್ರಮಾಣಪತ್ರಗಳ ಸಲ್ಲಿಸುವಿಕೆಯ ಬಾಕಿಯಿರುವುದು, ಇಲಾಖೆಯಿಂದ ಅನುದಾನಿಕರಿಗೆ ಬಿಡುಗಡೆಯಾದ ಅನುದಾನದ ಬಳಕೆಯ ನಿರ್ವಹಣೆಯ ಕೊರತೆಯನ್ನು ಸೂಚಿಸುತ್ತದೆ. ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸದೆ ಇರುವುದು ಸಾರ್ವಜನಿಕ ಹಣದ ಮೇಲಿನ ಶಾಸಕಾಂಗದ ನಿಯಂತ್ರಣದ ಮೂಲ ಉದ್ದೇಶವನ್ನು ವಿಫಲಗೊಳಿಸುವುದಲ್ಲದೆ, ವಿವಿಧ ಯೋಜನೆ/ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಿದ ಮೊತ್ತಗಳ ಬಳಕೆಯಾಗದಿರುವಿಕೆ, ದುರ್ಬಳಕೆ ಅಥವಾ ಅನಧಿಕೃತ ಉದ್ದೇಶಗಳಿಗೆ ಬಳಕೆಯಾಗುವ ಸಂಭವವಿರುತ್ತದೆ.

### 3.1.1 ಪೌರಾಡಳಿತ ನಿರ್ದೇಶಕರಿಂದ ಬಳಕೆ ಪ್ರಮಾಣಪತ್ರವನ್ನು ಸಲ್ಲಿಸದಿರುವಿಕೆ

ಸ್ಥಳೀಯ ನಗರ ಸಂಸ್ಥೆಗಳಿಗೆ ಹಂಚಿಕೆಯು ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಆಧರಿಸಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆಯಾಗಿದ್ದ ಅನುದಾನದಲ್ಲಿ (₹9,231.14 ಕೋಟಿ), ₹673.14 ಕೋಟಿಗಳಷ್ಟು ಬಳಕೆಯಾಗದೇ ಉಳಿದಿದ್ದು ಇದು ಒಟ್ಟು ಅವಕಾಶದ ಶೇಕಡಾ ಏಳರಷ್ಟಾಗುತ್ತದೆ. 2016–17ರಲ್ಲಿ ಬಳಕೆಯಾಗದೇ ಉಳಿದ ಅವಕಾಶದಲ್ಲಿ, ಶೇಕಡಾ 37ರಷ್ಟು (₹254.34 ಕೋಟಿ) ನಿರ್ದೇಶನಾಲಯವು ಬಳಕೆ ಪ್ರಮಾಣಪತ್ರವನ್ನು ಸಲ್ಲಿಸದಿರುವುದು ಕಾರಣವಾಗಿದೆ. ಈ ವಿಷಯವನ್ನು ಅಕ್ಟೋಬರ್ 2017ರಲ್ಲಿ ಇಲಾಖೆಯ ಗಮನಕ್ಕೆ ತರಲಾಗಿದ್ದು ಉತ್ತರ ನಿರೀಕ್ಷಿಸಲಾಗಿದೆ.

## 3.2 ಸರ್ಕಾರದಿಂದ ಗಣನಾರ್ಹವಾಗಿ ಆರ್ಥಿಕ ಬೆಂಬಲ ಪಡೆದ ಸಂಸ್ಥೆಗಳಿಂದ ಸಂಬಂಧಿಸಿದ ಮಾಹಿತಿ ಬಾರದಿರುವಿಕೆ

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯ, ಅಧಿಕಾರ ಮತ್ತು ಸೇವಾ ನಿಬಂಧನೆಗಳು) ಅಧಿನಿಯಮ, 1971ರ 14 ಮತ್ತು 15ನೇ ಪರಿಚ್ಛೇದಗಳಡಿ, ಲೆಕ್ಕ ಪರಿಶೋಧನೆಗೆ ಒಳಪಡುವ ಸಂಸ್ಥೆಗಳನ್ನು ಗುರುತಿಸಲು ಅನುವಾಗುವಂತೆ, ಸರ್ಕಾರದ ಇಲಾಖಾ ಮುಖ್ಯಸ್ಥರುಗಳು ಪ್ರತಿ ವರ್ಷವೂ ₹25 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಆರ್ಥಿಕ ಸಹಾಯ ಪಡೆದಿರುವ ಸಂಸ್ಥೆಗಳ, ಸಹಾಯ ನೀಡಿದ ಉದ್ದೇಶ ಮತ್ತು ಒಟ್ಟು ವೆಚ್ಚದ ವಿವರಗಳ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಬೇಕಾಗಿರುತ್ತದೆ.

ಹದಿನಾಲ್ಕು ಇಲಾಖೆಗಳು 1 ರಿಂದ 20 ವರ್ಷಗಳಿಗಿಂತಲೂ ಹೆಚ್ಚಿನ ಅವಧಿಗೆ ₹25 ಲಕ್ಷ ಅಥವಾ ಅದಕ್ಕಿಂತಲೂ ಹೆಚ್ಚಿನ ಅನುದಾನ ಪಡೆದಿರುವ 438 ಸಂಸ್ಥೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಲ್ಲಿಸಿರುವುದಿಲ್ಲ. ವಿವರಗಳನ್ನು **ಅನುಬಂಧ 3.2**ರಲ್ಲಿ ನೀಡಲಾಗಿದೆ. ಅನುಬಂಧದಲ್ಲಿ ತೋರಿಸಿರುವಂತೆ, ಹೆಚ್ಚಿನ ಸಂಸ್ಥೆಗಳು ಶಿಕ್ಷಣ ಇಲಾಖೆಗೆ ಸಂಬಂಧಿಸಿದ್ದಾಗಿವೆ.

ಆರ್ಥಿಕ ಇಲಾಖೆಯು (ಡಿಸೆಂಬರ್ 2013) ಅಗತ್ಯ ಮಾಹಿತಿಯನ್ನು ನೇರವಾಗಿ ಮಹಾಲೇಖಾಪಾಲರಿಗೆ ಸಲ್ಲಿಸಬೇಕು ಎಂದು ಎಲ್ಲಾ ಆಡಳಿತ ಇಲಾಖೆಗಳ ಕಾರ್ಯದರ್ಶಿಗಳಿಗೆ ಸುತ್ತೋಲೆ ಸೂಚನೆಗಳನ್ನು ಹೊರಡಿಸಿತ್ತು. ಆದರೆ, ಅನುಸರಣೆಯಲ್ಲಿ ಯಾವುದೇ ಗಮನಾರ್ಹ ಸುಧಾರಣೆ ಕಂಡುಬಂದಿಲ್ಲ.

## 3.3 ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆಯ ಮತ್ತು ರಾಜ್ಯ ಶಾಸಕಾಂಗದ ಮುಂದೆ ಲೆಕ್ಕ ಪರಿಶೋಧನಾ ವರದಿಗಳನ್ನು ಮಂಡಿಸುವಿಕೆಯ ಸ್ಥಿತಿ

ರಾಜ್ಯ ಸರ್ಕಾರವು ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳು, ನಗರಾಭಿವೃದ್ಧಿ ಮುಂತಾದ ಕ್ಷೇತ್ರಗಳಲ್ಲಿ ಹಲವು ಸ್ವಾಯತ್ತ ಸಂಸ್ಥೆಗಳನ್ನು ಸ್ಥಾಪಿಸಿದೆ. ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯ, ಅಧಿಕಾರ ಮತ್ತು ಸೇವಾ ನಿಬಂಧನೆಗಳು) ಅಧಿನಿಯಮ, 1971ರ 19 ಮತ್ತು 20ನೇ ಪರಿಚ್ಛೇದಗಳಡಿ ರಾಜ್ಯದಲ್ಲಿನ 11 ಸಂಸ್ಥೆಗಳ ಲೆಕ್ಕಪತ್ರಗಳ ಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ವಹಿಸಲಾಗಿದೆ. ಈ ಸಂಸ್ಥೆಗಳ ವ್ಯವಹಾರಗಳು, ಕಾರ್ಯಚಟುವಟಿಕೆಗಳು ಮತ್ತು ಲೆಕ್ಕಗಳು ಕ್ರಮಬದ್ಧತೆಯ ಲೆಕ್ಕ ಪರಿಶೋಧನೆ/ ಅನುಸರಣೆ ಆಂತರಿಕ ನಿರ್ವಹಣೆ ಮತ್ತು ಆರ್ಥಿಕ ನಿಯಂತ್ರಣದ ಸಮೀಕ್ಷೆ, ವ್ಯವಸ್ಥೆ ಹಾಗೂ ಕಾರ್ಯವಿಧಾನಗಳ ಸಮೀಕ್ಷೆ ಮುಂತಾದವುಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯನ್ನು ನಡೆಸಲಾಗುತ್ತದೆ.

ಒಂದು ಸ್ವಾಯತ್ತ ಸಂಸ್ಥೆಯ 2014–15ನೇ ಸಾಲಿನ, ಐದು ಸ್ವಾಯತ್ತ ಸಂಸ್ಥೆಗಳ 2015–16ನೇ ಸಾಲಿನ ಹಾಗೂ ನಾಲ್ಕು ಸ್ವಾಯುತ್ತ ಸಂಸ್ಥೆಗಳ 2016–17ನೇ ಸಾಲಿನ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳು ರಾಜ್ಯವಿಧಾನಮಂಡಲದಲ್ಲಿ ಇನ್ನೂ ಮಂಡಿಸಬೇಕಾಗಿದೆ. ಒಂದು ಸ್ವಾಯತ್ತ ಸಂಸ್ಥೆಯ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಯನ್ನು 2006–07ನೇ ಸಾಲಿನಿಂದ ಮಂಡಿಸಿರುವುದಿಲ್ಲ.

ಸಂಸ್ಥೆಗಳು, ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ವಹಿಸಿರುವಿಕೆಯ ಸದ್ಯದ ಸ್ಥಿತಿಗತಿ, ಸಲ್ಲಿಸಿರುವ ಲೆಕ್ಕಪತ್ರಗಳು, ಲೆಕ್ಕಪರಿಶೋಧನಾ ವರದಿಗಳ ಜಾರಿ ಮತ್ತು ರಾಜ್ಯವಿಧಾನಮಂಡಲದಲ್ಲಿ ಅವುಗಳ ಮಂಡನೆಯ ಸ್ಥಿತಿಯನ್ನು **ಅನುಬಂಧ 3.3**ರಲ್ಲಿ ನೀಡಲಾಗಿದೆ.

## 3.4 ಇಲಾಖಾ ವಾಣಿಜ್ಯ ಉದ್ದಿಮೆಗಳು

ಕೆಲವು ಸರ್ಕಾರಿ ಇಲಾಖೆಗಳ ಇಲಾಖಾ ಉದ್ದಿಮೆಗಳು ವಾಣಿಜ್ಯ ಮತ್ತು ಅರೆವಾಣಿಜ್ಯ ಸ್ವರೂಪದ ಚಟುವಟಿಕೆಗಳನ್ನು ನಡೆಸುತ್ತಿದ್ದು, ಈ ಉದ್ದಿಮೆಗಳು ಪ್ರತಿ ವರ್ಷವೂ ನಿಗದಿತ ನಮೂನೆಯಲ್ಲಿ, ಸರ್ಕಾರವು ಈ ಉದ್ದಿಮೆಗಳ ಕಾರ್ಯ ವೈಖರಿಯನ್ನು ಅಳೆಯಲು ಸಹಕಾರಿಯಾಗುವಂತೆ, ಹಣಕಾಸು ನಿರ್ವಹಣೆಯ ಕಾರ್ಯಫಲಗಳನ್ನು ತೋರಿಸುವಂತಹ ಪ್ರಪತ್ರ ಲೆಕ್ಕಗಳನ್ನು ತಯಾರಿಸಬೇಕಾಗಿದೆ. ಇಲಾಖಾ ನಿರ್ವಹಣೆಯ ವಾಣಿಜ್ಯ ಮತ್ತು ಅರೆವಾಣಿಜ್ಯ ಉದ್ದಿಮೆಗಳ ಅಂತಿಮಗೊಳಿಸಿದ ಲೆಕ್ಕಗಳು ಈ

ಉದ್ದಿಮೆಗಳ ಸಮಗ್ರ ಆರ್ಥಿಕ ಸ್ವಾಸ್ಥ್ಯವನ್ನು ಮತ್ತು ಅವುಗಳ ವ್ಯವಹಾರಗಳನ್ನು ನಿರ್ವಹಿಸುವಲ್ಲಿನ ಸಮರ್ಥತೆಯನ್ನು ಪ್ರತಿಬಿಂಬಿಸುತ್ತದೆ. ಲೆಕ್ಕಗಳನ್ನು ಸಕಾಲದಲ್ಲಿ ಪೂರ್ಣಗೊಳಿಸದಿದ್ದಲ್ಲಿ ಈ ಸಂಸ್ಥೆಗಳಲ್ಲಿ ಸರ್ಕಾರದ ಹೂಡಿಕೆಗಳು, ಲೆಕ್ಕಪರಿಶೋಧನೆಯ/ ಶಾಸಕಾಂಗದ ಪರಿಶೀಲನೆಯಿಂದ ಹೊರಗೆ ಉಳಿಯುತ್ತವೆ. ಇದರ ಫಲವಾಗಿ, ಇವುಗಳ ಹೊಣೆಗಾರಿಕೆಗಳನ್ನು ಖಚಿತಪಡಿಸಿಕೊಳ್ಳುವ ಮತ್ತು ದಕ್ಷತೆಯನ್ನು ಹೆಚ್ಚಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದ್ದಲ್ಲಿ, ಅವುಗಳನ್ನು ಸಕಾಲದಲ್ಲಿ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ, ಇಂತಹ ವಿಳಂಬಗಳಿಂದ, ಸಂಭಾವ್ಯ ವಂಚನೆಯ ಅಪಾಯ ಮತ್ತು ಸಾರ್ವಜನಿಕ ಹಣದ ಸೋರುವಿಕೆಯ ಸಾಧ್ಯತೆ ಇರುತ್ತದೆ.

ಸರ್ಕಾರದ ಇಲಾಖಾ ಮುಖ್ಯಸ್ಥರು, ಈ ಉದ್ದಿಮೆಗಳು ಲೆಕ್ಕಗಳನ್ನು ನಿಗದಿತ ಸಮಯದಲ್ಲಿ ತಯಾರಿಸಿ ಪ್ರಧಾನ ಮಹಾಲೇಖಾಪಾಲರ ಪರಿಶೋಧನೆಗೆ ಸಲ್ಲಿಸುವುದನ್ನು ಖಚಿತಪಡಿಸಿಕೊಳ್ಳಬೇಕು. ಮುಚ್ಚಿಹೋಗಿರುವ/ವರ್ಗವಾಗಿರುವ/ಸಹಕಾರಿ ಒಕ್ಕೂಟಗಳಾಗಿ ಪರಿವರ್ತಿತವಾಗಿರುವ ಒಂಭತ್ತು ಉದ್ದಿಮೆಗಳಲ್ಲಿ ಎರಡು ಉದ್ದಿಮೆಗಳ ಪ್ರಪತ್ರ ಲೆಕ್ಕಗಳು 1969–70ರಿಂದ ಸಲ್ಲಿಕೆಯಾಗದೆ ಬಾಕಿ ಉಳಿದಿವೆ. ಉದ್ದಿಮೆಗಳ ಪ್ರಪತ್ರ ಲೆಕ್ಕಗಳ ತಯಾರಿಕೆಯಲ್ಲಿನ ಬಾಕಿಯ ಸ್ಥಿತಿಯನ್ನು **ಅನುಬಂಧ 3.4**ರಲ್ಲಿ ನೀಡಲಾಗಿದೆ.

ಹಿಂದಿನ ಲೆಕ್ಕ ಪರಿಶೋಧನೆ ವರದಿಯಲ್ಲಿಯೂ ಗಮನಕ್ಕೆ ತರಲಾಗಿದ್ದ ಈ ವಿಷಯಕ್ಕೆ ಉತ್ತರವಾಗಿ ಆರ್ಥಿಕ ಇಲಾಖೆಯು (ಡಿಸೆಂಬರ್ 2013) ಖಜಾನೆಗಳನ್ನು ನೇರ ಸಂಪರ್ಕ ಗಣಕೀಕರಣಗೊಳಿಸಿರುವಿಕೆ ಮತ್ತು ಬಿಲ್ಲುಗಳನ್ನು ಖಜಾನೆಗಳ ಮೂಲಕ ಸಲ್ಲಿಸಿ ಹಣ ಸೆಳೆಯುವಿಕೆಯ ವ್ಯವಸ್ಥೆಯಲ್ಲಿ, ಪ್ರಪತ್ರ ಲೆಕ್ಕಗಳನ್ನು ತಯಾರಿಸುವ ಅವಶ್ಯಕತೆ ಕಂಡು ಬರುವುದಿಲ್ಲವೆಂದು ತಿಳಿಸಿದೆ. ಈ ಸಂಸ್ಥೆಗಳ ಆಡಳಿತಾತ್ಮಕ ಇಲಾಖೆಗಳಿಗೆ ಪ್ರಪತ್ರ ಲೆಕ್ಕಪತ್ರಗಳನ್ನು ನಿರ್ವಹಿಸುವ ಅಗತ್ಯವಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಲು ಸೂಚಿಸಲಾಗಿದೆ ಎಂದೂ ಹೇಳಿದೆ. ಕರ್ನಾಟಕ ಸರ್ಕಾರ ವಿಮಾ ಇಲಾಖೆಯು ಪ್ರಪತ್ರ ಲೆಕ್ಕಪತ್ರಗಳನ್ನು ಕಳುಹಿಸುವುದನ್ನು ಮುಂದುವರೆಸಿದೆ. ಈ ವಿಷಯದಲ್ಲಿ ಮುಂದಿನ ಪ್ರಗತಿಯನ್ನು ನಿರೀಕ್ಷಿಸಲಾಗಿದೆ.

## 3.5 ಹಣ ದುರುಪಯೋಗಗಳು, ನಷ್ಟಗಳು, ಇತ್ಯಾದಿ

2016–17ರ ಅಂತ್ಯಕ್ಕೆ ₹18.11 ಕೋಟಿಗಳಷ್ಟು ಮೊತ್ತದ ಸರ್ಕಾರಿ ಹಣದ ದುರುಪಯೋಗ, ನಷ್ಟಗಳು ಮುಂತಾದ 29 ಪ್ರಕರಣಗಳು ಅಂತಿಮ ಕ್ರಮ ತೆಗೆದುಕೊಳ್ಳಲು ಬಾಕಿ ಇದ್ದವು. ಇಲಾಖಾವಾರು ಬಾಕಿ ಇರುವ ಪ್ರಕರಣಗಳು ಮತ್ತು ವರ್ಷವಾರು ವಿಶ್ಲೇಷಣೆಯನ್ನು **ಅನುಬಂಧ 3.5**ರಲ್ಲಿ ನೀಡಿದ್ದು, ಈ ಪ್ರಕರಣಗಳ ಸ್ವರೂಪವನ್ನು **ಅನುಬಂಧ 3.6**ರಲ್ಲಿ ನೀಡಲಾಗಿದೆ. ಪ್ರತಿ ವರ್ಗದಲ್ಲಿ ಬಾಕಿ ಇರುವ ಕಳವು ಮತ್ತು ದುರುಪಯೋಗ ಪ್ರಕರಣಗಳ ವಿವರಗಳನ್ನು **ಕೋಷ್ಟಕ 3.2**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.2: ಹಣ ದುರುಪಯೋಗ, ಕಳವು ಇತ್ಯಾದಿ ಬಾಕಿಯಿರುವ ಪ್ರಕರಣಗಳ ಸ್ವರೂಪಗಳು**

**(ಕೋಟಿ ರೂಪಾಯಿಗಳಲ್ಲಿ)**

| ಪ್ರಕರಣಗಳ ಸ್ವರೂಪ/ಲಕ್ಷಣಗಳು | ಪ್ರಕರಣಗಳ ಸಂಖ್ಯೆ | ಒಳಗೊಂಡ ಮೊತ್ತ |
|---|---|---|
| ಕಳವು | 04 | 0.05 |
| ದುರುಪಯೋಗ | 25 | 18.06 |
| ಒಟ್ಟು | **29** | **18.11** |

*ಆಕರ: ಮಹಾಲೇಖಾಪಾಲರು (ಸಾ ಮತ್ತು ಸಾ.ವ.ಲೆ.) ಕಛೇರಿ ಮತ್ತು ಮಹಾಲೇಖಾಪಾಲರು (ಆ ಮತ್ತು ರಾ.ವ.ಲೆ.) ಕಛೇರಿಯಿಂದ ಕ್ರೋಡೀಕರಿಸಿದ್ದು.*

ಸುಮಾರು ಶೇಕಡ 93ರಷ್ಟು ಮೊತ್ತವು ಲೋಕೋಪಯೋಗಿ ಕಾಮಗಾರಿಗಳು, ಬಂದರು ಹಾಗೂ ಒಳನಾಡು ಜಲ ಸಾರಿಗೆ ಇಲಾಖೆ (₹11.80 ಕೋಟಿ), ಸಮಾಜ ಕಲ್ಯಾಣ ಇಲಾಖೆ (₹3.37 ಕೋಟಿ) ಮತ್ತು ಗೃಹ ಇಲಾಖೆ (₹1.68 ಕೋಟಿ) ಗಳಿಗೆ ಸಂಬಂಧಿಸಿದ್ದಾಗಿದೆ.

## 3.6 ಉಗ್ರಾಣ ಮತ್ತು ದಾಸ್ತಾನು ಲೆಕ್ಕಪತ್ರಗಳು ಬಾರದಿರುವುದು

ವಿವಿಧ ಇಲಾಖೆಗಳ ಉಗ್ರಾಣ ಮತ್ತು ದಾಸ್ತಾನಿನ ಕ್ರೋಢೀಕೃತ ವಾರ್ಷಿಕ ಲೆಕ್ಕಪತ್ರಗಳು ಮರು ವರ್ಷದ ಜೂನ್ 15ರ ವೇಳೆಗೆ ಲೆಕ್ಕಪರಿಶೋಧನೆಗೆ ಸಲ್ಲಿಸಲ್ಪಡಬೇಕಾಗಿದೆ. ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ, ಜಲಸಂಪನ್ಮೂಲಗಳು ಮತ್ತು ಸಣ್ಣ ನೀರಾವರಿ ಇಲಾಖೆಗಳ ಅರ್ಧವಾರ್ಷಿಕ

ಲೆಕ್ಕಗಳು 15ನೇ ಡಿಸೆಂಬರ್ ಮತ್ತು ಮರು ವರ್ಷದ 15ನೇ ಜೂನ್ ಒಳಗೆ ಸ್ವೀಕೃತವಾಗಬೇಕಾಗಿದೆ. ಉಗ್ರಾಣ ಮತ್ತು ದಾಸ್ತಾನಿನ ಲೆಕ್ಕಪತ್ರಗಳ ಸ್ವೀಕೃತಿಯಲ್ಲಿನ ವಿಳಂಬಗಳನ್ನು ಲೆಕ್ಕಪರಿಶೋಧನಾ ವರದಿಗಳಲ್ಲಿ ಸತತವಾಗಿ ವ್ಯಾಖ್ಯಾನಿಸಲಾಗುತ್ತಿದೆ.

11 ಇಲಾಖೆಗಳ 75 ಕಛೇರಿಗಳು ಸಲ್ಲಿಸಬೇಕಾದ ಉಗ್ರಾಣ ಮತ್ತು ದಾಸ್ತಾನು ಲೆಕ್ಕಗಳು ಬಾಕಿ ಉಳಿದಿದ್ದು ವಿವರಗಳನ್ನು **ಅನುಬಂಧ 3.7**ರಲ್ಲಿ ನೀಡಲಾಗಿದೆ.

## 3.7 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು

ಕರ್ನಾಟಕ ಸರ್ಕಾರದ ಸಾದಿಲ್ವಾರು ವೆಚ್ಚ ಕೈಪಿಡಿ 1958ರ ನಿಯಮ 36ರಲ್ಲಿ ವಿಧಿಸಿರುವಂತೆ, ನಿಯಂತ್ರಣಾಧಿಕಾರಿಗಳು ಮತ್ತು ವಿತರಣಾಧಿಕಾರಿಗಳು ಸೇವಾ ಲೆಕ್ಕಶೀರ್ಷಿಕೆಗಳಿಗೆ ಖರ್ಚು ಹಾಕಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಹಣವನ್ನು ಸೆಳೆಯಬಹುದಾಗಿದ್ದು, ಅದಕ್ಕೆ ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳನ್ನು (ಅಂತಿಮ ವೆಚ್ಚಕ್ಕೆ ಸಮರ್ಥನೆಯಾಗಿ ವೋಚರುಗಳು) ಸಂಕ್ಷಿಪ್ತ ಸಾದಿಲ್ವಾರು ಬಿಲ್ಲು ಸೆಳೆದ ತಿಂಗಳಿನ ಮುಂದಿನ ತಿಂಗಳ 15ನೇ ದಿನಾಂಕಕ್ಕಿಂತ ಮೊದಲು ಖಜಾನೆಗಳ ಮೂಲಕ ಮಹಾಲೇಖಾಪಾಲರು (ಲೆ ಮತ್ತು ಹ) ಅವರಿಗೆ ಕಳುಹಿಸಬೇಕಾಗಿದೆ. ಮಾರ್ಚ್ 2017ರ ಅಂತ್ಯಕ್ಕೆ ₹84.81 ಕೋಟಿಗಳ ಮೊತ್ತದ 3,272 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು, **ಕೋಷ್ಟಕ 3.3**ರಲ್ಲಿ ವಿವರಿಸಿರುವಂತೆ ಸವಿವರ ಬಿಲ್ಲುಗಳು ಬಾರದೆ ಬಾಕಿ ಉಳಿದಿವೆ. ನಿಯಂತ್ರಣಾಧಿಕಾರಿಗಳು ತಕ್ಷಣದ ವಿತರಣೆಗೆ ಅಗತ್ಯವಿದ್ದ ಹೊರತು ಖಜಾನೆಯಿಂದ ಹಣವನ್ನು ಸೆಳೆಯದಿರುವುದನ್ನು ಖಚಿತಪಡಿಸಿಕೊಳ್ಳಬೇಕಾಗಿದೆ.

**ಕೋಷ್ಟಕ 3.3: ಬಾಕಿ ಇರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು**

**(ಕೋಟಿ ರೂಪಾಯಿಗಳಲ್ಲಿ)**

| ವರ್ಷ | ಬಾಕಿ ಇರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು | ಮೊತ್ತ |
|---|---|---|
| 2014–15ರವರೆಗೆ | 1,276 | 24.14 |
| 2015–16 | 396 | 18.62 |
| 2016–17 | 1,600 | 42.05 |
| ಒಟ್ಟು | **3,272** | **84.81** |

*ಆಕರ: ಹಣಕಾಸು ಲೆಕ್ಕಗಳು*

ಖಜಾನೆ ಕಾರ್ಯಜಾಲ ನಿರ್ವಹಣಾ ಕೇಂದ್ರದ (ಟಿಎನ್ಎಂಸಿ) ಅಂಕಿ–ಅಂಶಗಳನ್ನು ಅಳವಡಿಸಿಕೊಂಡಿರುವ ಕಾರಣದಿಂದ, ಹಿಂದಿನ ವರ್ಷಕ್ಕೆ ಹೋಲಿಸಿದರೆ, ಬಾಕಿಯಿರುವ ಸವಿವರ ಸಾದಿಲ್ವಾರು ಬಿಲ್ಲುಗಳು (₹220.85 ಕೋಟಿಗಳ ಮೊತ್ತದ 7493 ಬಿಲ್ಲುಗಳು) ಕಡಿಮೆಯಾಗಿದ್ದು, ಸೆಪ್ಟೆಂಬರ್ 9, 2004ರ ಸುತ್ತೋಲೆಯಲ್ಲಿ ಇರುವ ಸೂಚನೆಗಳ ಪ್ರಕಾರ ಬಾಕಿಯಿರುವ ಸವಿವರ ಸಾದಿಲ್ವಾರು ಬಿಲ್ಲುಗಳ ಕುರಿತು ನಿಗಾ ವಹಿಸುವಿಕೆಯು ಖಜಾನೆಯ ಜವಾಬ್ದಾರಿಯಾಗಿರುತ್ತದೆ.

ಬಾಕಿ ಇರುವ ಸವಿವರ ಸಾದಿಲ್ವಾರು ಬಿಲ್ಲುಗಳಲ್ಲಿ ಬಹುಪಾಲು ಪ್ರಧಾನ ಶೀರ್ಷಿಕೆ 2015–ಚುನಾವಣೆಗಳು (115 ಬಿಲ್ಲುಗಳು– ₹6.85ಕೋಟಿ) ಪ್ರಧಾನ ಶೀರ್ಷಿಕೆ 2055– ಪೊಲೀಸ್(72 ಬಿಲ್ಲುಗಳು ₹32.19 ಕೋಟಿ), ಪ್ರಧಾನ ಶೀರ್ಷಿಕೆ 2406–ಅರಣ್ಯ ಮತ್ತು ವನ್ಯಜೀವಿ (349 ಬಿಲ್ಲುಗಳು –₹9.25 ಕೋಟಿ) ಪ್ರಧಾನ ಶೀರ್ಷಿಕೆ 3475 – ಇತರೆ ಸಾಮಾನ್ಯ ಆರ್ಥಿಕ ಸೇವೆಗಳು (101 ಬಿಲ್ಲುಗಳು – ₹4.63 ಕೋಟಿ)ಗಳಿಗೆ ಸಂಬಂಧಿಸಿವೆ.

ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಿನ ಮೇಲೆ ಸೆಳೆದ ಮೊತ್ತವನ್ನು ಆಯಾ ಸೇವಾ ಪ್ರಧಾನ ಶೀರ್ಷಿಕೆಯಡಿ ಸಂಚಿತ ನಿಧಿಗೆ ಖರ್ಚು ಹಾಕಲಾಗುತ್ತದೆ. ನಿಗದಿತ ಸಮಯದೊಳಗೆ ಈ ಲೆಕ್ಕವನ್ನು ಇತ್ಯರ್ಥ ಮಾಡದಿದ್ದಲ್ಲಿ ವೆಚ್ಚವನ್ನು ಅಧಿಕವಾಗಿ ತೋರಿಸಿದಂತಾಗುತ್ತದೆ. ಇದು ಸರ್ಕಾರದ ವಿತ್ತೀಯ ಸೂಚಕಗಳ (ರಾಜಸ್ವ ಹೆಚ್ಚಳ/ವಿತ್ತೀಯ ಕೊರತೆ) ಮೇಲೆ ಪ್ರಭಾವ ಬೀರುತ್ತದೆ. ಆರ್ಥಿಕ ಇಲಾಖೆಯು ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ, ನಿಗದಿತ ಸಮಯದೊಳಗೆ ಲೆಕ್ಕಗಳನ್ನು ತೀರುವಳಿ ಮಾಡಲು, ಇಲ್ಲದಿದ್ದಲ್ಲಿ ಬಟವಾಡೆ ಅಧಿಕಾರಿಗಳ ಸಂಬಳವನ್ನು ನಿಲ್ಲಿಸಲು ಸೂಚನೆಗಳನ್ನು ನೀಡಿದೆ (ಆಗಸ್ಟ್ 2012). ಆದಾಗ್ಯೂ, ಲೆಕ್ಕಪರಿಶೋಧನೆಯಲ್ಲಿ ಗಮನಾರ್ಹ ಸಂಖ್ಯೆಯ ಬಿಲ್ಲುಗಳು

ಬಾಕಿಯಿದ್ದ ಬಟವಾಡೆ ಅಧಿಕಾರಿಗಳಿಗೆ ಸಂಬಳ ಸೆಳೆಯುವ ಪರಿಪಾಠವು ಮುಂದುವರೆದಿದ್ದು, ಆರ್ಥಿಕ ಇಲಾಖೆಯ ಸೂಚನೆಯ ಅನುಸರಣೆಯಲ್ಲಿ ಕೊರತೆಯನ್ನು ಗಮನಿಸಲಾಗಿದೆ.

ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ತನ್ನ ಐದನೆಯ ವರದಿಯಲ್ಲಿ (ಜುಲೈ 2015) ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಸವಿವರ ಸಾದಿಲ್ವಾರು ಬಿಲ್ಲುಗಳನ್ನು ಸಲ್ಲಿಸದ ಬಟವಾಡೆ ಅಧಿಕಾರಿಗಳ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದೆ.

ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ (ಅಕ್ಟೋಬರ್ 2017) ಚುನಾವಣಾ ಸಮಯದಲ್ಲಿ ಸವಿವರ ಸಾದಿಲ್ವಾರು ಬಿಲ್ಲುಗಳು ಬಾಕಿ ಇದ್ದಾಗ್ಯೂ ಜಿಲ್ಲಾಧಿಕಾರಿಗಳಿಗೆ ಮತ್ತು ತಹಸೀಲ್ದಾರರಿಗೆ ಸಂಕ್ಷಿಪ್ತ ಸಾದಿಲ್ವಾರುಗಳನ್ನು ಸೆಳೆಯಲು ರಿಯಾಯಿತಿ ಇರುವುದರಿಂದ, ಕಂದಾಯ ಇಲಾಖೆಯಲ್ಲಿ ಬಾಕಿ ಇರುವ ಸಾದಿಲ್ವಾರು ಬಿಲ್ಲುಗಳು ಇರಬಹುದು. ಅಷ್ಟೇ ಅಲ್ಲದೆ, ಆರ್ಥಿಕ ಇಲಾಖೆಯಿಂದ ಸತತವಾಗಿ ಎಲ್ಲಾ ಇಲಾಖೆಗಳಿಗೂ ನಿರ್ದೇಶನಗಳು ಹೋಗುತ್ತಿದ್ದು ಬಾಕಿ ಇರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಸಂಖ್ಯೆಯು ಕಳೆದ ವರ್ಷಕ್ಕಿಂತ ಕಡಿಮೆಯಾಗುತ್ತಿವೆ ಎಂದು ಹೇಳಿದೆ. ಮುಂದುವರೆದು, ಈ ಸಂಖ್ಯೆಯನ್ನು ಇನ್ನೂ ಕಡಿಮೆಗೊಳಿಸಲು ಪ್ರಯತ್ನ ಮಾಡಲಾಗುವುದೆಂದೂ ತಿಳಿಸಿದೆ.

## 3.8 ವೈಯಕ್ತಿಕ ಠೇವಣಿ ಲೆಕ್ಕಗಳು

ಕರ್ನಾಟಕ ಆರ್ಥಿಕ ಸಂಹಿತೆಯು, ವಹಿವಾಟುಗಳ ಲೆಕ್ಕಕ್ಕೆ ರೂಢಿಯಲ್ಲಿನ ವಿಧಾನವು ಸೂಕ್ತವಲ್ಲವೆಂದು ಕಂಡು ಬಂದ ಪ್ರಸಂಗಗಳಲ್ಲಿ ಸರ್ಕಾರದ ಅನುಮತಿಯೊಂದಿಗೆ ವೈಯಕ್ತಿಕ ಠೇವಣಿ (ಪಿಡಿ) ಲೆಕ್ಕಗಳನ್ನು ನಿರ್ವಹಿಸಲು ಅವಕಾಶ ಕಲ್ಪಿಸಿದೆ. ರಾಜ್ಯದ ಸಂಚಿತ ನಿಧಿಗೆ ಖರ್ಚು ಹಾಕಿ ಪ್ರಾರಂಭಿಸಿದ ವೈಯಕ್ತಿಕ ಠೇವಣಿ ಲೆಕ್ಕಗಳನ್ನು ಆರ್ಥಿಕ ವರ್ಷಾಂತ್ಯದಲ್ಲಿ ಮುಕ್ತಾಯಗೊಳಿಸಬೇಕಾಗಿದೆ. ವೈಯಕ್ತಿಕ ಠೇವಣಿ ಲೆಕ್ಕಗಳ ಆಡಳಿತಾಧಿಕಾರಿಗಳು ಸಂಚಿತನಿಧಿಗೆ ವರ್ಗಾಯಿಸಬೇಕಾದ ಮೊತ್ತಗಳನ್ನು ಖಜಾನಾಧಿಕಾರಿಗೆ ತಿಳಿಸಬೇಕಾಗಿದೆ. ವೈಯಕ್ತಿಕ ಠೇವಣಿ ಲೆಕ್ಕಗಳನ್ನು ಚಾಲ್ತಿಯ ಅವಧಿ ಮುಗಿದ ನಂತರವೂ ಮುಂದುವರೆಸಬೇಕಾದ ಸಂದರ್ಭದಲ್ಲಿ ಆಡಳಿತಾಧಿಕಾರಿಗಳು ಆರ್ಥಿಕ ಇಲಾಖೆಯ ಅನುಮತಿಯನ್ನು ಪಡೆಯಬೇಕಾಗಿದೆ. ಕಾಲಕಾಲಕ್ಕೆ ವೈಯಕ್ತಿಕ ಲೆಕ್ಕಗಳನ್ನು ಖಜಾನೆಯ ಲೆಕ್ಕಗಳೊಂದಿಗೆ ಹೊಂದಾಣಿಕೆ ಮಾಡುವುದು ಆಯಾ ಆಡಳಿತಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

### 3.8.1 ವೈಯಕ್ತಿಕ ಠೇವಣಿ ಲೆಕ್ಕಗಳಲ್ಲಿ ಇಟ್ಟಿರುವ ಮೊತ್ತಗಳು

2012–13ರಿಂದ 2016–17ರ ಅವಧಿಯ ವೈಯಕ್ತಿಕ ಠೇವಣಿ ಲೆಕ್ಕಗಳಿಗೆ ಸಂಬಂಧಿಸಿದ ವಹಿವಾಟುಗಳನ್ನು **ಕೋಷ್ಟಕ 3.4**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.4: ವೈಯಕ್ತಿಕ ಠೇವಣಿ ಲೆಕ್ಕಗಳಲ್ಲಿನ ಮೊತ್ತಗಳು**

**(ಕೋಟಿ ರೂಪಾಯಿಗಳಲ್ಲಿ)**

| ವರ್ಷ | ಆರಂಭಿಕ ಶಿಲ್ಕು | ಸ್ವೀಕೃತಿಗಳು/ಠೇವಣಿಗಳು | ಹಿಂಪಡೆತಗಳು | ಅಂತಿಮ ಶಿಲ್ಕು |
|---|---|---|---|---|
| 2012–13 | 1,478.25 | 3,582.23 | 2,974.30 | 2,086.18 |
| 2013–14 | 2,086.18 | 3,782.85 | 3,571.93 | 2,297.10 |
| 2014–15 | 2,297.10 | 3,915.81 | 3,784.62 | 2,428.29 |
| 2015–16 | 2,428.29 | 6,368.39 | 6,061.07 | 2,735.61 |
| 2016–17 | 2,735.61 | 5,516.51 | 5,310.01 | 2,942.12 |

*ಆಕರ: ಹಣಕಾಸು ಲೆಕ್ಕಗಳು*

ಠೇವಣಿ ಲೆಕ್ಕದಲ್ಲಿನ ಶಿಲ್ಕು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವುದರಿಂದ ಸಂಹಿತೆಯಲ್ಲಿನ ಅವಕಾಶದಂತೆ ಅವಧಿ ಮೀರಿದ ಶಿಲ್ಕುಗಳನ್ನು ಹಿಂದಿರುಗಿಸುವ/ತೀರುವಳಿ ಮಾಡುವ ಕ್ರಮ ತೆಗೆದುಕೊಳ್ಳಬೇಕಾಗಿದೆ.

ಠೇವಣೀ ಲೆಕ್ಕಗಳಲ್ಲಿ ಪ್ರಧಾನವಾಗಿರುವ ನಿವ್ವಳ ಅಂತಿಮ ಶಿಲ್ಕುಗಳನ್ನು **ಕೋಷ್ಟಕ 3.5**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.5: ವೈಯಕ್ತಿಕ ಠೇವಣಿ ಮೊತ್ತದಲ್ಲಿನ ಅಂತಿಮ ಶಿಲ್ಕು**

(ಕೋಟಿ ರೂಪಾಯಿಗಳಲ್ಲಿ)

| ಕ್ರಮ ಸಂಖ್ಯೆ | ಆಡಳಿತಾಧಿಕಾರಿಗಳು | ಮೊತ್ತ |
|---|---|---|
| 1 | ವೈಯಕ್ತಿಕ ಠೇವಣಿಗಳು (ಸಾಮಾನ್ಯ) | 333.16 |
| 2 | ಜಿಲ್ಲಾಧಿಕಾರಿಗಳ ಠೇವಣಿ ಲೆಕ್ಕಗಳು | 5,797.32 |
| 3 | ನಿರ್ದೇಶಕರ ವೈಯಕ್ತಿಕ ಠೇವಣಿ ಲೆಕ್ಕಗಳು, ಅಲ್ಪಸಂಖ್ಯಾತರ ನಿರ್ದೇಶನಾಲಯ | 260.29 |
| 4 | ನಿರ್ದೇಶಕರ ವೈಯಕ್ತಿಕ ಠೇವಣಿ ಲೆಕ್ಕಗಳು, ಗಿರಿಜನ ಇಲಾಖೆ | 207.06 |

*ಆಕರ: ಋಣ, ಠೇವಣಿ ಮತ್ತು ಇರಸಾಲು ಲೆಡ್ಜರು*

ಆಡಳಿತಾಧಿಕಾರಿಗಳ ವೈಯಕ್ತಿಕ ಠೇವಣಿ ಲೆಕ್ಕದಲ್ಲಿ ಗಣನೀಯ ಶಿಲ್ಕನ್ನು ಉಳಿಸಿರುವುದು ಹಣ ದುರ್ಬಳಕೆ ಮತ್ತು ಅವ್ಯವಹಾರಗಳ ಅಪಾಯವನ್ನು ಹೊಂದಿರುತ್ತದೆ.

### 3.8.2 ವೈಯಕ್ತಿಕ ಠೇವಣಿಗಳಲ್ಲಿ ನಿಲುಗಡೆಯಾದ ನಿಧಿಗಳು

2016–17ನೇ ವರ್ಷದಲ್ಲಿ 8443–00–106–2–39–'ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು' ಲೆಕ್ಕ ಶೀರ್ಷಿಕೆಯಡಿಯಲ್ಲಿ ಒಂದು ವೈಯಕ್ತಿಕ ಠೇವಣಿ ಲೆಕ್ಕವು ಪ್ರಾರಂಭವಾಗಿದ್ದು ಈ ಲೆಕ್ಕಕ್ಕೆ ₹260.29 ಕೋಟಿಗಳು ಜಮೆಯಾಗಿತ್ತು (ಮಾರ್ಚ್ 2017). ಈ ಜಮೆಯು ಅಲ್ಪಸಂಖ್ಯಾತರ ವಿದ್ಯಾರ್ಥಿವೇತನ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಶುಲ್ಕವನ್ನು ತುಂಬಿಕೊಡಲು ಹಾಗೂ ಪ್ರೋತ್ಸಾಹಿಸಲು ಸಂಬಂಧಿಸಿದ ಮೊತ್ತವಾಗಿದ್ದು ಇದು ಏಪ್ರಿಲ್ 2017ರವರೆಗೂ ಬಳಕೆಯಾಗದೆ ಠೇವಣಿಯ ಲೆಕ್ಕದಲ್ಲೇ ಉಳಿದಿತ್ತು.

ಇಲಾಖೆಯು ತನ್ನ ಉತ್ತರದಲ್ಲಿ (ಅಕ್ಟೋಬರ್ 2017) ರಾಜ್ಯ ಸರ್ಕಾರವು ಭಾರತ ಸರ್ಕಾರದ ವಿದ್ಯಾರ್ಥಿವೇತನ ಪಡೆಯದ ವಿದ್ಯಾರ್ಥಿಗಳಿಗೆ ಮಾತ್ರ ವಿದ್ಯಾರ್ಥಿವೇತನ ನೀಡುವುದರಿಂದ, ಭಾರತ ಸರ್ಕಾರದ ವಿದ್ಯಾರ್ಥಿವೇತನ ಅಂತಿಮವಾಗುವವರೆಗೂ ಕಾಯಬೇಕಿರುತ್ತದೆ. ಭಾರತ ಸರ್ಕಾರವು 23ನೇ ಮಾರ್ಚ್ 2017ರಂದು ಪಟ್ಟಿಯನ್ನು ಕಳುಹಿಸಿತ್ತು. ಇದಲ್ಲದೆ, ಎಸ್‌ಬಿಐ ಮತ್ತು ಎಸ್‌ಬಿಎಮ್‌ಗಳ ವಿಲೀನತೆಯಿಂದಾಗಿ, ವಿದ್ಯಾರ್ಥಿವೇತನವನ್ನು ವಿತರಿಸುವ ಪ್ರಕ್ರಿಯೆಯನ್ನು ಏಪ್ರಿಲ್ 2017ರಲ್ಲಿ ಪ್ರಾರಂಭಿಸಲು ಸಾಧ್ಯವಾಗದೆ, ಮೇ 2017ರಲ್ಲಿ ವಿತರಣೆಯು ಪ್ರಾರಂಭವಾಗಿದೆ ಎಂದೂ ತಿಳಿಸಿದೆ.

ಆದಾಗ್ಯೂ, ಅವಶ್ಯಕತೆಗಿಂತ ಮೊದಲು ಸಂಚಿತ ನಿಧಿಯಿಂದ ಹಣ ಸೆಳೆದು ಆ ಮೊತ್ತವನ್ನು ಸಾರ್ವಜನಿಕ ಲೆಕ್ಕದಲ್ಲಿ ಠೇವಣಿ ಇಡುವುದು ರಾಜಸ್ವ ವೆಚ್ಚವನ್ನು ಹೆಚ್ಚಿಸಿದಂತಾಗುವುದು ಎಂಬುದು ವಾಸ್ತವಾಂಶವಾಗಿ ಉಳಿದಿದೆ.

### 3.8.3 ವೈಯಕ್ತಿಕ ಠೇವಣಿ ಲೆಕ್ಕಗಳ ಹೊಂದಾಣಿಕೆ

ವೈಯಕ್ತಿಕ ಠೇವಣಿ ಲೆಕ್ಕಗಳ ಉದ್ದೇಶವು ಬಟವಾಡೆ ಅಧಿಕಾರಿಗಳು ಯೋಜನೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸಂಚಿತ ನಿಧಿಯಿಂದ ವರ್ಗಾಯಿಸಿ ತಮ್ಮ ವಿಲೇವಾರಿಯಲ್ಲಿ ಇಡಲ್ಪಟ್ಟ ಮೊತ್ತಗಳನ್ನು ವೆಚ್ಚ ಮಾಡಲು ಅವಕಾಶ ಕಲ್ಪಿಸುವುದೇ ಆಗಿದೆ. ಆಡಳಿತಾಧಿಕಾರಿಗಳು ವರ್ಷದ ಕೊನೆಯ ಕೆಲಸದ ದಿನದಂದು ಬಳಕೆಯಾಗದೆ ಉಳಿದ ಮೊತ್ತವನ್ನು ಸಂಚಿತನಿಧಿಗೆ ಜಮಾ ಮಾಡುವುದರ ಮೂಲಕ ಈ ಲೆಕ್ಕಗಳನ್ನು ಮುಕ್ತಾಯಗೊಳಿಸಬೇಕಾಗಿದೆ. ನಿಯಮಗಳನುಸಾರ, ವೈಯಕ್ತಿಕ ಠೇವಣಿ ಲೆಕ್ಕಗಳ ಆಡಳಿತಾಧಿಕಾರಿಗಳು ಲೆಕ್ಕಗಳಲ್ಲಿನ ಶಿಲ್ಕುಗಳನ್ನು ಖಜಾನೆ ಅಧಿಕಾರಿಗಳೊಡನೆ (ವಿವರವಾದ ಲೆಕ್ಕಗಳನ್ನು ಖಜಾನೆಯಲ್ಲಿ ಇಟ್ಟಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ) ಮತ್ತು ಮಹಾಲೇಖಾಪಾಲರೊಡನೆ(ಲೆ ಮತ್ತು ಹ) (ವಿವರವಾದ ಲೆಕ್ಕಗಳನ್ನು ಮಹಾಲೇಖಾಪಾಲರು ನಿರ್ವಹಿಸಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ) ಹೊಂದಾಣಿಕೆ ಮಾಡಬೇಕಾಗಿದೆ. ಖಜಾನೆಗಳೊಂದಿಗೆ ಆಡಳಿತಾಧಿಕಾರಿಗಳು ಲೆಕ್ಕ ಹೊಂದಾಣಿಕೆ ಮಾಡಿರುವ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ 64 ಆಡಳಿತಾಧಿಕಾರಿಗಳಲ್ಲಿ ಯಾರೂ ಸಹ ಮಹಾಲೇಖಪಾಲರೊಂದಿಗೆ (ಲೆ ಮತ್ತು ಹ) ಲೆಕ್ಕ ಹೊಂದಾಣಿಕೆ ಮಾಡಿರುವುದಿಲ್ಲ.

ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 286ಎ ಪ್ರಕಾರ ಮೂರು ವರ್ಷಗಳಿಗೂ ಮೇಲ್ಪಟ್ಟ ಅವಧಿಯವರೆಗೆ ನಿಷ್ಕ್ರಿಯವಾಗಿರುವ ಎಲ್ಲ ವೈಯಕ್ತಿಕ ಠೇವಣಿಗಳನ್ನು ರಾಜ್ಯ ಸರ್ಕಾರವು ಮುಕ್ತಾಯಗೊಳಿಸಬೇಕಾಗಿರುತ್ತದೆ. 2016–17ರ ಲೆಕ್ಕಪತ್ರದ ಟಿಪ್ಪಣಿಗಳಲ್ಲಿ ಸೂಚಿಸಿರುವಂತೆ 21 ವೈಯಕ್ತಿಕ ಠೇವಣಿಗಳು (10 ವೈಯಕ್ತಿಕ ಠೇವಣಿಗಳ ಧನಾತ್ಮಕ ಶಿಲ್ಕು ₹4.75 ಕೋಟಿ ಮತ್ತು 9 ವೈಯಕ್ತಿಕ ಠೇವಣಿಗಳ ಋಣಾತ್ಮಕ ಶಿಲ್ಕು ₹1.25 ಕೋಟಿ ಹಾಗೂ ಎರಡು ವೈಯಕ್ತಿಕ ಠೇವಣಿಗಳ ಶೂನ್ಯ ಶಿಲ್ಕು ಇರುವ) ನಿಷ್ಕ್ರಿಯವಾಗಿರುತ್ತವೆ (**ಅನುಬಂಧ 3.8**). ಆಡಳಿತಾಧಿಕಾರಿಗಳು ಶಿಲ್ಕನ್ನು ವಿಶ್ಲೇಷಿಸಲು ಮತ್ತು ಖಾತೆಯನ್ನು ಉಳಿಸಿಕೊಳ್ಳಲು ಹಾಗೂ ಅಂತಿಮಗೊಳಿಸಿ ಸರ್ಕಾರದ ಸಂಚಿತ ನಿಧಿಗೆ ಜಮಾ ಮಾಡುವ ಪ್ರಕ್ರಿಯೆಗೂ ಮೊದಲು ಶಿಲ್ಕನ್ನು ಲೆಕ್ಕ ಕಛೇರಿಯ ಶಿಲ್ಕಿನೊಂದಿಗೆ ಹೊಂದಾಣಿಕೆ ಮಾಡಲು ಕ್ರಮ ತೆಗೆದುಕೊಳ್ಳಬೇಕಾಗಿದೆ.

21 ವೈಯಕ್ತಿಕ ಠೇವಣಿ ಲೆಕ್ಕಗಳಲ್ಲಿ 13 ಠೇವಣಿ ಲೆಕ್ಕಗಳು ಖಜಾನೆಯಿಂದ ಅಂತಿಮ ಶಿಲ್ಕುಗಳ ಬಗ್ಗೆ ದೃಢೀಕರಣ ಪಡೆದ ನಂತರ ಮುಕ್ತಾಯಗೊಂಡಿದೆ ಎಂದು ತಿಳಿಸಿದೆ (ಅಕ್ಟೋಬರ್ 2017). ಆದರೆ ಲೆಕ್ಕ ಕಛೇರಿಯ ದಾಖಲೆಗಳನ್ನು ನೋಡಿದಾಗ, ಈ ಲೆಕ್ಕಗಳ ಮರುಹೊಂದಾಣಿಕೆಯಾಗಿರುವುದಿಲ್ಲ ಮತ್ತು ಇಂದಿನವರೆಗೂ 21 ವೈಯಕ್ತಿಕ ಠೇವಣಿ ಲೆಕ್ಕಗಳು ಮುಕ್ತಾಯಗೊಂಡಿಲ್ಲ.

ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ (ಡಿಸೆಂಬರ್ 2017) ಖಜಾನೆಯಿಂದ ಹೊಂದಾಣಿಕೆಯಾದ ಅಂಕಿಗಳನ್ನು ಪಡೆದ ನಂತರ ನಿಷ್ಕ್ರಿಯ ವೈಯಕ್ತಿಕ ಠೇವಣಿಗಳನ್ನು ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದೆ.

## 3.9 ವೆಚ್ಚಗಳ ಮತ್ತು ಸ್ವೀಕೃತಿಗಳ ಹೊಂದಾಣಿಕೆ

ವೆಚ್ಚದ ಮೇಲಿನ ಪರಿಣಾಮಕಾರಿ ಆಯವ್ಯಯ ನಿಯಂತ್ರಣವನ್ನು ಸಾಧಿಸಲು ಮತ್ತು ಲೆಕ್ಕಪತ್ರಗಳಲ್ಲಿ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಬಟವಾಡೆ ಅಧಿಕಾರಿಗಳು ತಮ್ಮ ಪುಸ್ತಕಗಳಲ್ಲಿನ ವೆಚ್ಚ ಮತ್ತು ಸ್ವೀಕೃತಿಗಳ ಅಂಕಿಗಳನ್ನು ಮಹಾಲೇಖಾಪಾಲರು (ಲೆ ಮತ್ತು ಹ) ಅವರು ಲೆಕ್ಕ ಮಾಡಿರುವ ಅಂಕಿಗಳೊಂದಿಗೆ ಪ್ರತಿ ತಿಂಗಳೂ ಹೊಂದಾಣಿಕೆ ಮಾಡಬೇಕಾಗಿರುತ್ತದೆ. ಸ್ವೀಕೃತಿಗಳಿಗೆ ಸಂಬಂಧಿಸಿದಂತೆ ₹1,32,901 ಕೋಟಿಗಳ ಮೊತ್ತದ (₹1,33,240.75 ಕೋಟಿಗಳ ಒಟ್ಟು ಸ್ವೀಕೃತಿಯ ಶೇಕಡ 99.75ರಷ್ಟು) ಹೊಂದಾಣಿಕೆಯು ಪೂರ್ಣಗೊಂಡಿದೆ. ವೆಚ್ಚಕ್ಕೆ ಸಂಬಂಧಿಸಿದಂತೆ ₹1,30,035 ಕೋಟಿಗಳ ಮೊತ್ತದ (ಒಟ್ಟು ವೆಚ್ಚ ₹1,60,071 ಕೋಟಿಗಳ ಶೇಕಡ 81ರಷ್ಟು) ಹೊಂದಾಣಿಕೆ ಪೂರ್ಣಗೊಂಡಿತ್ತು. ಸಾಲ ಮತ್ತು ಮುಂಗಡಗಳಿಗೆ ಸಂಬಂಧಿಸಿದ ಶೀರ್ಷಿಕೆಗಳಡಿಯ ಸ್ವೀಕೃತಿ (₹99.84 ಕೋಟಿ) ಮತ್ತು ವಿತರಣೆ (₹1,934.38 ಕೋಟಿ)ಗಳಿಗೆ ಸಂಬಂಧಿಸಿದಂತೆ ಯಾವುದೇ ಹೊಂದಾಣಿಕೆ ನಡೆದಿಲ್ಲ ಸಾಲ ಮತ್ತು ಮುಂಗಡಗಳ ಸ್ವೀಕೃತಿ ಮತ್ತು ವೆಚ್ಚಗಳ ಹೊಂದಾಣಿಕೆಗೆ ಕ್ರಮವನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆಯಿದೆ.

ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ತನ್ನ 5ನೇ ವರದಿಯಲ್ಲಿ (ಜುಲೈ 2015) ಸ್ವೀಕೃತಿ ಮತ್ತು ವೆಚ್ಚಗಳ ಹೊಂದಾಣಿಕೆಗೆ ಈಗಾಗಲೇ ಜಾರಿಗೊಳಿಸಿರುವ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕೆಂದು ಸರ್ಕಾರಕ್ಕೆ ಸೂಚಿಸಿದೆ.

ಆರ್ಥಿಕ ಇಲಾಖೆಯು ಉತ್ತರದಲ್ಲಿ(ಅಕ್ಟೋಬರ್ 2017) ಈ ಅಂಶಗಳನ್ನು ಗಮನಿಸಲಾಗಿದೆ ಹಾಗೂ ಸೂಚನೆಗಳನ್ನು ಜಾರಿಮಾಡಲಾಗುವುದು ಎಂದು ತಿಳಿಸಿದೆ.

## 3.10 ಲೆಕ್ಕಪತ್ರಗಳ ಮೇಲಿನ ವ್ಯಾಖ್ಯಾನಗಳು

### 3.10.1 ದೋಷಪೂರಿತ ಆಯವ್ಯಯದಿಂದ ಅನುದಾನ ಸಂಖ್ಯೆ 29– ಋಣ ಸೇವೆಗಳು– ಬಡ್ಡಿ ಮತ್ತು ಬದ್ಧ ವೆಚ್ಚಗಳ ಅಡಿಯಲ್ಲಿ ಅಧಿಕ ವೆಚ್ಚ ಉಂಟಾಗಿರುವುದು.

ರಾಜ್ಯ ಸರ್ಕಾರವು ಭಾರತ ಸರ್ಕಾರದ ಮುಖಾಂತರ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸ್ವಾಯತ್ತ ಸಂಸ್ಥೆಗಳ ಮೂಲಕ ಬಾಹ್ಯ ಬೆಂಬಲವನ್ನು (ಸಾಲಗಳು)

ಪಡೆಯುತ್ತದೆ. ಅಂತಹ ಸಹಾಯವನ್ನು ಸಾಲ ನೀಡುವವರಿಂದ ಸರ್ಕಾರಿ ಇಲಾಖೆಗಳಿಗೆ 'ಬ್ಯಾಕ್ ಟು ಬ್ಯಾಕ್'[8] ಆಧಾರದ ಮೇಲೆ ವರ್ಗಾಯಿಸಲಾಗುತ್ತದೆ. ಸಾಲದ ಮರುಪಾವತಿ ಮತ್ತು ಬಡ್ಡಿಯ ಪಾವತಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಪುಸ್ತಕಗಳ ಮೂಲಕ ನಡೆಸಲಾಗುತ್ತದೆ. ಈ ಮರುಪಾವತಿಗಳು ಮೊದಲು ಕೇಂದ್ರ ಸರ್ಕಾರದ 'ಸಹಾಯಲೆಕ್ಕಗಳ ಮತ್ತು ಲೆಕ್ಕಪರಿಶೋಧನೆಯ ನಿಯಂತ್ರಕರು, ಭಾರತ ಸರ್ಕಾರ' (ಕಂಟ್ರೋಲರ್ ಆಫ್ ಏಡ್ ಅಕೌಂಟ್ಸ್ ಮತ್ತು ಆಡಿಟ್, ಜಿ.ಒ.ಐ.) ರವರ ಪುಸ್ತಕಗಳಲ್ಲಿ ಲೆಕ್ಕವಾಗಿ ನಂತರ ಭಾರತೀಯ ರಿಸರ್ವ್ ಬ್ಯಾಂಕಿನ ಮುಖಾಂತರ ರಾಜ್ಯಸರ್ಕಾರದ ಲೆಕ್ಕಗಳಿಗೆ ವರ್ಗಾವಣೆಯಾಗುತ್ತದೆ. ಈ ಬದ್ಧತೆಯ ಸಾಲಗಳು ಅವುಗಳೊಂದಿಗೆ ಬದ್ಧ ವೆಚ್ಚಗಳನ್ನು ಅಂದರೆ ಆಗಾಗ ಪಡೆದ ಸಾಲದ ಮೊತ್ತಗಳ ಮೇಲೆ ಅಲ್ಲದೆ ಒಪ್ಪಿಕೊಂಡ ಒಟ್ಟು ಸಾಲದ ಮೊತ್ತದ ಮೇಲೆ ಅದಕ್ಕೆ ಸಂಬಂಧಿಸಿದ ಸಾಲ/ಕಡದ ಕರಾರಿನಂತೆ ವಿಧಿಸುವ ಶುಲ್ಕವನ್ನೂ ಒಳಗೊಂಡಿರುತ್ತದೆ. ಈ ಪಾವತಿಗಳನ್ನು ರಾಜ್ಯಸರ್ಕಾರಗಳು ತುಂಬಿಕೊಡುತ್ತವೆ.

ಕರ್ನಾಟಕ ಆಯವ್ಯಯ ಕೈಪಿಡಿ 1975ರ ಮತ್ತು ಸಂವಿಧಾನದ ಪರಿಚ್ಛೇದ 204(3) ರ ಅನ್ವಯ, ಶಾಸನ ಬದ್ಧ ಹಂಚಿಕೆಯನ್ನು ಹೊರತುಪಡಿಸಿ ರಾಜ್ಯದ ಸಂಚಿತ ನಿಧಿಯಿಂದ ಯಾವುದೇ ಮೊತ್ತದ ಹಣ ಸೆಳೆಯುವಂತಿಲ್ಲ.

2016–17ರಲ್ಲಿ, ಬದ್ಧವೆಚ್ಚಗಳ ಪಾವತಿಗಾಗಿ, ಮೂಲ ಆಯವ್ಯಯದಲ್ಲಾಗಲೀ ಅಥವಾ ಪೂರಕ ಅಂದಾಜುಗಳಲ್ಲಾಗಲೀ ಯಾವುದೇ ಅವಕಾಶವನ್ನು ಒದಗಿಸಿರಲಿಲ್ಲ. ಆದರೆ 2016–17ರಲ್ಲಿ ಪ್ರಧಾನ ಶೀರ್ಷಿಕೆ 2049–04–101–0–02–241 (ಪ್ರಭೃತ/ಯೋಜನೇತರ) ಅಡಿಯಲ್ಲಿ ಬ್ಯಾಕ್ ಟು ಬ್ಯಾಕ್ ಆಧಾರದ ಮೇಲೆ ಏಪ್ರಿಲ್ 2017ರ ನಂತರ ಪ್ರಾರಂಭವಾಗುವ ಬಾಹ್ಯ ಸಾಲಗಳ ಬಿಡುಗಡೆಗೆ ಸಂಬಂಧಿಸಿದಂತೆ ₹5.35 ಕೋಟಿಗಳ ವೆಚ್ಚವನ್ನು ಮಾಡಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ಲೆಕ್ಕದಲ್ಲಿ ಪ್ರತಿನಿತ್ಯವೂ ದಾಖಲಾಗುವ ಮೊತ್ತಗಳು ಬ್ಯಾಂಕಿನಿಂದ ದಿನವಹಿ ಆಧಾರದ ಮೇಲೆ ಹಣಕಾಸು ಇಲಾಖೆಗೆ ತಿಳಿಯುವುದರಿಂದ ಈ ಶೀರ್ಷಿಕೆಯಡಿಯಲ್ಲಿ ಮೊತ್ತವು ದಾಖಲಾಗಿರುವ ಮಾಹಿತಿಯು ರಾಜ್ಯ ಸರ್ಕಾರಕ್ಕೆ (ಆರ್ಥಿಕ ಇಲಾಖೆ) ಮೊದಲೇ ತಿಳಿದಿತ್ತು. ಆದ್ದರಿಂದ ಆರ್ಥಿಕ ಇಲಾಖೆಯು ಈ ವೆಚ್ಚದ ನಿಮಿತ್ತ ಕನಿಷ್ಠ ಪಕ್ಷ ಸಾಂಕೇತಿಕ ಅವಕಾಶವನ್ನು ಕಲ್ಪಿಸಿ ಈ ಶೀರ್ಷಿಕೆಯಡಿಯಲ್ಲಿ ವೆಚ್ಚವನ್ನು ದಾಖಲಿಸುವುದನ್ನು ಪೂರಕ ಬೇಡಿಕೆಯ ಮೂಲಕ ಶಾಸನ ಸಭೆಗೆ ತಿಳಿಸಬಹುದಿತ್ತು. ಈ ವಿಷಯವನ್ನು ಹಿಂದಿನ ವರ್ಷಗಳ ರಾಜ್ಯ ಹಣಕಾಸು ಲೆಕ್ಕದ ವರದಿಗಳಲ್ಲಿಯೂ ಚರ್ಚೆ ಮಾಡಲಾಗಿತ್ತು.

ಇದಕ್ಕೆ ಉತ್ತರವಾಗಿ ಇಲಾಖೆಯು (ಜೂನ್ 2017) ಬದ್ಧವೆಚ್ಚಗಳಿಗೆ 2017–18ರ ಆಯವ್ಯಯದಲ್ಲಿ ಅವಕಾಶವನ್ನು ಮಾಡಲಾಗಿದೆ ಮತ್ತು ಕೊರತೆಯೇನಾದರೂ ಕಂಡುಬಂದಲ್ಲಿ, ಪುನರ್ವಿನಿಯೋಗದ ಅಥವಾ ಪೂರಕ ಅಂದಾಜುಗಳ ಮೂಲಕ ಸರಿಪಡಿಸಲಾಗುವುದು ಎಂದು ತಿಳಿಸಿದೆ.

### 3.10.2 ಯೋಜನೆಯ ಹಣವನ್ನು ಅಕ್ರಮವಾಗಿ ಉಳಿಸಿಕೊಂಡಿರುವುದು.

ಭಾರತ ಸರ್ಕಾರದ ಯೋಜನೆಯಾದ, ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ (ರಾಸ್ವಾ.ಭೀಯೋ)ಯು ಬಡತನದ ರೇಖೆ(ಬಿಪಿಎಲ್)ಗಿಂತ ಕೆಳಗಿರುವ ಅಸಂಘಟಿತ ವಿಭಾಗದ ಕಾರ್ಮಿಕರನ್ನು ಮತ್ತು ಅವರ ಕುಟುಂಬದವರನ್ನು ಆರೋಗ್ಯ ವಿಮೆಯ ಅಡಿಯಲ್ಲಿ ತರುವ ದೃಷ್ಟಿಯಿಂದ ಅನುಷ್ಠಾನಗೊಂಡಿತ್ತು. ಕರ್ನಾಟಕದಲ್ಲಿ, 2015–16ರ ವರೆಗೆ ಈ ಯೋಜನೆಯು ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನಾ ಸಂಘ, ಬೆಂಗಳೂರು ಇವರ ಮೂಲಕ ಕಾರ್ಮಿಕ ಇಲಾಖೆಯು ಕಾರ್ಯರೂಪಕ್ಕೆ ತಂದಿತ್ತು. 1 ಏಪ್ರಿಲ್ 2016ರಿಂದ, ಯೋಜನೆಯು ಕಾರ್ಮಿಕ ಇಲಾಖೆಯಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ವರ್ಗಾಯಿಸಲ್ಪಟ್ಟ ಪರಿಣಾಮವಾಗಿ, ಯೋಜನೆಯನ್ನು ಇಂಡಿಯನ್ ಟ್ರಸ್ಟ್ ಆ್ಯಕ್ಟ್, 1882ರ ಅಡಿಯಲ್ಲಿ ಸ್ಥಾಪಿಸಲಾದ ಒಂದು ವಿಶೇಷ ಉದ್ದೇಶವಾಹಕವಾದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಎಸ್‌ಎಎಸ್‌ಟಿ) ಮೂಲಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಕಾರ್ಯರೂಪಕ್ಕೆ ತಂದಿತ್ತು.

---

8 'ಬ್ಯಾಕ್ ಟು ಬ್ಯಾಕ್' ಎಂದರೆ, ಸಾಲ ನೀಡುವ ಬಾಹ್ಯಸಂಸ್ಥೆಯ ಸಾಲದ ಷರತ್ತುಗಳಂತೆ ಸಾಲವನ್ನು ವರ್ಗಾಯಿಸಲಾಗುತ್ತದೆ ಮತ್ತು ವಿನಿಮಯದರದಲ್ಲಿನ ಏರಿಳಿತವನ್ನು ಸಂಬಂಧಿಸಿದ ರಾಜ್ಯವೇ ಭರಿಸಬೇಕಾಗುತ್ತದೆ.

ವರ್ಗಾವಣೆಯ ಸಂದರ್ಭದಲ್ಲಿ, ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನಾ ಸಂಘ, ಬೆಂಗಳೂರು, ತನ್ನ ಖಾತೆಯಲ್ಲಿ ₹90.89 ಕೋಟಿ ಮೊತ್ತವನ್ನು ಹೊಂದಿದ್ದು, ಈ ಮೊತ್ತವು ಮೇ 2016ರಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ ವರ್ಗಾಯಿಸಲ್ಪಟ್ಟಿತ್ತು. ಮುಂದುವರಿದು, ಕರ್ನಾಟಕ ಸರ್ಕಾರವು 2016–17ರಲ್ಲಿ ₹106.96 ಕೋಟಿ ಮೊತ್ತವನ್ನು ಯೋಜನೆಯ ಅನುಷ್ಠಾನಕ್ಕೆ ಬಿಡುಗಡೆ ಮಾಡಿದ್ದು ಅದಕ್ಕಾಗಿ 2210–80–800–0–27 ಶೀರ್ಷಿಕೆಯಡಿಯಲ್ಲಿ ಆಯವ್ಯಯದ ಅವಕಾಶವನ್ನು ಕಲ್ಪಿಸಿತ್ತು. 2016–17ನೇ ವರ್ಷದಲ್ಲಿ ಈ ಯೋಜನೆಗೆ ಸಂಬಂದಿಸಿದ ಒಟ್ಟು ವೆಚ್ಚ ₹79.83 ಕೋಟಿಯಷ್ಟು ಮಾತ್ರವಿದ್ದು, ಈ ಮೊತ್ತವನ್ನು ಹಿಂದಿನ ವರ್ಷಗಳಲ್ಲಿ ಬಳಕೆಯಾಗದೇ ಉಳಿದಿದ್ದ ಮೊತ್ತದಿಂದ ಭರಿಸಬಹುದಿತ್ತು. ಅಲ್ಲದೆ 31.03.2017ರಲ್ಲಿದ್ದಂತೆ ಯೋಜನೆಯ ಲೆಕ್ಕದ ಅಂತಿಮ ಶಿಲ್ಕು ₹121.28 ಕೋಟಿಗಳಷ್ಟಿತ್ತು (ರಾ.ಸ್ವಾ.ಭಿ.ಯೋ.– ₹116.95 ಕೋಟಿ + ರಾ.ಸ್ವಾ.ಬೀ.ಯೋ. ಹಿರಿಯ ನಾಗರಿಕ ಯೋಜನೆ ₹4.33 ಕೋಟಿ).

ತತ್‌ಕ್ಷಣದ ವಿತರಣೆಗೆ ಅವಶ್ಯಕತೆಯಿಲ್ಲದ ಮೊತ್ತವನ್ನು ಸಂಚಿತ ನಿಧಿಯಿಂದ ಸೆಳೆಯುವುದು ವಿವೇಚನಾಯುಕ್ತ ವಿತ್ತೀಯ ಪದ್ಧತಿಯಲ್ಲ. ಈ ಮೇಲಿನ ಪ್ರಕರಣದಲ್ಲಿ, ಇಡೀ ವರ್ಷದಲ್ಲಿ ಮಂಜೂರಾದ ಸಂಪೂರ್ಣ ಮೊತ್ತವು ಆಯವ್ಯಯ ಅನುದಾನವು ರದ್ದಾಗಿ ಹೋಗುವುದನ್ನು ತಪ್ಪಿಸಲು ಖಜಾನೆಯಿಂದ ಸೆಳೆಯಲ್ಪಟ್ಟು ಅದು ಬಳಕೆಯಾಗಿರಲಿಲ್ಲ. ಇಲಾಖೆಯಿಂದ ಜಾರಿಯಾದ ಮಂಜೂರಾತಿಗಳಲ್ಲಿ ಮುಂದಿನ ಅನುದಾನಗಳ ಬಿಡುಗಡೆಗೆ ಮೊದಲು ಪಾಲಿಸಬೇಕಾದ ಕ್ರಮಗಳನ್ನು ನಮೂದಿಸಿದ್ದರೂ ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರಲಿಲ್ಲ. ಹಣ ಬಿಡುಗಡೆ ಮಾಡುವಲ್ಲಿ ಇಲಾಖೆ ಅನುಸರಿಸಿದ ಕ್ರಮವು ರಾಜಸ್ವ ವೆಚ್ಚವನ್ನು ಹಾಗೂ ವಿತ್ತೀಯ ಕೊರತೆಯನ್ನು ಅಧಿಕವಾಗಿ ತೋರಿಸುವಲ್ಲಿ ಪರಿಣಮಿಸಿದೆ.

ಕಾರ್ಯ ನಿರ್ವಾಹಕ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ತಮ್ಮ ಉತ್ತರದಲ್ಲಿ (ನವೆಂಬರ್ 2017), ಏಪ್ರಿಲ್ 2016ರಲ್ಲಿ ಕಾರ್ಮಿಕ ಇಲಾಖೆಯು ₹90.37 ಕೋಟಿ ಮೊತ್ತವನ್ನು ವರ್ಗಾಯಿಸಿದ್ದರೂ, ವಿಮಾ ಕಂಪನಿಗಳಿಗೆ ಪಾವತಿಸಬೇಕಾದ ಹಿಂದಿನ ವರ್ಷಗಳ ಬಾಕಿಯ ವಿವರಗಳನ್ನು ವರ್ಗಾವಣೆಯಲ್ಲಿ ಒದಗಿಸಿರಲಿಲ್ಲವೆಂದು ತಿಳಿಸಿದ್ದಾರೆ. ಮುಂದಿನ ವರ್ಷದಲ್ಲಿ(2017–18) ₹183 ಕೋಟಿಗಳ ಅವಕಾಶವನ್ನು ಮಾಡಿದ್ದರೂ ಸಹ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ತನ್ನಲ್ಲಿರುವ ವಾಸ್ತವಿಕ ಮೊತ್ತದೊಂದಿಗೆ ಸಲ್ಲಿಸಿದ ಬಳಕೆ ಪ್ರಮಾಣಪತ್ರದ ಆಧಾರದ ಮೇಲೆ ಸರ್ಕಾರವು ₹91.81 ಕೋಟಿ ಮಾತ್ರ ಬಿಡುಗಡೆ ಮಾಡಿದೆ ಎಂದೂ ತಿಳಿಸಿದೆ. ಆದರೆ ವಾಸ್ತವವಾಗಿ ಟ್ರಸ್ಟಿನಲ್ಲಿ ಅದಾಗಲೇ ಪ್ರಾರಂಭಿಕ ಶಿಲ್ಕು ₹90.37 ಕೋಟಿ ಇದ್ದುದರಿಂದ 2016–17ನೇ ವರ್ಷಕ್ಕೆ, ಬಿಡುಗಡೆಯಾದ ಮೊತ್ತವು ಅನವಶ್ಯಕವಾಗಿತ್ತು.

### 3.10.3 ನ್ಯಾಶನಲ್ ಥರ್ಮಲ್ ಪವರ್ ಕಾರ್ಪೋರೇಶನ್(ಎನ್‌ಟಿಪಿಸಿ)ಗೆ ತಪ್ಪಿಸಬಹುದಾಗಿದ್ದ ₹7 ಕೋಟಿ ಬಡ್ಡಿ ಪಾವತಿ

1990–91ರಲ್ಲಿ, ಎನ್‌ಟಿಪಿಸಿಯು ₹3.47 ಕೋಟಿ ಮೊತ್ತವನ್ನು ಮಂಗಳೂರು ಸಮೀಪದಲ್ಲಿ ವಿದ್ಯುತ್‌ಯೋಜನೆ ನಿರ್ಮಾಣಕ್ಕಾಗಿ 2,982 ಎಕರೆ ಭೂಮಿಯನ್ನು ಪಡೆದುಕೊಳ್ಳಲು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ ಠೇವಣಿ ಇಟ್ಟಿತ್ತು. ಆದರೆ, 97.85 ಎಕರೆಗಳಷ್ಟು ಭೂಮಿಯನ್ನು ಮಾತ್ರ ₹1.65 ಕೋಟಿ ಮೊತ್ತಕ್ಕೆ ಪಡೆದುಕೊಂಡಿದ್ದು ಉಳಿದ ಮೊತ್ತವಾದ ₹1.82 ಕೋಟಿಯು ಸರ್ಕಾರದ ದಾಖಲೆಗಳಲ್ಲಿ (ಉಡುಪಿ ಖಜಾನೆ) ಹಾಗೆಯೇ ಉಳಿದುಕೊಂಡಿತ್ತು. ಮುಂದೆ ಈ ಯೋಜನೆಯು ಸ್ಥಗಿತಗೊಂಡು ಎನ್‌ಟಿಪಿಸಿಯು ಉಳಿದ ಹಣವನ್ನು ಬಡ್ಡಿ ಸಮೇತ ಮರುಪಾವತಿಸುವಂತೆ ಮನವಿ ಸಲ್ಲಿಸಿತು (ಫೆಬ್ರುವರಿ 2007). ಸರ್ಕಾರದ ಆದೇಶ ದಿನಾಂಕ 26 ಡಿಸೆಂಬರ್ 2016ರ ಅನುಸಾರವಾಗಿ 20.5 ವರ್ಷಗಳಿಗೆ ಚಕ್ರಬಡ್ಡಿಸಹಿತವಾಗಿ ಶೇಕಡಾ 8ರಂತೆ ಲೆಕ್ಕಹಾಕಿ ₹8.81 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲು ಅದೇಶಿಸಿತು. ಪೂರಕ ಅಂದಾಜು–2ನೇ ಕಂತಿನಲ್ಲಿ ₹8.81 ಕೋಟಿಗೆ ಅವಕಾಶ ಮಾಡಿ, ಜನವರಿ 2017ರಲ್ಲಿ ಎನ್‌ಟಿಪಿಸಿಗೆ ಮೊತ್ತವನ್ನು ಪಾವತಿಸಲಾಗಿತ್ತು.

ಮೇಲಿನ ವ್ಯವಹಾರವನ್ನು ಪರಿಶೀಲಿಸಿದಾಗ ಉಡುಪಿ ಖಜಾನೆಯಲ್ಲಿ 1990–91ರಿಂದ ತಹಲ್‌ನವರೆಗೂ ₹1.82 ಕೋಟಿ ಮೊತ್ತವು ಹಾಗೆಯೇ ಉಳಿದಿದ್ದು ಯೋಜನೆಯು ಸ್ಥಗಿತಗೊಂಡಾಗಲೇ ಎನ್‌ಟಿಪಿಸಿಗೆ

ವಾಪಸ್ಸು ಮಾಡಿರಲಿಲ್ಲ ಎಂಬುದು ತಿಳಿದುಬಂತು. ಈ ಮೊತ್ತವನ್ನು ಸಕಾಲದಲ್ಲಿ ಪಾವತಿಸಿದ್ದರೆ, ಅಸಲಿನ ಮೇಲೆ ಬಡ್ಡಿಯ ಸಲುವಾಗಿ ಪಾವತಿ ಮಾಡಿದ ₹7 ಕೋಟಿ[9]ಗಳಷ್ಟು ಮೊತ್ತದ ವೆಚ್ಚವನ್ನು ತಪ್ಪಿಸಬಹುದಾಗಿತ್ತು.

ಹಾಗೂ ಉಡುಪಿ ಖಜಾನೆಯಲ್ಲಿ ಸಾರ್ವಜನಿಕ ಲೆಕ್ಕದಲ್ಲಿ ಉಳಿದಿದ್ದ ₹1.82 ಕೋಟಿ ಮೊತ್ತವು ಸಂಚಿತ ನಿಧಿಗೆ ಹೊಂದಾಣಿಕೆಯಾಗಿರಲಿಲ್ಲವಾದ್ದರಿಂದ ಮರುಪಾವತಿಗಾಗಿ ಮಾಡಿದ ₹8.81 ಕೋಟಿ ಅವಕಾಶವೂ ಅಸಮರ್ಪಕವಾಗಿದೆ.

ಇದಕ್ಕೆ ಉತ್ತರವಾಗಿ, ಇಲಾಖೆಯು (ಜುಲೈ 2017) ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ, ಇವರಿಗೆ (ಕೆಎಫ್‌ಸಿಯ ಅನುಚ್ಛೇದ 271 ಮತ್ತು 280ರ ಅನ್ವಯ) ಸೂಕ್ತ ಅಧಿಕಾರಿಯನ್ನು ನೇಮಿಸಲು ಮತ್ತು ಬಳಕೆಯಾಗದೆ ಉಳಿದ ಮೊತ್ತವನ್ನು ಸರ್ಕಾರಿ ಲೆಕ್ಕದಲ್ಲಿ ಠೇವಣಿ ಇಡಲು ಪತ್ರವನ್ನು ಬರೆದಿರುವುದಾಗಿ ತಿಳಿಸಿದೆ.

### 3.10.4 ಸರ್ಕಾರದ ಹಣವನ್ನು ಆಯವ್ಯಯ ಅವಕಾಶವು ರದ್ದಾಗುವುದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಸರ್ಕಾರಿ ಲೆಕ್ಕದಿಂದ ಹೊರಗೆ ಇಡುವಿಕೆ

ಕರ್ನಾಟಕ ಹಣಕಾಸು ಸಂಹಿತೆಯ ಪರಿಚ್ಛೇದ 161ರ ಪ್ರಕಾರ, ಅನುದಾನಗಳ ಮಂಜೂರಾತಿ ನೀಡುವಾಗ, ಅಧಿಕಾರಿಗಳು ಆ ಹಣಕಾಸು ವರ್ಷದಲ್ಲಿ ವೆಚ್ಚ ಮಾಡಬೇಕಾದ ಮೊತ್ತಕ್ಕೆ ಮಾತ್ರ ಮಂಜೂರಾತಿ ನೀಡಬಹುದು. ಸಹಾಯಾನುದಾನ ಬಿಲ್ಲುಗಳನ್ನು ಸಹಿ ಮಾಡುವ ಮತ್ತು ಮೇಲುಸಹಿ ಮಾಡುವ ಅಧಿಕಾರಿಗಳು ಅವಶ್ಯಕತೆಗಿಂತ ಮುಂಚಿತವಾಗಿ ಹಣವನ್ನು ಸೆಳೆಯದಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಹಾಗೂ ಸಾದಿಲ್ವಾರು ವೆಚ್ಚ ಕೈಪಿಡಿಯ 17ನೇ ನಿಯಮವು ತಕ್ಷಣದ ವಿತರಣೆಗೆ ಅವಶ್ಯವಿಲ್ಲದಿದ್ದಲ್ಲಿ ಯಾವುದೇ ಹಣವನ್ನು ಖಜಾನೆಯಿಂದ ಸೆಳೆಯಬಾರದು ಎಂಬುದನ್ನು ವಿಧಿಸುತ್ತದೆ

2016–17ರಲ್ಲಿ. ಕರ್ನಾಟಕ ಸರ್ಕಾರವು ಉದ್ದೇಶ ಶೀರ್ಷಿಕೆ 422/423ರ ಅಡಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಸುವ ಸಲುವಾಗಿ **ಕೋಷ್ಟಕ–3.6**ರಲ್ಲಿ ವಿವರಿಸಿರುವಂತೆ ₹115.10 ಕೋಟಿ ಮೊತ್ತವನ್ನು ಬಿಡುಗಡೆ ಮಾಡಿದೆ.

**ಕೋಷ್ಟಕ 3.6 – ಮೊತ್ತದ ಬಿಡುಗಡೆ**

**(ಕೋಟಿ ರೂಪಾಯಿಗಳಲ್ಲಿ)**

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಸ.ಆ. ಸಂಖ್ಯೆ ಮತ್ತು ದಿನಾಂಕ | ಮೊತ್ತ | ಉದ್ದೇಶ |
|---|---|---|---|---|
| 1 | 2202–03–103–2–01<br>2202–03–103–2–04<br>2202–03–103–2–09<br>2202–03–001–0–02 | ಶಿ.ಇ. 4 ಹೆಚ್‌ಪಿಸಿ 2017 ದಿನಾಂಕ 21.03.2017 | 75.86 | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿ |
| 2 | 2202–03–001–0–02 | ಶಿ.ಇ.89 ಹೆಚ್‌ಪಿಸಿ 2016 ದಿನಾಂಕ 22.10.2016 | 39.24 | |

ಮೇಲಿನ ಮೊತ್ತವನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಸಲಹಾ ಮಂಡಳಿಯ ಬ್ಯಾಂಕ್ ಖಾತೆಯಲ್ಲಿ ಠೇವಣಿ ಇಡಲು ನಿರ್ದೇಶಿಸಲಾಗಿದ್ದು ಇದಕ್ಕೆ ಆರ್ಥಿಕ ಇಲಾಖೆಯ ಆದೇಶಸಂಖ್ಯೆ ಆ.ಇ. 198 ವೆಚ್ಚ–8/2017 ದಿನಾಂಕ 20.03.2017 ಮತ್ತು ಆ.ಇ. 199 ವೆಚ್ಚ–8/2017 ದಿನಾಂಕ 20.03.2017ರ ಮೂಲಕ ಒಪ್ಪಿಗೆ ನೀಡಿತ್ತು. ಆರ್ಥಿಕ ಇಲಾಖೆಯು ಇದನ್ನು 2017–18ನೇ ವರ್ಷದ ಮೊದಲ ತ್ರೈಮಾಸಿಕದ ಅಂತ್ಯದೊಳಗೆ ಉಪಯೋಗಿಸಲು ನಿರ್ದೇಶಿಸಿತ್ತು. ಆದರೆ, ಮೊತ್ತವು ಸಲಹಾ ಮಂಡಳಿಯಿಂದ ಬಳಸಲ್ಪಡದೆ ಬ್ಯಾಂಕ್ ಖಾತೆಯಲ್ಲೇ ಉಳಿದಿತ್ತು (ಜುಲೈ 2017).

[9] ₹1.82 ಕೋಟಿಗಳ ಮೇಲೆ 20.5 ವರ್ಷಗಳಿಗೆ ಚಕ್ರಬಡ್ಡಿಯೂ ಸೇರಿದಂತೆ ಸಾಲಿಯಾನ ಶೇಕಡ 8 ರಂತೆ ಲೆಕ್ಕ ಹಾಕಿದೆ (1996 ರಿಂದ).

## 3.11 ಲೆಕ್ಕಗಳಲ್ಲಿನ ಪಾರದರ್ಶಕತೆ

### 3.11.1 ಸಂಯುಕ್ತ ಶೀರ್ಷಿಕೆ–911 ಅಡಿಯಲ್ಲಿ ಆಯವ್ಯಯ ಅಂದಾಜು/ಪೂರಕ ಅಂದಾಜುಗಳಲ್ಲಿ ದೋಷಪೂರಿತ ಅವಕಾಶ ಮಾಡಿರುವುದು

ಎ) ಪ್ರಧಾನ ಶೀರ್ಷಿಕೆ ಮತ್ತು ಒಳಶೀರ್ಷಿಕೆಗಳ ಪಟ್ಟಿಯ ಸೂಚನೆಗಳು– ಕಂಡಿಕೆ 3.10ರ ಪ್ರಕಾರ, ಅದೇ ವರ್ಷದಲ್ಲಿ ಮಾಡಿದ ಹೆಚ್ಚುವರಿ ಪಾವತಿಗಳ ವಸೂಲಿಗಳನ್ನು ಸಂಬಂಧಿಸಿದ ಸೇವಾ ಶೀರ್ಷಿಕೆಗಳಡಿಯಲ್ಲಿ ಕಡಿಮೆಗೊಳಿಸಲ್ಪಟ್ಟ ವೆಚ್ಚ ಎಂದು ದಾಖಲಿಸಬೇಕಾಗುತ್ತದೆ. ಹಿಂದಿನ ವರ್ಷ(ಗಳ) ಹೆಚ್ಚುವರಿ ಪಾವತಿಯ ಕಡಿತಗಳನ್ನು ಸಂಬಂಧಿಸಿದ ಪ್ರಧಾನ/ಉಪಪ್ರಧಾನ ಶೀರ್ಷಿಕೆಗಳಡಿಯಲ್ಲಿ, ಕಾರ್ಯಕಾರಿ ಪ್ರಧಾನ/ಉಪಪ್ರಧಾನ ಶೀರ್ಷಿಕೆಯ ಒಟ್ಟು ವೆಚ್ಚದ ಮೇಲೆ ಪರಿಣಾಮವಾಗದಂತೆ ಪ್ರತ್ಯೇಕ ಒಳಶೀರ್ಷಿಕೆ '911–ಕಳೆ–ಹೆಚ್ಚುವರಿ ಪಾವತಿಯ ಕಡಿತ' –ಅಡಿಯಲ್ಲಿ ದಾಖಲಿಸಬೇಕಾಗುವುದು. ಜಾರಿಯಲ್ಲಿರುವ ಕಾನೂನು/ನಿಯಮಗಳಿಗನುಗುಣವಾಗಿ ಸಲ್ಲಿಸಿದ ಸೇವೆಗೆ ಸಂಬಂಧಿಸಿದಂತೆ ಪಾವತಿ ಮಾಡಬೇಕಾಗುವುದರಿಂದ ಒಳಶೀರ್ಷಿಕೆ '911'ರ ಅಡಿಯಲ್ಲಿ ಅವಕಾಶ ಒದಗಿಸುವುದು ಸೂಕ್ತ ಕ್ರಮವಲ್ಲ.

ಇದಕ್ಕೆ ವ್ಯತಿರಿಕ್ತವಾಗಿ, 2016–17ನೇ ಸಾಲಿನ ಮುಂಗಡ/ಪೂರಕ ಅಂದಾಜುಗಳಲ್ಲಿ, ಮುಂಗಡಪತ್ರದಲ್ಲಿ ಕಡಿಮೆಗೊಳಿಸಿದ(ಕಡಿತಗಳು) ನಿಧಿಯ ದಾಖಲೆಗಳಲ್ಲದೆ, ಹಿಂದಿನ ವರ್ಷಗಳಿಗೆ ಸಂಬಂಧಿಸಿದ ಹೆಚ್ಚುವರಿ ಪಾವತಿಯ ಸಲುವಾಗಿಯೂ ಅವಕಾಶಗಳನ್ನು ಒದಗಿಸಿರುವುದನ್ನು ಗಮನಿಸಲಾಗಿತ್ತು. ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್‌ಗಳಿಗೆ ಸಂಬಂಧಿಸಿದ ಹಿಂದಿನ ವರ್ಷಗಳ ಹೆಚ್ಚುವರಿ ಪಾವತಿಯ ಕಡಿತದ ಸಲುವಾಗಿ ಎಂಬ ಕಾರಣದೊಂದಿಗೆ, ಅನುದಾನ ಮತ್ತು ಕಾರ್ಯಕಾರಿ ಪ್ರಧಾನ ಶೀರ್ಷಿಕೆಗಳಲ್ಲಿ ಮೂಲ ಆಯವ್ಯಯದಲ್ಲಿ ₹2,704 ಕೋಟಿ ಮತ್ತು ಪೂರಕ ಅಂದಾಜು–2ರಲ್ಲಿ ₹615.48 ಕೋಟಿಗಳಷ್ಟು ಮೊತ್ತದ ಅವಕಾಶವನ್ನು ಒದಗಿಸಿಲಾಗಿತ್ತು (**ಅನುಬಂಧ 3.9**)

ಆರ್ಥಿಕ ಇಲಾಖೆಯು (ಮೇ 2017) ಜಿ.ಪಂ./ತಾ.ಪಂ. ನಿಧಿ–2ರಲ್ಲಿ ಹಿಂದಿನ ಹಲವು ವರ್ಷಗಳಿಂದ ಮೊತ್ತವು ಬಳಕೆಯಾಗದೆ ಉಳಿದು ರಾಜ್ಯದ ಜವಾಬ್ದಾರಿ ಹೆಚ್ಚಿದ ಪರಿಣಾಮವಾಗಿ, ಈ ಮೊತ್ತಗಳ ಹಿಂಪಡೆತವನ್ನು ದಾಖಲಿಸಬೇಕಾಗಿತ್ತು ಮತ್ತು ಇನ್ನು ಮುಂದೆ ಬಳಕೆಯಾಗದೆ ಉಳಿದ ಜಿ.ಪಂ./ತಾ.ಪಂ.ಗಳ ನಿಧಿಗಳನ್ನು 22 ಡಿಸೆಂಬರ್ 2016ರ ಸರ್ಕಾರಿ ಆದೇಶದಲ್ಲಿ ಹೇಳಿರುವಂತೆ ಒಳಶೀರ್ಷಿಕೆ '911' ರ ಅಡಿಯಲ್ಲಿ ಹೊಂದಾಣಿಕೆ ಮಾಡಲಾಗುವುದು ಎಂದು ತಿಳಿಸಿದೆ. ಹಿಂಪಡೆತದ ವ್ಯವಹಾರವು ವಿವಿಧ ಕಾರ್ಯಕಾರಿ ಪ್ರಧಾನ ಶೀರ್ಷಿಕೆಯಡಿಯ ಹೆಚ್ಚುವರಿ ಪಾವತಿಯ ವಸೂಲಿಯ ವ್ಯವಹಾರಕ್ಕಿಂತ ವಿಭಿನ್ನವಾಗಿರುವುದರಿಂದ ಇಲಾಖೆಯ ಉತ್ತರವು ಸಮಾಧಾನಕರವಾದುದಲ್ಲ.

#### ಬಿ) ಒಳಶೀರ್ಷಿಕೆ '902'ರ ಅಡಿಯಲ್ಲಿ ತಪ್ಪು ವರ್ಗೀಕರಣ

ಅನುದಾನಗಳ ಬೇಡಿಕೆಯು ವಸೂಲಾತಿಯೂ ಸೇರಿದಂತೆ ಒಟ್ಟು ಮೊತ್ತಗಳಿಗೆ ಶಾಸನ ಸಭೆಯಲ್ಲಿ ಮಂಡಿಸಲ್ಪಡುತ್ತದೆ. ವಸೂಲಾತಿಯ ವ್ಯವಹಾರಗಳು ಸಂಚಿತ ನಿಧಿಯಡಿಯಲ್ಲಿ ವೆಚ್ಚವನ್ನು ಭರಿಸಲು ಆಯವ್ಯಯದಲ್ಲಿ ಅವಕಾಶವನ್ನು ಪಡೆದಿರುವ ಹಾಗೂ ಮುಂದೆ ಸಾರ್ವಜನಿಕ ಲೆಕ್ಕಕ್ಕೆ ವ್ಯವಕಲನ ದಾಖಲೆಯಿಂದ ವರ್ಗಾಯಿಸಲ್ಪಡುವ ಮೊತ್ತದ ವ್ಯವಹಾರಗಳನ್ನು ಒಳಗೊಂಡಿರುತ್ತವೆ. ಈ ಉದ್ದೇಶಕ್ಕಾಗಿ, ಒಳಶೀರ್ಷಿಕೆ '902–ವ್ಯವಕಲನದ ಹಣವನ್ನು ಇದರಿಂದ ಪಡೆಯಲಾಗಿದೆ – (ಮೊತ್ತದ ಹೆಸರು)' ಅಡಿಯಲ್ಲಿ ಅವಕಾಶವನ್ನು ಪಡೆಯಲಾಗುತ್ತದೆ. ಆದರೆ ಮೊತ್ತದ ಹೊಂದಾಣಿಕೆಯ ಶೀರ್ಷಿಕೆಯಡಿಯಲ್ಲಿ (ಒಳಶೀರ್ಷಿಕೆ 902) ಯಾವುದೇ ಮೊತ್ತದ ವ್ಯವಹಾರಗಳಿಲ್ಲದ ಜಿ.ಪಂ. ಮತ್ತು ತಾ.ಪಂ.ಗಳಿಗೆ ಸಂಬಂಧಿಸಿದ ಹೆಚ್ಚುವರಿ ಪಾವತಿಯ ವಸೂಲಾತಿಗಾಗಿ (ಉದಾ: ಅನುದಾನ 17, 22 ಮುಂತಾದವುಗಳ ಅಡಿಯಲ್ಲಿ), ಆಯವ್ಯಯ ಅವಕಾಶವನ್ನು ಮಾಡಲಾಗಿತ್ತು ಎಂಬುದನ್ನು ಗಮನಿಸಲಾಗಿತ್ತು. ಇದನ್ನು ಗಮನಕ್ಕೆ ತಂದ ಬಳಿಕ, ಇಲಾಖೆಯು 31 ಮಾರ್ಚ್ 2017ರಂದು ಒಳಶೀರ್ಷಿಕೆ 902ನ್ನು ಒಳಶೀರ್ಷಿಕೆ 911ಕ್ಕೆ ಬದಲಾಯಿಸಿ ತಿದ್ದುಪಡಿಯನ್ನು ಹೊರಡಿಸಿದೆ.

### 3.11.2 ಚಾಲ್ತಿಯಲ್ಲಿಲ್ಲದ ಉದ್ದೇಶ ಶೀರ್ಷಿಕೆಗಳಡಿಯಲ್ಲಿ ಅವಕಾಶ/ವೆಚ್ಚ ಮಾಡಿರುವುದು

ಸರ್ಕಾರದ ಲೆಕ್ಕದಲ್ಲಿ ಅವಕಾಶ/ವೆಚ್ಚಗಳನ್ನು ವಿಭಾಗ /ಉಪವಿಭಾಗ /ಕಾರ್ಯ /ಉಪಕಾರ್ಯ /ಕಾರ್ಯಕ್ರಮ /ಸವಿವರ /ಉದ್ದೇಶ ಶೀರ್ಷಿಕೆಗಳ ಪ್ರಕಾರ 15 ಅಂಕಿಗಳ ವರ್ಗೀಕರಣದಲ್ಲಿ ವಿಭಾಗಿಸಲಾಗಿದೆ. ಕೊನೆಯ ಅಂತಸ್ತಿನ ಉದ್ದೇಶ ಶೀರ್ಷಿಕೆಯಡಿ ವೆಚ್ಚದ ವರ್ಗೀಕರಣವು ವೆಚ್ಚದ

ಉದ್ದೇಶ/ಸ್ವಭಾವವನ್ನು ತೋರಿಸುತ್ತಿದ್ದು ಇದನ್ನು ಅತ್ಯಂತ ನಿಖರತೆ/ಸೂಕ್ಷ್ಮದೃಷ್ಟಿ/ಅರ್ಹತೆಗಳೊಂದಿಗೆ ಗುರುತಿಸಬೇಕಾಗಿರುತ್ತದೆ. ವೆಚ್ಚದ ವರ್ಗೀಕರಣವನ್ನು ಸರಳಗೊಳಿಸುವುದಕ್ಕಾಗಿ, 2003–04ರಲ್ಲಿ ಕೆಲವು ಉದ್ದೇಶ ಶೀರ್ಷಿಕೆಗಳನ್ನು ವಿಲೀನಗೊಳಿಸಿ ಹೊಸ ಉದ್ದೇಶ ಶೀರ್ಷಿಕೆಗಳು ರಚಿಸಲ್ಪಟ್ಟಿವೆ. '050–ಕಛೇರಿಯ ವೆಚ್ಚಗಳು' ಉದ್ದೇಶ ಶೀಷಿರ್ಕೆಯು '051–ಸಾಮಾನ್ಯ ವೆಚ್ಚಗಳು' ಶೀರ್ಷಿಕೆಯಲ್ಲಿ ವಿಲೀನಗೊಂಡಿತ್ತು ಮತ್ತು ಅದರಿಂದ '050–ಕಛೇರಿಯ ವೆಚ್ಚಗಳು'–ಉದ್ದೇಶ ಶೀರ್ಷಿಕೆಯ ಬಳಕೆ ನಿಂತುಹೋಯಿತು.

ಆದರೆ, 2016–17ನೇ ವರ್ಷದಲ್ಲಿ ₹0.60 ಕೋಟಿ ಮೊತ್ತದ ಅವಕಾಶವನ್ನು 2202–02–001–0–04–050 (ಯೋಜನೇತರ)– ಕಛೇರಿ ವೆಚ್ಚಗಳು ಶೀರ್ಷಿಕೆಯಡಿಯಲ್ಲಿ ಮತ್ತು ₹5 ಕೋಟಿ ಮೊತ್ತದ ಅವಕಾಶವನ್ನು 2202–02–001–0–04–050(ಯೋಜನೆ)–ಕಛೇರಿ ವೆಚ್ಚಗಳು ಶೀರ್ಷಿಕೆಯಡಿಯಲ್ಲಿ ಮಾಡಲ್ಪಟ್ಟಿದ್ದು ಇದರಡಿ ₹0.49 ಕೋಟಿ ಮತ್ತು ₹4.57 ಕೋಟಿಯಷ್ಟು ವೆಚ್ಚವು ದಾಖಲಾಗಿ ರುವುದನ್ನು ಗಮನಿಸಲಾಗಿದೆ.

ಆರ್ಥಿಕ ಇಲಾಖೆಯ ಉತ್ತರದಲ್ಲಿ(ಸೆಪ್ಟೆಂಬರ್ 2017) ಚಾಲ್ತಿಯಲ್ಲಿಲ್ಲದ 050–ಕಛೇರಿ ವೆಚ್ಚಗಳು–ಮುಂತಾದ ಉದ್ದೇಶ ಶೀರ್ಷಿಕೆಗಳ ಬಳಕೆಯನ್ನು ನಿಲ್ಲಿಸಲಾಗುವುದೆಂದೂ, ಆಗ ಈ ಶೀರ್ಷಿಕೆಗಳಡಿಯಲ್ಲಿ ಅವಕಾಶ ಒದಗಿಸಲು ಸಾಧ್ಯವಾಗುವುದಿಲ್ಲವೆಂದೂ ತಿಳಿಸಿದೆ. ಹಾಗೂ ಚಾಲ್ತಿಯಲ್ಲಿಲ್ಲದ ಶೀರ್ಷಿಕೆಗಳಡಿಯಲ್ಲಿ ವೆಚ್ಚವನ್ನು ದಾಖಲಿಸದಿರವಂತೆ ಖಜಾನೆಗಳಿಗೂ ಸೂಚನೆ ನೀಡಲಾಗುವುದೆಂದು ತಿಳಿಸಿದೆ.

## 3.12 ಲೆಕ್ಕಗಳ ನಿಖರತೆಯ ಮೇಲೆ ಪರಿಣಾಮ ಬೀರುವ ಮುಖ್ಯ ಅಂಶಗಳು

ಸರ್ಕಾರದ ಲೆಕ್ಕಗಳನ್ನು ನಗದು ಆಧಾರದ ಮೇಲೆ ನಿರ್ವಹಿಸಲಾಗುತ್ತದೆ. ಸರ್ಕಾರಿ ಲೆಕ್ಕದಲ್ಲಿನ ಕೆಲವು ಸ್ವೀಕೃತಿ ಮತ್ತು ವೆಚ್ಚಗಳನ್ನು ಮಾಹಿತಿ ಕೊರತೆ ಅಥವಾ ಇತರೆ ಕಾರಣಗಳಿಂದ ಅಂತಿಮ ಸ್ವೀಕೃತಿ ಅಥವಾ ವೆಚ್ಚ ಶೀರ್ಷಿಕೆಯಡಿ ಲೆಕ್ಕ ಮಾಡಲಾಗದಿದ್ದರೆ, ಅವುಗಳನ್ನು ತಾತ್ಕಾಲಿಕವಾಗಿ ಅಮಾನತ್ತು ಲೆಕ್ಕದಲ್ಲಿ ಇಡಲಾಗುತ್ತದೆ. ಈ ಅಮಾನತ್ತು ಲೆಕ್ಕವನ್ನು ಸಂಬಂಧಿಸಿದ ವಿವರ/ಮಾಹಿತಿ ಬಂದ ನಂತರ ತೀರುವಳಿ ಮಾಡಲಾಗುವುದು. ಋಣ, ಠೇವಣಿ ಮತ್ತು ಇರಸಾಲು ಶೀರ್ಷಿಕೆಗಳು (ಡಿ.ಡಿ.ಆರ್.) ಇಂತಹ ವಹಿವಾಟುಗಳನ್ನು ಲೆಕ್ಕ ಮಾಡಲು ಇದ್ದು, ಸರ್ಕಾರವು ಸಾರ್ವಜನಿಕ ಹಣದ ಪಾಲಕನಾಗಿ ಈ ಹಣವನ್ನು ಸ್ವೀಕರಿಸುತ್ತದೆ ಮತ್ತು ವಿಶ್ವಾಸಾರ್ಹವಾಗಿ ನಿರ್ವಹಿಸುತ್ತದೆ.

2016–17ರ ರಾಜ್ಯದ ಹಣಕಾಸಿನ ಲೆಕ್ಕಗಳ ನಿಖರತೆಯ ಮೇಲೆ, (ಅ)ಅಮಾನತ್ತು ಶೀರ್ಷಿಕೆಗಳಡಿ ಹೆಚ್ಚಿನ ಸಂಖ್ಯೆಯ ವ್ಯವಹಾರಗಳು ಅಂತಿಮ ವರ್ಗೀಕರಣಕ್ಕಾಗಿ ಕಾಯುತ್ತಿರುವುದು ಮತ್ತು (ಆ)ಋಣ, ಠೇವಣಿ ಮತ್ತು ಇರಸಾಲು ಲೆಕ್ಕಶೀರ್ಷಿಕೆಗಳಡಿ ಹೆಚ್ಚುತ್ತಿರುವ ವ್ಯತಿರಿಕ್ತ ಶಿಲ್ಕುಗಳ ಸಂಖ್ಯೆ ಮತ್ತು ಪ್ರಮಾಣಗಳಂತಹ ಅಂಶಗಳು ವ್ಯತಿರಿಕ್ತವಾಗಿ ಪರಿಣಾಮ ಬೀರಿದೆ. ಈ ವ್ಯವಹಾರಗಳ ಸಾಮಾನ್ಯ ಸಮೀಕ್ಷೆಯು ಕೆಳಕಂಡ ಅಂಶಗಳನ್ನು ತೋರಿಸಿದೆ.

### ಅ) ಪ್ರಮುಖ ಅಮಾನತ್ತು ಲೆಕ್ಕಗಳಡಿ ಬಾಕಿ ಉಳಿದಿರುವ ಶಿಲ್ಕುಗಳು

ಸರ್ಕಾರದ ಲೆಕ್ಕಗಳಲ್ಲಿ 'ಅಮಾನತ್ತು ಶೀರ್ಷಿಕೆ'ಗಳೆಂದು ಕರೆಯಲ್ಪಡುವ ಕೆಲವು ಮಧ್ಯವರ್ತಿ/ ಹೊಂದಾಣಿಕೆಯ ಲೆಕ್ಕಶೀರ್ಷಿಕೆಗಳನ್ನು ನಿರ್ವಹಿಸಲಾಗುತ್ತಿದ್ದು, ಇವು ವ್ಯವಹಾರದ ಸ್ವರೂಪದ ಬಗ್ಗೆ ಮಾಹಿತಿಯ ಕೊರತೆ ಅಥವಾ ಇತರೆ ಕಾರಣಗಳಿಂದಾಗಿ ಅಂತಿಮ ಲೆಕ್ಕಶೀರ್ಷಿಕೆಗೆ ದಾಖಲಿಸಲು ಆಗದ ಸ್ವೀಕೃತಿಗಳು ಮತ್ತು ಸಂದಾಯಗಳನ್ನು ಪ್ರತಿಬಿಂಬಿಸುತ್ತವೆ. ಈ ಲೆಕ್ಕಶೀರ್ಷಿಕೆಗಳಡಿಯ ಮೊತ್ತಗಳನ್ನು ಅನುಕ್ರಮವಾಗಿ ಅವುಗಳ ಅಂತಿಮ ಲೆಕ್ಕಶೀರ್ಷಿಕೆಗಳಡಿ ದಾಖಲಿಸಿದಾಗ, ಅವುಗಳನ್ನು ಸ್ವೀಕೃತಿ ಅಥವಾ ವೆಚ್ಚದ ಕಡಿತದಿಂದ ತೀರುವಳಿ ಮಾಡಲಾಗುವುದು. ಈ ಮೊತ್ತಗಳು ತೀರುವಳಿಯಾಗದೆ ಉಳಿದರೆ, ಅಮಾನತ್ತು ಶೀರ್ಷಿಕೆಗಳಡಿ ಶಿಲ್ಕುಗಳ ಶೇಖರಣೆಯಾಗಿ ಸರ್ಕಾರದ ಸ್ವೀಕೃತಿಗಳು ಮತ್ತು ವೆಚ್ಚಗಳು ನಿಖರವಾಗಿ ಪ್ರತಿಬಿಂಬಿತವಾಗುವುದಿಲ್ಲ. ಮಹಾಲೇಖಾಪಾಲರು (ಲೆ ಮತ್ತು ಹ) ನಿರ್ವಹಿಸಿರುವ ಲೆಡ್ಜರುಗಳಲ್ಲಿ ದಾಖಲಿಸಿರುವಂತೆ, ಕೆಲವು ಪ್ರಮುಖ ಅಮಾನತ್ತು ಲೆಕ್ಕಶೀರ್ಷಿಕೆಗಳಡಿಯ ಶಿಲ್ಕುಗಳನ್ನು **ಕೋಷ್ಟಕ 3.7**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.7: ಅಮಾನತ್ತು ಶೀರ್ಷಿಕೆ (8658–ಅಮಾನತ್ತು ಲೆಕ್ಕಗಳು)**

(ಕೋಟಿ ರೂಪಾಯಿಗಳಲ್ಲಿ)

| ಒಳಶೀರ್ಷಿಕೆಯ ಹೆಸರು | 2014–15 | | 2015–16 | | 2016–17 | |
|---|---|---|---|---|---|---|
| | ಖರ್ಚು | ಜಮೆ | ಖರ್ಚು | ಜಮೆ | ಖರ್ಚು | ಜಮೆ |
| 101–ವೇತನ ಮತ್ತು ಲೆಕ್ಕ ಕಛೇರಿ ಅಮಾನತ್ತು | 67.40 | 0.70 | 86.90 | 0.68 | 118.86 | 0.45 |
| ನಿವ್ವಳ | ಖರ್ಚು 66.70 | | ಖರ್ಚು 86.22 | | ಖರ್ಚು 118.41 | |
| 102–ಅಮಾನತ್ತು ಲೆಕ್ಕ(ಸಿವಿಲ್) | 17.93 | 7.35 | 24.29 | 34.42 | 17.22 | 60.74 |
| ನಿವ್ವಳ | ಖರ್ಚು 10.58 | | ಜಮೆ 10.13 | | ಜಮೆ 43.52 | |
| 110–ರಿಸರ್ವ್ ಬ್ಯಾಂಕ್ ಅಮಾನತ್ತು – ಕೇಂದ್ರ ಕಛೇರಿ | 15.44 | 56.20 | 20.20 | 57.56 | 41.02 | 148.41 |
| ನಿವ್ವಳ | ಜಮೆ 40.76 | | ಜಮೆ 37.36 | | ಜಮೆ 107.39 | |

*ಆಕರ: ಡಿಡಿಆರ್ ಲೆಡ್ಜರ್/ಹಣಕಾಸು ಲೆಕ್ಕಗಳು*

ಹಣಕಾಸು ಲೆಕ್ಕಗಳು ಈ ಲೆಕ್ಕಶೀರ್ಷಿಕೆಗಳಡಿಯ ನಿವ್ವಳ ಶಿಲ್ಕುಗಳನ್ನು ಪ್ರತಿಬಿಂಬಿಸುತ್ತವೆ. ಶಿಲ್ಕುಗಳನ್ನು ಬಾಕಿ ಉಳಿದ ಖರ್ಚು ಮತ್ತು ಜಮೆಯನ್ನು ಪ್ರತ್ಯೇಕವಾಗಿ ಒಟ್ಟುಗೂಡಿಸಿ ಲೆಕ್ಕ ಮಾಡಲಾಗಿದೆ. ಈ ಲೆಕ್ಕಶೀರ್ಷಿಕೆಗಳಡಿಯ ಶಿಲ್ಕುಗಳ ಪರಿಣಾಮಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

### ❖ ವೇತನ ಮತ್ತು ಲೆಕ್ಕ ಕಛೇರಿ (ಪಿಎಒ) ಅಮಾನತ್ತು

ಈ ಲೆಕ್ಕ ಶೀರ್ಷಿಕೆಯನ್ನು ವಿವಿಧ ಪ್ರತ್ಯೇಕ ವೇತನ ಮತ್ತು ಲೆಕ್ಕಾಧಿಕಾರಿ (ಪಿಎಒ) ಗಳ ಮತ್ತು ಮಹಾಲೇಖಾಪಾಲರ ಪುಸ್ತಕಗಳಲ್ಲಿ ಉಂಟಾಗುವ ವ್ಯವಹಾರಗಳನ್ನು ಇತ್ಯರ್ಥಗೊಳಿಸಲು ನಿರ್ವಹಿಸಲಾಗುತ್ತಿದೆ. ಈ ವ್ಯವಹಾರಗಳು ಮೊದಲು ಮಹಾಲೇಖಾಪಾಲರ ಪುಸ್ತಕಗಳಲ್ಲಿ ಈ ಶೀರ್ಷಿಕೆಯಡಿ ದಾಖಲಿಸಲ್ಪಟ್ಟು, ವೇತನ ಮತ್ತು ಲೆಕ್ಕಾಧಿಕಾರಿಯಿಂದ ಚೆಕ್/ಡಿಡಿಯನ್ನು ಸ್ವೀಕರಿಸಿದ ನಂತರ ಮತ್ತು ಯಾವ ವೇತನ ಮತ್ತು ಲೆಕ್ಕಾಧಿಕಾರಿಯ ಪರವಾಗಿ ರಾಜ್ಯ ಖಜಾನೆಗಳಲ್ಲಿ ಹಣ ಸಂದಾಯ ಮಾಡಲಾಗಿತ್ತೋ, ಅವರು ಚೆಕ್/ಡಿಡಿಯನ್ನು ನೀಡಿದ ನಂತರ ತೀರುವಳಿ ಮಾಡಲಾಗುವುದು. ಈ ಶೀರ್ಷಿಕೆಯಡಿಯ ಬಾಕಿ ಉಳಿದ ಖರ್ಚಿನ ಶಿಲ್ಕು, ವೇತನ ಮತ್ತು ಲೆಕ್ಕಾಧಿಕಾರಿಯ ಪರವಾಗಿ ಮಹಾಲೇಖಾಪಾಲರು ಸಂದಾಯಗಳನ್ನು ಮಾಡಿದ್ದು, ಅವುಗಳನ್ನು ಇನ್ನೂ ವಸೂಲಿ ಮಾಡಬೇಕಾಗಿದೆ ಎಂದು ಸೂಚಿಸುತ್ತದೆ. ಬಾಕಿ ಉಳಿದ ಜಮೆಯ ಶಿಲ್ಕು, ವೇತನ ಮತ್ತು ಲೆಕ್ಕಾಧಿಕಾರಿ ಬದಲಿಗೆ ಮಹಾಲೇಖಾಪಾಲರು ಸಂದಾಯಗಳನ್ನು ಸ್ವೀಕರಿಸಿದ್ದು, ಅವುಗಳನ್ನು ಇನ್ನೂ ಪಾವತಿ ಮಾಡಬೇಕಾಗಿದೆ ಎಂದು ಸೂಚಿಸುತ್ತದೆ. ಈ ಶೀರ್ಷಿಕೆಯಡಿಯ ನಿವ್ವಳ ಖರ್ಚಿನ ಶಿಲ್ಕು ಹೆಚ್ಚುತ್ತಿರುವ ಪ್ರವೃತ್ತಿಯನ್ನು ತೋರಿಸುತ್ತಿದ್ದು, ಇದರ ತೀರುವಳಿ/ಇತ್ಯರ್ಥದಿಂದ ರಾಜ್ಯಸರ್ಕಾರದ ನಗದುಶಿಲ್ಕು ಹೆಚ್ಚಾಗುತ್ತದೆ. ಈ ವ್ಯವಹಾರಗಳು ಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿಗಳು ಮತ್ತು ರಾಜ್ಯ ಸರ್ಕಾರದಿಂದ ಪಾವತಿಸಿದ ಕೇಂದ್ರ ಸರ್ಕಾರದ ನಾಗರಿಕ ಪಿಂಚಣಿಯ ಬಾಬ್ತಿಗೆ ಸಂಬಂಧಿಸಿದ್ದಾಗಿದೆ.

### ❖ ಅಮಾನತ್ತು ಲೆಕ್ಕ (ಸಿವಿಲ್)

ವ್ಯವಹಾರಗಳ ಪೂರ್ಣ ವರ್ಗೀಕರಣದ ಮಾಹಿತಿಯು ಇರದಿರುವುದು, ಅಥವಾ ಪೂರಕವಾದ ದಸ್ತಾವೇಜು/ಪಟ್ಟಿ ಇರದಿರುವುದು, ಅಥವಾ ಖಜಾನೆಯ ಪಟ್ಟಿಯಲ್ಲಿ ನಮೂದಿಸಿದ ಅಂಕಿಗಳು ಹಾಗೂ ಪೂರಕವಾದ ಖರ್ಚು/ಜಮೆಗಳ ದಸ್ತಾವೇಜು/ಪಟ್ಟಿಗಳ ನಡುವೆ ವ್ಯತ್ಯಾಸವಿರುವುದು, ಇವೇ ಮುಂತಾದ ಸಂದರ್ಭಗಳ ವ್ಯವಹಾರಗಳು, ಈ ಶೀರ್ಷಿಕೆಯಡಿ ಬಾಕಿ ಇರುವ ಜಮೆಯ ಹೆಚ್ಚಿನ ಭಾಗವಾಗಿರುತ್ತವೆ.

ರಾಜ್ಯ ಖಜಾನೆಗಳಲ್ಲಿ ನಡೆಯುವ ರೈಲ್ವೆ, ರಕ್ಷಣೆ, ಅಂಚೆ ಮತ್ತು ದೂರಸಂಪರ್ಕ ಲೆಕ್ಕಗಳಿಗೆ ಸಂಬಂಧಿಸಿದ ವ್ಯವಹಾರಗಳನ್ನು ಮೊದಲು ಈ ಶೀರ್ಷಿಕೆಯಲ್ಲಿ ವರ್ಗೀಕರಿಸಿ ಸಂಬಂಧಿಸಿದ ಅಧಿಕಾರಿಗಳಿಂದ ಕ್ಲೈಮುಗಳು ಬರುವ ತನಕ ತೀರುವಳಿಯನ್ನು ಬಾಕಿ ಇರಿಸಲಾಗುವುದು.

ಈ ಶೀರ್ಷಿಕೆಯಡಿ ನಿವ್ವಳ ಧನಾತ್ಮಕ ಶಿಲ್ಕು ಪ್ರಸಕ್ತ ಸಾಲಿನಲ್ಲಿ ₹33.39 ಕೋಟಿಗಳಷ್ಟು ಹೆಚ್ಚಾಗಿದೆ. ಆದರೆ, ರೈಲ್ವೆ (₹3.19 ಕೋಟಿ) ಮತ್ತು ರಕ್ಷಣಾ (₹0.59 ಕೋಟಿ) ಲೆಕ್ಕಗಳಿಗೆ ಸಂಬಂಧಿಸಿದಂತೆ

ಅಮಾನತ್ತು ತೀರುವಳಿಯ ನಂತರ ನಗದು ಶಿಲ್ಕಿನಲ್ಲಿ ಹೆಚ್ಚಳವಾಗುವುದು. ಉಳಿದ ಬಾಬ್ತುಗಳಿಗೆ ಸಂಬಂಧಿಸಿದಂತೆ ತೀರುವಳಿಯು ನಗದು ಶಿಲ್ಕಿನ ಮೇಲೆ ಪರಿಣಾಮವನ್ನು ಬೀರುವುದಿಲ್ಲ.

- **ರಿಸರ್ವ್ ಬ್ಯಾಂಕ್ ಅಮಾನತ್ತು, ಕೇಂದ್ರ ಲೆಕ್ಕ ಕಛೇರಿ**

ಈ ಶೀರ್ಷಿಕೆಯನ್ನು ಅಂತರ ಸರಕಾರಗಳ ನಡುವಿನ ಇತ್ಯರ್ಥಕ್ಕಾಗಿ ವ್ಯವಹಾರಗಳನ್ನು ದಾಖಲಿಸಲು ನಿರ್ವಹಿಸಲಾಗಿದ್ದು ಎರಡು ಸರ್ಕಾರಗಳ ನಡುವಿನ ನಗದು ಶಿಲ್ಕಿನ ಇತ್ಯರ್ಥವು ಭಾರತೀಯ ರಿಸರ್ವ್ ಬ್ಯಾಂಕಿನ (ಆರ್‌ಬಿಐ) ಕೇಂದ್ರ ಲೆಕ್ಕ ವಿಭಾಗಕ್ಕೆ ಸೂಚನೆ ಕಳುಹಿಸುವ ಮುಖಾಂತರ ಆಗುತ್ತದೆ. ಆರ್‌ಬಿಐನಿಂದ ಹಣ ಇತ್ಯರ್ಥವಾದ ಸೂಚನೆ ಬಂದ ನಂತರ ಅಂತಿಮ ಶೀರ್ಷಿಕೆಗೆ ವರ್ಗಾಯಿಸುವುದರ ಮೂಲಕ ಈ ಶೀರ್ಷಿಕೆಯನ್ನು ತೀರುವಳಿ ಮಾಡಲಾಗುವುದು. ಭಾರತ ಸರಕಾರದ ಅನುದಾನ/ಸಾಲಗಳು ಮತ್ತು ಅದರ ಮರು ಪಾವತಿ, ಭದ್ರತಾ ತೀರುವಳಿ ಮತ್ತು ಆರ್‌ಬಿಐನ ಸಾರ್ವಜನಿಕ ಸಾಲದ ಕಛೇರಿಗಳಿಗೆ ಬಡ್ಡಿ ಪಾವತಿ ಹಾಗು ಸರಕಾರದ ಇಲಾಖೆಗಳಿಗೆ ಸಾಮಗ್ರಿ ಒದಗಿಸಿದ ನಿರ್ದೇಶಕರು, ಪೂರೈಕೆ ಮತ್ತು ಹಂಚಿಕೆಗೆ ಪಾವತಿಗಳು ಈ ಶೀರ್ಷಿಕೆಯ ಪ್ರಮುಖ ಅಮಾನತ್ತು ವ್ಯವಹಾರಗಳಾಗಿರುತ್ತವೆ.

2016–17ನೇ ವರ್ಷದಲ್ಲಿ ಈ ಶೀರ್ಷಿಕೆಯಡಿ ಧನಾತ್ಮಕ ಶಿಲ್ಕು ₹107.39 ಕೋಟಿಗಳಿದ್ದು, ಕಳೆದ ವರ್ಷಕ್ಕಿಂತ ₹70.03 ಕೋಟಿ ಹೆಚ್ಚಾಗಿದ್ದು, ಇದು ಸಂವಾದಿ ತೀರುವಳಿಗಳನ್ನು ಮಾಡುತ್ತಿಲ್ಲವೆಂದು ಸೂಚಿಸುತ್ತದೆ.

### ಆ) ಋಣ, ಠೇವಣಿ, ಇರಸಾಲು (ಡಿಡಿಆರ್) ಶೀರ್ಷಿಕೆಗಳಡಿ ವ್ಯತಿರಿಕ್ತ ಶಿಲ್ಕುಗಳು

ವ್ಯತಿರಿಕ್ತ ಶಿಲ್ಕುಗಳು ಅಂದರೆ ಋಣಾತ್ಮಕ ಶಿಲ್ಕು ಇರಬಾರದಂತಹ ಲೆಕ್ಕಶೀರ್ಷಿಕೆಗಳಡಿ ಕಾಣುವ ಋಣಾತ್ಮಕ ಶಿಲ್ಕುಗಳಾಗಿವೆ. ಉದಾಹರಣೆಗೆ, ಯಾವುದೇ ಸಾಲ ಅಥವಾ ಮುಂಗಡ ಲೆಕ್ಕಶೀರ್ಷಿಕೆಯಡಿ ಋಣಾತ್ಮಕ ಶಿಲ್ಕು, ಮುಂಗಡ ನೀಡಿದ ಮೂಲ ಮೊತ್ತಕ್ಕೆ ಪ್ರತಿಯಾಗಿ ಹೆಚ್ಚಿನ ಮರುಪಾವತಿಯನ್ನು ಸೂಚಿಸುತ್ತದೆ. 2016–17ರ ಹಣಕಾಸು ಲೆಕ್ಕದಲ್ಲಿ ತೋರಿಸಿರುವಂತೆ ಇ–ಸಾರ್ವಜನಿಕ ಋಣದಡಿಯ ವ್ಯತಿರಿಕ್ತ ಶುಲ್ಕವು ₹123.33 ಕೋಟಿಗಳಷ್ಟಿತ್ತು (ಪ್ರಧಾನ ಶೀರ್ಷಿಕೆ 6003–ಆಂತರಿಕ ಋಣ). ಇದು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ (ಎನ್‌ಸಿಡಿಸಿ)ವು ಸಾಲ ಪಡೆಯುವ ಸಂಸ್ಥೆಗಳಿಗೆ ಈ ಸಾಲಗಳನ್ನು ರಾಜ್ಯದ ಸಂಚಿತ ನಿಧಿಯ ಮೂಲಕ ನಿರ್ದೇಶಿಸದೆ, ಸಾಲದ ನೇರ ಬಿಡುಗಡೆಯ ಕಾರಣದಿಂದ, ಮತ್ತು ಮರುಪಾವತಿಗಳು ಸಂಚಿತ ನಿಧಿಯ ಮೂಲಕ ಆಗಿರುವುದರಿಂದ ಉಂಟಾಗಿದೆ. ವ್ಯತಿರಿಕ್ತ ಶಿಲ್ಕು ₹23.66 ಕೋಟಿ – ಖರ್ಚು (ಪ್ರಧಾನ ಶೀರ್ಷಿಕೆ 6004–ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು)ಗೆ ಸಂಬಂಧಿಸಿದಂತೆ, 13ನೇ ಹಣಕಾಸು ಸಮಿತಿಯ ಶಿಫಾರಸ್ಸಿನ ಮೇಲೆ ಕೇಂದ್ರ ಸಾಲಗಳನ್ನು ವಜಾ ಮಾಡಿದ ಕಾರಣದಿಂದ ಉಂಟಾಗಿದೆ. (31 ಮಾರ್ಚ್ 2010ರಂದು ಲೆಕ್ಕವಹಿಯಲ್ಲಿರುವ ಶಿಲ್ಕು). 2010–12ರ ಅವಧಿಯಲ್ಲಿ ವಿವಿಧ ಪಿಎಒಗಳಿಗೆ ಹೆಚ್ಚುವರಿಯಾಗಿ ಪಾವತಿಸಿದ ಮೊತ್ತದ ಬಾಕಿಯು ಭಾರತ ಸರ್ಕಾರದ ಆರ್ಥಿಕ ಸಚಿವಾಲಯದ ಮೂಲಕ ಹೊಂದಾಣಿಕೆಯಾಗಬೇಕಿದೆ. ಸಾಲ ಮತ್ತು ಮುಂಗಡಗಳ ವಿಚಾರದಲ್ಲಿ, ವ್ಯತಿರಿಕ್ತ ಶಿಲ್ಕಾದ ₹199.33 ಕೋಟಿಯು ಲೆಕ್ಕ ಹೊಂದಾಣಿಕೆಯಾಗದಿರುವುದರಿಂದ/ತಪ್ಪು ವರ್ಗೀಕರಣದ ಕಾರಣದಿಂದಾಗಿ ಉಂಟಾಗಿದೆ.

## 3.13 ಸಮಾಪನ

ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಿಗೆ ಪ್ರತಿಯಾಗಿ ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳು ದೀರ್ಘ ಕಾಲದಿಂದ ಸಲ್ಲಿಸದೆ ಬಾಕಿಯಿರುವುದು ಕಂಡುಬಂದಿದೆ. ದೊಡ್ಡ ಮೊತ್ತದ ಹಣವು ವೈಯಕ್ತಿಕ ಠೇವಣಿಯಲ್ಲಿಯೇ ಉಳಿದಿದ್ದು, ಇದು ಆರ್ಥಿಕ ನಿಯಂತ್ರಣದ ಮೇಲೆ ಶಾಸನಬದ್ಧ ಹತೋಟಿಯ ತತ್ವಕ್ಕೆ ವಿರುದ್ಧವಾಗಿದೆ. ಅನುದಾನಿತ ಸಂಸ್ಥೆಗಳು ಬಳಕೆ ಪ್ರಮಾಣಪತ್ರವನ್ನು ಸಲ್ಲಿಸದಿರುವಿಕೆಯನ್ನು ಗಮನಿಸಲಾಗಿದೆ. ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಅನುಷ್ಠಾನ ಏಜೆನ್ಸಿಗಳಿಗೆ ಅನಗತ್ಯವಾಗಿ ಯೋಜನೆಯ ಮೊತ್ತವನ್ನು ಬಿಡುಗಡೆಗೊಳಿಸಲಾಗಿತ್ತು. ಸಂಯುಕ್ತ ಶೀರ್ಷಿಕೆಗಳಿಗೆ ಅವಕಾಶ ಒದಗಿಸುವುದರಲ್ಲಿ ದೋಷಗಳು ಉಂಟಾಗಿದ್ದವು. ಅಮಾನತ್ತು ಲೆಕ್ಕದ ಶಿಲ್ಕುಗಳಲ್ಲಿ ಏರಿಕೆಯ ಪ್ರವೃತ್ತಿ ಕಾಣಿಸಿದೆ. ಸಂಚಿತ ನಿಧಿಯ ಕೆಲವು ಲೆಕ್ಕಗಳಲ್ಲಿ ವ್ಯತಿರಿಕ್ತ ಶಿಲ್ಕುಗಳಿದ್ದು ಇವುಗಳ ತೀರುವಳಿಗೆ ಪರಿಹಾರಾತ್ಮಕ ಕ್ರಮಗಳನ್ನು ತೆಗೆದು ಕೊಳ್ಳಬೇಕಾಗಿದೆ.

## 3.14 ಸಲಹೆಗಳು

- *ಸರ್ಕಾರವು ಸಕಾಲದಲ್ಲಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಹೊಂದಾಣಿಕೆಯಾಗುವುದನ್ನು ಖಚಿತಪಡಿಸಿಕೊಳ್ಳಬೇಕು;*
- *ಇಲಾಖೆಗಳು ಬಳಕೆ ಪ್ರಮಾಣಪತ್ರ ಸಲ್ಲಿಸುವಿಕೆಗೆ ಸಂಬಂಧಿತ ನಿಯಮ ಮತ್ತು ಶಾಸನಗಳಿಗೆ ಬದ್ಧವಾಗಿರುವದನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಕಟ್ಟುನಿಟ್ಟಿನ ನಿಗಾವಹಿಸುವ ವ್ಯವಸ್ಥೆಯನ್ನು ಕೈಗೊಳ್ಳುವ ಅವಶ್ಯಕತೆಯಿದೆ.*
- *ಉಪಯುಕ್ತತೆ ಇಲ್ಲದೆಯೂ ಮುಂದುವರಿದಿರುವ ವೈಯಕ್ತಿಕ ಠೇವಣಿ ಲೆಕ್ಕಗಳ ಶಿಲ್ಕುಗಳನ್ನು ಮುಕ್ತಾಯಗೊಳಿಸುವುದನ್ನು, ವೈಯಕ್ತಿಕ ಠೇವಣಿ ಲೆಕ್ಕಗಳ ಸ್ಥಿತಿಯನ್ನು ಪರಿಶೀಲಿಸಲು, ಚಾಲ್ತಿಯಲ್ಲಿಲ್ಲದ ಲೆಕ್ಕಗಳನ್ನು ಸಮಾಪ್ತಗೊಳಿಸಲು ಆಡಳಿತಾಧಿಕಾರಿಗಳು ಮತ್ತು ಖಜಾನೆಯೊಂದಿಗೆ ಸಮಾಲೋಚಿಸಿ ಕ್ರಮ ಕೈಗೊಳ್ಳುವ ಅವಶ್ಯಕತೆಯಿದೆ;*
- *ಕೇಂದ್ರ ಸಾಲಗಳ ಮನ್ನಾ ಕಾರಣದಿಂದ 2010–12ರಲ್ಲಿ ಪಾವತಿ ಮತ್ತು ಲೆಕ್ಕಾಧಿಕಾರಿಗೆ ಹೆಚ್ಚುವರಿ ಸಂದಾಯವಾಗಿದ್ದ ಮೊತ್ತವು, ಭಾರತ ಸರ್ಕಾರದಿಂದ ಬರಬೇಕಾಗಿರುವುದನ್ನು ಕುರಿತು ಭಾರತ ಸರ್ಕಾರದ ಆರ್ಥಿಕ ಮಂತ್ರಾಲಯವನ್ನು ಸಂಪರ್ಕಿಸಿ ತ್ವರಿತವಾಗಿ ಬಗೆಹರಿಸಬೇಕಾಗಿದೆ;*
- *ವ್ಯವಹಾರಗಳನ್ನು ಅಂತಿಮ ಶೀರ್ಷಿಕೆಯ ಲೆಕ್ಕಕ್ಕೆ ತರಲು ಅಮಾನತ್ತು ಶೀರ್ಷಿಕೆಗಳ ಪರಿಶೀಲನೆ ಮಾಡಬೇಕಾಗಿದೆ; ಮತ್ತು*
- *ಸಂಚಿತ ನಿಧಿಯಿಂದ ಅನುಷ್ಠಾನ ಏಜೆನ್ಸಿಗಳಿಗೆ ಹಣ ಬಿಡುಗಡೆಗೊಳಿಸುವಿಕೆಯು ಆಯವ್ಯಯ ಅನುದಾನದ ರದ್ದತಿಯಿಂದ ತಪ್ಪಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ಅವಶ್ಯಕತೆಯಿರುವ ಮೊತ್ತವನ್ನು ಅವಲಂಬಿಸಿರಬೇಕು.*

(ಇ ಪಿ ನಿವೇದಿತ)

ಬೆಂಗಳೂರು — ಮಹಾಲೇಖಾಪಾಲರು

ದಿನಾಂಕ — (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನೆ)

ಕರ್ನಾಟಕ

**ಮೇಲುರುಜು ಮಾಡಲಾಗಿದೆ**

ನವದೆಹಲಿ — (ರಾಜೀವ್ ಮಹರ್ಷಿ)

ದಿನಾಂಕ — ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು

# ಅನುಬಂಧಗಳು

# ಅನುಬಂಧ 1.1

## ರಾಜ್ಯ ಚಿತ್ರಣ

(ಉಲ್ಲೇಖ: ಪುಟ 1)

| ಎ. | ಸಾಮಾನ್ಯ ದತ್ತಾಂಶ | | | |
|---|---|---|---|---|
| **ಕ್ರಮ ಸಂಖ್ಯೆ** | **ವಿವರ** | | | **ಅಂಕಿಗಳು** |
| **1** | ವಿಸ್ತೀರ್ಣ | | | 1,91,791 ಚ.ಕಿ.ಮೀ |
| **2** | ಜನಸಂಖ್ಯೆ | | | |
| | ಎ. | 2001ರ ಜನಗಣತಿ ಪ್ರಕಾರ | | 5.28 ಕೋಟಿ |
| | ಬಿ. | 2011ರ ಜನಗಣತಿ ಪ್ರಕಾರ. | | 6.11 ಕೋಟಿ |
| **3** | ಎ. | [1]ಜನಸಂಖ್ಯೆಯ ಸಾಂದ್ರತೆ (2001 ಜನಗಣತಿ).<br>(ರಾಷ್ಟ್ರೀಯ ಸಾಂದ್ರತೆ = **ಪ್ರತಿ ಚ.ಕಿ.ಮೀ.ಗೆ 325 ಜನ**) | | ಪ್ರತಿ ಚ.ಕಿ.ಮೀ 276 ಜನ |
| | ಬಿ. | ಜನಸಂಖ್ಯೆಯ ಸಾಂದ್ರತೆ (2011 ಜನಗಣತಿ).<br>(ರಾಷ್ಟ್ರೀಯ ಸಾಂದ್ರತೆ = **ಪ್ರತಿ ಚ.ಕಿ.ಮೀ.ಗೆ 382 ಜನ**) | | ಪ್ರತಿ ಚ.ಕಿ.ಮೀ 319 ಜನ |
| **4** | [2]ಬಡತನ ರೇಖೆಯ ಕೆಳಗಿನ ಜನಸಂಖ್ಯೆ.<br>(ರಾಷ್ಟ್ರೀಯ ಸರಾಸರಿ = **21.9** %) | | | 20.9 *ಶೇಕಡ* |
| **5** | ಎ. | [3]ಸಾಕ್ಷರತೆ (2001)<br>(ರಾಷ್ಟ್ರೀಯ ಸರಾಸರಿ = **64.8** % ) | | 66.60 *ಶೇಕಡ* |
| | ಬಿ. | [3]ಸಾಕ್ಷರತೆ (2011)<br>(ರಾಷ್ಟ್ರೀಯ ಸರಾಸರಿ = **73.0** % ) | | 75.40 *ಶೇಕಡ* |
| **6** | [4]ಶಿಶು ಮರಣದರ (ಪ್ರತಿ 1,000 ಜೀವಂತ ಜನನಗಳಿಗೆ)<br>(ರಾಷ್ಟ್ರೀಯ ಸರಾಸರಿ = **37 ಪ್ರತಿ 1,000 ಜೀವಂತ ಜನನಗಳಿಗೆ** ) | | | 28 ಪ್ರತಿ 1,000 ಜೀವಂತ ಜನನಗಳಿಗ |
| **7** | [5]ಜನನ ಸಮಯದ ಆಯು: ಪ್ರಮಾಣ<br>(ರಾಷ್ಟ್ರೀಯ ಸರಾಸರಿ = **68.3 ವರ್ಷಗಳು**) | | | 69 ವರ್ಷಗಳು |
| **8** | [6]ಗಿನಿ ಗುಣಾಂಕ[1] (2009–10ರ ಸಾಲಿಗೆ ಲಭ್ಯವಿದ್ದ ಇತ್ತೀಚಿನ ಅಂಕಿಗಳನ್ನು ಪರಿಗಣಿಸಿದೆ) | | | |
| | ಎ. | ಗ್ರಾಮೀಣ (ರಾಷ್ಟ್ರೀಯ = **0.29**) | | 0.24 |
| | ಬಿ. | ನಗರ (ರಾಷ್ಟ್ರೀಯ = **0.38**) | | 0.33 |
| **9** | [7]ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ರಾಒಆಉ) 2016–17 ಪ್ರಸಕ್ತ ಬೆಲೆಗಳಲ್ಲಿ | | | 11,17,334 ಕೋಟಿ |
| **10** | ರಾಒಆಉ ಸಿಎಜಿಆರ್ (2007–08 ರಿಂದ 2016–17) | | ಕರ್ನಾಟಕ | 17.22 |
| | | | ಇತರ ಸಾಮಾನ್ಯ ವರ್ಗ ರಾಜ್ಯಗಳು[2] | 13.20 |
| **11** | ರಾಒಆಉ ಸಿಎಜಿಆರ್<br>(2007–08 ರಿಂದ 2016–17) | | ಕರ್ನಾಟಕ | 19.38 |
| | | | [5]ಇತರ ಸಾಮಾನ್ಯ ವರ್ಗ ರಾಜ್ಯಗಳು | 15.20 |
| **12** | [8]ಜನಸಂಖ್ಯಾವೃದ್ಧಿ<br>(2007–2016) | | ಕರ್ನಾಟಕ | 9.50 |
| | | | [6]ಇತರ ಸಾಮಾನ್ಯ ವರ್ಗ ರಾಜ್ಯಗಳು | 12.30 |
| **ಬಿ.** | **ಆರ್ಥಿಕ ದತ್ತಾಂಶ** | | | |

| **ವಿವರಗಳು** | | **ಅಂಕಿಗಳು (ಶೇಕಡ)** | | | |
|---|---|---|---|---|---|
| | | **2007–08 ರಿಂದ 2015–16** | | **2015–16 ರಿಂದ 2016–17** | |
| **ಸಿಎಜಿಆರ್** | | **ಸಾಮಾನ್ಯ ವರ್ಗ ರಾಜ್ಯಗಳು** | **ಕರ್ನಾಟಕ** | **ಸಾಮಾನ್ಯ ವರ್ಗ ರಾಜ್ಯಗಳು** | **ಕರ್ನಾಟಕ** |
| **ಎ.** | ರಾಜಸ್ವ ಜಮೆಗಳ | 14.58 | 14.17 | 11.52 | 12.12 |
| **ಬಿ.** | ಸ್ವಂತ ತೆರಿಗೆ ಆದಾಯದ | 14.80 | 14.27 | 13.50 | 9.80 |
| **ಸಿ.** | ತೆರಿಗೆಯೇತರ ಆದಾಯದ | 9.45 | 6.01 | 12.10 | 8.20 |
| **ಡಿ.** | ಒಟ್ಟು ವೆಚ್ಚದ | 15.84 | 14.52 | 15.31 | 17.06 |
| **ಇ.** | ಬಂಡವಾಳ ವೆಚ್ಚದ | 14.53 | 10.80 | 17.91 | 40.78 |
| **ಎಫ್.** | ಶಿಕ್ಷಣದ ಮೇಲಿನ ರಾಜಸ್ವ ವೆಚ್ಚದ | 16.86 | 13.47 | 9.86 | 7.26 |
| **ಜಿ.** | ಆರೋಗ್ಯದ ಮೇಲಿನ ರಾಜಸ್ವ ವೆಚ್ಚದ | 18.43 | 16.49 | 14.92 | 22.53 |
| **ಎಚ್.** | ಸಂಬಳ ಮತ್ತು ಮಜೂರಿಯ | 14.89 | 12.37 | 13.06 | 4.50 |
| **ಐ.** | ಪಿಂಚಣಿಯ | 17.17 | 16.83 | 10.63 | 0.39 |

*ಆಕರ: ಹಣಕಾಸು ದತ್ತಾಂಶಗಳಿಗೆ ಹಣಕಾಸು ಲೆಕ್ಕಗಳು.*

---

[1] ಗಿನಿ ಗುಣಾಂಕವು ಜನತೆಯ ವರಮಾನದಲ್ಲಿನ ಅಸಮತೆಯ ಅಳತೆಯಾಗಿದೆ. ಇದರ ಮೌಲ್ಯದರವು ಸೊನ್ನೆಯಿಂದ ಒಂದು ಸೊನ್ನೆಗೆ ಹತ್ತಿರವಿದ್ದರೆ ಅಸಮತೆಯು ಕಡಿಮೆ ಒಂದಕ್ಕೆ ಹತ್ತಿರವಿದ್ದರೆ ಅಸಮತೆಯು ಹೆಚ್ಚಾಗಿದೆ.

[2] ವಿಶೇಷ ಪ್ರವರ್ಗದ ರಾಜ್ಯಗಳೆಂಬುದಾಗಿ ಪರಿಗಣಿಸಲಾಗಿರುವ 11 ರಾಜ್ಯಗಳನ್ನು ಹೊರತುಪಡಿಸಿ (ಅರುಣಾಚಲ ಪ್ರದೇಶ, ಅಸ್ಸಾಂ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಸಿಕ್ಕಿಂ, ತ್ರಿಪುರ ಹಾಗೂ ಉತ್ತರಾಖಂಡ).

**ಪ್ರಮುಖ ಮೂಲಭೂತ ಸೌಕರ್ಯಕ್ಕೆ ಸಂಬಂಧಿಸಿದ ಅಭಿವೃದ್ಧಿ ಸೂಚಕಗಳು**

(i) ನಯ ಮೈಲ್ಮೈ ರಸ್ತೆಗಳು – 100 ಚ.ಕಿ.ಮೀಗೆ **39.09 ಕಿ.ಮೀ.**

(ii) ಒರಟು ಮೈಲ್ಮೈ ರಸ್ತೆಗಳು – 100 ಚ.ಕಿ.ಮೀಗೆ **0.56 ಕಿ.ಮೀ.**.

(iii) ವಿದ್ಯುದೀಕರಣವಾದ ಹಳ್ಳಿಗಳು ಶೇಕಡ – **99.97**.

(iv) ಒಟ್ಟಾರೆ ಕೃಷಿ ಪ್ರದೇಶ – **122.47 ಹೆಕ್ಟೇರುಗಳು**.

(v) ಪ್ರಾಥಮಿಕ ಶಾಲೆಗಳು (2016–17ರಲ್ಲಿದ್ದಂತೆ) – **62,194**.

(vi) ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ – **2,353**.

(vii) ಪ್ರತಿ ಒಂದು ಲಕ್ಷ ಜನಸಂಖ್ಯೆಗೆ ಇರುವ ಹಾಸಿಗೆಗಳು – **79**.

1. ರಾಷ್ಟ್ರೀಯ ಜನಗಣತಿ 2011 ಮಾಹಿತಿ ಅಂತಿಮ ಒಟ್ಟು ಜನಸಂಖ್ಯೆ.
2. *ಆರ್ಥಿಕ ಸಮೀಕ್ಷೆ (ಭಾರತ ಸರ್ಕಾರ) 2016–17 (**ಆಗಸ್ಟ್** 2017), **ಸಂಪುಟ** I ಪುಟ ಎ 154.*
3. *ಆರ್ಥಿಕ ಸಮೀಕ್ಷೆ (ಭಾರತ ಸರ್ಕಾರ) 2016–17 (**ಆಗಸ್ಟ್** 2017), **ಸಂಪುಟ** I ಪುಟ ಎ 149.*
4. *ಆರ್ಥಿಕ ಸಮೀಕ್ಷೆ (ಭಾರತ ಸರ್ಕಾರ) 2016–17 (**ಆಗಸ್ಟ್** 2017), **ಸಂಪುಟ** I ಪುಟ ಎ 156.*
5. *ಆರ್ಥಿಕ ಸಮೀಕ್ಷೆ (ಭಾರತ ಸರ್ಕಾರ) 2016–17 (**ಆಗಸ್ಟ್** 2017), **ಸಂಪುಟ** I ಪುಟ ಎ 146.*
6. *http://planningcommission.nic.in/data/datatable/data 2312/DatabookDec2014%20106.pdf.*
7. ರಾಒಆಂಉದ ಅಂದಾಜು ಅಂಕಿಗಳನ್ನು ಭಾರತ ಸರ್ಕಾರ, ಆರ್ಥಿಕ ಮಂತ್ರಾಲಯ ತಮ್ಮ ಪತ್ರ 29 ಮಾರ್ಚ್ 2016ರಲ್ಲಿ ತಿಳಿಸಿದಂತೆ.
8. *ಭಾರತ ಹಾಗೂ ರಾಜ್ಯಗಳ ಜನಸಂಖ್ಯಾ ಪ್ರಕ್ಷೇಪಣೆ 2001–2026 (ಪರಿಷ್ಕೃತ ಡಿಸೆಂಬರ್ 2006) ಜನ ಸಂಖ್ಯೆಗೆ ರಾಷ್ಟ್ರೀಯ ಆಯೋಗದಿಂದ ರಚಿತವಾದ ಪ್ರಕ್ಷೇಪಣೆಗಳ ತಾಂತ್ರಿಕ ಸಮಿತಿಯ ವರದಿ ಕೋಷ್ಟಕ –14 (ಪ್ರಕ್ಷೇಪಿಸಿದ ಲಿಂಗಾವಾರು ಒಟ್ಟು ಜನಸಂಖ್ಯೆ 1ನೇ ಅಕ್ಟೋಬರ್ 2001–2026ರಲ್ಲಿದ್ದಂತೆ).*

ಟಿಪ್ಪಣಿ: ಸಾಮಾನ್ಯ ವರ್ಗದ ರಾಜ್ಯಗಳ ಅಖಿಲ ಭಾರತ ಸರಾಸರಿಯನ್ನು 16 ಸಾಮಾನ್ಯವರ್ಗದ ರಾಜ್ಯಗಳು ಒದಗಿಸಿದ ಅಂಕಿಸಂಖ್ಯೆಗಳ ಆಧಾರದ ಮೇರೆಗೆ ಲೆಕ್ಕ ಹಾಕಲಾಗಿದೆ – ತೆಲಂಗಾಣ ಸೇರಿದಂತೆ ಆಂಧ್ರ ಪ್ರದೇಶ, ಬಿಹಾರ, ಚತ್ತೀಸಗಡ, ಗುಜರಾತ್, ಹರಿಯಾಣ, ಜಾರ್ಖಂಡ್, ಕರ್ನಾಟಕ, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ಒಡಿಶಾ, ಪಂಜಾಬ್, ರಾಜಾಸ್ಥಾನ, ತಮಿಳುನಾಡು, ಉತ್ತರ ಪ್ರದೇಶ ಹಾಗೂ ಪಶ್ಚಿಮ ಬಂಗಾಳ.

# ಅನುಬಂಧ 1.2

## ಸರ್ಕಾರಿ ಲೆಕ್ಕಗಳ ಸ್ವರೂಪ

(ಉಲ್ಲೇಖ: ಕಂಡಿಕೆ 1.1 ಪುಟ 2)

| ರಾಜ್ಯಸರ್ಕಾರದ ಲೆಕ್ಕಗಳನ್ನು ಸಂಚಿತ ನಿಧಿ, ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕ ಎಂಬ ಮೂರು ಭಾಗಗಳಲ್ಲಿ ಇಡಲಾಗುತ್ತದೆ. |
|---|
| **ಭಾಗ I: ಕ್ರೋಢೀಕೃತ ನಿಧಿ:** ರಾಜಸ್ವ ಮತ್ತು ಬಂಡವಾಳ ಲೆಕ್ಕಗಳ ಮೇಲಿನ ಸಾರ್ವಜನಿಕ ಋಣ ಮತ್ತು ಸಾಲಗಳು, ಮುಂಗಡಗಳು ಎಲ್ಲಾ ಸ್ವೀಕೃತಿಗಳು ಮತ್ತು ವೆಚ್ಚಗಳು ಸೇರಿದಂತೆ ಒಂದು ಕ್ರೋಢೀಕೃತ ನಿಧಿ ಇದು ಭಾರತದ ಸಂವಿಧಾನದ ಕಲಂ 266(1) ಅಡಿಯಲ್ಲಿ ಸ್ಥಾಪಿತವಾದ ಕ್ರೋಢೀಕೃತ ನಿಧಿ ಎನಿಸಿಕೊಳ್ಳುತ್ತದೆ. |
| **ಭಾಗ II: ಸಾದಿಲ್ವಾರು ನಿಧಿ:** ಸಂವಿಧಾನದ ಕಲಂ 267(2) ರ ಅಡಿಯಲ್ಲಿ ಸ್ಥಾಪಿತವಾದ ರಾಜ್ಯದ ಸಾದಿಲ್ವಾರು ನಿಧಿಯು ರಾಜ್ಯಪಾಲರ ವಿಲೇವಾರಿಗಾಗಿ ಇಟ್ಟಿರುವ ಒಂದು ಸ್ವಾದಿಲಾರು ಮೊತ್ತದ ರೂಪದಲ್ಲಿರುತ್ತದೆ. ಇದು ಅವರಿಗೆ ರಾಜ್ಯದ ಸಾದಿಲ್ವಾರು ವೆಚ್ಚ ನಿಧಿಯಿಂದ ಅನಿರೀಕ್ಷಿತ ವೆಚ್ಚಗಳನ್ನು ಶಾಸಕಾಂಗದಿಂದ ಅನುಮೋದಿಸಲು ಬಾಕಿ ಇರುವ ನಿಧಿಗಳನ್ನು ಸಂಬಂಧಿತ ಕ್ರಿಯಾತ್ಮಕ ಪ್ರಧಾನ ಶೀರ್ಷಿಕೆಗೆ ವೆಚ್ಚವನ್ನು ಹಾಕಲು ಸಹಾಯ ಮಾಡುತ್ತದೆ. |
| **ಭಾಗ III: ಸಾರ್ವಜನಿಕ ಲೆಕ್ಕ:** ಸಂಚಿತ ನಿಧಿಯ ಭಾಗವಾಗದ ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು, ಠೇವಣಿಗಳು, ಮೀಸಲು ನಿಧಿಗಳು, ಅಮಾನತ್ತು, ಇರಸಾಲುಗಳು ಮುಂತಾದವುಗಳ ಜಮೆಗಳು ಮತ್ತು ಖರ್ಚುಗಳನ್ನು ಸಂವಿಧಾನದ ಅನುಚ್ಛೇದ 266(2)ರ ಅನ್ವಯ ಸ್ಥಾಪಿಸಲಾದ 'ಸಾರ್ವಜನಿಕ ಲೆಕ್ಕ'ದಲ್ಲಿ ಇಡಲಾಗುತ್ತದೆ ಮತ್ತು ರಾಜ್ಯ ವಿಧಾನ ಮಂಡಲದ ಅನುಮೋದನೆಗೆ ಒಳಪಟ್ಟಿರುವುದಿಲ್ಲ. |
| **ಹಣಕಾಸು ಲೆಕ್ಕಗಳ ವಿನ್ಯಾಸ** |
| ರಾಜ್ಯ ಹಣಕಾಸು ಲೆಕ್ಕಗಳನ್ನು ಎರಡು ಸಂಪುಟಗಳಲ್ಲಿ ತಯಾರಿಸಲಾಗುತ್ತದೆ. ಸಂಪುಟ–I ಸರ್ಕಾರದ ಹಣಕಾಸುಗಳ ಸಾರಾಂಶದ ವಿವರಣಾ ಪಟ್ಟಿಗಳನ್ನು ಮತ್ತು ಸಂಪುಟ–II ಸವಿವರ ವಿವರಣಾಪಟ್ಟಿಗಳನ್ನು ಸಾದರ ಪಡಿಸುತ್ತದೆ. ವಿನ್ಯಾಸದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಅಲ್ಲದೆ ಸಂಪುಟ–II ವಿವಿಧ ಅನುಬಂಧಗಳನ್ನು ನೀಡಿರುವಂತೆ ಪ್ರಧಾನ ಶೀರ್ಷಿಕೆಯಲ್ಲಿ ಸಂಬಳ ಮತ್ತು ಸಹಾಯಧನಗಳ ತುಲನಾತ್ಮಕ ವೆಚ್ಚ, ರಾಜ್ಯಸರ್ಕಾರ ನೀಡಿದ ಸಹಾಯಾನುದಾನಗಳು ಮತ್ತು ಆರ್ಥಿಕ ಸಹಾಯಗಳು, ಬಾಹ್ಯ ಬೆಂಬಲಿತ ಯೋಜನೆಗಳು, ಯೋಜನಾ ಕಾರ್ಯಕ್ರಮಗಳ ಮೇಲಿನ ವೆಚ್ಚ, ಅನುಷ್ಠಾನ ಏಜೆನ್ಸಿಗಳಿಗೆ ಕೇಂದ್ರ ಯೋಜನಾ ಮೊತ್ತಗಳ ನೇರ ಬಿಡುಗಡೆ, ಶಿಲ್ಕುಗಳ ಸಾರಾಂಶ, ನೀರಾವರಿ ಯೋಜನೆಗಳ ಆರ್ಥಿಕ ಫಲಗಳು ಅಪೂರ್ಣ ಸಾರ್ವಜನಿಕ ಕಾಮಗಾರಿಗಳ ಗುತ್ತಿಗೆಗಳ ಬದ್ಧತೆಗಳು ಮತ್ತು ನಿರ್ವಹಣಾ ವೆಚ್ಚಗಳನ್ನು ಹೊಂದಿದೆ. |

| ವಿವರಣಾ ಪಟ್ಟಿ ಸಂಖ್ಯೆ | ವಿನ್ಯಾಸ |
|---|---|
| 1 | ರಾಜ್ಯದ ಆರ್ಥಿಕ ಸ್ಥಿತಿಯ ವಿವರಣಾ ಪಟ್ಟಿ. |
| 2 | ಸ್ವೀಕೃತಿಗಳು ಮತ್ತು ವಿತರಣೆಗಳ ವಿವರಣಾ ಪಟ್ಟಿ. |
| 3 | ಸಂಚಿತ ನಿಧಿಯಲ್ಲಿನ ಸ್ವೀಕೃತಿಗಳ ವಿವರಣಾ ಪಟ್ಟಿ. |
| 4 | ರಾಜ್ಯ ಸಂಚಿತ ನಿಧಿಯ ವೆಚ್ಚಗಳ ವಿವರಣಾ ಪಟ್ಟಿ. |
| 5 | ಪ್ರಗತಿಪರ ಬಂಡವಾಳ ವೆಚ್ಚಗಳ ವಿವರಣಾ ಪಟ್ಟಿ. |
| 6 | ಸರ್ಕಾರದ ಸಾಲಗಳ ಮತ್ತು ಇತರ ಜವಾಬ್ದಾರಿಗಳ ವಿವರಣಾ ಪಟ್ಟಿ. |
| 7 | ರಾಜ್ಯಸರ್ಕಾರವು ನೀಡಿದ ಸಾಲಗಳ ಮತ್ತು ಮುಂಗಡಗಳ ವಿವರಣಾ ಪಟ್ಟಿ. |
| 8 | ಸರ್ಕಾರದ ಹೂಡಿಕೆಗಳ ವಿವರಣಾ ಪಟ್ಟಿ. |
| 9 | ಸರ್ಕಾರ ನೀಡಿದ ಖಾತರಿಗಳ ವಿವರಣಾ ಪಟ್ಟಿ. |
| 10 | ಸರ್ಕಾರವು ನೀಡಿದ ಅನುದಾನಗಳ ವಿವರಣಾ ಪಟ್ಟಿ. |
| 11 | ಪುರಸ್ಕೃತ ಮತ್ತು ಪ್ರಭೃತ ವೆಚ್ಚಗಳ ವಿವರಣಾ ಪಟ್ಟಿ. |
| 12 | ರಾಜಸ್ವ ಲೆಕ್ಕವನ್ನು ಹೊರತುಪಡಿಸಿ ಆಕರ ಮತ್ತು ಅನ್ವಯಗಳ ವಿವರಣಾ ಪಟ್ಟಿ. |
| 13 | ಸಂಚಿತ ನಿಧಿ, ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕಗಳಲ್ಲಿ ಬಾಕಿ ವಿವರಗಳ ಸಾರಾಂಶ. |
| 14 | ಒಳಶೀರ್ಷಿಕೆಯ ಹಂತದವರೆಗೆ ರಾಜಸ್ವ ಜಮೆಗಳು ಮತ್ತು ಬಂಡವಾಳ ಜಮೆಗಳ ವಿವರಣಾ ಪಟ್ಟಿ. |
| 15 | ಒಳಶೀರ್ಷಿಕೆಯ ಹಂತದ ರಾಜಸ್ವ ವೆಚ್ಚಗಳ ವಿವರಣಾ ಪಟ್ಟಿ. |
| 16 | ಒಳಶೀರ್ಷಿಕೆಯ ಹಂತದ ಬಂಡವಾಳ ವೆಚ್ಚಗಳ ವಿವರಣಾ ಪಟ್ಟಿ. |
| 17 | ಸಾಲಗಳು ಮತ್ತು ಇತರ ಜವಾಬ್ದಾರಿಗಳ ವಿವರಣಾ ಪಟ್ಟಿ. |
| 18 | ಸರ್ಕಾರವು ನೀಡಿರುವ ಸಾಲಗಳು ಮತ್ತು ಮುಂಗಡಗಳ ವಿವರಣಾ ಪಟ್ಟಿ. |
| 19 | ಸರ್ಕಾರದ ಹೂಡಿಕೆಗಳ ವಿವರಣಾ ಪಟ್ಟಿ. |
| 20 | ಸರ್ಕಾರ ನೀಡಿದ ಖಾತರಿಗಳ ವಿವರಣಾ ಪಟ್ಟಿ. |
| 21 | ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕ ವಹಿವಾಟುಗಳ ವಿವರಣಾ ಪಟ್ಟಿ. |
| 22 | ಮೀಸಲಿಟ್ಟ ನಿಧಿಗಳಲ್ಲಿನ ಶಿಲ್ಕುಗಳ ವಿವರಣಾ ಪಟ್ಟಿ. |

## ಅನುಬಂಧ 1.3

### ಸ್ವೀಕೃತಿಗಳು ಮತ್ತು ಬಟವಾಡೆಗಳ ಸಾರಾಂಶ

(ಉಲ್ಲೇಖ: ಕಂಡಿಕೆ 1.1.1; ಪುಟ 2)

**(ಕೋಟಿ ರೂಪಾಯಿಗಳಲ್ಲಿ)**

| ಸ್ವೀಕೃತಿಗಳು | | | ಬಟವಾಡೆಗಳು | | | | | |
|---|---|---|---|---|---|---|---|---|
| 2015-16 | | 2016-17 | 2015-16 | | ಯೋಜನೇತರ | ಯೋಜನೆ | ಒಟ್ಟು | 2016-17 |
| **ಭಾಗ ಎ: 2016-17ನೇ ಸಾಲಿನ ಜಮೆಗಳ ಮತ್ತು ವಿತರಣೆಗಳ ಸಾರಾಂಶ** | | | | | | | | |
| | | | | **ಭಾಗ – ಎ: ರಾಜಸ್ವ** | | | | |
| **1,18,817.31** | **I. ರಾಜಸ್ವ ಜಮೆಗಳು** | **1,33,213.79** | **1,17,028.58** | **I. ರಾಜಸ್ವ ವೆಚ್ಚ ↑↑** | **83,958.99** | **47,961.76** | | **1,31,920.75#** |
| 75,550.18 | ತೆರಿಗೆ ರಾಜಸ್ವ ↑↑ | 82,956.13* | **30,799.28** | **ಸಾಮಾನ್ಯ ಸೇವೆಗಳು** | **31,152.93** | **111.63** | **31,264.56** | |
| 5,355.04 | ತೆರಿಗೆಯೇತರ ರಾಜಸ್ವ ↑↑ | 5,794.53 | | **ಸಾಮಾಜಿಕ ಸೇವೆಗಳು** | | | | |
| 23,983.34 | ಕೇಂದ್ರದ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು | 28,759.94 | 18,724.40 | ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 13,356.33 | 6,727.72 | 20,084.05 | |
| 5,547.34 | ಯೋಜನೇತರ ಅನುದಾನಗಳು | 7,045.21 | 5,009.74 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 2,653.38 | 3,485.84 | 6,139.22 | |
| 8,105.31 | ರಾಜ್ಯ ಯೋಜನೆ ಕಾರ್ಯಕ್ರಮಗಳಿಗಾಗಿ ಅನುದಾನಗಳು | 8,101.62 | 7,374.03 | ನೀರು ಪೂರೈಕೆ ನೈರ್ಮಲ್ಯ, ವಸತಿ, ಮತ್ತು ನಗರಾಭಿವೃದ್ಧಿ | 596.78 | 9,892.10 | 10,488.88 | |
| 276.10 | ಕೇಂದ್ರ ಮತ್ತು ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳಿಗಾಗಿ ಅನುದಾನಗಳು | 556.36 | 86.91 | ವಾರ್ತಾ ಮತ್ತು ಪ್ರಸಾರ | 73.60 | 60.45 | 134.05 | |
| | | | 5,562.27 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಕಲ್ಯಾಣ | 1,347.58 | 5,432.82 | 6,780.40 | |
| | | | 579.64 | ಕಾರ್ಮಿಕ ಮತ್ತು ಕಾರ್ಮಿಕ ಕಲ್ಯಾಣ | 115.05 | 380.96 | 496.01 | |
| | | | 8,792.77 | ಸಮಾಜ ಕಲ್ಯಾಣ ಮತ್ತು ಪೌಷ್ಟಿಕತೆ | 6,363.79 | 3,844.97 | 10,208.76 | |
| | | | 177.32 | ಇತರೆ | 146.81 | 71.06 | 217.87 | |
| | | | **46,307.08** | **ಒಟ್ಟು ಸಾಮಾಜಿಕ ಸೇವೆಗಳು** | **24,653.32** | **29,895.92** | **54,549.24** | |
| | | | | **ಆರ್ಥಿಕ ಸೇವೆಗಳು** | | | | |
| | | | 11,148.68 | ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳು | 4,222.13 | 7,754.33 | 11,976.46 | |
| | | | 5,222.36 | ಗ್ರಾಮೀಣಾಭಿವೃದ್ಧಿ | 1,967.38 | 3,579.36 | 5,546.74 | |
| | | | 558.33 | ವಿಶೇಷ ಪ್ರದೇಶ ಕಾರ್ಯಕ್ರಮಗಳು | - | 456.57 | 456.57 | |
| | | | 1,257.97 | ನೀರಾವರಿ ಮತ್ತು ಪ್ರವಾಹ ನಿಯಂತ್ರಣ | 1,265.17 | 323.74 | 1,588.91 | |
| | | | 9,169.88 | ಇಂಧನ | 9,208.70 | 28.31 | 9,237.01 | |
| | | | 1,218.77 | ಕೈಗಾರಿಕೆ ಮತ್ತು ಖನಿಜಗಳು | 384.72 | 928.88 | 1,313.60 | |
| | | | 3,551.73 | ಸಾರಿಗೆ | 1,950.95 | 2,893.23 | 4,844.18 | |
| | | | 88.05 | ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ | - | 78.83 | 78.83 | |
| | | | 1,630.40 | ಸಾಮಾನ್ಯ ಆರ್ಥಿಕ ಸೇವೆಗಳು | 4,841.40 | 537.67 | 5,379.07 | |
| | | | **33,846.17** | **ಒಟ್ಟು ಆರ್ಥಿಕ ಸೇವೆಗಳು** | **23,840.45** | **16,580.92** | **40,421.37** | |
| | | | **6,076.05** | **ಸಹಾಯಾನುದಾನ ಮತ್ತು ಕೊಡುಗೆಗಳು** | **4,312.29** | **1,373.29** | **5,685.58** | |

| ಸ್ವೀಕೃತಿಗಳು | | | ಬಟವಾಡೆಗಳು | | | | | |
|---|---|---|---|---|---|---|---|---|
| 2015–16 | | 2016–17 | 2015–16 | | ಯೋಜನೇತರ | ಯೋಜನೆ | ಒಟ್ಟು | 2016–17 |
| | | | 1,788.73 | II ರಾಜಸ್ವ ಹೆಚ್ಚಳ ಭಾಗ 'ಬಿ' ಗೆ ಮುಂದುವರೆಸಿದ್ದು | | | | 1,293.04 |
| 1,18,817.31 | | 1,33,213.79 | 1,18,817.31 | ಒಟ್ಟು | | | | 1,33,213.79 |
| | | | | ಭಾಗ–ಬಿ : ಬಂಡವಾಳ ಮತ್ತು ಇತರೆ | | | | |
| 23,900.90 | II. ಆರಂಭಿಕ ಶಿಲ್ಕು ಒಳಗೊಂಡಂತೆ ಖಾಯಂ ಮುಂಗಡಗಳು, ನಗದು ಶಿಲ್ಕಿನ ಹೂಡಿಕೆಗಳು ಮತ್ತು ಮೀಸಲಿಟ್ಟ ನಿಧಿಗಳಿಂದ ಹೂಡಿಕೆಗಳೂ ಸೇರಿದಂತೆ ಆರಂಭಿಕ ನಗದು ಶಿಲ್ಕು | 27,118.23 | | | | | | |
| 352.30 | III. ಇತರೆ ಬಂಡವಾಳ ಜಮೆಗಳು †† | 26.96 | 20,713.03 | III. ಬಂಡವಾಳ ವೆಚ್ಚ†† | 466.08 | 27,684.35 | | 28,150.43$ |
| | | | 991.41 | ಸಾಮಾನ್ಯ ಸೇವೆಗಳು | 33.42 | 1,026.97 | 1,060.39 | |
| | | | | ಸಾಮಾಜಿಕ ಸೇವೆಗಳು | | | | |
| | | | 717.96 | ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 9.52 | 1,098.94 | 1,108.46 | |
| | | | 819.71 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | – | 743.66 | 743.66 | |
| | | | 1,639.75 | ನೀರು ಪೂರೈಕೆ, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿ | 204.85 | 2,353.04 | 2,557.89 | |
| | | | 4.57 | ವಾರ್ತಾ ಮತ್ತು ಪ್ರಸಾರ | – | 18.51 | 18.51 | |
| | | | 2,014.36 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಇತರೆ ಹಿಂದುಳಿದ ವರ್ಗಗಳ ಕಲ್ಯಾಣ | (–)0.57 | 2,243.22 | 2,242.65 | |
| | | | 71.80 | ಸಮಾಜ ಕಲ್ಯಾಣ ಮತ್ತು ಪೌಷ್ಠಿಕ ಆಹಾರ | – | 130.15 | 130.15 | |
| | | | 45.76 | ಇತರೆ ಸಾಮಾಜಿಕ ಸೇವೆಗಳು | – | 95.52 | 95.52 | |
| | | | 5,313.91 | ಒಟ್ಟು ಸಾಮಾಜಿಕ ಸೇವೆಗಳು | 213.80 | 6,683.04 | 6,896.84 | |
| | | | | ಆರ್ಥಿಕ ಸೇವೆಗಳು | | | | |
| | | | 182.73 | ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳು | (–)4.39 | 505.81 | 501.42 | |
| | | | 6.63 | ಗ್ರಾಮೀಣಾಭಿವೃದ್ಧಿ | 3.15 | 46.10 | 49.25 | |
| | | | 900.00 | ವಿಶೇಷ ಪ್ರದೇಶ ಕಾರ್ಯಕ್ರಮಗಳು | – | 889.83 | 889.83 | |
| | | | 6,955.14 | ನೀರಾವರಿ ಮತ್ತು ಪ್ರವಾಹ ನಿಯಂತ್ರಣ | 195.22 | 8,439.68 | 8,634.90 | |
| | | | 49.38 | ಇಂಧನ | 0.09 | 861.29 | 861.38 | |
| | | | 589.93 | ಕೈಗಾರಿಕೆ ಮತ್ತು ಖನಿಜಗಳು | – | 352.09 | 352.09 | |
| | | | 5,399.45 | ಸಾರಿಗೆ | 24.95 | 7,598.66 | 7,623.61 | |
| | | | – | ವಿಜ್ಞಾನ ತಂತ್ರಜ್ಞಾನ ಮತ್ತು ಪರಿಸರ | – | 0.19 | 0.19 | |
| | | | 324.45 | ಸಾಮಾನ್ಯ ಆರ್ಥಿಕ ಸೇವೆಗಳು | (–)0.16 | 1,280.69 | 1,280.53 | |

| ಸ್ವೀಕೃತಿಗಳು | | | ಬಟವಾಡೆಗಳು | | | | | |
|---|---|---|---|---|---|---|---|---|
| **2015-16** | | **2016-17** | **2015-16** | | **ಯೋಜನೇತರ** | **ಯೋಜನೆ** | **ಒಟ್ಟು** | **2016-17** |
| | | | **14,407.71** | **ಒಟ್ಟು ಆರ್ಥಿಕ ಸೇವೆಗಳು** | **218.86** | **19,974.34** | **20,193.20** | |
| **59.68** | **IV. ಸಾಲಗಳು ಮತ್ತು ಮುಂಗಡಗಳ ವಸೂಲಾತಿಗಳು ††** | **99.84** | **656.41** | **IV. ಸಾಲಗಳು ಮತ್ತು ಮುಂಗಡಗಳ ವಿತರಣೆ ††** | | | | **1,934.38** |
| 15.41 | ವಿದ್ಯುಚ್ಛಕ್ತಿ ಯೋಜನೆಗಳಿಂದ | 9.73 | 28.19 | ವಿದ್ಯುಚ್ಛಕ್ತಿ ಯೋಜನೆಗಳಿಗೆ | – | 55.08 | 55.08 | |
| 7.37 | ಸರ್ಕಾರಿ ನೌಕರರಿಂದ | 7.24 | 3.82 | ಸರ್ಕಾರಿ ನೌಕರರಿಗೆ | 3.31 | 0.35 | 3.66 | |
| 36.90 | ಇತರರಿಂದ | 82.87 | 624.40 | ಇತರರಿಗೆ | 2.00 | 1,873.64 | 1,875.64 | |
| **21,072.33** | **V. ಸಾರ್ವಜನಿಕ ಋಣ ಜಮೆಗಳು** | **31,115.92** | **4,110.20** | **V. ಸಾರ್ವಜನಿಕ ಋಣ ಮರುಪಾವತಿ** | | | | **7,420.24** |
| 19,801.31 | ಅರ್ಥೋಪಾಯ ಮುಂಗಡಗಳು ಮತ್ತು ಓವರ್ ಡ್ರಾಫ್ಟ್‌ಗಳನ್ನು ಹೊರತುಪಡಿಸಿ ಆಂತರಿಕ ಋಣ | 29,237.99 | 3,160.67 | ಅರ್ಥೋಪಾಯ ಮುಂಗಡಗಳು ಮತ್ತು ಓವರ್ ಡ್ರಾಫ್ಟ್‌ಗಳನ್ನು ಹೊರತುಪಡಿಸಿ ಆಂತರಿಕ ಋಣ | 6,293.70 | -- | 6,293.70 | |
| --- | ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅರ್ಥೋಪಾಯ ಮುಂಗಡಗಳು | -- | --- | ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅರ್ಥೋಪಾಯ ಮುಂಗಡಗಳು | -- | -- | -- | |
| **1,271.02** | ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು | 1,917.93 | 949.53 | ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮರುಪಾವತಿ | 1,126.54 | -- | 1,126.54 | |
| --- | **VI. ಸಾದಿಲ್ವಾರು ನಿಧಿ (ಪುನರ್ಭರ್ತಿ)** | | --- | **VI. ಸಾದಿಲ್ವಾರು ನಿಧಿ (ವಿತರಣೆಗಳು)** | --- | --- | --- | --- |
| **1,60,518.76** | **VII. ಸಾರ್ವಜನಿಕ ಲೆಕ್ಕ ಜಮೆಗಳು** | **1,79,318.45** | **1,55,094.83** | **VII. ಸಾರ್ವಜನಿಕ ಲೆಕ್ಕ ವಿತರಣೆಗಳು** | | | | **1,67,153.81** |
| 5,486.36 | ಸಣ್ಣ ಉಳಿತಾಯಗಳು ಮತ್ತು ಭವಿಷ್ಯ ನಿಧಿಗಳು ಇತ್ಯಾದಿ | 5,805.48 | 3,400.68 | ಸಣ್ಣ ಉಳಿತಾಯಗಳು ಮತ್ತು ಭವಿಷ್ಯ ನಿಧಿಗಳು ಇತ್ಯಾದಿ | | | 3,147.99 | |
| 4,590.52 | ಮೀಸಲು ನಿಧಿಗಳು | 7,545.43 | 2,509.46 | ಮೀಸಲು ನಿಧಿಗಳು | | | 1,532.70 | |
| 42,411.31 | ಠೇವಣಿಗಳು ಮತ್ತು ಮುಂಗಡಗಳು | 47,614.16 | 42,127.79 | ಠೇವಣಿಗಳು ಮತ್ತು ಮುಂಗಡಗಳು | | | 44,572.51 | |
| 1,08,001.52 | ಅಮಾನತ್ತು ಮತ್ತು ಸಂಕೀರ್ಣಗಳು | 1,18,333.71 | 1,07,011.27 | ಅಮಾನತ್ತು ಮತ್ತು ಸಂಕೀರ್ಣಗಳು | | | 1,17,842.56 | |
| 29.05 | ಇರಸಾಲುಗಳು | 19.67 | 45.63 | ಇರಸಾಲುಗಳು | | | 58.05 | |
| **1,788.73** | **VIII. ರಾಜಸ್ವ ಅಧಿಕ ಭಾಗ 'ಎ' ಯಿಂದ ತೆಗೆದುಕೊಂಡದ್ದು** | **1,293.04** | **27,118.23** | **VIII. ಅಂತಿಮ ನಗದು ಶಿಲ್ಕು (31.03.2017)** | | | | **34,353.58** |
| | | | 0.01 | ಖಜಾನೆಗಳಲ್ಲಿನ ನಗದು ಮತ್ತು ಸ್ಥಳೀಯ ಇರಸಾಲುಗಳು | | | 0.01 | |
| | | | (–)74.90 | ರಿಸರ್ವ್ ಬ್ಯಾಂಕಿನಲ್ಲಿನ ಠೇವಣಿಗಳು | | | 100.05 | |
| | | | 3.78 | ಖಾಯಂ ಮುಂಗಡಗಳು ಸೇರಿದಂತೆ ಇಲಾಖಾ ನಗದು ಶಿಲ್ಕು | | | 3.83 | |
| | | | 16,917.13 | ನಗದು ಶಿಲ್ಕು ಹೂಡಿಕೆ | | | 23,977.48 | |
| | | | 10,272.21 | ಉದ್ದೇಶಿತ ನಿಧಿಗಳಿಂದ ಹೂಡಿಕೆಗಳು | | | 10,272.21 | |
| **2,07,692.70** | **ಒಟ್ಟು** | **2,39,012.44** | **2,07,692.70** | **ಒಟ್ಟು** | | | | **2,39,012.44** |

*# ವಿವಿಧ ಸೇವಾ ಶೀರ್ಷಿಕೆಗಳಡಿ ಆಯವ್ಯಯದ ಹೊರಗಿನ ಸಾಲ ಮುಂತಾದವುಗಳಿಗೆ ಸಂಬಂಧಿಸಿದಂತೆ ಬಡ್ಡಿ ಪಾವತಿಯನ್ನು ಒಳಗೊಂಡಿದೆ. ₹808 ಕೋಟಿಗಳನ್ನು ವಿಶೇಷ ಉದ್ದೇಶ ಸಾಧನಗಳ ಮೂಲಕ ಸಾಲವನ್ನಾಗಿ ಪಡೆಯಲಾಗಿದೆ. ಸಾಮಾನ್ಯ ಸೇವೆಗಳು ('₹4 ಕೋಟಿ), ಸಾಮಾಜಿಕ ಸೇವೆಗಳು (₹110 ಕೋಟಿ) ಮತ್ತು ಆರ್ಥಿಕ ಸೇವೆಗಳು (₹694 ಕೋಟಿ).*

*$ ಆಯವ್ಯಯದ ಹೊರಗಿನ ಸಾಲಗಳಿಂದಾದ ₹455.57 ಕೋಟಿಗಳ ವೆಚ್ಚವನ್ನು ಒಳಗೊಂಡಿದೆ.*

** ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದಿಂದ ರಾಷ್ಟ್ರೀಯ ಪರವಾನಗಿ ಶುಲ್ಕವಾಗಿ ಸ್ವೀಕರಿಸಿದ ₹132.70 ಕೋಟಿಗಳನ್ನು ಒಳಗೊಂಡಿದೆ.*

*↑↑ ನಗದು ಅಲ್ಲದೆ ಸ್ವೀಕೃತಿಗಳು ಮತ್ತು ವೆಚ್ಚಗಳು ಈ ಕೆಳಕಂಡಂತಿದ್ದು ಇದನ್ನು **ಕಂಡಿಕೆ 1.10.1**ರಲ್ಲಿ ಚರ್ಚಿಸಲಾಗಿದೆ.*

| **ಪುಸ್ತಕ ಹೊಂದಾಣಿಕೆಗಳು** | *(ಕೋಟಿ ರೂಪಾಯಿಗಳಲ್ಲಿ)* |
|---|---|
| **ತೆರಿಗೆ ಸ್ವೀಕೃತಿಗಳು** | **1,516.45** |
| **ತೆರಿಗೆಯೇತರ ಸ್ವೀಕೃತಿಗಳು** | **93.13** |
| **ಇತರೆ ಬಂಡವಾಳ ಸ್ವೀಕೃತಿಗಳು** | **-** |
| **ಸಾಲ ಸ್ವೀಕೃತಿಗಳು** | **9.97** |
| **ರಾಜಸ್ವ ವೆಚ್ಚ** | **526.76*** |
| **ಬಂಡವಾಳ ವೆಚ್ಚ** | **(-) 14.71** |
| **ಸಾಲದ ವೆಚ್ಚ** | **21.23** |

* ರಾಜಸ್ವ ವೆಚ್ಚದಿಂದ ₹1,086.27 ಕೋಟಿಗಳನ್ನು ಕಳೆಯಲಾಗಿದೆ. ಈ ಮೊತ್ತವನ್ನು ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್‌ಗಳ ಬಳಕೆಯಾಗದೆ ಉಳಿದ ಶಿಲ್ಕುಗಳ ವಸೂಲಾತಿಯ ಹೊಂದಾಣಿಕೆ ಮಾಡಲಾಗಿದೆ.

## ಅನುಬಂಧ 1.4

### ರಾಜ್ಯಸರ್ಕಾರದ ಹಣಕಾಸಿನ ಕಾಲ ಸರಣಿ ದತ್ತಾಂಶಗಳು

(ಉಲ್ಲೇಖ: ಕಂಡಿಕೆ 1.1.1, 1.3 ಮತ್ತು 1.9.2, 1.10.2; ಪುಟ 2,17,19,56 ಮತ್ತು 65)

(ಕೋಟಿ ರೂಪಾಯಿಗಳಲ್ಲಿ)

| | 2012-13 | 2013-14 | 2014-15 | 2015-16 | 2016-17 |
|---|---|---|---|---|---|
| **ಭಾಗ ಎ. ಸ್ವೀಕೃತಿಗಳು** | | | | | |
| **1. ರಾಜಸ್ವ ಸ್ವೀಕೃತಿಗಳು** | **78,176** | **89,542** | **1,04,142** | **1,18,817** | **1,33,214** |
| **(i) ತೆರಿಗೆ ಆದಾಯ ††** | **53,754(69)** | **62,603(70)** | **70,180(67)** | **75,550(64)** | **82,956(62)** |
| ಕೃಷಿ ಆದಾಯದ ಮೇಲಿನ ತೆರಿಗೆ | 22(-) | 21(-) | 20(-) | 12(-) | 1(-) |
| ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಿನ ತೆರಿಗೆ | 28,414(53) | 33,719(54) | 38,286(55) | 40,449(53) | 46,105(56) |
| ರಾಜ್ಯ ಅಬಕಾರಿ | 11,070(21) | 12,828(21) | 13,801(20) | 15,333(20) | 16,484(20) |
| ವಾಹನಗಳ ಮೇಲಿನ ತೆರಿಗೆಗಳು | 3,830(7) | 3,911(6) | 4,541(7) | 5,001(7) | 5,594(7) |
| ಮುದ್ರಾಂಕ ಮತ್ತು ನೋಂದಣಿ ಶುಲ್ಕಗಳು | 5,225(10) | 6,189(10) | 7,026(10) | 8,215(11) | 7,806(9) |
| ಭೂ ಕಂದಾಯ | 205(-) | 199(-) | 186(-) | 181(-) | 209(-) |
| ಸರಕುಗಳು ಮತ್ತು ಪ್ರಯಾಣಿಕರ ಮೇಲಿನ ತೆರಿಗೆಗಳು | 2,181(4) | 2,626(4) | 3,038(4) | 3,125(4) | 3,306(4) |
| ವಿದ್ಯುಚ್ಛಕ್ತಿ ಸುಂಕದ ಮೇಲಿನ ತೆರಿಗೆ | 929(2) | 897(2) | 1,041(1) | 1,170(2) | 1,451(2) |
| ಇತರೆ ತೆರಿಗೆಗಳು ಆದಾಯ ಮತ್ತು ಖರ್ಚಿನ ಮೇಲೆ | 693(1) | 793(1) | 868(1) | 840(1) | 901(1) |
| ಇತರೆ ತೆರಿಗೆಗಳು- ಸರಕುಗಳು ಮತ್ತು ಸೇವೆಗಳ ಮೇಲೆ | 1,185(2) | 1,420(2) | 1,373(2) | 1,224(2) | 1,099(1) |
| **(ii) ತೆರಿಗೆಯೇತರ ಆದಾಯ ††** | **3,966(5)** | **4,032(5)** | **4,688(5)** | **5,355(4)** | **5,795(4)** |
| **(iii) ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ ರಾಜ್ಯದ ಪಾಲು** | **12,647(16)** | **13,808(15)** | **14,654(14)** | **23,983(20)** | **28,760(22)** |
| **(iv) ಭಾರತ ಸರ್ಕಾರದಿಂದ ಪಡೆದ ಸಹಾಯಾನುದಾನಗಳು** | **7,809(10)** | **9,099(10)** | **14,620(14)** | **13,929(12)** | **15,703(12)** |
| **2. ಇತರೆ ಬಂಡವಾಳ ಸ್ವೀಕೃತಿಗಳು** | **33** | **88** | **10** | **352** | **27** |
| **3. ಸಾಲ ಮತ್ತು ಮುಂಗಡಗಳು ††** | **158** | **109** | **84** | **60** | **100** |
| **4. ಒಟ್ಟು ರಾಜಸ್ವ ಮತ್ತು ಸಾಲವಲ್ಲದ ಬಂಡವಾಳ ಜಮೆಗಳು (1+2+3)** | **78,367** | **89,739** | **1,04,236** | **1,19,229** | **1,33,341** |
| **5. ಸಾರ್ವಜನಿಕ ಋಣ ಸ್ವೀಕೃತಿಗಳು** | **13,465** | **17,287** | **21,874** | **21,072** | **31,156** |
| ಆಂತರಿಕ ಋಣ (ಅರ್ಥೋಪಾಯ ಮುಂಗಡಗಳು ಮತ್ತು ಓವರ್‌ಡ್ರಾಫ್ಟ್ ಹೊರತುಪಡಿಸಿ) | 12,116(90) | 16,132(93) | 20,509(94) | 19,801(94) | 29,238(94) |
| ಅರ್ಥೋಪಾಯ ಮುಂಗಡಗಳು ಮತ್ತು ಓವರ್‌ಡ್ರಾಫ್ಟ್‌ಗಳ ನಿವ್ವಳ ವಹಿವಾಟು | --- | --- | --- | --- | --- |
| ಭಾರತ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು | 1,349(10) | 1,155(7) | 1,365(6) | 1,271(6) | 1,918(6) |
| **6. ಸಂಚಿತ ನಿಧಿಯ ಒಟ್ಟು ಸ್ವೀಕೃತಿಗಳು (4+5)** | **91,832** | **1,07,027** | **1,26,110** | **1,40,301** | **1,64,497** |
| **7. ಸಾದಿಲ್ವಾರು ನಿಧಿ ಸ್ವೀಕೃತಿಗಳು** | **1** | --- | --- | --- | --- |
| **8. ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು** | **1,07,549** | **1,21,842** | **1,40,229** | **1,60,519** | **1,79,318** |
| **9. ರಾಜ್ಯದ ಒಟ್ಟು ಸ್ವೀಕೃತಿಗಳು (6+7+8)** | **1,99,382** | **2,28,869** | **2,66,339** | **3,00,820** | **3,43,815** |
| **ಭಾಗ ಬಿ- ವೆಚ್ಚ/ಬಟವಾಡೆ** | | | | | |
| **10. ರಾಜಸ್ವ ವೆಚ್ಚ ††** | **76,293** | **89,189** | **1,03,614** | **1,17,028** | **1,31,921** |
